ವಿಶ್ವವಾಣಿ
ವಿಶ್ವಾಸವೇ ವಿಶ್ವ

ವಿಶ್ವದ ನಂ.1 ಜಾವೆಲಿನ್ ಥ್ರೋ ಪಟು ನೀರಜ್ ಚೋಪ್ರಾ ಅವರು ತಮ್ಮ ಹೆಸರಿನಲ್ಲಿ ಆರಂಭಿಸಿರುವ 'ನೀರಜ್ ಚೋಪ್ರಾ ಕ್ಲಾಸಿಕ್ ಅಂತಾರಾಷ್ಟ್ರೀಯ ಜಾವೆಲಿನ್ ಕೂಟ'ಕ್ಕೆ ಶನಿವಾರ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಸಿಎಂ ಸಿದ್ದರಾಮಯ್ಯ ಅವರು ಚಾಲನೆ ನೀಡಿದರು. ಈ ವೇಳೆ ಜಾವೆಲಿನ್ ಹಿಡಿದು ಫೋಟೋಗೆ ಪೋಸ್ ನೀಡಿದ್ದು ಹೀಗೆ...

ಡಾ. ರವೀಂದ್ರನಾಥ್ ನೇತೃತ್ವದ ಸಮಿತಿಯಿಂದ ರಾಜ್ಯ ಸರಕಾರಕ್ಕೆ ವರದಿ ಸಲ್ಲಿಕೆ

ಹಠಾತ್ ಹೃದಯಾಘಾತಕ್ಕೆ ಕರೋನಾ ಲಸಿಕೆ ಕಾರಣವಲ್ಲ

ಬೆಂಗಳೂರು: ಕರೋನಾ ಲಸಿಕೆಯು ಯುವಕರಲ್ಲಿ ಹೃದಯಾಘಾತಕ್ಕೆ ಕಾರಣವಾಗುತ್ತಿದೆ ಎಂಬ ವ್ಯಾಪಕ ಊಹಾಪೋಹಗಳಿಗೆ ರಾಜ್ಯ ಸರಕಾರ ತೆರೆ ಎಳೆದಿದೆ. ಸರಕಾರವು ರಚಿಸಿದ್ದ ತಜ್ಞರ ಸಮಿತಿಯ ಸಮಗ್ರ ಅಧ್ಯಯನ ಈ ಆರೋಪಗಳಿಗೆ ಯಾವುದೇ ವೈಜ್ಞಾನಿಕ ಆಧಾರವಿಲ್ಲ ಎಂದು ಸ್ಪಷ್ಟಪಡಿಸಿದೆ.

ಜಯದೇವ ಹೃದಯ ವಿಜ್ಞಾನ ಮತ್ತು ಹೃದ್ರೋಗ ಸಂಸ್ಥೆಯ ಡಾ.ಕೆ.ಎಸ್.ರವೀಂದ್ರನಾಥ್ ನೇತೃತ್ವದಲ್ಲಿ ನಡೆದ ಈ ಅಧ್ಯಯನವು, ಯುವಕರಲ್ಲಿ ಹೆಚ್ಚುತ್ತಿರುವ ಹೃದಯ ಸಂಬಂಧಿ ಸಮಸ್ಯೆಗಳಿಗೆ ಬದಲಾದ ಜೀವನಶೈಲಿ, ಸಾಂಪ್ರದಾಯಿಕ ಅಪಾಯಕಾರಿ ಅಂಶಗಳು ಮತ್ತು ಸಾಂಕ್ರಾಮಿಕದ ನಂತರದ ಆರೋಗ್ಯ ಬದಲಾವಣೆಗಳೇ ಪ್ರಮುಖ ಕಾರಣ ಎಂದು ತಿಳಿಸಿದೆ.

2025ರ ಏಪ್ರಿಲ್ ಮತ್ತು ಮೇ ಅವಧಿಯಲ್ಲಿ ಜಯದೇವ ಆಸ್ಪತ್ರೆಗೆ ದಾಖಲಾದ 45 ವರ್ಷಕ್ಕಿಂತ ಕಡಿಮೆ ವಯಸ್ಸಿನ 251 ಕೊರೊನರಿ ಅರ್ಟರಿ ಕಾಯಿಲೆ ರೋಗಿಗಳ ಮೇಲೆ ಈ

ಅಧ್ಯಯನ ನಡೆಸಲಾಗಿದೆ. ಭಾಗವಹಿಸಿದವರಲ್ಲಿ ಬಹು ತೇಕರು (ಶೇ.87) ಪುರುಷರಾಗಿದ್ದು, ಸುಮಾರು ಅರ್ಧದಷ್ಟು ಜನ ಬೆಂಗಳೂರಿನವರಾಗಿದ್ದರು. ಅವರ ಆರೋಗ್ಯ ಸ್ಥಿತಿ, ಜೀವನ ಶೈಲಿಯ ರೀತಿ, ಕರೋನಾ ಸೋಂಕಿನ ಇತಿಹಾಸ ಮತ್ತು ಲಸಿಕೆ ವಿವರಗಳನ್ನು ಕೂಲಂಕಷವಾಗಿ ವಿಶ್ಲೇಷಿಸಲಾಗಿದೆ. ಅಧ್ಯಯನದ ಪ್ರಮುಖ ಅಂಶವೆಂದರೆ, ರೋಗಿ ಗಳಲ್ಲಿ ಕೇವಲ ಶೇ.7.6 ರಷ್ಟು ಜನರಿಗೆ ಮಾತ್ರ ಕರೋನಾ ಸೋಂಕು ಬಂದಿತ್ತು. ಬಹುತೇಕ ಎಲ್ಲರೂ (251ರಲ್ಲಿ 249 ಜನರು) ಕನಿಷ್ಠ ಒಂದು ಡೋಸ್ ಲಸಿಕೆ ಪಡೆದಿದ್ದರು. ಅವರಲ್ಲಿ ಶೇ.72 ಜನರು ಎರಡೂ ಡೋಸ್‌ಗಳನ್ನು ಪೂರ್ಣಗೊಳಿಸಿ ದ್ದರು. ಲಸಿಕೆ ಪಡೆದವರಲ್ಲಿ ಶೇ.57ರಷ್ಟು ಕೋವಿ ಶೀಲ್ಡ್, ಶೇ.26ರಷ್ಟು ಕೋವ್ಯಾಕ್ಸಿನ್ ಪಡೆದಿದ್ದರೆ, ಶೇ.17 ರಷ್ಟು ಜನರಿಗೆ ತಾವು ಯಾವ ಕಂಪನಿಯ ಲಸಿಕೆ ಪಡೆದಿದ್ದೇವೆ ಎಂಬ ಬಗ್ಗೆ ನಿಖರ ಮಾಹಿತಿ ಇರಲಿಲ್ಲ ಎಂಬುದು ತಿಳಿದುಬಂದಿದೆ.

ವರದಿಯ ಪ್ರಮುಖ ತೀರ್ಮಾನಗಳು: ಕರೋನಾ ಲಸಿಕೆಗಳು ಮತ್ತು ಹಠಾತ್ ಹೃದಯಾಘಾತದಿಂದ ಸಂಭವಿಸುವ ಸಾವುಗಳ ನಡುವೆ ಯಾವುದೇ ನೇರ ಸಂಬಂಧವಿಲ್ಲ ಎಂದು ವರದಿ ಸ್ಪಷ್ಟವಾಗಿ ತೀರ್ಮಾನಿಸಿದೆ. ಯುವಕರಲ್ಲಿ ಹೃದಯ ಕಾಯಿಲೆಯ ಹೆಚ್ಚಳಕ್ಕೆ ಮಧುಮೇಹ, ಅಧಿಕ ರಕ್ತದೊತ್ತಡ, ಧೂಮಪಾನ ಮತ್ತು ಕೊಲೆಸ್ಟ್ರಾಲ್‌ನಂತಹ ಸಾಂಪ್ರದಾಯಿಕ ಮತ್ತು ಗೊತ್ತಿರುವ ಅಪಾಯಕಾರಿ ಅಂಶಗಳೇ ಪ್ರಮುಖ ಕಾರಣ ಎಂದು ಹೇಳಿದೆ. ಕರೋನಾ ನಂತರದ ದೀರ್ಘಕಾಲೀನ ಪರಿಣಾಮ ಗಳು ಹೃದಯಾಘಾತದ ಘಟನೆಗಳಿಗೆ ಕಾರಣವಾ ಗಿದೆ ಎಂಬ ಸಿದ್ಧಾಂತಕ್ಕೆ ಪ್ರಸ್ತುತ ದತ್ತಾಂಶದಿಂದ ನೇರ ಬೆಂಬಲವಿಲ್ಲ ಎಂದೂ ವರದಿ ಸ್ಪಷ್ಟಪಡಿಸಿದೆ. → 4

ಸಿಎಂ ವಿರುದ್ಧ ಗೋಯಲ್ ಅಸಮಾಧಾನ

'ಕೋವಿಡ್ ಲಸಿಕೆ ಹೃದಯಾಘಾತದ ಸಾವುಗಳಿಗೆ ಸಂಬಂಧಿಸಿರಬಹುದು' ಎಂದು ಹೇಳಿದ್ದಕ್ಕಾಗಿ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಹರಿಹಾಯ್ದಿದ್ದಾರೆ. ಈ ಹೇಳಿಕೆಗಳು ಭಾರತೀಯ ವಿಜ್ಞಾನಿಗಳು, ಸ್ಟಾರ್ಟ್‌ಅಪ್‌ಗಳು ಮತ್ತು ದೇಶದ ಔಷಧೀಯ ಶಕ್ತಿಗೆ ಮಾಡಿದ ಅವಮಾನ. ಸಾಂಕ್ರಾಮಿಕ ರೋಗದ ಸಮಯದಲ್ಲಿ ದಣಿವರಿಯಿಲ್ಲದೆ ಕೆಲಸ ಮಾಡಿದ ಜನರನ್ನು ಸಿದ್ದರಾಮಯ್ಯ ಹೇಳಿಕೆಗಳು ದುರ್ಬಲಗೊಳಿಸಿವೆ. ಸಿದ್ದರಾಮಯ್ಯ ಸಾರ್ವಜನಿಕ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದರು.

ಎಐಸಿಸಿ ಹಿಂದುಳಿದ ವರ್ಗಗಳ ರಾಷ್ಟ್ರೀಯ ಸಲಹಾ ಮಂಡಳಿ ರಚಿಸಿದ ಕೈಕಮಾಂಡ್

ಸಿಎಂ ಸಿದ್ದರಾಮಯ್ಯಗೆ ಮಹತ್ವದ ಜವಾಬ್ದಾರಿ

ಬೆಂಗಳೂರು: ದೇಶಾದ್ಯಂತ ಹಿಂದುಳಿದ ವರ್ಗಗಳನ್ನು ತನ್ನತ್ತ ಸೆಳೆಯಲು ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ರಾಷ್ಟ್ರೀಯ ಸಲಹಾ ಮಂಡಳಿಯನ್ನು ರಚಿಸಿರುವ ಕೈ ಹೈಕಮಾಂಡ್ ಚುನಾವಣೆಗೆ ಸಿದ್ಧತೆ ನಡೆಸಿದೆ.

ದೇಶದಲ್ಲಿ ಹಿಂದುಳಿದ ವರ್ಗಗಳ ಪಟ್ಟಿಯ ಲ್ಲಿರುವ ಸಮುದಾಯಗಳು ಎದುರಿಸುತ್ತಿರುವ ವಿವಿಧ ಸಮಸ್ಯೆಯನ್ನು ಅರಿತು, ಅವುಗಳಿಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಕಾರ್ಯತಂತ್ರ ರೂಪಿಸುವುದಕ್ಕೆ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ರಾಷ್ಟ್ರೀಯ ಮಟ್ಟದ ಸಲಹಾ ಮಂಡಳಿ ರಚಿಸಲಾಗಿದೆ. ಎಐಸಿಸಿಯ ಹಿಂದುಳಿದ ವರ್ಗಗಳ ಘಟಕಕ್ಕೆ ಮುಂದಿನ ಕಾರ್ಯಯೋಜನೆಗಳು, ಅವುಗಳ ಅನುಷ್ಠಾನ, ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ ಕಾಂಗ್ರೆಸ್ ಕೈಗೆತ್ತಿಕೊಳ್ಳಬೇಕಾದ ವಿಷಯಗಳ ಕುರಿತು ಈ ಸಲಹಾ ಮಂಡಳಿಯು ಸಲಹೆ ನೀಡಲಿದೆ. ನಾಲ್ವರು ಮಾಜಿ ಸಿಎಂಗಳು ಸೇರಿ 24 ಸದಸ್ಯರಿರುವ ಈ ಸಲಹಾ ಮಂಡಳಿಯನ್ನು ಸಿದ್ದರಾಮಯ್ಯ ಮುನ್ನಡೆಸ ಲಿದ್ದಾರೆ.

ಸಮಕಾಲೀನ ಸಂದರ್ಭದಲ್ಲಿ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಅಗ್ರಗಣ್ಯ ನಾಯಕರಾಗಿರುವ ಸಿದ್ದರಾಮಯ್ಯ ಅವರ ವರ್ಚಸ್ಸನ್ನು ಬಳಸಿಕೊಂಡು ದೇಶದಾದ್ಯಂತ ಹಿಂದುಳಿದ ವರ್ಗಗಳನ್ನು ತನ್ನತ್ತ ಸೆಳೆಯಲು ಕಾಂಗ್ರೆಸ್ ಈ ಮಂಡಳಿ ರಚಿಸಿದೆ. ದೇಶದಾದ್ಯಂತ ಹಿಂದುಳಿದ ವರ್ಗಗಳ ಸಮಸ್ಯೆ, ಸವಾಲುಗಳನ್ನು ಅರಿತು ಸಲಹೆ ನೀಡುವುದರ ಜತೆಗೆ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಪೂರಕವಾಗಿ ಕೈಗೊಳ್ಳ ಬೇಕಾದ ಕ್ರಮಗಳ ಬಗ್ಗೆಯೂ ಈ ಮಂಡಳಿ ಸಲಹೆ ನೀಡಲಿದೆ. ಹಿಂದುಳಿದ ವರ್ಗಗಳ ರಾಷ್ಟ್ರೀಯ ಸಲಹಾ ಮಂಡಳಿ ರಚನೆಯನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಇತ್ತೀಚೆಗೆ ಅನುಮೋದಿಸಿದ್ದಾರೆ. ರಾಜ್ಯದ ಕಾಂಗ್ರೆಸ್ ನಾಯಕರ ಪೈಕಿ ಸಿದ್ದರಾಮಯ್ಯ, ಹರಿಪ್ರಸಾದ್ ಅವರೊಂದಿಗೆ ಮಾಜಿ ಸಿಎಂ ಎಂ.ವೀರಪ್ಪ ಮೊಯಿಲಿ ಕೂಡ ಮಂಡಳಿಯಲ್ಲಿದ್ದಾರೆ.

ಬೆಂಗಳೂರಿನಲ್ಲೇ ಮೊದಲ ಸಭೆ: ಹಿಂದುಳಿದ ವರ್ಗಗಳ ರಾಷ್ಟ್ರೀಯ ಸಲಹಾ ಮಂಡಳಿಯ ಚಟುವಟಿಕೆಗಳನ್ನು ಕರ್ನಾಟಕ ದಿಂದಲೇ ಆರಂಭಿಸಲು ಎಐಸಿಸಿ ಮುಂದಾಗಿದೆ. ಜುಲೈ 15ರಂದು ಬೆಂಗಳೂರಿನ ಕ್ವೀನ್ಸ್ ರಸ್ತೆಯಲ್ಲಿರುವ ಕೆಪಿಸಿಸಿ ಕಚೇರಿ ಆವರಣದಲ್ಲಿನ ಭಾರತ್ ಜೋಡೊ ಭವನದಲ್ಲಿ ಮಂಡಳಿಯ ಮೊದಲ ಸಭೆ ನಡೆಯಲಿದೆ. ಮಂಡಳಿಯ ಸದಸ್ಯರು, ಸಂಚಾಲಕರು, ಕಾರ್ಯದರ್ಶಿಗಳು, ಕಾಂಗ್ರೆಸ್‌ನ ಹಿಂದುಳಿದ ವರ್ಗಗಳ ಪ್ರಮುಖ ನಾಯಕರು ಸೇರಿದಂತೆ ದೇಶದ ವಿವಿಧ ರಾಜ್ಯಗಳ 90 ನಾಯಕರಿಗೆ ಆಹ್ವಾನ ನೀಡಲಾಗಿದೆ. ಐವರು ಮಾಜಿ ಸಿಎಂಗಳು, ಹತ್ತು ಮಂದಿ ಕೇಂದ್ರದ ಮಾಜಿ ಸಚಿವರು ಸಭೆಯಲ್ಲಿ ಭಾಗವಹಿಸಲಿದ್ದಾರೆ. → 4

ಸಲಹಾ ಮಂಡಳಿಯಲ್ಲಿ ಯಾರ‍್ಯಾರು?

ಸಿದ್ದರಾಮಯ್ಯ, ಬಿ.ಕೆ.ಹರಿಪ್ರಸಾದ್, ಅಶೋಕ್ ಗೆಹಲೋಥ್, ಭೂಪೇಶ್ ಬಘೇಲ್, ವಿ.ನಾರಾಯಣಸ್ವಾಮಿ, ಸಚಿನ್ ಪೈಲಟ್, ಗುರುದೀಪ್ ಸಿಂಗ್ ಸಪ್ಪಲ್, ಅರುಣ್ ಯಾದವ್, ವಿಜಯ್ ನಾಮ್ದೇವ್ರಾವ್ ವಡೆಟ್ಟಿವಾರ್, ವಿ.ಹನುಮಂತರಾವ್, ಅಮಿತ್ ಚಾವ್ಡಾ, ಬಿ.ಮಹೇಶ್ ಕುಮಾರ್ ಗೌಡ್, ಪೊನ್ನಮ್ ಪ್ರಭಾಕರ್, ಡಾ.ವೀರಪ್ಪ ಮೊಯಿಲಿ, ಎಸ್.ಜೋತಿಮಣಿ (ಸಂಸದೆ), ಶ್ರೀಕಾಂತ್ ಜೇನಾ, ಕಮಲೇಶ್ವರ್ ಪಟೇಲ್, ಅಜಯ್ ಕುಮಾರ್ ಲಲ್ಲು, ಸುಭಾಷಿಣಿ ಯಾದವ್, ಅಡೂರು ಪ್ರಕಾಶ್ (ಸಂಸದ), ಧನೇಂದ್ರ ಸಾಹು, ಹೀನಾ ಕಾವ್ರೆ ಇದ್ದಾರೆ. ಸಲಹಾ ಮಂಡಳಿಯ ಸಂಚಾಲಕರಾಗಿ ಡಾ.ಅನಿಲ್ ಜೈಹಿಂದ್, ಕಾರ್ಯದರ್ಶಿಯಾಗಿ ಜಿತೇಂದರ್ ಬಘೇಲ್ ಇರಲಿದ್ದಾರೆ.

ನೇಹಲ್ ಮೋದಿ ಬಂಧನ

ದೆಹಲಿ: ಪಂಜಾಬ್ ನ್ಯಾಷನಲ್ ಬ್ಯಾಂಕ್ ಬಹುಕೋಟಿ ಹಗರಣದ ಪ್ರಮುಖ ಆರೋಪಿ ನೀರವ್ ಮೋದಿ ಅವರ ಕಿರಿಯ

ಸಹೋದರ ನೇಹಲ್ ಮೋದಿಯನ್ನು ಅಮೆರಿಕದಲ್ಲಿ ಶುಕ್ರವಾರ ಬಂಧಿಸಲಾಗಿದೆ ಎಂದು ಅಮೆರಿಕದ ಅಧಿಕಾರಿಗಳು ಭಾರತಕ್ಕೆ ಮಾಹಿತಿ ನೀಡಿದ್ದಾರೆ. ಈ ಪ್ರಕರಣದ ಮುಂದಿನ ವಿಚಾರಣೆ ಜುಲೈ 17ರಂದು ನಡೆಯಲಿದೆ. ಆ ಸಮಯದಲ್ಲಿ ನೇಹಲ್ ಜಾಮೀನು ಕೋರಬಹುದು ಎಂದು ಹೇಳಿದ್ದಾರೆ. ಇಡಿ ಮತ್ತು ಸಿಬಿಐ ಜಂಟಿಯಾಗಿ ಸಲ್ಲಿಸಿದ ಗಡಿಪಾರು ಕೋರಿಕೆಯ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ ಎಂದೂ ಮಾಹಿತಿ ನೀಡಿದ್ದಾರೆ.

ಬ್ರಿಕ್ಸ್‌ಗೆ 6 ರಾಷ್ಟ್ರ ಸೇರ್ಪಡೆ

ದೆಹಲಿ: ಬ್ರೆಜಿಲ್, ರಷ್ಯಾ, ಇಂಡಿಯ, ಚೀನಾ, ದಕ್ಷಿಣ ಆಫ್ರಿಕಾ ದೇಶಗಳ ಹೆಸರಿನ ಮೊದಲಕ್ಷರವನ್ನು ಆಯ್ದು ಸೇರಿಸಿ 'ಬಿಆರ್

ಐಸಿಎಸ್' ಅರ್ಥಾತ್ 'ಬ್ರಿಕ್ಸ್' ಎಂದು ಒಕ್ಕೂಟ ರಚಿಸಲಾಗಿತ್ತು. ಆ ಒಕ್ಕೂಟಕ್ಕೆ ಹೊಸದಾಗಿ 6 ರಾಷ್ಟ್ರಗಳು ಸೇರಿಕೊಂಡಿದ್ದು, 'ಬ್ರಿಕ್ಸ್' ಗಾತ್ರ ಈಗ 11 ರಾಷ್ಟ್ರಗಳಿಗೆ ವಿಸ್ತಾರಗೊಂಡಿದೆ. ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾ ದೇಶಗಳ ಜತೆಗೆ ಈಗ ಹೊಸದಾಗಿ ಈಜಿಪ್ಟ್, ಇಥಿಯೋಪಿಯ, ಇರಾನ್, ಯುನೈಟೆಡ್ ಅರಬ್ ಎಮಿರೇಟ್ಸ್ ಮತ್ತು ಇಂಡೋನೇಷಿಯ ಸೇರಿಕೊಂಡಿವೆ.

ರಾಜ್, ಉದ್ಧವ್ ಮೈತ್ರಿ

ಮುಂಬೈ: ಸುಮಾರು 20 ವರ್ಷಗಳ ನಂತರ ಸೋದರ ಸಂಬಂಧಿಗಳಾದ ಉದ್ಧವ್ ಮತ್ತು ರಾಜ್ ಠಾಕ್ರೆ ಶನಿವಾರ ಮತ್ತೆ

ಒಂದಾದರು. ಮಹಾರಾಷ್ಟ್ರದ ಶಾಲೆಗಳಲ್ಲಿ 1ನೇ ತರಗತಿಯಿಂದ ಹಿಂದಿಯನ್ನು ಮೂರನೇ ಭಾಷೆಯಾಗಿ ಪರಿಚಯಿಸುವ ವಿವಾದಾತ್ಮಕ ಯೋಜನೆಯನ್ನು ಸರಕಾರ ರದ್ದುಗೊಳಿಸಿರುವುದರ ಹಿನ್ನೆಲೆಯಲ್ಲಿ ಆಯೋಜಿಸಿದ್ದ 'ಮರಾಠಿ ವಿಜಯೋತ್ಸವ ರ‍್ಯಾಲಿ'ಯಲ್ಲಿ ಇಬ್ಬರು ಸಹೋದರರು ಒಂದೇ ವೇದಿಕೆಯಲ್ಲಿ ಕಾಣಿಸಿಕೊಳ್ಳುವ ಮೂಲಕ ಒಗ್ಗಟ್ಟು ಪ್ರದರ್ಶಿಸಿದರು.

ಸೊಂಪಾದ ಪುಟಗಳು

ಬೆಳಗಾವಿಗೆ ಹೋಗಿ ಕುಂದಾ ನೋಡಿ, ರುಚಿ ಸವಿಯದೇ ಬಂದಂತೆ!
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್

ಹೊಸ ಬಾಳೆಯವರು ಹೊಸ ದೇನನ್ನೂ ಹೇಳಿರಲಿಲ್ಲ...
ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ

ದಾರಿದೀಪೋಕ್ತಿ

ಪ್ರತಿಯೊಬ್ಬರನ್ನೂ ಗೌರವದಿಂದ ಕಾಣುವುದು ನಮ್ಮ ಕರ್ತವ್ಯ. ಯಾರನ್ನೂ ಕೀಳಾಗಿ ಕಾಣಲು ನಮಗೆ ಅಧಿಕಾರವೇ ಇಲ್ಲ. ಪ್ರತಿಯೊಬ್ಬರಿಗೂ ಅವರದೇ ಆದ ಸ್ಥಾನಮಾನ ಇದ್ದೇ ಇರುತ್ತದೆ. ಅದನ್ನು ಕುಗ್ಗಿಸುವ, ತಗ್ಗಿಸಲು ಹೋದರೆ ನಮ್ಮ ಸ್ಥಾನಮಾನ ಕುಗ್ಗುತ್ತದೆ. ವ್ಯಕ್ತಿತ್ವಕ್ಕೆ ಕುಂದು ಬರುತ್ತದೆ.

ವಕ್ರತುಂಡೋಕ್ತಿ

ಗ್ರಾಹಕರಿಗೆ ಹೆರಿಗೆ ನೋವಿನ ಬಗ್ಗೆ ತಿಳಿದುಕೊಳ್ಳಲು ಮನಸ್ಸಿರುವುದಿಲ್ಲ. ಅವರಿಗೆ ಮಗುವನ್ನು ನೋಡಬೇಕಷ್ಟೆ.

``ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು"
-ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.
ಆಯುಕ್ತರು
ಸಮಾಜ ಕಲ್ಯಾಣ ಇಲಾಖೆ
@SWDGok

ಸಮಾಚಾರ ಸಣ್ಣದಲ್ಲ

ತಾಲೂಕು ಆಸ್ಪತ್ರೆಯಲ್ಲಿ ವೈದ್ಯರ ಕೊರತೆ

ಶಿವಮೊಗ್ಗ: ರಾಜ್ಯ ಸರಕಾರ ಆರೋಗ್ಯ ಇಲಾಖೆಯಲ್ಲಿ ಅವೈಜ್ಞಾನಿಕ ವರ್ಗಾವಣೆ ಮಾಡುತ್ತಿರುವುದರಿಂದ ಇದರ ಪರಿಣಾಮವಾಗಿ ತಾಲೂಕು ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರಿಲ್ಲದೇ ಬಡ ರೋಗಿಗಳು ಕಣ್ಣೀರು ಹಾಕುತ್ತಿದ್ದಾರೆ ಎಂದು ಶಾಸಕ ಆರಗ ಜ್ಞಾನೇಂದ್ರ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇತ್ತೀಚೆಗೆ ಸರಕಾರ ಕ್ಲಿನಿಕಲ್ ಮತ್ತು ನಾನ್ ಕ್ಲಿನಿಕಲ್ ವಿಭಾಗ ಮಾಡಿ ವರ್ಗಾವಣೆ ದಂಧೆಗೆ ಇಳಿದಿದ್ದು, ಆಸ್ಪತ್ರೆ ಖಾಲಿಯಾಗಿದೆ. ಸಿಬ್ಬಂದಿ ಕೊರತೆ ಇದೆ. ಸ್ಟಾಫ್ ನರ್ಸ್‌ಗಳ ಕೊರತೆ ಇದೆ. ಬಡವರಿಗೆ ಇದರಿಂದ ಆರೋಗ್ಯ ಮರೀಚಿಕೆಯಾಗಿದೆ. ರಾಜ್ಯ ಸರಕಾರ ಕೂಡಲೇ ಈ ನಿರ್ಧಾರ ಪುನರ್ ಪರಿಶೀಲನೆ ಮಾಡಬೇಕು ಎಂದರು. ತೀರ್ಥಹಳ್ಳಿ ತಾಲೂಕು ಆಸ್ಪತ್ರೆಯಲ್ಲಿ 6 ವೈದ್ಯರ ಕೊರತೆ ಇದೆ. ಸಿಬ್ಬಂದಿಗಳ ಕೊರತೆ ಇದೆ. ಸರಕಾರದ ಗಮನಕ್ಕೆ ತಂದರೂ ಈ ಬಗ್ಗೆ ಕ್ರಮ ಆಗಿಲ್ಲ. ಬಡವರ ಆರೋಗ್ಯದ ಹಿತದೃಷ್ಟಿಯಿಂದ ಸರಕಾರ ನಿರ್ಲಕ್ಷ್ಯ ಮಾಡದೇ ಆರೋಗ್ಯ ಇಲಾಖೆಯ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದರು. ಕಾಂತರಾಜ್ ವರದಿ ಜಾರಿಗೆ ತರದೇ ಈಗ ಮತ್ತೊಂದು ಸಮೀಕ್ಷೆಗೆ ಆದೇಶ ನೀಡಿ ಗೊಂದಲ ಸೃಷ್ಟಿ ಮಾಡಿದೆ. ಹಿಂದುಳಿದ ವರ್ಗಗಳ ಸಮೀಕ್ಷೆ ಕೂಡ ಕಾಟಾಚಾರಕ್ಕೆ ಮಾಡಿ ಕೆಲವೆಡೆ ಸುಳ್ಳು ಸಮೀಕ್ಷೆಯನ್ನು ನಡೆಸಿದ್ದಾರೆ. ಈಗಾಗಲೇ ಸಾರ್ವಜನಿಕರು ಈ ಬಗ್ಗೆ ಆರೋಪಿಸುತ್ತಿದ್ದಾರೆ. ಸರಕಾರ ತನ್ನ ಭ್ರಷ್ಟಾಚಾರ ಮುಚ್ಚಿ ಹಾಕಲು ಸಮೀಕ್ಷೆಯ ಗೊಂದಲ ಸೃಷ್ಟಿಸಿ ಜನರ ದಿಕ್ಕುತಪ್ಪಿಸುತ್ತಿದ್ದಾರೆ ಎಂದರು. ಈ ಸಂದರ್ಭದಲ್ಲಿ ಸಿ.ಹೆಚ್. ಮಾಲತೇಶ್, ವಿನ್ಸೆಂಟ್ ರೋಡ್ರಿಗಸ್, ಹರಿಕೃಷ್ಣ, ರಾಮು, ಚಂದ್ರಶೇಖರ್ ಇದ್ದರು.

ಜೀವರಾಶಿಗಳಿಗೆ ಪರಿಸರವೇ ಆಧಾರ

ಶಿವಮೊಗ್ಗ: ಸಕಲ ಜೀವರಾಶಿಗಳಿಗೆ ಮೂಲವಾಗಿದ್ದು ಪರಿಸರ. ಅದರ ರಕ್ಷಣೆಯ ಜವಾಬ್ದಾರಿ ಎಲ್ಲರದ್ದು ಎಂದು ಪರಿಸರ ಪ್ರೇಮಿ ತುಮಕೂರು ಮಹಾಲಿಂಗ ಹೇಳಿದರು. ಅವರು ಇಂದು ಪರಿಸರ ರಕ್ಷಣೆ ಮತ್ತು ಪ್ರಕೃತಿ ಉಳಿವು ಹಾಗೂ ಸರಕಾರಿ ಶಾಲೆಯ ಉಳಿವಿಗಾಗಿ ರಾಜ್ಯಾದ್ಯಂತ ಹಮ್ಮಿಕೊಂಡ ಸೈಕಲ್ ಜಾಥಾ ನಗರಕ್ಕಾಗಮಿಸಿದಾಗ ಮಾಧ್ಯಮ ಮಿತ್ರರು, ದುರ್ಗಿಗುಡಿ ಕನ್ನಡ ಸಂಘ ಮತ್ತು ಪರಿಸರಾಕ್ತರು ನೀಡಿದ ಸನ್ಮಾನ ಸ್ವೀಕರಿಸಿ ಮಾತನಾಡುತ್ತಿದ್ದರು. ಈಗಾಗಲೇ ತಾವು 20 ಜಿಲ್ಲೆಗಳಿಗೆ ಸೈಕಲ್ ಮೂಲಕ ಪರಿಸರ ಜಾಗೃತಿ ಜಾಥಾ ಮೂಲಕ ಭೇಟಿ ನೀಡಿದ್ದು ಎಲ್ಲ ಕಡೆ ಉತ್ತಮ ಸ್ಪಂದನೆ ದೊರೆತಿದೆ. ಇದು 21ನೇ ಜಿಲ್ಲೆಯಾಗಿದೆ. ಮಕ್ಕಳ ಆರೋಗ್ಯ, ಆಯಸ್ಸು ಹೆಚ್ಚಲು ಪರಿಸರ ರಕ್ಷಣೆಯಾಗಬೇಕು ಎಂದ ಅವರು ಈ ನಿಟ್ಟಿನಲ್ಲಿ ಪ್ರತಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 5–10 ಎಕರೆ ಅರಣ್ಯ ಬೆಳೆಸಬೇಕು ಎಂಬ ಮನವಿ ಮಾಡಿದ್ದಾಗಿ ತಿಳಿಸಿದರು. ಮಕ್ಕಳಿಗೆ ಸಮೃದ್ಧಿ ಶಿಕ್ಷಣ, ಸಮೃದ್ಧಿ ಪರಿಸರ ದೊರಕಬೇಕು. ಸರಕಾರ ಎಲ್ಲ ಶಾಲೆಗಳಿಗೆ ಮೂಲಭೂತ ಸೌಕರ್ಯ ಒದಗಿಸಬೇಕು. ಪರಿಸರವನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯಬೇಕು ಎಂದರು. ಈ ಸಂದರ್ಭದಲ್ಲಿ ದುರ್ಗಿಗುಡಿ ಕನ್ನಡ ಸಂಘದ ಮಾಜಿ ಅಧ್ಯಕ್ಷ ಲಿಂಗರಾಜ್, ಯುವರಾಜ್, ತ್ಯಾಗರಾಜ್ ಮಿತ್ಯಾಂತ, ಪತ್ರಕರ್ತ ಡಾ.ಬಾಲಕೃಷ್ಣ ಹೆಗಡೆ, ಸತೀಶ್ ಗೌಡ, ಸತೀಶ್ ಎಚ್.ಎಂ. ಬಾಲು ನಾಯ್ಡು ಮೊದಲಾದವರಿದ್ದರು.

ವಿವಿಧೆಡೆ ವಿದ್ಯುತ್ ವ್ಯತ್ಯಯ ಇಂದು

ಶಿಕಾರಿಪುರ: ಶಿಕಾರಿಪುರ 110/11 ಕೆ.ವಿ ವಿದ್ಯುತ್ ವಿತರಣಾ ಕೇಂದ್ರದ ಪಟ್ಟಣ ಹಾಗೂ ಗ್ರಾಮೀಣ ವ್ಯಾಪ್ತಿಯಲ್ಲಿನ ಹಳೆಯ ವಿದ್ಯುತ್ ಕಂಬಗಳನ್ನು ತೆರವುಗೊಳಿಸಿ ಹೊಸ ಸ್ಟನ್ ಲೇ?ನ್ ಪೋಲ್ ಅಳವಡಿಸುವ ಕಾಮಗಾರಿ ಹಿನ್ನಲೆಯಲ್ಲಿ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಿಂದ ಶಾಹಿ ಗಾರ್ಮೆಂಟ್ಸ್ ವರೆಗೆ ಹಾಗೂ ಎನ್ ಜೆ ವೆ ಎರೆಕಟ್ಟೆಯ ತಿಮ್ಲಾಪುರ,ನಂದಿಹಳ್ಳಿ, ಭದ್ರಾಪುರ,ತರಲಘಟ್ಟ,ದೊಡ್ಡಜೋಗೀಹಳ್ಳಿ,ಹಳೆ ದೂಪದಹಳ್ಳಿ,ಹೊಸ ದೂಪದಹಳ್ಳಿ,ನಂದಿಹಳ್ಳಿ ಐಪಿ, ತರಲಘಟ್ಟ ತಾಂಡಾ,ತರಲಘಟ್ಟ ಕ್ಯಾಂಪ್,ಕೆಂಗಟ್ಟೆ ವ್ಯಾಪ್ತಿಯ ಐಪಿ ಮಾರ್ಗದಲ್ಲಿ ಇದೇ ಜೂ.6 ರ ಭಾನುವಾರ ಬೆಳಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಸ್ಥಗಿತಗೊಳ್ಳಲಿದ್ದು ಗ್ರಾಹಕರು ಸಹಕರಿಸುವಂತೆ ಇಲ್ಲಿನ ಮೆಸ್ಕಾಂ ಎಇಇ ಪತ್ರಿಕಾ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಸಿ.ಪಿ. ಬಸವಣ್ಯಪ್ಪ ನಿಧನ

ಸೊರಬ: ತಾಲೂಕಿನ ಯಲವಳ್ಳಿ ನಿವಾಸಿ ಹಾಗೂ ಪಿಎಲ್ ಡಿ ಬ್ಯಾಂಕ್ ನಿರ್ದೇಶಕ ಸಿ.ಪಿ. ಬಸವಣ್ಯಪ್ಪ (54) ಶುಕ್ರವಾರ ಹೃದಯಾಘಾತದಿಂದ ನಿಧನರಾದರು. ಬಿಜೆಪಿಯ ಬೂತ್ ಅಧ್ಯಕ್ಷರೂ ಆಗಿದ್ದರು. ಸಹಜವಾಗಿ ಲವಲವಿಕೆಯಿಂದ ಇಂದ ಇದ್ದ ಅವರಿಗೆ ಮಧ್ಯಾಹ ಹೃದಯಾಘಾತವಾಗಿದೆ. ತಕ್ಷಣವೇ ಅವರನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯದಲ್ಲಿ ಮೃತಪಟ್ಟಿದ್ದಾರೆ. ಮೃತರು ಪತ್ನಿ, ಮೂವರು ಪುತ್ರರು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.



{ಈಶ್ವರ್ ಖಂಡ್ರೆ} ಅರಣ್ಯ ಸಚಿವ

ರಾಜ್ಯಾದ್ಯಂತ 600ಕ್ಕೂ ಅಧಿಕ ಆನೆಗಳು,560 ಹುಲಿಗಳಿವೆ. ವನ್ಯ ಜೀವಿಗಳ ಸಂರಕ್ಷಣೆ ಹಿತದೃಷ್ಟಿಯಿಂದ ಹುಲ್ಲು ಬೆಳೆಸುವುದು. ಅವುಗಳಿಗೆ ನೀರು ಒದಗಿಸುವ ಕೆಲಸಗಳು ನಡೆಯುತ್ತಿವೆ. ಮಲೈ ಮಹದೇಶ್ವರ ವನ್ಯಜೀವಿಗಳ ಧಾಮದಲ್ಲಿ ನಡೆದ ಘಟನೆ ಮರುಕಳಿಸದಂತೆ ಎಚ್ಚರ ವಹಿಸಲಾಗಿದೆ.

ಕೇಂದ್ರ ಸಚಿವರಾದ ನಿತಿನ್ ಗಡ್ಕರಿ, ಪ್ರಹ್ಲಾದ್ ಜೋಶಿ ಆಗಮನ : ಸಂಸದ ಬಿ.ವೈ.ರಾಘವೇಂದ್ರ

ಸಿಗಂಧೂರು ಸೇತುವೆ ಲೋಕಾರ್ಪಣೆ ಜು.14ಕ್ಕೆ

ಶಿವಮೊಗ್ಗ: ಸಾಗರ ತಾಲೂಕಿನ ಶರಾವತಿ ಹಿನ್ನೀರಿನಲ್ಲಿ ನಿರ್ಮಿಸಿರುವ ಹೊಳೆಬಾಗಿಲು–ಕಳಸವಳ್ಳಿ (ಸಿಗಂಧೂರು) ನೂತನ ಸೇತುವೆಯ ಲೋಕಾರ್ಪಣೆಯನ್ನು ಜುಲೈ 14 ರಂದು ಹಮ್ಮಿಕೊಳ್ಳಲಾಗಿದೆ ಎಂದು ಸಂಸದ ಬಿ.ವೈ.ರಾಘವೇಂದ್ರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮಕ್ಕೆ ಕೇಂದ್ರ ಲೋಕೋಪ ಯೋಗಿ ಸಚಿವ ನಿತಿನ್ ಗಡ್ಕರಿ, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಆಗಮಿಸಲಿದ್ದಾರೆ. ಎಲ್ಲಿ ಕಾರ್ಯ ಕ್ರಮ ಮಾಡಬೇಕೆಂಬ ಬಗ್ಗೆ ಸ್ಥಳ ನಿಗಧಿಯಾಗಿಲ್ಲ. ರಾಜ್ಯ ಹಾಗೂ ಕೇಂದ್ರ ಸರಕಾರದ ಅಧಿಕಾರಿಗಳು ಸಮಾಲೋಚಿಸಿ ಸ್ಥಳ ನಿಗದಿ ಮಾಡಲಿದ್ದಾರೆ ಎಂದರು.

ಹಸಿರುಮಕ್ಕಿ, ಸಿಗಂಧೂರು ಸೇತುವೆ ಬಗ್ಗೆ ಕಾಂಗ್ರೆಸ್ಸಿಗರು ಟೀಕೆ ಮಾಡುತ್ತಿದ್ದಾರೆ. ನಮ್ಮ ಅಭಿವೃದ್ಧಿ ಕೆಲಸಗಳೇ ಅವರಿಗೆ ಉತ್ತರವಾಗಲಿದೆ. ದೇಶದಲ್ಲಿ ನರೇಂದ್ರಮೋದಿ ನೇತೃತ್ವದ ಸರಕಾರ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಾ ಬಂದಿದೆ. ಗುಣಮಟ್ಟದ ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣಕ್ಕೆ ಸಾವಿರಾರು ಕೋಟಿ ರು.ಗಳನ್ನು ಖರ್ಚು ಮಾಡಲಾಗಿದೆ ಎಂದರು.

ಸಿಗಂಧೂರು ಸೇತುವೆ ನಿರ್ಮಾಣಕ್ಕೆ ಸಂಕಲ್ಪ ಮಾಡಿದ್ದು, ನಮ್ಮ ತಂದೆ ಬಿ.ಎಸ್. ಯಡಿಯೂರಪ್ಪನವರು. ಅವರ ಕಾಲದಲ್ಲಿ ಸುಮಾರು 371 ಕೋಟಿ



ಸುದ್ದಿಗೋಷ್ಠಿಯಲ್ಲಿ ಸಂಸದ ಬಿ.ವೈ.ರಾಘವೇಂದ್ರ ಮಾತನಾಡಿದರು.

ರೂ.ಗಳ ವೆಚ್ಚದಲ್ಲಿ 2018ರಲ್ಲಿಯೇ ಅಡಿಗಲ್ಲು ಹಾಕಲಾಗಿತ್ತು. ನಂತರದಲ್ಲಿ ಆ ಹಣ ವಾಪಾಸ್ಸು ಕೂಡ ಹೋಗಿತ್ತು. ನನು ಸಂಸದನಾದ ಮೇಲೆ ಅದು ಮತ್ತೆ ಮರಳಿಬರುವಂತೆ ಮಾಡಿ, ಟೆಂಡರ್ ಕರೆದು ಕೆಲಸ ಪ್ರಾರಂಭ ಮಾಡಿದೆವು. ಈಗ ಕಾಲಕೂಡಿ ಬಂದಿದೆ. ಮುಹೂರ್ತ ಕೂಡ ಫಿಕ್ಸ್ ಆಗಿದೆ ಎಂದರು.

ಅನೇಕರು ಈ ಸೇತುವೆ ನಿರ್ಮಾಣಕ್ಕಾಗಿ ಒತ್ತಾಯ ಮಾಡಿದ್ದಾರೆ. ಇದು ಬಹುದಿನದ ಕನಸಾಗಿದೆ. ಮತ್ತು ದೇಶದ ಅತ್ಯಂತ ಉದ್ದದ 2ನೇ ಸೇತುವೆ ಇದು. ಶರಾವತಿ ಸಂತ್ರಸ್ತರಿಗೆ ಜೀವ ನೀಡುವ ಯೋಜನೆ ಇದಾಗಿದೆ. ಇದರ ಜತೆ ಜತೆಯಲ್ಲಿಯೇ ಸುಮಾರು 5 ಕಡೆ ವಿವಿಧ ಸೇತುವೆಗಳನ್ನು ನಿರ್ಮಾಣ ಮಾಡಲಾಗಿದೆ. ಅವೆಲ್ಲವೂ ಶೀಘ್ರವೇ ಮುಗಿಯಲಿದೆ. ಸುಮಾರು 315 ಕೋಟಿ ರೂ. ವೆಚ್ಚದಲ್ಲಿ ಪಟುಗೊಪ್ಪ ಮತ್ತು ಹಸಿರುಮಕ್ಕಿ ಸೇತುವೆಗಳು ನಿರ್ಮಾಣವಾಗಿವೆ. ಇವೆಲ್ಲವೂ ಈ ಸೇತುವೆಗೆ ಸಂಪರ್ಕ ಕಲ್ಪಿಸಲಿದೆ. ಹಾಗಾಗಿ ಈ ಭಾಗದಲ್ಲಿ ಒಟ್ಟು 6 ಸೇತುವೆಗಳನ್ನು ಬಿಜೆಪಿ ನೇತೃತ್ವದ ಸರಕಾರ ಮಾಡಿದೆ ಎಂದರು.

ನರೇಂದ್ರಮೋದಿ ನೇತೃತ್ವದ ಕೇಂದ್ರ ಸರಕಾರ ಇಡೀ ದೇಶದ ರಸ್ತೆಗಳ ಬಗ್ಗೆ ಆಸಕ್ತಿವಹಿಸಿದೆ. ಬಿಜೆಪಿ ಸರ್ಕಾರ ಬರುವ ಮೊದಲು ಕೇವಲ 90 ಸಾವಿರ ಕಿ.ಮೀ. ರಸ್ತೆ ಇತ್ತು. ಆದರೆ ಈಗ ಅದು 1.50 ಲಕ್ಷದಷ್ಟು ಹೆಚ್ಚಾಗಿದೆ. ಅಂದರೆ ಶೇ.10ರಷ್ಟು ಹೆಚ್ಚು ರಸ್ತೆಗಳನ್ನು ಕೇಂದ್ರ ಸರ್ಕಾರ ನಿರ್ಮಿಸಿದೆ. ಗಡಿರಸ್ತೆಗಳು, ನಿರ್ಲಕ್ಷ್ಯಕ್ಕೆ ಒಳಗಾದ ಕುಗ್ರಾಮ ರಸ್ತೆಗಳನ್ನು ಕೂಡ ಗುರುತಿಸಿ ರಸ್ತೆ ಮಾಡಲಾಗಿದೆ. ಶಿವಮೊಗ್ಗ ಜಿಲ್ಲೆಗೆ ಸುಮಾರು 20 ಸಾವಿರ ಕೋಟಿ ರು. ಅನುದಾನ ಬಂದಿದೆ ಇದೆಲ್ಲಾ ಅಭಿವೃದ್ಧಿ ಅಲ್ಲವೇ ಎಂದರು.

ಸುದ್ದಿಗೋಷ್ಠಿಯಲ್ಲಿ ಶಾಸಕರುಗಳಾದ ಆರಗ ಜ್ಞಾನೇಂದ್ರ, ಎಸ್.ಎನ್. ಚನ್ನಬಸಪ್ಪ, ಡಾ|| ಧನಂಜಯ ಸರ್ಜಿ, ಬಿಜೆಪಿ ಜಿಲ್ಲಾಧ್ಯಕ್ಷ ಎನ್.ಕೆ. ಜಗದೀಶ್, ಮಾಜಿ ಸಚಿವ ಹರತಾಳು ಹಾಲಪ್ಪ, ಪ್ರಮುಖರಾದ ಟಿ.ಡಿ. ಮೇಘರಾಜ್, ಎಸ್.ಎಸ್. ಜ್ಯೋತಿಪ್ರಕಾಶ್, ಕೆ.ಜಿ. ಕುಮಾರ್‌ಸ್ವಾಮಿ, ಆರ್.ಕೆ. ಸಿದ್ರಾಮಣ್ಣ, ಸಿ.ಹೆಚ್. ಮಾಲತೇಶ್, ಹರಿಕೃಷ್ಣ, ವಿನ್ಸೆಂಟ್ ರೋಡ್ರೀಗಸ್, ಚಂದ್ರಶೇಖರ್, ಕೆ.ವಿ. ಅಣ್ಣಪ್ಪ, ರಾಮು ಇದ್ದರು.

> ಸಿಗಂಧೂರು ಸೇತುವೆಯ ಲೋಕಾರ್ಪಣೆಯ ಹಿನ್ನಲೆಯಲ್ಲಿ ರಾಷ್ಟ್ರೀಯ ನಾಯಕರು ಬರುತ್ತಾರೆ ಎಂಬ ಕಾರಣಕ್ಕೆ ಅಧಿಕಾರಿಗಳ ಜತೆ ವೀಕ್ಷಣೆಮಾಡಲು ಅಲ್ಲಿಗೆ ಹೋಗಿದ್ದೆವು. ಅಲ್ಲಿ ಯಾವುದೇ ಫೋಜು ಕೊಡಲು ನಾವು ಹೋಗಿಲ್ಲ. ಟೀಕೆ ಮಾಡುವವರು ಮಾಡಲಿಬಿಡಿ.
>
> – ಬಿ.ವೈ.ರಾಘವೇಂದ್ರ, ಸಂಸದ

ದೇಶದ ಬಹುದೊಡ್ಡ ತೂಗು ಸೇತುವೆ

ದೇಶದ ಬಹುದೊಡ್ಡ ಈ ತೂಗು ಸೇತುವೆಗೆ ಏನು ಹೆಸರಿಡಬೇಕೆಂದು ಈಗಾಗಲೇ ಬಿಜೆಪಿ ಮುಖಂಡರೆಲ್ಲಾ ಸೇರಿ ನಿರ್ಧರಿಸಿದ್ದೇವೆ. ಆ ಪ್ರಕಾರ ಸಿಗಂಧೂರು ಚೌಡೇಶ್ವರಿ ಸೇತುವೆ ಎಂಬ ಹೆಸರು ಸೂಕ್ತ ಎಂದುಕೊಂಡಿದ್ದೇವೆ. ಇದಕ್ಕೆ ಸಂಬಂಧಿಸಿದಂತೆ ರಾಜ್ಯ ಸರಕಾರದ ಎನ್‌ಓಸಿ ಕೂಡ ಬೇಕಾಗುತ್ತದೆ. ಮುಖ್ಯಮಂತ್ರಿಗಳು ನಮ್ಮ ಮನವಿಯನ್ನು ಪುರಸ್ಕರಿಸಲಿದ್ದಾರೆ ಎಂಬ ನಂಬಿಕೆ ಇದೆ ಎಂದರು. ಈ ಭಾಗದಲ್ಲಿ ಸಿಗಂಧೂರು ಚೌಡೇಶ್ವರಿ ದೇವಾಲಯ ತುಂಬಾ ಪ್ರಸಿದ್ಧಿಯಾಗಿದೆ. ಈ ಕ್ಷೇತ್ರ ಧೈವಭಕ್ತಿಯ ತಾಣವೂ ಹೌದು. ಒಂದು ಧಾರ್ಮಿಕಸ್ಥಳವಾಗಿದೆ ಹಾಗಾಗಿ ಈ ಸೇತುವೆಗೆ ದೇವಿಯ ಹೆಸರನ್ನು ಇಡುವುದು ಸೂಕ್ತ ಎಂಬ ನಿರ್ಧಾರಕ್ಕೆ ಬಂದಿದ್ದೇವೆ ಎಂದರು.

ಒತ್ತುವರಿ ತೆರವಿಗೆ ನಾಯಕ ಸಮಾಜ ಮನವಿ

ಹೊಸದುರ್ಗ: ನಗರದ ನ್ಯೂ ಬನಶಂಕರಿ ಬಡಾವಣೆಯಲ್ಲಿರುವ ವಾಲ್ಮೀಕಿ ಸಮುದಾಯ ಭವನದ ಮುಂಭಾಗ ರಸ್ತೆಗೆಂದು ಮೀಸಲಿಟ್ಟಿದ್ದ ಜಾಗವನ್ನು ಕೆಲವರು ಅಕ್ರಮವಾಗಿ ಅತಿಕ್ರಮಿಸಿಕೊಂಡು ಕಾಂಪೌಂಡ್ ನಿರ್ಮಿಸಿಕೊಂಡಿದ್ದಾರೆ. ಇದರಿಂದಾಗಿ ಬಹಳಷ್ಟು ಸಮಸ್ಯೆಯಾಗುತ್ತಿದೆ. ಶೀಘ್ರವೇ ಅಕ್ರಮವಾಗಿ ಒತ್ತುವರಿ ಮಾಡಿರುವ ಜಾಗವನ್ನು ತೆರವುಗೊಳಿಸಬೇಕು ಎಂದು ಒತ್ತಾಯಿಸಿ ಪುರಸಭೆ ಅಧ್ಯಕ್ಷೆ ಮತ್ತು ಮುಖ್ಯಾಧಿಕಾರಿಗೆ ತಾಲೂಕು ನಾಯಕ ಸಮಾಜದ ವತಿಯಿಂದ ಶನಿವಾರ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಹೊಸದುರ್ಗ ತಾಲೂಕು ವಾಲ್ಮೀಕಿ ನಾಯಕ ಸಮಾಜದ ಪ್ರಭಾರ ಅಧ್ಯಕ್ಷ ಎನ್.ತಿಪ್ಪೇಸ್ವಾಮಿ ಮಾತನಾಡಿ, ಪಟ್ಟಣದ ನ್ಯೂಬನಶಂಕರಿ ಬಡಾವಣೆಯಲ್ಲಿ ಸರಕಾರದಿಂದ ಸಮುದಾಯ ಭವನಗಳ ನಿರ್ಮಾಣಕ್ಕೆಂದು ಜಾಗ ಗುರುತಿಸಲಾಗಿದೆ. ಈಗಾಗಲೇ ಅದೇ ಸ್ಥಳದಲ್ಲಿ ವಾಲ್ಮೀಕಿ ಸಮುದಾಯ ಭವನ ನಿರ್ಮಾಣವಾಗಿದೆ. ಇನ್ನಿತರ ಜನಾಂಗದ ಸಮುದಾಯ ಭವನಗಳ ನಿರ್ಮಾಣಕ್ಕೆ ಜಾಗಮೀಸಲಿದೆ. ಈ ಸಮುದಾಯ ಭವನಗಳಿಗೆ ವಾಹನಗಳು ಓಡಾಟ ನಡೆಸಲು ರಸ್ತೆಗಾಗಿ ಜಾಗ ಬಿಡಲಾಗಿತ್ತು. ಈ ಜಾಗವನ್ನು ಕೆಲವರು ಅಕ್ರಮವಾಗಿ ಒತ್ತುವರಿ ಮಾಡಿಕೊಂಡು, ಅವರ ಮನೆಗಳಿಗೆ ತಡೆಗೋಡೆ ನಿರ್ಮಿಸಿಕೊಂಡಿದ್ದಾರೆ. ಶೀಘ್ರವೇ ನಿಯಮದ ಪ್ರಕಾರ ಅಳತೆ ಮಾಡಿ, ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವ ಜಾಗವನ್ನು ತೆರವುಗೊಳಿಸಬೇಕು ಎಂದು ಒತ್ತಾಯಿಸಿದರು.

ಒತ್ತುವರಿ ಮಾಡಿರುವ ಜಾಗವನ್ನು ತೆರವುಗೊಳಿಸಬೇಕು ಎಂದು ಒತ್ತಾಯಿಸಿ ಪುರಸಭೆ ಅಧ್ಯಕ್ಷೆ ಮತ್ತು ಮುಖ್ಯಾಧಿಕಾರಿಗೆ ತಾಲೂಕು ನಾಯಕ ಸಮಾಜದ ವತಿಯಿಂದ ಶನಿವಾರ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ತಾಲೂಕು ವಾಲ್ಮೀಕಿ ನಾಯಕ ಸಮಾಜ ಮಾಜಿ ಅಧ್ಯಕ್ಷರಾದ ಗುತ್ತಿಕಟ್ಟೆ ಕೆಂಚಪ್ಪ, ರೊಪ್ಪ ಹನುಮಂತಪ್ಪ, ತಿಪ್ಪೇಸ್ವಾಮಿ, ಖಜಾಂಚಿ ಜಯಣ್ಣ, ಮುಖಂಡರಾದ ಏಕಾಂತಪ್ಪ, ಕಂಗುವಳ್ಳಿ ಮಹೇಶ್, ಐಯ್ಯನಹಳ್ಳಿ ಹರೀಶ್, ಮಳಲಿ ವಿಜಯಕುಮಾರ್, ಶಿವರುದ್ರಪ್ಪ, ಗುರುಸಿದ್ದಪ್ಪ, ಸಾಣೇಹಳ್ಳಿ ಹರೀಶ್, ಮಾರುತಿ, ಲೋಹಿತ್ ಸೇರಿದಂತೆ ಇತರರಿದ್ದರು.

ಕ್ರೀಡಾಪಟುಗಳಿಗೆ ಆರೋಗ್ಯ ಅಮೂಲ್ಯ

ನಾಯಕನಹಟ್ಟಿ: ನಾನೂ ಸಹ ಸರಕಾರಿ ಶಾಲೆಯಲ್ಲಿ ಓದಿದಂತಹ ವ್ಯಕ್ತಿ, ಸರಕಾರಿ ಶಾಲೆಯ ಮಕ್ಕಳು ಎಂದರೆ ನನಗೆ ಅಪಾರವಾದ ಪ್ರೀತಿ ಎಂದು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಓ. ಶ್ರೀನಿವಾಸ್ ಹೇಳಿದರು.

ಪಟ್ಟಣದ ಮಾದಯ್ಯನಹಟ್ಟಿ ಗ್ರಾಮದಲ್ಲಿ ಶನಿವಾರ 2ನೇ ವರ್ಷದ ಮಾರಿಕಾಂಬ ಕ್ರಿಕೇರ್ಸ್ ವತಿಯಿಂದ ದಿವಂಗತ ಬಿ.ಬೈಯಣ್ಣ ಎನ್. ಲೋಕೇಶ್, ಗಟ್ಟಪ್ಪನಾಯಕ, ಸ್ಮಾರಣಾರ್ತಕವಾಗಿ ಮಾದಯ್ಯನಹಟ್ಟಿ ಪ್ರೀಮಿಯರ್ ಲೀಗ್ ಕ್ರಿಕೇಟ್ ಟೂರ್ನಿಮೆಂಟ್ ಆಯೋಜಿಸಲಾಯಿತು. ಸರಕಾರಿ ಶಾಲೆಯ ಮಕ್ಕಳಿಗೆ ಉಚಿತವಾಗಿ ನೋಟ್‌ಬುಕ್ ಪೆನ್ನು, ಪುಸ್ತಕ ವಿತರಿಸಲಾಯಿತು.

ಪಟ್ಟಣ ಪಂಚಾಯಿತಿ ಸದಸ್ಯ ಜಾಗನೂರಹಟ್ಟಿ ಮಂಜುನಾಥ ಮಾತನಾಡಿ ಕ್ರೀಡೆಯಲ್ಲಿ ಸೋಲು–ಗೆಲುವು ಸರ್ವೇ ಸಾಮಾನ್ಯ ಕ್ರೀಡೆಯಲ್ಲಿ ಭಾಗವಹಿಸುವುದು ಮುಖ್ಯ, ಕ್ರೀಡಾಪಟುಗಳು ನಿಮ್ಮ ಅಮೂಲ್ಯವಾದ ಆರೋಗ್ಯ ಕಾಪಾಡಿಕೊಳ್ಳಿ ಹಾಗೂ ಓದಿನ ಕಡೆ ಹೆಚ್ಚು ಗಮನಹರಿಸಿ ಎಂದು ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯಿತಿ ಸದಸ್ಯ, ಸ್ಥಾಯಿ ಸಮಿತಿ ಅಧ್ಯಕ್ಷ ಕೆ.ಪಿ.ತಿಪ್ಪೇಸ್ವಾಮಿ, ಕರ್ನಾಟಕ ರಕ್ಷಣಾ ವೇದಿಕೆಯ ತಾಲ್ಲೂಕು ಅಧ್ಯಕ್ಷ ಮುತ್ತಯ್ಯ, ಹೋಬಳಿ ಘಟಕದ ಅಧ್ಯಕ್ಷ ಜೋಗಿಹಟ್ಟಿ ಮಂಜುನಾಥ, ಓ.ತಿಪ್ಪೇಶ, ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್‌ಶೆಟ್ಟಿ ಬಳಗ ಅಧ್ಯಕ್ಷ ಪ್ರಕಾಶ್, ಕ್ರೀಡಾಪಟುಗಳು, ಕ್ರೀಡಾಭಿಮಾನಿಗಳು ಹಟ್ಟಿ ಯಜಮಾನರು, ಇದ್ದರು.

ಸರಕಾರಿ ಶಾಲೆಯ ಮಕ್ಕಳಿಗೆ ಉಚಿತವಾಗಿ ನೋಟ್‌ಬುಕ್ ಪೆನ್ನು, ಪುಸ್ತಕ ವಿತರಿಸಲಾಯಿತು.

ಯುವಜನರು ದುಶ್ಚಟಗಳಿಂದ ದೂರವಿರಿ

ಯುವಜನರು ದುಷ್ಚಟಗಳಿಂದ ದೂರವಿರಬೇಕು. ಕ್ರೀಡೆಯಿಂದ ಶರೀರದ ಮಾನಸಿಕ ಬೆಳವಣಿಗೆಗೆ ಕ್ರೀಡೆಯು ಪ್ರಮುಖ ಪಾತ್ರವಹಿಸುತ್ತದೆ. ಇತ್ತೀಚಿನ ದಿನಗಳಲ್ಲಿ ಅನೇಕ ಯುವಕರು ದುಷ್ಚಟಗಳಿಗೆ ಬಲಿಯಾಗುವುದರ ಜೊತೆಗೆ ಆರೋಗ್ಯವನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ. ಯುವಕರು ತಂಬಾಕು, ಗುಟ್ಕಗಳ ಸೇವನೆಯಿಂದ ದೂರವಿರಬೇಕು. ಯುವಕರು ದೇಶವನ್ನು ಕಟ್ಟುವಂತವರು ತಮ್ಮ ಭವಿಷ್ಯದ ಜೀವನವನ್ನು ಉಜ್ವಲವಾಗಿ ಇಟ್ಟುಕೊಳ್ಳಲು ದುಷ್ಚಟಗಳಿಂದ ದೂರವಿರಬೇಕು ಎಂದು ಓ.ಶ್ರೀನಿವಾಸ್ ಹೇಳಿದರು.

ಅವೈಜ್ಞಾನಿಕ ಭದ್ರಾ ಯೋಜನೆ ನಿಲ್ಲಿಸಲಿ



ಹರಿಹರದಲ್ಲಿ ಜೆಡಿಎಸ್ ನಿಂದ ಬೃಹತ್ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಾಯಿತು.

ಹರಿಹರ: ನೆರೆ ಜಿಲ್ಲೆಗಳಿಗೆ ಭದ್ರಾ ಬಲದಂಡೆ ಕಾಲುವೆಂದ ಕುಡಿಯುವ ನೀರಿನ ನೆಪದಲ್ಲಿ ನೀರು ಪೂರೈಸಲು ಸರಕಾರ ಕೈಗೊಂಡಿರುವ ಯೋಜನೆ ಅವೈಜ್ಞಾನಿಕವಾಗಿದೆ ಎಂದು ಮಾಜಿ ಶಾಸಕ ಎಚ್.ಎಸ್. ಶಿವಶಂಕರ್ ತೀವ್ರ ಆಕ್ರೋಶ ವ್ಯಕ್ತಪಡಿ ಸಿದರು.

ಭದ್ರಾ ಬಲದಂಡೆ ನಾಲೆಯ ತಳಭಾಗದಲ್ಲಿ ಬೃಹತ್ ಪೈಪ್‌ಗಳನ್ನು ಅಳವಡಿಸಿ ಚಿತ್ರದುರ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೆ ನೀರು ಹರಿಸಲು ಸರ್ಕಾರ ಮುಂದಾಗಿರುವುದನ್ನು ರೋಧಿಸಿ ಶುಕ್ರವಾರ ಕರ್ನಾಟಕ ಪ್ರದೇಶ ಜನತಾದಳ, ರೈತ ಸಂಘಗಳ ಮತ್ತು ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ, ಮುಖ್ಯಮಂತ್ರಿ ಹಾಗೂ ರಾಜ್ಯಪಾಲರಿಗೆ ತಹಸೀಲ್ದಾರ್ ಮೂಲಕ ಮನ ಅರ್ಪಿಸಿದರು.

ಮನ ಅರ್ಪಿಸಿ ಎಚ್.ಎಸ್. ಶಿವಶಂಕರ್ ಮಾತನಾಡಿ, ಭದ್ರಾ ಬಲದಂಡೆ ನಾಲೆಂದ ಹರಪನಹಳ್ಳಿ ಸೇರಿದಂತೆ ಹಲವು ತಾಲೂಕುಗಳ ರೈತರಿಗೆ ನೀರು ಲಭ್ಯವಾಗದ ಸ್ಥಿತಿ ಇತ್ತೀಚೆಗೆ ಉಂಟಾಗಿದ್ದು, ಈಗ ಅಲ್ಲಿನ ತಳಭಾಗದಲ್ಲಿ ಪೈಪ್ ಅಳವಡಿಸುವ ಮೂಲಕ ಇನ್ನಷ್ಟು ರೈತರಿಗೆ ನಷ್ಟ ಉಂಟುಮಾಡಲು ಸರ್ಕಾರ ಮುಂದಾಗಿದೆ. ಇದರಿಂದ ದಾವಣಗೆರೆ ಜಿಲ್ಲೆಯ ಅನೇಕ ರೈತಭೂಗಳು ಬಯಲು ಸೀಮೆಯಾಗುವ ಸಾಧ್ಯತೆ ಉಂಟಾಗುತ್ತದೆ. ರೈತರು ಆತ್ಮಹತ್ಯೆ ಮಾಡುವ ಪರಿಸ್ಥಿತಿಯೂ ಉಂಟಾಗಬಹುದು ಎಂದು ಎಚ್ಚರಿಸಿದರು.

ನಾಲೆಯನ್ನು ಸೀಳಿ ಪೈಪ್ ಅಳವಡಿಸುವ ಬದಲು ಭದ್ರಾ ಜಲಾಶಯದ ನ್ನೀರಿನಲ್ಲಿ ಜಾಕ್‌ವೆಲ್ ನ್ರ್ಮಿಸಿ ಪಂಪ್ ಮೂಲಕ ನೀರು ತಡೆಯಬೇಕು. ಮತ್ತು ಪಕ್ಕದ ಜಿಲ್ಲೆಗಳಿಗೆ ನೀರು ಹರಿಸಿಕೊಳ್ಳಬೇಕು ಇದಕ್ಕೆ ನಮ್ಮ ರೈತರ ಅಭ್ಯಂತರವೇನು ಇಲ್ಲ. ತಪ್ಪಿದರೆ ಸರಕಾರದ ರುದ್ಧ ನಿರಂತರ ಹೋರಾಟ ನಡೆಸಲಾಗುವುದು ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ಬಿ. ಚಿದಾನಂದಪ್ಪ, ನಗರಸಭಾ ಸದಸ್ಯರಾಗಳಾದ ಪಿ.ಎನ್. ರೂಪಾಕ್ಷಿ, ಬಿ ಅಲ್ತಾಫ್, ಮುಖಂಡರಾದ ಜಿ. ನಂಜಣ್ಣ, ನೆಳ್ಳಿ ಬಸಣ್ಣ, ಅಂಗಡಿ ಬಸಟೆಪ್ಪ, ಕೆ.ಬಿ.ರೇವಣಸಿದ್ದಪ್ಪ, ಪಿ. ಶಿವಮೂರ್ತಿ, ಎಸ್.ಎಂ.ಅನಿಲ್, ಬಿ.ಎಂ. ಮಲ್ಲೇಶ್, ಬಿ. ಬಸವರಾಜ, ಎಂ.ಎಸ್. ಕಾಳಪ್ಪ,ದುರುಗೋಜಿ ಮೋಹನ್, ಶಿಲ್ಪಾಚಾರಿ, ಲಕ್ಷ್ಮಿ ಆಚಾರ್, ಮಹೇಶ್ ಮಲ್ಲಪ್ಪನವರ, ಪಿ. ಹನುಮಂತಪ್ಪ, ಬಿ.ಎಸ್. ರಂಗಪ್ಪ, ರೈತ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಕೆ.. ರುದ್ರಮುನಿ, ತಾಲೂಕು ಉಪಾಧ್ಯಕ್ಷ ನಂದೀಶ, ಕೆ. ಶೇಖರಪ್ಪ, ಶಂಬಣ್ಣ, ಎನ್.ಎಂ. ಚಂದ್ರಶೇಖರ್, ಎಂ. ಸಿದ್ದಪ್ಪ, ಗಂಗಣ್ಣ, ಧರ್ಮರಾಜ್, ಎ.ಬಿ. ಯಶವಂತ ಸೇರಿದಂತೆ ಅನೇಕ ಮಂದಿ ರೈತರು ಪಾಲ್ಗೊಂಡಿದ್ದರು.

ಕಪ್ಪು ಚುಕ್ಕೆ ಇಲ್ಲದಂತೆ ಬದುಕಿದ್ದವರು ಗುರುಸಿದ್ದಪ್ಪ

ಚಿತ್ರದುರ್ಗ: ಗುರುಸಿದ್ದಪ್ಪರವರು ತಮ್ಮ ಜೀವನ ಹಾಗೂ ರಾಜಕೀಯದಲ್ಲೂ ಯಾವುದೇ ರೀತಿಯ ಕಪ್ಪು ಚುಕ್ಕೆ ಇಲ್ಲದೆ ಹಣ, ಅಧಿಕಾರಕ್ಕೆ ಅಸೆಪಡೆದ ತಮ್ಮ ಪಾಲಿನ ಕೆಲಸವನ್ನು ಮಾಡಿಕೊಂಡು ಮಾರ್ಗದರ್ಶಿಗಳಾಗಿದ್ದರು ಎಂದು ಕರ್ನಾಟಕ ಪ್ರದೇಶ ಜನತಾದಳದ ಪ್ರಧಾನ ಕಾರ್ಯದರ್ಶಿ ಮತ್ತು ಚಿತ್ರದುರ್ಗ ನಗರಸಭೆ ಮಾಜಿ ಅಧ್ಯಕ್ಷರಾದ ಬಿ. ಕಾಂತರಾಜ್ ತಿಳಿಸಿದರು.

ಚಿತ್ರದುರ್ಗ ನಗರದ ಜಿಲ್ಲಾ ಜೆ.ಡಿ.ಎಸ್ ಘಟಕದ ಜೆ.ಪಿ.ಭವನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಪಕ್ಷದ ಹಿರಿಯ ಉಪಾಧ್ಯಕ್ಷರಾಗಿದ್ದ ಜೆ.ಎನ್. ಕೋಟೆ ಗುರುಸಿದ್ದಪ್ಪನವರಿಗೆ ನುಡಿನಮನ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು.

ಗುರುಸಿದ್ದಪ್ಪರವರು ಯಾವಾಗಲೂ ಬೇರೆಯವರಿಗೆ ಒಳ್ಳೇಯದ್ದನ್ನೆ ಬಯಸುತ್ತಿದ್ದರು, ಅಲ್ಲದೆ ತಾವು ಸಹ ಬೇರೆಯವರಿಗೆ ಕೆಟ್ಟದನ್ನು ಮಾಡಿಲ್ಲ, ತಮ್ಮ ಬದುಕಿನಲ್ಲಿ ಹೆಚ್ಚಿನ ಸಮಯವನ್ನು ರಾಜಕೀಯಕ್ಕೆ ನೀಡಿ ಕುಟುಂಬಕ್ಕೆ ಕಡಿಮೆ ಸಮಯವನ್ನು ನೀಡಿದ್ದರು, 50 ವರ್ಷದಿಂದ ರಾಜಕಾರಣ ಮಾಡಿದ್ದಾರೆ ಯಾವುದೇ ರೀತಿಯ ಆಸ್ತಿ, ಹಣ, ಮಾಡಿಲ್ಲ ಯಾವುದೇ ಶಿಫಾರಸ್ಸನ್ನು ಶಾಸಕರು, ಮಂತ್ರಿಗಳತ್ತ ತೆಗೆದುಕೊಂಡು ಹೋಗಿಲ್ಲ ಬೇರೆಯವರಿಗೆ ತಮ್ಮ ಕೈಲಾದ ಸಹಾಯವನ್ನು ಮಾಡಿದ್ದಾರೆ ಎಂದರು.

ಇತ್ತಿಚಿನ ದಿನಮಾನದಲ್ಲಿ ರಾಜಕೀಯ ಎಂದತರೆ ಹಣ ಮಾಡುವ ಸಂಸ್ಥೆ ಎಂದು ಹಲವಾರು ಜನತೆ ತಿಳಿದಿದ್ದಾರೆ ಆದರೆ ಇದಕ್ಕೆ ಅಪವಾದ ಎನ್ನುವಂತೆ ಗುರುಸಿದ್ದಪ್ಪರವರು ತಾವು ಇರುವಷ್ಟು ದಿವಸವೂ ಸಹ ಹಣ ಮಾಡದೇ ಮತ್ತು ಅಧಿಕಾರವನ್ನು ಬಳಸದೇ ಸಿದಾ–ಸದಾವಾಗಿದ್ದರು. ಇಂದಿನ ದಿನಮಾನದಲ್ಲಿ ಇಂತಹ ಜನತೆ ಸಿಗುವುದು ಕಷ್ಟವಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಜೆಡಿಎಸ್ ಪಕ್ಷದ ಬೆಳವಣಿಗೆಯಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸಿದ್ದರು, ಪಕ್ಷದಿಂದ ಎಲ್ಲೆ ಕಾರ್ಯಕ್ರಮವಾದರೂ ಸಹ ಅಲ್ಲಿ ಬಾಗಿಯಾಗುವುದರ ಮೂಲಕ ಪಕ್ಷದ ಸಂಘಟನೆಯಲ್ಲಿ ಪಾಲ್ಗೊಂಡಿದ್ದರು. ಪಕ್ಷಕ್ಕೆ ನಿಷ್ಠೆಯಿಂದ ಇರುವುದರ ಮೂಲಕ ಮಿತ ಭಾಷಿಗಳಾಗಿ ಉತ್ತಮವಾದ ಉಡುಪನ್ನು ಧರಿಸುವುದರ ಮೂಲಕ ಬೇರೆಯವರನ್ನು ತಮ್ಮತ್ತ ಸೆಳೆಯುತ್ತಿದ್ದರು ಎಂದು ಕಾಂತರಾಜು ತಿಳಿಸಿದರು.

> ಗುರುಸಿದ್ದಪ್ಪರವರು ಹಣ ಮತ್ತು ಅಧಿಕಾರಕ್ಕೆ ಅಸೆಯನ್ನು ಪಡುವಂತಿದ್ದರೆ ನಮ್ಮ ಪಕ್ಷ ಅಧಿಕಾರದಲ್ಲಿ ಇಲ್ಲದಿದ್ದಾಗ ಬೇರೆ ಪಕ್ಷಕ್ಕೆ ಹೋಗಬಹುದಾಗಿತ್ತು ಅಲ್ಲದೆ ಅ ಸಮಯದಲ್ಲಿ ಅವರಿಗೆ ಆಫರ್‌ಗಳು ಸಹಾ ಬಂದಿದ್ದವು ಅವುಗಳನ್ನು ತಿರಸ್ಕಾರ ಮಾಡಿ ಜೆಡಿಎಸ್‌ನಲ್ಲಿಯೇ ತಮ್ಮ ಶಕ್ತಿಯನ್ನು ಪ್ರದರ್ಶಿಸುವುದರ ಮೂಲಕ ಕೊನೆಯವರೆಗೂ ಇದರಲ್ಲಿ ಇದ್ದರು, ಅವರ ಆರೋಗ್ಯ, ಚಟುವಟಿಕೆ ನೋಡಿದರೆ ಇನ್ನೂ ಹಲವಾರು ವರ್ಷ ಬದುಕಿರುತ್ತಾರೆ ಎಂದು ನಮಗೆ ಅನಿಸಿತ್ತು ಆದರೆ ಭಗವಂತ ಇಚ್ಚೆಂತೆ ಅವರು ನಮ್ಮನ್ನೆಲ್ಲ ಬಿಟ್ಟು ಆಗಲಿದ್ದಾರೆ.
>
> – ಡಿ.ಯಶೋಧರ, ಮಾಜಿ ಜಿಲ್ಲಾ ಅಧ್ಯಕ್ಷರು

ಜಾತಿ, ಧರ್ಮಕ್ಕಿಂತ ಮಾನವೀಯತೆ ಮುಖ್ಯ

ಚಿತ್ರದುರ್ಗ: ಜಾತಿ, ಧರ್ಮಕ್ಕಿಂತ ಮಾನವೀಯತೆ ಮುಖ್ಯ. ಜಾತ್ಯಾತೀತ ದೇಶದ ಭಾರತದಲ್ಲಿರುವ ಎಲ್ಲಾ ಧರ್ಮಿಯರು ಅನ್ಯೋನ್ಯತೆಯಿಂದ ಬದುಕುತ್ತಿದ್ದಾರೆಂದು ಹಿರಿಯ ನ್ಯಾಯವಾದಿ ಬಿ.ಕೆ.ರಹಮನ್‌ವುಲ್ಲಾ ತಿಳಿಸಿದರು. ಹಿಂದೂ–ಮುಸ್ಲಿಂ–ಕ್ರೈಸ್ತರು, ಧರ್ಮ ಯಾವುದಾದರೇನು? ನಾವು ಮೊದಲು ಭಾರತೀಯರು ಎನ್ನುವ ವಿಚಾರ ಕುರಿತು ಪ್ರವಾಸಿ ಮಂದಿರದಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿದ್ದ ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನದಲ್ಲಿ ಎಲ್ಲಾ ಜಾತಿ ಧರ್ಮದವರಿಗೂ ಸಮಾನತೆ ನೀಡಿದ್ದಾರೆ. ಮುಸ್ಲಿಂರಿಗೆ ಕುರಾನ್, ಹಿಂದೂಗಳಿಗೆ ಭಗವದ್ಗೀತೆ, ಕ್ರೈಸ್ತರಿಗೆ ಬೈಬಲ್ ಇದೆ. ಇವೆಲ್ಲವುಗಳಿಗಿಂತಲೂ ಸಂವಿಧಾನ ದೊಡ್ಡ ಗ್ರಂಥ. ಮತದಾರರು ಚುನಾವಣೆಯಲ್ಲಿ ಮತಗಳನ್ನು ಮಾರಿಕೊಳ್ಳದೆ. ಯೋಗ್ಯರನ್ನು ಆಯ್ಕೆ ಮಾಡಿದಾಗ ಸದೃಢ ದೇಶ ಕಟ್ಟಲು ಸಾಧ್ಯ. ಸಂವಿಧಾನವನ್ನು ಉಳಿಸುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದು ಹೇಳಿದರು.

ಕಂದಾಯ ದಾಖಲೆ ಆನ್‌ಲೈನ್‌ನಲ್ಲಿ ಲಭ್ಯ

ದಾವಣಗೆರೆ: ಭೂ ಸುರಕ್ಷಾ ಯೋಜನೆಯಡಿ ಕಂದಾಯ ದಾಖಲೆಗಳ ಸ್ಕ್ಯಾನಿಂಗ್ ಮಾಡುವ ಕಾರ್ಯ ನಡೆಯುತ್ತಿದ್ದು ಸಾರ್ವಜನಿಕರಿಗೆ ಕಂದಾಯ ದಾಖಲೆಗಳನ್ನು ಡಿಜಿಟಲ್ ರೂಪದಲ್ಲಿಯೇ ನೀಡಲಾಗುತ್ತದೆ ಎಂದು ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಜಿ.ಎಂ. ತಿಳಿಸಿದರು.

ಶನಿವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕಂದಾಯ ಇಲಾಖೆಗಳ ಸೇವೆಗಳ ಕುರಿತಂತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಸಾರ್ವಜನಿಕರು ಕಂದಾಯ ಇಲಾಖೆಯ ಹಳೇ ಪಹಣಿ, ಮುಟೇಷನ್, ಲ್ಯಾಂಡ್ ಗ್ರಾಂಟ್ ರಿಜಿಸ್ಟರ್, ಬಗರ್ ಹುಕುಂ ಕಡತ ಸೇರಿದಂತೆ ಭೂಮಿಯ ಎಲ್ಲಾ ದಾಖಲೆ ಪಡೆಯಲು ಅವಕಾಶ ನೀಡಲಾಗಿದೆ. ಇದಕ್ಕಾಗಿಯೇ ಎಲ್ಲಾ ತಾಲ್ಲೂಕುಗಳಲ್ಲಿನ ಅಭಿಲೇಖಾಲಯದ ದಾಖಲೆಗಳ ಸ್ಕ್ಯಾನಿಂಗ್ ಮಾಡುವ ಕೆಲಸ ನಡೆಯುತ್ತಿದ್ದು ಇಲ್ಲಿಯವರೆಗೆ 1.13 ಕೋಟಿ ಪುಟಗಳ ಕಂದಾಯ ದಾಖಲೆ ಸ್ಕ್ಯಾನಿಂಗ್ ಮಾಡಿ ಅಪ್‌ಲೋಡ್ ಮಾಡಲಾಗಿದೆ ಎಂದರು.

ಕಂದಾಯ ದಾಖಲೆ ಸ್ಕ್ಯಾನಿಂಗ್ ಮಾಡಲು ದಾವಣಗೆರೆ ತಾಲೂಕನ್ನು ಮಾದರಿ ತಾಲೂಕಾಗಿ ತೆಗೆದುಕೊಳ್ಳಲಾಗಿತ್ತು. ದಾವಣಗೆರೆ ತಾಲ್ಲೂಕು ಕಚೇರಿಯಲ್ಲಿ ಒಟ್ಟು 105466 ಕಡತಗಳಲ್ಲಿ 83802 ಕಡತಗಳ 52,80,765 ಪುಟಗಳ ದಾಖಲೆ ಸ್ಕ್ಯಾನ್ ಮಾಡಿ ಡಿಜಿಟಲ್ ಮಾದರಿಯಲ್ಲಿ ಅಪ್‌ಲೋಡ್ ಮಾಡಲಾಗಿದೆ. ಮತ್ತು ಇತರೆ ತಾಲ್ಲೂಕುಗಳಾದ ಹರಿಹರ 11,06,372, ಜಗಳೂರು 13,23.129, ಹೊನ್ನಾಳಿ 12,98,228, ಚನ್ನಗಿರಿ 11,48,183, ನ್ಯಾಮತಿ ತಾಲ್ಲೂಕು ಕಚೇರಿಯಲ್ಲಿನ 11,51,723 ಪುಟಗಳ ದಾಖಲೆಗಳನ್ನು ಸ್ಕ್ಯಾನ್ ಅಪ್‌ಲೋಡ್ ಮಾಡಲಾಗಿದೆ. ಬಾಕಿ ಇರುವ ಕಡತ ಮುಂದಿನ ಒಂದು ವರ್ಷದೊಳಗಾಗಿ ಎಲ್ಲಾ ದಾಖಲೆ ಸ್ಕ್ಯಾನಿಂಗ್ ಮಾಡುವ ಕೆಲಸ ಪೂರ್ಣಗೊಳ್ಳಲಿದೆ. ಇದರಿಂದ ಸಾರ್ವಜನಿಕರಿಗೆ ಕಂದಾಯ ದಾಖಲೆ ವಿಳಂಬವಿಲ್ಲದೇ ಪಡೆಯಲು ಸಾಧ್ಯವಾಗಲಿದೆ. ಮತ್ತು ರೆಕಾರ್ಡ್ ರೂಂನಲ್ಲಿ ಕೆಲವರು ಕಂದಾಯ ದಾಖಲೆಗಳನ್ನು ತಿದ್ದುವ ಕೆಲಸ ಮಾಡುತ್ತಿದ್ದರು, ಇದು ಸಹ ಮುಂದಿನ ದಿನಗಳಲ್ಲಿ ತಪ್ಪಲಿದ್ದು ಸರ್ಕಾರ ಜನರಿಗೆ ಅನುಕೂಲ ಮಾಡಿಕೊಟ್ಟಿದೆ ಎಂದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕಂದಾಯ ಇಲಾಖೆಗಳ ಸೇವೆಗಳ ಕುರಿತಂತೆ ಸುದ್ದಿಗೋಷ್ಠಿಯಲ್ಲಿ ಗಂಗಾಧರಸ್ವಾಮಿ ಮಾತನಾಡಿದರು.

ಆನ್‌ಲೈನ್ ಮೂಲಕವೇ ದಾಖಲೆ ವಿತರಣೆ: ತಹಸೀಲ್ದಾರರ ಕಚೇರಿ ಸೇರಿದಂತೆ ಉಪವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿ ಕಚೇರಿಯಲ್ಲಿ ಇ–ಕಚೇರಿಯಲ್ಲಿಯೇ ಕಡತಗಳ ನಿರ್ವಹಣೆ ಮಾಡಲಾಗುತ್ತದೆ. ಡಿಜಿಟಲ್ ದಾಖಲೆಗಳಿಗೆ ಮೂಲ ದಾಖಲೆಗಳ ಪ್ರತಿಗೆ ಇದ್ದ ಮೌಲ್ಯವೇ ಇರಲಿದ್ದು ನ್ಯಾಯಾಲಯ ಸೇರಿದಂತೆ ಎಲ್ಲಾ ಅಗತ್ಯವಿರುವ ಕಡೆ ಮಾನ್ಯ ಮಾಡಲಾಗುತ್ತದೆ ಇದಕ್ಕೆ ಸರಕಾರ ಆದೇಶ ನೀಡಿದೆ ಎಂದರು.

ರಾಜ್ಯದಲ್ಲಿ ಪ್ರಥಮ; ಭೂ ಸುರಕ್ಷಾ ಯೋಜನೆಯಡಿ ಕಂದಾಯ ದಾಖಲೆ ಸ್ಕ್ಯಾನಿಂಗ್ ಮಾಡುವ ಕೆಲಸದಲ್ಲಿ ಜಿಲ್ಲೆ ಪ್ರಥಮ ಸ್ಥಾನದಲ್ಲಿದೆ. ಮತ್ತು ಪಹಣಿಯೊಂದಿಗೆ ಆಧಾರ್ ಜೋಡಣೆಯಲ್ಲಿಯು ಮೊದಲ ಸ್ಥಾನದಲ್ಲಿದ್ದು ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ ಎಂದರು.

ಕಂದಾಯ ಗ್ರಾಮದಿಂದ 25 ಸಾವಿರ ಜನರಿಗೆ ಹಕ್ಕುಪತ್ರ; ಜಿಲ್ಲೆಯಲ್ಲಿ ಈಗಾಗಲೇ 104 ಕಂದಾಯ ಗ್ರಾಮಗಳನ್ನು ರಚನೆ ಮಾಡುವ ಮೂಲಕ ಮನೆಗಳ ಹಕ್ಕುಪತ್ರ ನೀಡಲಾಗಿದೆ. ಇನ್ನೂ 200 ಕಂದಾಯ ಗ್ರಾಮ ತೆಗೆದುಕೊಂಡಿದ್ದು ಒಟ್ಟು 25 ಸಾವಿರ ಜನರಿಗೆ ಹಕ್ಕುಪತ್ರ ವಿತರಣೆ ಮಾಡಲಾಗುತ್ತದೆ.

ಕಂದಾಯ ಇಲಾಖೆ ಡಿಜಿಟಲೀಕರಣ: ಕಂದಾಯ ಇಲಾಖೆಯು ಸಂಪೂರ್ಣ ಡಿಜಿಟಲೀಕರಣದತ್ತ ಸಾಗುತ್ತಿದ್ದು ಈಗಾಗಲೇ ಎಲ್ಲಾ ಕಡತ ಇ–ಕಚೇರಿಯ ಮೂಲಕವೇ ನಿರ್ವಹಣೆ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಗ್ರಾಮ ಆಡಳಿತ ಅಧಿಕಾರಿಗಳು ಲಭ್ಯವಾಗುವ ಸ್ಥಳ ಮತ್ತು ಸಮಯದ ಆದೇಶ ಹೊರಡಿಸಲಾಗುತ್ತದೆ ಎಂದರು.

ಅಂಗನವಾಡಿ ನೇಮಕ ಅತ್ಯಂತ ಪಾರದರ್ಶಕ: ಅಂಗನವಾಡಿಯಲ್ಲಿ ಖಾಲಿ ಇದ್ದು 50 ಕಾರ್ಯಕರ್ತೆಯರ ಮತ್ತು 282 ಸಹಾಯಕಿರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದ್ದು ಯಾರು ಸಹ ಮಧ್ಯವರ್ತಿಗಳಿಗೆ ಹಣವನ್ನು ನೀಡಿ ಮೋಸ ಹೋಗಬಾರದು. ಈಗಾಗಲೇ ನೇಮಕಾತಿ ಪ್ರಕ್ರಿಯೆ ನಡೆಯಬೇಕಿದ್ದು ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಾಗ ಕೆಲವು ಲೋಪದೋಷ ಮಾಡಿರುವುದು ಕಂಡುಬಂದಿದೆ.

ಪರಿಸರ ಸಂರಕ್ಷಣೆ, ಪ್ಲಾಸ್ಟಿಕ್ ನಿಷೇಧ; ಪರಿಸರ ಸಂರಕ್ಷಣೆ ಮಾಡಲು ದಾವಣಗೆರೆ ನಗರದಲ್ಲಿ ಗಿಡಗಳನ್ನು ಬೆಳೆಸಲಾಗುತ್ತದೆ. ಇದಕ್ಕಾಗಿ ಮಳೆಗಾಲ ಮುಗಿಯುವವರೆಗೆ ಪ್ರತಿ 15 ದಿನಗಳಿಗೊಮ್ಮೆ ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಂಡು ಸಸಿ ಸಂರಕ್ಷಿಸುವ ಕೆಲಸ ಮಾಡಲಾಗುತ್ತದೆ.

ಪ್ಲಾಸ್ಟಿಕ್ ಬಳಕೆಯನ್ನು ಜಿಲ್ಲಾಧಿಕಾರಿಗಳ ಕಚೇರಿ, ಸಿಇ ಕಚೇರಿ ಸೇರಿದಂತೆ ಅನೇಕ ಕಡೆ ನಿಲ್ಲಿಸಲಾಗಿದೆ. ಅದೇ ರೀತಿ ಕಲ್ಯಾಣ ಮಂಟಪ, ಬಾರ್ ಅಂಡ್ ರೆಸ್ಟೋರೆಂಟ್, ವೈದ್ಯರ ಸಂಘ, ಬಟ್ಟೆ ಅಂಗಡಿ ಮಾಲಿಕರುಗಳ ಜತೆಗೆ ಸಭೆ ನಡೆಸಿ ಪ್ಲಾಸ್ಟಿಕ್ ಬಳಕೆ ಗಣನೀಯವಾಗಿ ತಗ್ಗಿಸಲು ಮತ್ತು ವೈಜ್ಞಾನಿಕವಾಗಿ ವಿಲೇ ಮಾಡಲು ಚರ್ಚೆ ಮಾಡಲಾಗುತ್ತದೆ ಎಂದರು.

ಅಪರ ಜಿಲ್ಲಾಧಿಕಾರಿ ಶೀಲವಂತ ಶಿವಕುಮಾರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರಾಜಾನಾಯ್ಕ, ತಹಸೀಲ್ದಾರ್ ಎಂ.ಬಿ.ಅಶ್ವಥ ಇದ್ದರು.

ದರಖಾಸ್ತು ಪೋಡಿ

ದರಖಾಸ್ತು ಪೋಡಿ ಅಭಿಯಾನದ ಮೂಲಕ ಒಟ್ಟುಗೂಡಿದ್ದ ಪಹಣಿಗಳನ್ನು ಬೇರ್ಪಡಿಸಲಾಗುತ್ತಿದೆ. ಈಗಾಗಲೇ 2 ಸಾವಿರ ದರಖಾಸ್ತು ಪೋಡಿ ಮೂಲಕ ಪ್ರತ್ಯೇಕ ಪಹಣಿ ವಿಂಗಡಿಸಲಾಗಿದೆ. ಇನ್ನೂ 5 ರಿಂದ 6 ಸಾವಿರ ಪಹಣಿ ಒಟ್ಟುಗೂಡಿಸಿ ಬೇರ್ಪಡಿಸಲಾಗುತ್ತದೆ ಎಂದರು.

ಸಮಾಚಾರ ಸಣ್ಣದಲ್ಲ

'ರಕ್ತಕ್ಕೆ ರಕ್ತವೇ ಬೇಕು' ಸ್ಟೇಟಸ್ ಹಾಕಿದವ ಸೆರೆ

ಉಡುಪಿ: ರಕ್ತಕ್ಕೆ ರಕ್ತವೇ ಬೇಕು ಎಂದು ಇನ್ಸ್ಟಾಗ್ರಾಂನಲ್ಲಿ ಸ್ಟೇಟಸ್ ಹಾಕಿದ್ದ ಯುವಕನನ್ನು ವಿಶೇಷ ಕಾರ್ಯಪಡೆ ಅಧಿಕಾರಿಗಳು ಬಂಧಿಸಿದ್ದಾರೆ. ಕಾರ್ಕಳ ತಾಲೂಕಿನ ಇರ್ವತ್ತೂರು ಗ್ರಾಮದ ಆಶಿಕ್ ಎಸ್. ಕೋಟ್ಯಾನ್ ಬಂಧಿತ ಯುವಕ. ಈತ ಪ್ರಚೋದನಕಾರಿ ಸ್ಟೇಟಸ್ ಹಾಕಿದ್ದ. ನಮಗೆ ಯಾವುದೇ ರೀತಿಯ ಉತ್ತರಗಳು ಬೇಡ ರಕ್ತಕ್ಕೆ ರಕ್ತವೇ ಉತ್ತರವಾಗಬೇಕು. ಜೀವಕ್ಕೆ ಜೀವ ಬೇಕು ಎಂದು ಮಾರಕಾಯುಧಗಳ ಚಿಹ್ನೆ ಬಳಸಿ ಸ್ಟೇಟಸ್ ಹಾಕಿದ್ದ. ಈ ಹಿನ್ನಲೆ ಆರೋಪಿ ವಿರುದ್ಧ ಮಂಗಳೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಕೇಸ್ ದಾಖಲಾಗಿದೆ. ಆರೋಪಿಯನ್ನ ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ.

ಎಸೆಸೆಲ್ಸಿ ಪರೀಕ್ಷೆ-3 ಆರಂಭ: 468 ಗೈರು

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶನಿವಾರ ನಡೆದ ಎಸ್.ಎಸ್.ಎಲ್.ಸಿ ಪರೀಕ್ಷೆ-3 ಪ್ರಥಮ ಭಾಷಾ ಪರೀಕ್ಷೆಗೆ 561 ವಿದ್ಯಾರ್ಥಿಗಳು ಹಾಜರಾಗಿದ್ದು, 468 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು ಎಂದು ಜಿಲ್ಲಾ ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರು ತಿಳಿಸಿದ್ದಾರೆ.

ಕರಾವಳಿ ನೃತ್ಯಕಲಾ ಪರಿಷತ್ತಿಗೆ ಆಯ್ಕೆ

ಮಂಗಳೂರು: ಕರ್ನಾಟಕ ಕರಾವಳಿ ನೃತ್ಯಕಲಾ ಪರಿಷತ್ತಿನ ಅವಿಭಜಿತ ದ. ಕ ಜಿಲ್ಲಾ ಅಧ್ಯಕ್ಷರಾಗಿ ರಾಜಶ್ರೀ ಉಳ್ಳಾಲ್ ಆಯ್ಕೆಯಾಗಿದ್ದಾರೆ. ಕರ್ನಾಟಕ ಕರಾವಳಿ

ನೃತ್ಯ ಕಲಾ ಪರಿಷತ್2025-27ರ ಸಾಲಿನ ಅವಿ ಭಜಿತ ದ. ಕ ಜಿಲ್ಲಾ ಅಧ್ಯಕ್ಷ ರಾಗಿ ವಿದುಷಿ ರಾಜಶ್ರೀ ಉಳ್ಳಾಲ್ ಆಯ್ಕೆಯಾಗಿರುತ್ತಾರೆ. ಉಪಾಧ್ಯಕ್ಷರಾಗಿ ವಿದ್ವಾನ್ ಚಂದ್ರಶೇಖರ ನಾವಡ, ಕಾರ್ಯದರ್ಶಿಯಾಗಿ ವಿದುಷಿ ಶಾರದಾಮಣಿ ಶೇಖರ್, ಜತೆ ಕಾರ್ಯದರ್ಶಿಯಾಗಿ ಗುರುಶ್ರೀಧರ ಹೊಳ್ಳ, ಕೋಶಾಧಿಕಾರಿ ವಿದ್ವಾನ್ ಸುರೇಶ್ ಅತ್ತಾವರ, ಖಾಯಂ ಟ್ರಸ್ಟಿಯಾಗಿ ವಿದುಷಿ ನಯನ ವಿ ರೈ, ವಿದ್ವಾನ್ ಸುಧೀರ್ ಕೊಡವೂರು, ನಿಕಟಪೂರ್ವ ಅಧ್ಯಕ್ಷರಾಗಿ ವಿದ್ವಾನ್ ಪ್ರವೀಣ್ ಯು.ಕೆ, ಸದಸ್ಯರಾಗಿ ಮಂಗಳೂರು ವಲಯದಿಂದ ವಿದುಷಿ ಲತಾ ಶಶಿಧರ್, ವಿದ್ವಾನ್ ಸುದರ್ಶನ್, ವಿದುಷಿ ಸವಿತಾ ಜೀವನ್ , ವಿದುಷಿ ವಿದ್ಯಾಶ್ರೀ ರಾಧಾಕೃಷ್ಣ, ಪುತ್ತೂರು ವಲಯದಿಂದ ವಿದ್ವಾನ್ ದೀಪಕ್ ಪುತ್ತೂರು,ವಿದುಷಿ ಮಂಜುಳಾ ಸುಬ್ರಹ್ಮಣ್ಯ, ಉಡುಪಿ ವಲಯದಿಂದ ಗುರು ರಾಮಕೃಷ್ಣ ಕೊಡಂಚ, ವಿದ್ವಾನ್ ಭವಾನಿ ಶಂಕರ ಆಯ್ಕೆಯಾಗಿದ್ದಾರೆ.

ಠಾಣೆಗೆ ತಲೆಬುರುಡೆ, ಅವಶೇಷಗಳ ಪ್ರತಿ

ಮಂಗಳೂರು: ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ, ದೂರುದಾರರ ವಕೀಲರು ಬಿಡುಗಡೆ ಮಾಡಿದ ಪತ್ರಿಕಾ ಪ್ರಕಟಣೆಯಲ್ಲಿ ಉಲ್ಲೇಖಿಸಿರುವ ಕಳೇಬರದ ಕುರಿತು ಪೊಲೀಸರು ಸ್ಪಷ್ಟನೆ ನೀಡಿದ್ದಾರೆ. ಈ ದೂರಿಗೆ ಸಂಬಂಧಿಸಿದಂತೆ, ಈವರೆಗೂ ಪೊಲೀಸ್ ಠಾಣೆಗೆ ತಲೆಬುರುಡೆ ಮತ್ತು ಅವಶೇಷಗಳ ಕೆಲಭಾಗಗಳಿರುವ ಎರಡು ಫೋಟೋಗಳ ಕಲರ್ ಝೆರಾಕ್ಸ್ ಪ್ರತಿಗಳನ್ನು ಮಾತ್ರ ಸಲ್ಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಇದನ್ನು ಹೊರತುಪಡಿಸಿ, ಯಾವುದೇ ಕಳೇಬರವನ್ನು ಈವರೆಗೆ ಪೊಲೀಸ್ ಠಾಣೆಗೆ ನೀಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ದೂರುದಾರರ ಪರವಾಗಿ ವಕೀಲರು ದೂರು ಸಲ್ಲಿಸುವಾಗ, ಕಳೇಬರವನ್ನು ಮುಂದಿನ ಹಂತದಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು ಎಂದು ಲಿಖಿತವಾಗಿ ತಿಳಿಸಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಈ ಮೂಲಕ, ಕಳೇಬರದ ಬಗ್ಗೆ ಸಾರ್ವಜನಿಕ ವಲಯದಲ್ಲಿ ಮೂಡಿದ್ದ ಗೊಂದಲಕ್ಕೆ ತೆರೆ ಬಿದ್ದಿದೆ.

ಬಾಳೆಕುದ್ರು ಶ್ರೀಗಳ ನಿಧನಕ್ಕೆ ಸಂತಾಪ

ಮಂಗಳೂರು: ಬಾಳೆಕುದ್ರು ಮಠದ ಶ್ರೀನರಸಿಂಹಾಶ್ರಮ ಸ್ವಾಮೀಜಿ ನಿಧನರಾದ ವಿಚಾರ ತಿಳಿದು ದುಃಖವಾಯಿತು.2006ರಿಂದ ಪೀಠಾಧಿಪತಿಗಳಾಗಿ ಸೇವೆ ಸಲ್ಲಿಸಿದ್ದರು. ಶ್ರೀಕ್ಷೇತ್ರ ಧರ್ಮಸ್ಥಳಕ್ಕೂ ಅವರು ಹಿಂದೊಮ್ಮೆ ಆಗಮಿಸಿದ್ದರು. ಶ್ರೀಮಠ ಸಾವಿರಾರು ವರ್ಷಗಳಿಗೂ ಹೆಚ್ಚು ಇತಿಹಾಸ ಹೊಂದಿದ್ದು ಶ್ರೀಗಳು ಸನಾತನ ಧರ್ಮದ ಅದ್ವೈತ ಸಂಪ್ರದಾಯದ ಪ್ರವರ್ತಕರಾಗಿದ್ದರು. ಕರ್ನಾಟಕದಲ್ಲಿ ಹಲವಾರು ಶಾಖೆಗಳು ಇದ್ದು ಅನೇಕ ಸದ್ಧರ್ಮ ಕಾರ್ಯಗಳು ನಡೆದಿವೆ. ಮುಂದೆ ಉತ್ತರಾಧಿಕಾರಿ ಹಿರಿಯ ಶ್ರೀಗಳ ಹಾದಿಯಲ್ಲಿ ಸಾಗಿ ಸಮಾಜಮುಖಿ ಧರ್ಮ ಕಾರ್ಯಗಳನ್ನು ನಡೆಸುವಂತಾಗಲಿ ಎಂದು ಡಿ. ವೀರೇಂದ್ರ ಹೆಗ್ಗಡೆಯವರು ತಿಳಿಸಿದ್ದಾರೆ.

{ಎಚ್.ಡಿ.ಕುಮಾರಸ್ವಾಮಿ} ಕೇಂದ್ರ ಸಚಿವ

ಪ್ರಿಯಾಂಕ್ ಖರ್ಗೆ ಅವರೇ, ಆರ್ ಎಸ್ ಎಸ್ ಅನ್ನು ನೀವು ಬಂದ್ ಮಾಡುವುದಿರಲಿ, ಈಗ ಕಾಂಗ್ರೆಸ್ ಪಕ್ಷವೇ ಎಲ್ಲಾ ಕಡೆ ಬಂದ್ ಆಗುತ್ತಿದೆ. ಜನರೇ ಬಹುತೇಕ ಕಡೆ ಕಾಂಗ್ರೆಸ್ ಪಕ್ಷವನ್ನು ಬ್ಯಾನ್ ಮಾಡುತ್ತಿದ್ದಾರೆ. ಮೊದಲು ನಿಮ್ಮ ಪಕ್ಷದ ಅಸ್ತಿತ್ವ ಉಳಿಸಿಕೊಳ್ಳಿ. ಬಾಯಿ ಚಪಲಕ್ಕೆ ಮೂಲ ವಿಚಾರಗಳನ್ನು ಮರೆ ಮಾಚಲು ಈ ರೀತಿ ಹೇಳಿಕೆ ಕೊಡುವುದು ನಿಲ್ಲಿಸಿ.

ಆಳ್ವಾಸ್: ಬೃಹತ್ ಉದ್ಯೋಗ ಮೇಳ ಆ.1ರಿಂದ

'ಕರಾವಳಿ ಕನೆಕ್ಟ್- ಎಚ್‌ಆರ್ ಗ್ರೀಟ್- ಮೀಟ್' ಕಾರ್ಯಕ್ರಮ | ಮಾಜಿ ಸಿಎಂ ಡಾ ಎಂ.ವೀರಪ್ಪ ಮೊಯಿಲಿ

ಮಂಗಳೂರು: ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವತಿಯಿಂದ ಆ. 1 ಹಾಗೂ 2ರಂದು ನಡೆಯಲಿರುವ ಬೃಹತ್ ಉದ್ಯೋಗ ಮೇಳ - ಆಳ್ವಾಸ್ ಪ್ರಗತಿಯ ಪೂರ್ವಭಾವಿಯಾಗಿ ಕರಾವಳಿ ಮೂಲದ ಹಾಗೂ ವಿವಿದೆಡೆಯ ವಿವಿಧ ಉದ್ಯೋಗದಾತ ಕಂಪೆನಿಗಳ ಅಧಿಕಾರಿಗಳು ಹಾಗೂ ಹಿರಿಯ ಎಚ್‌ಆರ್ ವಿಭಾಗದ ಮುಖ್ಯಸ್ಥರ ಸಮಾಗಮ ಕರಾವಳಿ ಕನೆಕ್ಟ್ - ಎಚ್‌ಆರ್ ಗ್ರೀಟ್ ಅಂಡ್ ಮೀಟ್ ಕಾರ್ಯಕ್ರಮ ಶನಿವಾರ ಬೆಂಗಳೂರಿನ ಖಾಸಗಿ ಹೊಟೇಲ್‌ನಲ್ಲಿ ನಡೆಯಿತು.

ಮಾಜಿ ಮುಖ್ಯಮಂತ್ರಿ ಡಾ ಎಂ ವೀರಪ್ಪ ಮೊಯಿಲಿ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಕಳೆದ ಎರಡು ದಶಕಗಳಿಂದ ನಡೆಸಿಕೊಂಡು ಬರುತ್ತಿರುವ ಬಹೃತ್ ಉದ್ಯೋಗಮೇಳದಿಂದಾಗಿ ಗ್ರಾಮೀಣ ಭಾಗದ ಪ್ರತಿಭಾನ್ವಿತ ಯುವಕ ಯುವತಿಯರು ಎಂಎನ್‌ಸಿ ಕಂಪೆನಿಗಳಲ್ಲಿ ಕೆಲಸಗಿಟ್ಟಿಸುವಂತಾಗಿದೆ. ಬರಡು ಭೂಮಿಯಾಗಿದ್ದ ವಿದ್ಯಾಗಿರಿಯನ್ನು ಇಂದು ಶಿಕ್ಷಣಕಾಶಿಯನ್ನಾಗಿಸಿದ ಕೀರ್ತಿ ಡಾ.ಮೋಹನ್ ಆಳ್ವರಿಗೆ ಸಲ್ಲುತ್ತದೆ. ಅವರು ಮಾನವ ನಿರ್ಮಾಣದ ಶಿಲ್ಪಿ. ಇಂದು ಅವರ ಮಗ ವಿವೇಕ್‌ಆಳ್ವ ಶಿಕ್ಷಣಕಾಶಿಯಲ್ಲಿ ಬೃಹತ್ ಉದ್ಯೋಗ ಮೇಳವನ್ನು ಹಮ್ಮಿಕೊಳ್ಳುವ ಮೂಲಕ ಸಾವಿರಾರು ಜನರ ಬದುಕಿಗೆ ದಾರಿದೀಪವಾಗಿದ್ದಾರೆ ಎಂದು ಬಣ್ಣಿಸಿದರು.

ಬೆಂಗಳೂರಿನ ಖಾಸಗಿ ಹೊಟೇಲ್‌ನಲ್ಲಿ ನಡೆದ ಕರಾವಳಿ ಕನೆಕ್ಟ್- ಎಚ್‌ಆರ್ ಗ್ರೀಟ್ ಅಂಡ್ ಮೀಟ್ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಡಾ ಎಂ ವೀರಪ್ಪ ಮೊಯಿಲಿ ಮಾತನಾಡಿದರು.

ಪ್ರತಿಭೆ ಪ್ರತಿಯೊಬ್ಬರಲ್ಲೂ ಅಡಗಿರುತ್ತದೆ. ಅದನ್ನು ಗುರುತಿಸಿ, ಪೋಷಿಸುವ ಕೆಲಸವನ್ನು ಮಾಡಬೇಕು. ಅದರಲ್ಲೂ ಮುಖ್ಯವಾಗಿ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥರುಗಳು ವ್ಯಕ್ತಿಯ ಮುಖನೋಡಿ ಮಣೆ ಹಾಕದೆ, ಪ್ರತಿಭೆಯ ಆಧಾರದಲ್ಲಿ ಕೆಲಸ ನೀಡಬೇಕು. ಸಾಧಿಸುವ ಹಸಿವಿರುವವರನ್ನು ಗುರುತಿಸಬೇಕು ಎಂದು ಸಲಹೆ ನೀಡಿದರು.

ಸಮಾಜಕ್ಕೆ ನಮ್ಮಿಂದಾಗುವ ಸಹಾಯವನ್ನು ಪ್ರತಿಯೊಬ್ಬರೂ ಮಾಡಬೇಕು. ತಾನು ಮುಖ್ಯಮಂತ್ರಿಯಾಗಿದ್ದಾಗ ಆನೇಕಲ್ ಬಳಿ ಐಟಿ ಕಂಪೆನಿಗಳನ್ನು ಸ್ಥಾಪಿಸಿದ್ದರಿಂದ ಇಂದು ಬೆಂಗಳೂರು ಪ್ರಪಂಚದ ಸಿಲಿಕಾನ್ ವ್ಯಾಲಿಯಾಗಿ ಮಾರ್ಪಾಡಾಯಿತು. ವೈಟ್‌ಫೀಲ್ಡನಲ್ಲಿ ಟೆಕ್ ಪಾರ್ಕ ಸ್ಥಾಪಿಸಿದ್ದರಿಂದ ಅಭೂತಪೂರ್ವ ಬೆಳವಣಿಗೆ ಸಾಧ್ಯವಾಯಿತು. ಕಂಪೆನಿ ಕಾನೂನಿನಲ್ಲಿ ತಿದ್ದುಪಡಿ ತಂದು ಕಾರ್ಪೊರೇಟ್ ಕಂಪನಿಗೆ ಸಾಮಾಜಿಕ ಜವಾಬ್ದಾರಿಯನ್ನು ಕಡ್ಡಾಯಗೊಳಿಸಿದ್ದರಿಂದ,ಅದು ಇಂದು ದೊಡ್ಡ ಯಶಸ್ಸಾಗಿ ಮಾರ್ಪಟ್ಟಿದೆ. ಪ್ರತಿಷ್ಠಿತ ಕಂಪೆನಿ ಕಿರ್ಲೋಸ್ಕರ್‌ಗಾಗಿ ತೆರಿಗೆ ವ್ಯವಸ್ಥೆಯಲ್ಲಿ ತಂದ ಸಣ್ಣ ಬದಲಾವಣೆಯಿಂದಾಗಿ ಕರ್ನಾಟಕದಲ್ಲಿ ಉಳಿಯುವಂತಾಯಿತು ಎಂದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವ್ಯವಸ್ಥಾಪಕ ಟ್ರಸ್ಟಿ ವಿವೇಕ ಆಳ್ವ ಮಾತನಾಡಿ, ಈ ಬಾರಿಯ ಉದ್ಯೋಗ ಮೇಳದಲ್ಲಿ 3000 ಐಟಿ 4000 ಪದವಿ 2000 ಸ್ನಾತಕೋತ್ತರ, 2500 ಡಿಪ್ಲೋಮಾ ಹಾಗೂ 1500 ನರ್ಸಿಂಗ್ ಆಕಾಂಕ್ಷಿಗಳು ಪಾಲ್ಗೊಳ್ಳುವ ನಿರೀಕ್ಷೆಯಿದೆ ಎಂದರು. ಅದಾನಿ ಗ್ರೂಪ್‌ನ ಎಂಡಿ ಕಿಶೋರ್ ಆಳ್ವ ಮಾತನಾಡಿ, ದಕ್ಷಿಣ ಕನ್ನಡದವರೂ ಸದಾ ಪರಾಕ್ರಮಶಾಲಿಗಳು. ಅದು ಕರ್ನಾಟಕದ ಐಟಿ ಹಬ್ ಆಗುವಂತೆ ನಾವೆಲ್ಲ ಶ್ರಮಿಸಬೇಕು ಎಂದರು. ವಿವಿಧ ಕಂಪೆನಿಗಳ 85ಕ್ಕೂ ಅಧಿಕ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥರು ಹಾಗೂ ಅಧಿಕಾರಿ ಗಳು ಪಾಲ್ಗೊಂಡರು.

ಜಗತ್ತಿನದ್ಯಾಂತ 'ಬ್ಯಾಕ್ ಟು ಊರು' ಅಭಿಯಾನ

ಮಂಗಳೂರು ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ರಾಜ್ಯದ ರಾಜಧಾನಿಯಲ್ಲಿ ಕರಾವಳಿ ಕನೆಕ್ಟ್ ಮೂಲಕ ಕರಾವಳಿ ಭಾಗದ ಜನರ ಉದ್ಯೋಗದ ಕನಸುಗಳನ್ನು ನನಸಾಗಿ ಸುತ್ತಿದೆ. ತಾನು ಲೋಕಸಭಾ ಸದಸ್ಯನಾದ ನಂತರ ಹಮ್ಮಿಕೊಂಡ 'ಬ್ಯಾಕ್ ಟು ಊರು' ಅಭಿಯಾನ ಜಗತ್ತಿನದ್ಯಾಂತ ಹರಡಿರುವ ಕರಾ ವಳಿಗರು ತಮ್ಮ ಊರಿನಲ್ಲಿ ಉದ್ಯಮವನ್ನು ಸ್ಥಾಪಿಸಲು ಪ್ರೇರೆಪಿಸುವ ಕಾರ್ಯಕ್ರಮ ಯಶಸ್ವಿಗೊಂಡಿವೆ. ಆ ಮೂಲಕ ಕರಾವಳಿಯು ಅಭಿವೃದ್ಧಿ ಯಲ್ಲಿ ಅಗ್ರಪಂಕ್ತಿಯ ಸ್ಥಾನ ಪಡೆಯುವಂತಾಗಬೇಕು ಎಂದರು.

'ಸಿಂಧೂರ ವಿಜಯ' ಉದ್ಯಾನ ಉದ್ಘಾಟನೆ

ಮಂಗಳೂರು: ಕೊಟ್ಟಾರ ಚೌಕಿ ಹೆದ್ದಾರಿ 66ರ ಬಳಿ ಮಂಗಳೂರು ಮಹಾನಗರ ಪಾಲಿಕೆಯ 16ನೇ ಬಂಗ್ರಕೂಳೂರು ವಾರ್ಡಿನಲ್ಲಿ ಮಂಗಳೂರು ನಗರ ಅಭಿವೃದ್ಧಿ ಪ್ರಾಧಿಕಾರದಿಂದ ನಿರ್ಮಿಸಿದ ನೂತನ ಸಿಂಧೂರ ವಿಜಯ ಉದ್ಯಾನವನದ ಉದ್ಘಾಟನೆ ಶನಿವಾರ ನಡೆಯಿತು.

ಶಾಸಕ ಡಾಕ್ಟರ್ ಭರತ್ ಶೆಟ್ಟಿ ವೈ. ಅಧ್ಯಕ್ಷತೆಯಲ್ಲಿ ಮಂಗಳೂರು ನಗರ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಸದಾಶಿವ ಉಳ್ಳಾಲ್ ಉದ್ಘಾಟಿಸಿದರು.

ಈ ಸಂದರ್ಭ ಮಾತನಾಡಿದ ಅವರು, 42. 35 ಲಕ್ಷ ರೂಪಾಯಿ ವೆಚ್ಚದಲ್ಲಿ ಸೈನಿಕರನ್ನು ಸ್ಮರಿಸುವ ಪಾರ್ಕ್ ನಿರ್ಮಾಣಗೊಂಡಿದೆ.

ಶಾಸಕರಾದ ಡಾಕ್ಟರ್ ಭರತ್ ಶೆಟ್ಟಿ ವೈ ಅವರು ತಮ್ಮ ಕ್ಷೇತ್ರದಾದ್ಯಂತ ಅತ್ಯುತ್ತಮವಾದ ಅಭಿವೃದ್ಧಿ ಕಾರ್ಯಗಳನ್ನು ನಡೆಸುತ್ತಾ ಬರುತ್ತಿದ್ದು ಈ ಯೋಜನೆಯನ್ನು ಕೂಡ ಕಾರ್ಯಗತಗೊಳಿಸುವಲ್ಲಿ ಶ್ರಮಿಸಿದ್ದಾರೆ. ಮೂಡಾದ ಸದಸ್ಯರು ಅಧಿಕಾರಿಗಳು ಪಾಲಿಕೆಯ ಸದಸ್ಯರು ಅಧಿಕಾರಿಗಳ ಸಮನ್ವಯದೊಂದಿಗೆ ಉತ್ತಮವಾಗಿ ನಿರ್ಮಾಣಗೊಂಡಿದೆ ಎಂದು ಶ್ಲಾಘಿಸಿದರು.

ಶಾಸಕರಾದ ಡಾಕ್ಟರ್ ಭರತ್ ಶೆಟ್ಟಿ ಮಾತನಾಡಿ, ಕೊಟ್ಟಾರ ಚೌಕಿಯಲ್ಲಿ ಮೊದಲ ಅವಧಿಯಲ್ಲಿ ಗುದ್ದಲಿ ಪೂಜೆ ನೆರವೇರಿಸಿದ್ದೆವು. ಸ್ಥಳೀಯ ಕಾರ್ಪೊರೇಟರ್, ಸಾರ್ವಜನಿಕರು ಇಲ್ಲಿನ ಜಂಕ್ಷನ್ ನಲ್ಲಿ ಸೈನಿಕರ ಸ್ಮಾರಕವನ್ನ ನಿರ್ಮಿಸುವ ಬಗ್ಗೆ ಬೇಡಿಕೆಯನ್ನು ಇಟ್ಟಿದ್ದರು. ಸೈನಿಕರ ತ್ಯಾಗ ಬಲಿದಾನವನ್ನು ಸದಾ ಸ್ಮರಿಸಿಕೊಳ್ಳುವ ನಿಟ್ಟಿನಲ್ಲಿ, ಅವರು ದೇಶದ ರಕ್ಷಣೆಗಾಗಿ ತಮ್ಮ ಕುಟುಂಬವನ್ನು ತೊರೆದು ಗಾಡಿ ಭಾಗದಲ್ಲಿ ಇದ್ದುಕೊಂಡು ದೇಶದ ಜನತೆ ಸುರಕ್ಷತೆಯಿಂದ ಜೀವನ ನಡೆಸಲು ತ್ಯಾಗವನ್ನೇ ಮಾಡುತ್ತಿದ್ದಾರೆ. ಹೀಗಾಗಿ ಈ ಉದ್ಯಾನವನ ನಿರ್ಮಾಣದಲ್ಲಿ ನಮಗೂ ಸಂತೃಪ್ತಿಯನ್ನು ಉಂಟುಮಾಡಿದೆ ಎಂದರು.

ನಗರ ಪ್ರವೇಶಿಸುವ ಜಂಕ್ಷನ್ ನಲ್ಲಿ ಈ ಉದ್ಯಾನವನ ನಿರ್ಮಾಣಗೊಂಡಿರುವುದರಿಂದ ಹೆಚ್ಚು ಆಕರ್ಷಣೀಯವಾಗಿದೆ. ಈ ಒಂದು ಪಾರ್ಕನ್ನ ಸೈನಿಕರಿಗೆ ಹಾಗೂ ಅವರ ಕುಟುಂಬಗಳಿಗೆ ಅರ್ಪಿಸುವುದರ ಜೊತೆಗೆ ಪ್ರಾಧಿಕಾರದ ಅಧ್ಯಕ್ಷರ ಸದಸ್ಯರು ಅಧಿಕಾರಿಗಳಿಗೆ ಈ ಸಂದರ್ಭ ಅಭಿನಂದಿಸುತ್ತೇನೆ ಎಂದರು.

ಭಾರತವು ಪಾಕಿಸ್ತಾನದ ಉಗ್ರರ ಮೇಲಿನ ಕಾರ್ಯಾಚರಣೆಯ ಸಂದರ್ಭ ಜಯವನ್ನು ಪಡೆದಿರುವುದರ ಸೈನಿಕರ ಶೌರ್ಯದ ಕುರಿತಾಗಿ ಸಿಂಧೂರ ಕಾರ್ಯಾಚರಣೆ ಸದಾ ನೆನಪಿನಲ್ಲಿ ಉಳಿಯುವಂತಾಗಲು ಸಿಂಧೂರ ವಿಜಯ ಹೆಸರನ್ನ ನಾಮಕರಣ ಮಾಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಪ್ರಾಧಿಕಾರದ ಸದಸ್ಯರಾದ ನೀರಾಜ್ ಚಂದ್ರಪಾಲ್ ಅಬ್ದುಲ್ ಜಾಲೀಲ್, ಸುಮನ್ ದಾಸ್, ಸಬಿತಾ ಮಿಸ್ಕಿತ್,

ಮಂಗಳೂರು ನಗರ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತಾರಾದ ಮೊಹಮ್ಮದ್ ನಜೀರ್, ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಅಶ್ವಿನಿ, ಸಹಾಯಕ ಅಭಿಯಂತರರಾದ ಅಕ್ಬರ್ ಭಾಷಾ, ಮಹಾನಗರ ಪಾಲಿಕೆಯ ನಿಕಟಪೂರ್ವ ಸದಸ್ಯರಾದ ಮನೋಜ್ ಕುಮಾರ್ ಕಿರಣ್ ಕುಮಾರ್ ಕೊಡಿಕಲ್, ರಂಜಿನಿ ಕೋಟ್ಯಾನ್, ಬಿಜೆಪಿ ಮುಖಂಡರಾದ ಸಿತೇಶ್ ಕೊಂಡೆ, ಆಶಿತ್ ನೋಂಡ, ಹರಿಪ್ರಸಾದ್ ಶೆಟ್ಟಿ, ಉಮೇಶ್ ಮಾಲರಾಯಸಾನ, ಸಂಜಿತ್ ಶೆಟ್ಟಿ, ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

ಕಲಾವಿದರ ಏಳ್ಗೆಗೆ ಹುಟ್ಟಿದ ಪಟ್ಲ ಸಂಸ್ಥೆ

ಮಂಗಳೂರು: ಅಡ್ಯಾರ್ ನಲ್ಲಿ ನಡೆದ ಯಕ್ಷಧ್ರುವ ಪಟ್ಲ ಫೌಂಡೇಶನ್ ನ ಪಟ್ಲ ದಶಮ ಸಂಭ್ರಮದಲ್ಲಿ ದುಡಿದವರಿಗೆ ಕೃತಜ್ಞತೆ ಸಲ್ಲಿಸುವ ನಿಟ್ಟಿನಲ್ಲಿ ಬೆಂದೂರ್ ವೆಲ್ ನಲ್ಲಿರುವ ಸೆಬಾಸ್ಟಿಯನ್ ಮಿನಿ ಹಾಲ್ ನಲ್ಲಿ ಧನ್ಯೋತ್ಸವ ಕಾರ್ಯಕ್ರಮ ನಡೆಯಿತು.

ಪಟ್ಲ ದಶಮ ಸಂಭ್ರಮದ ಅಧ್ಯಕ್ಷರಾದ ಬರೋಡಾ ಶಶಿ ಕೇಟರನ ಮಾಲಕ, ಉದ್ಯಮಿ ಶಶಿಧರ ಬಿ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ದಶಮಾನೋತ್ಸವದ ಮುಖ್ಯ ಧ್ಯೇಯವಾಗಿ ಕನಿಷ್ಠ 10 ಕೋಟಿ ದೇಣಿಗೆ ಸಂಗ್ರಹಿಸುವ ಸಂಕಲ್ಪ ಮಾಡಲಾಗಿತ್ತು. ದಾನಿಗಳ ಹಿತೈಷಿಗಳ ನೆರವಿನಿಂದ ನಾವು ನಮ್ಮ ಗುರಿಯನ್ನು ಸಾಧಿಸಿದ್ದೇವೆ. ಇದು ಇಲ್ಲಿಗೆ ನಿಲ್ಲುವುದಿಲ್ಲ. ಈ ಯೋಜನೆ 25 ಕೋಟಿ ರೂ.ವರೆಗೆ ತಲುಪುವ ವರೆಗೆ ನಾವು ನಮ್ಮ ಪ್ರಯತ್ನ ಮುಂದುವರಿಸುತ್ತೇವೆ. ಕಲಾವಿದರ ಶ್ರೇಯೋಭಿವೃದ್ದಿಗಾಗಿ ಹತ್ತು ವರ್ಷಗಳ ಹಿಂದೆ ಹುಟ್ಟಿಕೊಂಡ ಸಂಸ್ಥೆ ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ ಇಂದು ಅಗಾಧವಾಗಿ ಬೆಳೆದಿದೆ. ಟ್ರಸ್ಟ್‌ಗೆ ಎಲ್ಲರ ಸಹಕಾರ ಬೇಕಾಗಿದೆ ಎಂದರು.

ಟ್ರಸ್ಟ್ ನ ಗೌರವಾಧ್ಯಕ್ಷ, ಮುಂಬೈ ಹೇರಂಭ ಇಂಡಸ್ಟ್ರಿಸ್ ಸಂಸ್ಥೆಯ ಸಿಎಂಡಿ ಕನ್ಯಾನ ಸದಾಶಿವ ಶೆಟ್ಟಿ ಮಾತನಾಡಿ, ಪಟ್ಲ ದಶಮ ಸಂಭ್ರಮದ ಯಶಸ್ಸಿಗೆ ಎಲ್ಲಾ

ಬೆಂದೂರ್ ವೆಲ್ ನ ಮಿನಿ ಹಾಲ್ ನಲ್ಲಿ ಧನ್ಯೋತ್ಸವ ಕಾರ್ಯಕ್ರಮ ನಡೆಯಿತು.

ಘಟಕಗಳ ಪದಾಧಿಕಾರಿಗಳು ಅಹರ್ನಿಶಿಯಾಗಿ ದುಡಿದಿದ್ದಾರೆ. ಅವರಿಗೆ ಕೃತಜ್ಞತೆ ಸಲ್ಲಿಸುವ ಧನ್ಯೋತ್ಸವ ಅತ್ಯಂತ ಶ್ಲಾಘನೀಯ ಎಂದರು.

ಪಟ್ಲ ಟ್ರಸ್ಟಿನ ಸ್ಥಾಪಕಾಧ್ಯಕ್ಷ ಪಟ್ಲ ಸತೀಶ್ ಮಾತನಾಡಿ, ಡಾ ಕನ್ಯಾನ ಸದಾಶಿವ ಶೆಟ್ಟಿ, ಡಾ ಕೆ ಪ್ರಕಾಶ್ ಶೆಟ್ಟಿ, ಬರೋಡಾ ಶಶಿಧರ ಶೆಟ್ಟಿ, ಕೆ ಡಿ ಶೆಟ್ಟಿ, ಶಾರದಾ ಪ್ರಸಾದ್, ಸಿ ಎ ದಿವಾಕರ ರಾವ್ ಕಟೀಲು ಅವರಂತಹ ಅನೇಕ ದಾನಿಗಳಿಂದ ದಶಮ ಸಂಭ್ರಮ ಯಶಸ್ವಿಯಾಯಿತು ಎಂದರು.

ವೇದಿಕೆಯಲ್ಲಿ ಡಾ ಸತೀಶ್ ಭಂಡಾರಿ, ಜಯರಾಮ ಶೇಖ, ಭುಜಬಲಿ ಧರ್ಮಸ್ಥಳ , ನಿಟ್ಟೆಗುತ್ತು ರವಿರಾಜ್ ಶೆಟ್ಟಿ, ಚಂದ್ರಹಾಸ ಶೆಟ್ಟಿ ರಂಗೋಲಿ, ಸಂಘಟನಾ ಕಾರ್ಯದರ್ಶಿಗಳಾದ ಕದ್ರಿ ನವನೀತ ಶೆಟ್ಟಿ, ಬಾಳ ಜಗನ್ನಾಥ ಶೆಟ್ಟಿ, ಪ್ರದೀಪ್ ಆಳ್ವ ಕದ್ರಿ, ಜತೆ ಕಾರ್ಯದರ್ಶಿ ರಾಜೀವ ಪೂಜಾರಿ ಕೈಕಂಬ, ರವಿಚಂದ್ರ ಶೆಟ್ಟಿ ಅಶೋಕನಗರ, ಉದಯ ಕುಮಾರ್ ಶೆಟ್ಟಿ, ಮಹಿಳಾ ಘಟಕದ ಗೌರವಾಧ್ಯಕ್ಷೆ ಆರತಿ ಆಳ್ವ ಉಪಸ್ಥಿತರಿದ್ದರು. ಸಮಾರಂಭದಲ್ಲಿ ಯಕ್ಷ ಶಿಕ್ಷಣದ ರೂವಾರಿ, ಕಲಾವಿದ ದೀವಿತ್ ಕೋಟ್ಯಾನ್ ಪೆರಾಡಿ ಅವರನ್ನು ಸನ್ಮಾನಿಸಲಾಯಿತು.

ದ.ಕ.ಮರುನಾಮಕರಣ ಕೂಗಿಗೆ ಶಾಸಕರ ಸಾಥ್

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಗೆ ಮಂಗಳೂರು ಎಂದು ಮರುನಾಮಕರಣ ಮಾಡುವ ಬಗ್ಗೆ ಹೋರಾಟಗಳು ತೀವ್ರ ಗೊಂಡಿದ್ದು, ಸರ್ವ ಧರ್ಮ-ಪಕ್ಷ-ಸಂಘಟನೆಗಳು ಒಗ್ಗೂಡಿರುವ ಮಂಗಳೂರು ಜಿಲ್ಲೆ ತುಳುಪರ ಹೋರಾಟ ಸಮಿತಿ ಸಂಚಾಲಕನಾಗಿ ಸಂಪೂರ್ಣ ಬೆಂಬಲ ವ್ಯಕ್ತಪಡಿಸುತ್ತೇನೆಂದು ಶಾಸಕ ವೇದವ್ಯಾಸ ಕಾಮತ್ ರವರು ಹೇಳಿದರು.

ಪೋರ್ಚುಗೀಸರು ಬ್ರಿಟಿಷರ ಕಾಲದಲ್ಲಿ ತುಳುನಾಡು ಹೋಗಿ ಸೌತ್ ಕೆನರಾ ಆಯ್ತು, ಸ್ವತಂತ್ರ ಭಾರತದಲ್ಲಿ ರಾಜ್ಯ ವಿಂಗಡಣೆ ಸಂದರ್ಭದಲ್ಲಿ ಸೌತ್ ಕೆನರಾ ದಕ್ಷಿಣ ಕನ್ನಡವಾಗಿ ಬದಲಾಯಿತು, ಹಾಗಾಗಿ ಈ ನೆಲಕ್ಕೂ ದಕ್ಷಿಣ ಕನ್ನಡ ಹೆಸರಿಗೂ ಯಾವುದೇ ಸಂಬಂಧವಿಲ್ಲ ಎಂದು ಇತಿಹಾಸದ ಪುಟಗಳು ಹೇಳುತ್ತವೆ. ಜಿಲ್ಲೆಗೆ ಮರುನಾಮಕರಣದ ಬಗ್ಗೆ

ಹೋರಾಟಗಳು ನಿನ್ನೆ ಮೊನ್ನೆ ಆರಂಭವಾಗಿದ್ದಲ್ಲ ನೂರು ವರ್ಷಗಳ ಹಿಂದಿನಿಂದಲೂ ಆಗ್ರಹವಿದೆ. ಜಿಲ್ಲೆಯ ಹೆಸರು ಬದಲಾವಣೆಯಾದಲ್ಲಿ ತುಳು ಭಾಷೆಯ ಹೋರಾಟಕ್ಕೂ ಇನ್ನಷ್ಟು ಪುಷ್ಟಿ ಸಿಗಲಿದೆ. ಈಗಾಗಲೇ ನಮ್ಮ ಜಿಲ್ಲೆಗೆ ಆರ್ಥಿಕವಾಗಿ ಬಹಳಷ್ಟು ಅನ್ಯಾಯ ವಾಗುತ್ತಿದ್ದರೂ ಸಹಿಸಿಕೊಂಡಿದ್ದೇವೆ. ಆದರೆ ಇಲ್ಲಿನ ಸಂಸ್ಕೃತಿಯ ಮೇಲೆ ಅನ್ಯಾಯವಾಗುವುದನ್ನು ಸ್ವಾಭಿಮಾನಿಗಳಾದ ತುಳುವರು ಸಹಿಸುವುದಿಲ್ಲ ಎಂದರು. ಉತ್ತರ ಪ್ರದೇಶ, ಸೇರಿದಂತೆ ದೇಶದ ಹಲವು ಭಾಗಗಳಲ್ಲಿ ಸ್ಥಳೀಯ ಹೆಸರುಗಳ ಮರುನಾಮಕರಣಕ್ಕೆ ಯಾವೆಲ್ಲಾ ಕ್ರಮ ಕೈಗೊಳ್ಳಲಾಗಿದೆಯೋ ಅದೇ ರೀತಿಯಲ್ಲೇ ಕಾನೂನು ಬದ್ಧವಾಗಿ ಈ ಪ್ರಕ್ರಿಯೆಗಳು ನಡೆಯಲಿ, ಅದಕ್ಕೆ ಅಗತ್ಯವಿರುವ ಯಾವುದೇ ಕಾರ್ಯಕ್ಕೂ ಶಾಸಕನಾಗಿ, ಸಮಿತಿಯ ಸಂಚಾಲಕನಾಗಿ ನಾನು ಬದ್ಧನಾಗಿದ್ದೇನೆ. ಪ್ರತಿಯೊಬ್ಬ ತುಳುವನೂ ಈ ಕಾರ್ಯಕ್ಕೆ ಕೈ ಜೋಡಿಸಬೇಕು. ಸರಕಾರ ಸಮಸ್ತ ತುಳುವರ ಅಭಿಪ್ರಾಯಕ್ಕೆ ಬೆಲೆ ನೀಡಬೇಕು ಎಂದು ಶಾಸಕರು ಆಗ್ರಹಿಸಿದರು.

ಕೇಂದ್ರ ಸರಕಾರ ಡಿಸಿಸಿಗಳ ನೆರವಿಗೆ ಬರಲಿ

ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷರಾದ ಡಾ. ಎಂ. ಎನ್. ರಾಜೇಂದ್ರ ಕುಮಾರ್ ಪತ್ರಕರ್ತರೊಂದಿಗೆ ಸಂವಾದ ಸಭೆ ನಡೆಸಿದರು.

ಮಂಗಳೂರು: ಮಹತ್ವಕಾಂಕ್ಷೆಯ ಸಹಕಾರಿ ಕ್ಷೇತ್ರವನ್ನು ಇನ್ನಷ್ಟು ಅಭಿವೃದ್ಧಿಗೆ ಸಂಬಂಧಿಸಿದಂತೆ ಸಹಾಯ ಗುಂಪುಗಳು, ಮಹಿಳಾ ಸ್ವಾವಲಂಬನೆ, ಬಡಜನರಿಗೆ ಸಾಲ ಸೌಲಭ್ಯಗಳ ಸರಳೀಕರಣ, ಸ್ವಸಹಾಯ ಸಂಘಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಹಿರಿಯ ಸಹಕಾರಿ ಧುರೀಣ, ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷರಾದ ಡಾ. ಎಂ. ಎನ್. ರಾಜೇಂದ್ರ ಕುಮಾರ್ ಪತ್ರಕರ್ತರೊಂದಿಗೆ ಸಂವಾದ ಸಭೆ ನಡೆಸಿದರು.

ಕಾರ್ಕಳದ ದಾನಶಾಲೆ ಬಾಹುಬಲಿ ಪ್ರವಚನ ಮಂದಿರದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಡಾ.ರಾಜೇಂದ್ರ ಕುಮಾರ್, ಕೇಂದ್ರ ಸರಕಾರ ಗ್ರಾಮೀಣ ಮಟ್ಟದ ಸಹಕಾರಿ ಬ್ಯಾಂಕ್ ಗಳಿಗೆ ಸರಕಾರಿ ಸಾಲ ಸವಲತ್ತುಗಳನ್ನು ನೀಡುವ ಜವಾಬ್ದಾರಿ ವಹಿಸಿದ್ದಲ್ಲಿ ಸೂಕ್ತ ಹಾಗೂ ಸಮರ್ಪಕವಾಗಿ ನಿರ್ವಹಿಸಬಹುದಾಗಿದೆ. ಇದರಿಂದಾಗಿ ಸರಕಾರಿ ಸಾಲ ಸವಲತ್ತುಗಳು ಗ್ರಾಮದ ಕಟ್ಟ ಕಡೆಯ ವ್ಯಕ್ತಿಗಳಿಗೂ ಸಿಗಲಿದೆ. ಸಹಕಾರಿ ಕ್ಷೇತ್ರದಲ್ಲಿ ಸಾಲ ಪಡೆದುಕೊಂಡಿರುವ ಬಡ ವರ್ಗದ ಜನತೆ ನಿಷ್ಠಾವಂತರಾಗಿ ಶೇ 100 ಸಾಲ ಮರುಪಾವತಿ ಮಾಡಿದ್ದರಿಂದ ಸಹಕಾರಿ ಕ್ಷೇತ್ರ ಪ್ರಗತಿ ಹೊಂದಲು ಸಾಧ್ಯವಾಗಿದೆ ಎಂದರು.

ಸಹಕಾರಿ ಕ್ಷೇತ್ರದಲ್ಲಿ ಮಹಿಳೆಯರು ಹೆಚ್ಚಾಗಿ ತಮ್ಮನ್ನು ತೊಡಗಿಸಿ ಕೊಂಡಿರುವುದರಿಂದ ಇಂದು ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ಗುರುತಿಸಿಕೊಳ್ಳುವುದರ ಜೊತೆಗೆ ಸ್ವಾವಲಂಬಿ ಬದುಕು ನಡೆಸಲು ಸಹಕಾರ ಕ್ಷೇತ್ರ ಸಹಕಾರಿಯಾಗಿದೆ. ಹೊರ ಜಿಲ್ಲೆಗಳ ಸಣ್ಣ ಹಾಗೂ ಭಾರಿ ಉದ್ಯಮಗಳಿಗೆ, ಸಕ್ಕರೆ ಕಾರ್ಖಾನೆಗಳಿಗೆ ಸಾಲ ನೀಡುತಿದ್ದು, ಸಹಕಾರಿ ಬ್ಯಾಂಕ್ ಗಳು ಉದ್ಯಮ, ಕೈಗಾರಿಕೆಗಳಿಗೂ ಸಾಲ ನೀಡುವ ಮಟ್ಟಕ್ಕೆ ಬೆಳೆಯುವಂತಾಗಿದೆ ಎಂದರು

ಈ ಸಂದರ್ಭದಲ್ಲಿ ಎಸ್ ಸಿಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಇರ್ವತ್ತೂರು ಭಾಸ್ಕರ್ ಕೋಟ್ಯಾನ್, ಶಶಿಕುಮಾರ್ ರೈ ಬಾಲ್ಯೊಟ್ಟು , ನವೋದಯ ಗ್ರಾಮ ವಿಕಾಸ ಟ್ರಸ್ಟ್ ನಿರ್ದೇಶಕ ಮೇಘರಾಜ್ ಜೈನ್, ಸಿಇಒ ಪೂರ್ಣಿಮಾ ಶೆಟ್ಟಿ, ಕಾರ್ಕಳ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಮೊಹಮ್ಮದ್ ಶರೀಫ್, ಪದಾಧಿಕಾರಿಗಳು, ಪತ್ರಿಕಾ ಪ್ರತಿನಿಧಿಗಳು ಇದ್ದರು.

ಆರ್‌ಎಸ್‌ಎಸ್ ನಿಷೇಧದ ಹೇಳಿಕೆ ನಿಲುವು ಸ್ಪಷ್ಟಪಡಿಸಿ

ಉಡುಪಿ: ಆರ್‌ಎಸ್‌ಎಸ್ ನೂರು ವರ್ಷದ ಇತಿಹಾಸವಿರುವ ರಾಷ್ಟ್ರ ನಿರ್ಮಾಣಕ್ಕಾಗಿ ಸಮರ್ಪಣಾ ಭಾವದಿಂದ ಸೇವೆ ಸಲ್ಲಿ ಸುತ್ತಿರುವ ಸ್ವಯಂ ಸೇವಕರ ಸಂಘ. ಇದು ಬೆಳೆದರೆ ಮುಂದೊಂ ದು ದಿನ ಕಾಂಗ್ರೆಸ್ಸಿಗೆ ತೊಡಕಾಗಲಿದೆ ಎಂಬ ಕಾರಣದಿಂದ ಇದನ್ನು ನಿಷೇಧಿಸಬೇಕೆಂಬ ಕಾಂಗ್ರೆಸ್ಸಿಗರ ಪ್ರಯತ್ನ ಜವಾಹರ ಲಾಲ್ ನೆಹರು ಅವರ ಕಾಲದಲ್ಲಿಯೇ ಆರಂಭವಾಗಿತ್ತು. ಆದರೆ ಆ ಎಲ್ಲಾ ಪ್ರಯತ್ನ ಗಳೂ ವ್ಯರ್ಥವಾಗಿತ್ತು. ಇದೀಗ ಆರ್‌ಎಸ್ ಎಸ್ ನಿಷೇಧಿಸಬೇಕೆಂದು ಕಾಂಗ್ರೆಸಿನ ಕೆಲ ನಾಯಕರು ಹೇಳಿಕೆ ನೀಡುತ್ತಿದ್ದು ಈ ಬಗ್ಗೆ ಮುನಿಯಾಲು ಉದಯ ಕುಮಾರ್ ಶೆಟ್ಟಿಯವರು ತಮ್ಮ ನಿಲುವು ಸ್ಪಷ್ಟಪಡಿಸಲಿ ಎಂದು ಕಾರ್ಕಳ ಬಿಜೆಪಿ ವಕ್ತಾರ ರವೀಂದ್ರ ಮೊಯ್ಲಿ ಹೇಳಿದ್ದಾರೆ. ರಾಷ್ಟ್ರಭಕ್ತ ಸಂಘಟನೆಯನ್ನು ನಿಷೇಧಿಸುವುದು ಅಸಾಧ್ಯದ ಮಾತು. ತಂದೆಯ ಕೋಟಾದಡಿ ಮಂತ್ರಿಸ್ಥಾನ ಗಿಟ್ಟಿಸಿಕೊಂಡಿರುವ, ಸಂಘದ ಬಗ್ಗೆ ತಿಳುವಳಿಕೆಯಿಲ್ಲದ, ಸಂಘದ ವಿಸ್ತಾರದ ಅರಿವಿಲ್ಲದ ಪ್ರಿಯಾಂಕ ಖರ್ಗೆಯವರು ಸಂಘ

ನಿಷೇಧಿಸುವ ಬಗ್ಗೆ ಬೇಜವಾಬ್ದಾರಿ ಹೇಳಿಕೆ ನೀಡಿ ಜನತೆಗೆ ತಮ್ಮ ಬುದ್ದಿ ಮತ್ತೆಯನ್ನು ತೋರ್ಪಡಿಸಿ ಅಪಹಾಸ್ಯ ಕ್ಕೊಳ ಗಾಗಿದ್ದಾರೆ ಎಂದು ಹೇಳಿದ್ದಾರೆ. ಪ್ರಿಯಾಂಕ ಖರ್ಗೆ ಯವರ ಹಾದಿಯ ಮಂಜುನಾಥ ಭಂಡಾರಿಯವರು ಕೂಡಾ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ. ಅವರು ಹೇಳಿಕೆ ನೀಡುವ ಸಮಯದಲ್ಲಿ ಉಪಸ್ಥಿತರಿದ್ದ ಕಾಂಗ್ರೆಸ್ಸಿನ ನಾಯಕ ಮುನಿ ಯಾಲು ಈ ಹಿಂದೆ ರಾಜ್ಯದಲ್ಲಿ ಬಿಜೆಪಿ ಅಧಿಕಾರ ದಲ್ಲಿದ್ದಾಗ ತಮ್ಮ ಸ್ವಾರ್ಥಕ್ಕಾಗಿ ಬಿಜೆಪಿ ಸಖ್ಯ ಬೆಳೆಸಿ ಕೊಂಡಿದ್ದು, ನಂತರ ಕಾಂಗ್ರೆಸ್ಸಿನ ಟಿಕೇಟು ಪಡೆದು ಚುನಾವಣೆ ಎದುರಿಸಿ ಜನರ ವಿಶ್ವಾಸ ಪಡೆಯುವಲ್ಲಿ ವಿಫಲರಾ ದವರು. ಭಂಡಾರಿಯವರ ಪಕ್ಕದಲ್ಲಿ ಕೂತು ಆರ್‌ಎಸ್‌ಎಸ್ ನಿಷೇಧ ಮಾಡ್ತೇವೆ ಅಂತ ಹೇಳ್ತೀರಾ..? ಸಂಘದ ಬಗೆಗಿನ ನಿಮ್ಮ ತಟಸ್ಥ ನಿಲು ವನ್ನು ಬಿಟ್ಟು ನಿಷೇಧಿಸ ಬೇಕೆನ್ನುವ ಬೆರಳೆಣಿಕೆಯ ಕಾಂಗ್ರೆಸ್ಸಿನ ಹೇಳಿಕೆ ಯ ಪರವಾ ವಿರೋ ಧವಾ ಎಂಬುದನ್ನು ಸ್ಪಷ್ಟ ಪಡಿಸಿ ಎಂದು ಒತ್ತಾಯಿ ಸಿದ್ದಾರೆ.

ಭೀಕರ ರಸ್ತೆ ಅಪಘಾತ ಕಾರ್ ಚಾಲಕ ಸಾವು

ಬಂಟ್ವಾಳ : ಸೆಕೆಂಡ್ ಹ್ಯಾಂಡ್ ಕಾರು ಖರೀದಿಸಿ ಬರುತ್ತಿರುವ ವೇಳೆ ಚಾಲಕನ ನಿಯಂತ್ರಣ ತಪ್ಪಿ ಕಾರು ಡಿವೈಡರ್ ಗೆ ಡಿಕ್ಕಿ ಹೊಡೆದು ಪಲ್ಟಿಯಾಗಿ ಚಾಲಕ ಸಾವನಪ್ಪಿದ ಘಟನೆ ತುಂಬೆಯಲ್ಲಿ ಶನಿವಾರ ಮಧ್ಯಾಹ್ನ ನಡೆದಿದೆ.ಹರೇಕಳ ಪಾವೂರು ನಿವಾಸಿ ನೌಫಾಲ್ ಎಂಬ ಯುವಕ ಮೃತಪಟ್ಟವರು. ಬಿಸಿ ರೋಡಿನಲ್ಲಿ ಸೆಕೆಂಡ್ ಕಾರನ್ನು ಖರೀದಿಸಿದ್ದರು. ಕಾರನ್ನು ಬಿಸಿ ರೋಡಿನಿಂದ ತುಂಬೆ ಮೂಲಕ ಹೆದ್ದಾರಿಯಲ್ಲಿ ಚಲಾಯಿಸಿಕೊಂಡು ಬರುತ್ತಿದ್ದಾಗ ಕೆಳಗಿನ ತುಂಬೆಯಲ್ಲಿ ಕಾರು ಡಿವೈಡರ್ ಮೇಲೆ ಹತ್ತಿ ಬಳಿಕ ಮಂಗಳೂರು ಕಡೆ ಯಿಂದ ಬರುವ ರಸ್ತೆ ಮೇಲೆ ಬಿದ್ದಿದೆ. ಈ ಸಂದರ್ಭ ಮಂಗಳೂರು ಕಡೆಯಿಂದ ಬರುತ್ತಿದ್ದ ಕಂಟೈನರ್ ಲಾರಿ ಡಿಕ್ಕಿಯಾಗಿ ಚಾಲಕ ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದಾರೆ. ಬಂಟ್ವಾಳ ಸಂಚಾರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪ್ರಕರಣ ದಾಖಲಿಸಿ ಕೊಂಡಿದ್ದಾರೆ.

ಸಸಿ ನೆಡುವ ಕಾರ್ಯಕ್ರಮಕ್ಕೆ ಶಾಸಕರಿಂದ ಚಾಲನೆ

ಚಳ್ಳಕೆರೆ : ದಿನೆ ದಿನೇ ಹೆಚ್ಚುತ್ತಿರುವ ಬಯಲು ಸೀಮೆಯ ಬಿಸಿಲನ್ನು ನೀಗಿಸಲು ಸಾರ್ವಜನಿಕರು ಈ ಪ್ರದೇಶಕ್ಕೆ ಗಿಡ ಮರಗಳನು ಎತೆಚ್ಚವಾಗಿ ಬೆಳೆಸಿ ಹಸಿರುಕರಣ ಮಾಡಬೇಕು ಎಂದು ಶಾಸಕ ಟಿ. ರಘುಮೂರ್ತಿ ಹೇಳಿದರು.

ಅವರು ನಗರದಲ್ಲಿ ವಿಶ್ವಪರಿಸರ ದಿನಾಚರಣೆ ಅಂಗವಾಗಿ ನಗರದ ಆದರ್ಶ ಶಾಲೆ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಸರಕಾರಿ ಬಂಜರು ಭೂಮಿ, ರಸ್ತೆ ಬದಿ ಸೇರಿದಂತೆ ವಿವಿಧ ಸಾರ್ವಜನಿಕ ಸ್ಥಳಗಳಲ್ಲಿ ಗಿಡಗಳನ್ನು ನೆಟ್ಟು ಸುಮ್ಮನಾಗದೆ ಅವುಗಳನ್ನು ಪಾಲನೆ ಪೋಷಣೆ ಮಾಡಿ ಬೆಳೆಸಿ ಬರವನ್ನು ಹೋಗಲಾಡಿಸಲು ಹೆಚ್ಚು ಗಿಡಗಳನ್ನು ನೆಡಲು ಅರಣ್ಯ ಇಲಾಖೆ ಮುಂದಾಗಬೇಕು. ನಗರದಲ್ಲಿ ಬಿಸಿಲಿನ ಜಳ ಹೆಚ್ಚಾಗಿದೆ ಆದರೆ ವಿಶಾಲವಾದ ರಸ್ತೆಯ ಜತೆಗೆ ಹಸಿರುಕರಣ ಮಾಡಲು ಸಾರ್ವಜನಿಕರು ಮುಂದಾಗಬೇಕು ಎಂದರು.

ಅರಣ್ಯಾಧಿಕಾರಿ ಮಂಜುನಾಥ್ ಮಾತನಾಡಿ, ಬಯಲು ಸೇಮೆ ಎಂಬ ಹಣೆ ಪಟ್ಟಿಯ ಜತೆಗೆ ಬರಪೀಡಿತ ಪ್ರದೇಶ ಎಂಬ ಹೆಸರನ್ನು ಹೋಗಲಾಡಿಸಲು ಹೆಚ್ಚಾಗಿ ಮರಗಿಡಗಳನ್ನು ಬೆಳೆಸಿದರೆ ಅವುಗಳು ಮೋಡಗಳ ಅಕರ್ಷಣೆ ಮಾಡಿಕೊಂಡು ಮಳೆ ಸುರಿಸುತ್ತವೆ , ಈಗಾಗಲೇ ಶಾಲಾ , ಕಾಲೇಜು ಆವರಣದಲ್ಲಿ, ರಸ್ತೆ ಪಕ್ಕದಲ್ಲಿ ಹಾಕಿದ ಬೇವು ಇತರೆ ಸಸಿಗಳು ಎತ್ತರಕ್ಕೆ ಬೆಳೆದಿದ್ದಾವೆ, ಸಾರಿಗೆ ಬಸ್ ಡಿಪೊ, ವಿದ್ಯಾರ್ಥಿನಿಲಯ, ಸರಕಾರಿ ಕಚೇರಿಗಳ

ನಗರದಲ್ಲಿ ವಿಶ್ವಪರಿಸರ ದಿನಾಚರಣೆ ಅಂಗವಾಗಿ ನಗರದ ಆದರ್ಶ ಶಾಲೆ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮಕ್ಕೆ ಶಾಸಕ ಟಿ.ರಘುಮೂರ್ತಿ ಚಾಲನೆ ನೀಡಿದರು.

ಆವರಣ ಹಾಗೂ ರೈತರು ತಮ್ಮ ಜಮೀನುಗಳ ಬದುಗಳಲ್ಲಿ ಹಾಕಿಕೊಳ್ಳಲು ಸಸಿಗಳನ್ನು ವಿತರಣೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ನಗರಸಭೆ ನೂತನ ಅಧ್ಯಕ್ಷೆ ಶಿಲ್ಪಾ ಮುರುಳಿ, ಉಪಾಧ್ಯಕ್ಷೆ ಕವಿತಾ, ಸ್ಥಾಯಿ ಸಮಿತಿ ಅಧ್ಯಕ್ಷ ಟಿ. ಮಲ್ಲಿಕಾರ್ಜುನ,

ಸದಸ್ಯರಾದ ಕೆ.ಟಿ.ವೀರಭದ್ರಪ್ಪ, ಬಿ.ಟಿ.ರಮೇಶ್‌ಗೌಡ, ರಾಘವೇಂದ್ರ, ಕೃಷ್ಣಮೂರ್ತಿ, ಭರಮಣ್ಣ, ಅರಣ್ಯಾಧಿಕಾರಿ ದರ್ಶನ್, ರಾಜೇಶ್ ಇತರರಿದ್ದರು.

ವೈದ್ಯಕೀಯ ಸಂಘಕ್ಕೆ ಪದಾಧಿಕಾರಿಗಳ ಆಯ್ಕೆ

ಹೊನ್ನಾಳಿ: ಸಂಘಟನೆಯಿಂದ ನಮ್ಮ ಹಲವು ಬೇಡಿಕೆ ಈಡಿರಿಸಿಕೊಳ್ಳಬಹುದು. ಸಂಘಟನಾ ಶಕ್ತಿಯು ತಳ ಹಂತದಿಂದ ಗಟ್ಟಿಗೊಳ್ಳಬೇಕು. ವೈದ್ಯಕೀಯ ಕ್ಷೇತ್ರದಲ್ಲಿ ಮಹತ್ತರವಾದ ಬದಲಾವಣೆಗಳಿಗೆ ಬುನಾದಿಯಾಗಬೇಕು ಎಂದು ಭಾರತೀಯ ವೈದ್ಯಕೀಯ ಸಂಘದ ರಾಜ್ಯ ಅಧ್ಯಕ್ಷ ವಿ.ಚೆನ್ನಿವಾಲರ್ ತಿಳಿಸಿದರು. ಪಟ್ಟಣದ ಹೊನ್ನಾಳಿಯಲ್ಲಿ ನಡೆದ ಭಾರತೀಯ ವೈದ್ಯಕೀಯ ಸಂಘದ ನೂತನ ಪದಾಧಿಕಾರಿಗಳ ಆಯ್ಕೆ ಸಭೆಯಲ್ಲಿ ಮಾತನಾಡಿ, ಹೊನ್ನಾಳಿ ತಾಲೂಕು ಹಲವು ಪ್ರಥಮಗಳಿಗೆ ಕಾರಣವಾಗಿದೆ. ತಾಲ್ಲೂಕಿನ ವೈದ್ಯರು ಸಕ್ರೀಯರಾಗಿ ಸಂಘಟನೆಯಲ್ಲಿ ತೊಡಗಿಕೊಳ್ಳಬೇಕು. ಸಮಾಜ ಸೇವೆಯ ಜೊತೆಗೆ ಹಲವು ಸಾಮಾಜಿಕ ಕಾರ್ಯಗಳನ್ನು ಮಾಡೋಣ ಎಂದರು. ಭಾರತೀಯ ವೈದ್ಯಕೀಯ ಸಂಘಕ್ಕೆ ಹೊನ್ನಾಳಿ ತಾಲೂಕು ಘಟಕಕ್ಕೆ ಅಧ್ಯಕ್ಷರಾಗಿ ಡಾ. ಜಗದೀಶ್ ಕೆ., ಉಪಾಧ್ಯಕ್ಷರಾಗಿ ಡಾ.ಶಕುಂತಲಾ ರಾಜ್ ಕುಮಾರ್, ಕಾರ್ಯದರ್ಶಿಯಾಗಿ ನಾಗರಾಜ್ ಹತ್ವಾರ್, ಖಜಾಂಚಿಯಾಗಿ ಡಾ. ಪ್ರಕಾಶ್, ಕೇಂದ್ರ ಸಮತಿ ಸದಸ್ಯರಾಗಿ ಡಾ. ಎಚ್.ಪಿ ರಾಜ್ ಕುಮಾರ್, ರಾಜ್ಯ ಸಮಿತಿ ಸದಸ್ಯರಾಗಿ ಡಾ. ಈಶ್ವರ್ ನಾಯ್ಕ್ ಆಯ್ಕೆಯಾಗಿರುತ್ತಾರೆ ಎಂದರು. ಭಾರತೀಯ ವೈದ್ಯಕೀಯ ಸಂಘದ ರಾಜ್ಯ ಉಪಾಧ್ಯಕ್ಷೆ ಡಾ.ವಾಣಿ ಕೋರಿ, ಡಾ. ರಂಗಪ್ಪ, ಡಾ. ವಸಂತ, ಡಾ. ಕೆಂಚಪ್ಪ, ಡಾ.ಪ್ರಕಾಶ್ ಹಾಗೂ ರಾಜ್ಯ ಸಮಿತಿ ಸದಸ್ಯರು ಇದ್ದರು. ನೂತನ ಪದಾಧಿಕಾರಿಗಳನ್ನು ಅಭಿನಂದಿಸಿದರು.

ಹಠಾತ್ ಹೃದಯಾಘಾತಕ್ಕೆ ಕರೋನಾ ಲಸಿಕೆ ಕಾರಣವಲ್ಲ

← ಮೊದಲಪುಟದಿಂದ

ಅಧ್ಯಯನ ಹೇಗೆ ನಡೆಯಿತು?: ತಜ್ಞರ ಸಮಿತಿಯು 251 ರೋಗಿಗಳನ್ನು ಒಳಗೊಂಡ ಅಧ್ಯಯನವನ್ನು ನಡೆಸಿದೆ. ಇದರಲ್ಲಿ ವಯಸ್ಸು, ಲಿಂಗ, ಭೌಗೋಳಿಕ ವಿತರಣೆ, ಮತ್ತು ಆರೋಗ್ಯ ಸ್ಥಿತಿ ವಿಶ್ಲೇಷಿಸಲಾಗಿದೆ.

ರೋಗಿಗಳ ವಯೋವಿಭಾಗದ ಪ್ರಕಾರ, 30 ವರ್ಷ ಅಥವಾ ಕಡಿಮೆ ವಯಸ್ಸಿನವರು 12 ಜನ (4.8%), 31–40 ವರ್ಷದವರು 66 ಜನ (26.3%), ಮತ್ತು 41–45 ವರ್ಷದವರು 172 ಜನ (68.5%) ಇದ್ದಾರೆ. 30 ವರ್ಷ ಅಥವಾ ಕಡಿಮೆ 12 ಜನ, 31 ರಿಂದ 40 ವರ್ಷ 66 ಜನ, 41 ರಿಂದ 45 ವರ್ಷ 172 ಜನ ಇದ್ದರು. ಲಿಂಗವಾರು ವಿಶ್ಲೇಷಣೆಯಲ್ಲಿ, 218 ಪುರುಷರು (86.9%) ಮತ್ತು 32 ಮಹಿಳೆಯರು (12.7%) ಸೇರಿದ್ದರು. ಅಲ್ಲದೇ ಭೌಗೋಳಿಕವಾಗಿ, 124 ಜನ (49.4%) ಬೆಂಗಳೂರಿನ ನಿವಾಸಿಗಳಾಗಿದ್ದರೆ, ಉಳಿದವರು ಹಾಸನ, ರಾಮನಗರ, ಮಂಡ್ಯ, ತುಮಕೂರು, ಕೋಲಾರ ಮುಂತಾದ ಜಿಲ್ಲೆಗಳಿಂದ ಬಂದವರಾಗಿದ್ದಾರೆ.

ರೋಗಿಗಳ ಆರೋಗ್ಯ ಸ್ಥಿತಿ ಹೇಗಿತ್ತು?

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ರೋಗಿಗಳಲ್ಲಿ, 87 ಜನರಿಗೆ (34.7%) ಮಧುಮೇಹ, 102 ಜನರಿಗೆ (40.6%) ಹೈಪರ್‌ಟೆನ್ಷನ್, 35 ಜನರಿಗೆ (13.9%) ಕೊಲೆಸ್ಟ್ರಾಲ್ ಸಮಸ್ಯೆ, 40 (15.9%) ಜನರಿಗೆ ಕುಟುಂಬದಲ್ಲಿ ಹೃದಯ ರೋಗ ಇತಿಹಾಸ, ಇನ್ನೂ 111 ಜನ (44.2%) ಧೂಮಪಾನ ಮಾಡುವವರು ಮತ್ತು 77 ಜನ (30.7%) ಯಾವುದೇ ಅನುವಂಶಿಕ ಅಪಾಯ ಅಂಶವಿಲ್ಲದವರನ್ನು ಒಳಪಡಿಸಲಾಗಿತ್ತು.

ವರದಿಯಲ್ಲಿನ ಪ್ರಮುಖ ಶಿಫಾರಸುಗಳು

- ಯುವಕರಲ್ಲಿ ಹಠಾತ್ ಹೃದಯಾಘಾತ ತಡೆಗಟ್ಟಲು ರಾಷ್ಟ್ರೀಯ ಹೃದಯ ಕಣ್ಗಾವಲು ಕಾರ್ಯಕ್ರಮ ರೂಪಿಸಬೇಕು
- ಕಾರಣಗಳು ಇಲ್ಲದ ಮರಣಗಳಿಗೆ ಕಡ್ಡಾಯ ಶವಪರೀಕ್ಷೆ ಆಧಾರಿತ ವರದಿ ವ್ಯವಸ್ಥೆ ಜಾರಿಗೊಳಿಸಬೇಕು
- ಶಾಲಾ ಮಟ್ಟದಿಂದಲೇ (15 ವರ್ಷದಿಂದ) ನಿಯಮಿತ ಹೃದಯರಕ್ತನಾಳದ ತಪಾಸಣೆಗಳನ್ನು ನಡೆಸಬೇಕು
- ಆರಂಭಿಕ ಗುರುತಿಸುವಿಕೆ ಮತ್ತು ತಡೆಗಟ್ಟುವಿಕೆಯ ಬಗ್ಗೆ ವ್ಯಾಪಕ ಸಾರ್ವಜನಿಕ ಆರೋಗ್ಯ ಅಭಿಯಾನ ಕೈಗೊಳ್ಳಬೇಕು
- ದೈಹಿಕ ಚಟುವಟಿಕೆ, ಒಳ್ಳೆಯ ನಿದ್ದೆ, ಒತ್ತಡ ಕಡಿಮೆಗೊಳಿಸುವಿಕೆ ಮತ್ತು ಆರೋಗ್ಯಕರ ಆಹಾರವನ್ನು ಉತ್ತೇಜಿಸುವ ಜೀವನಶೈಲಿ ಬದಲಾವಣೆಗಳ ಬಗ್ಗೆ ಜನರಿಗೆ ಅರಿವು ಮೂಡಿಸಬೇಕು
- ಕರೋನಾ ದೀರ್ಘಕಾಲೀನ ಪರಿಣಾಮಗಳನ್ನು ತನಿಖೆ ಮಾಡಲು ಐಸಿಎಂಆರ್ ನೇತೃತ್ವದಲ್ಲಿ ದೊಡ್ಡ ಪ್ರಮಾಣದ, ಬಹು-ಕೇಂದ್ರ ಸಂಶೋಧನೆ ಕೈಗೊಳ್ಳಬೇಕು

ಗರ್ಭಿಣಿ ಮಾಡಿ ಕೈಕೊಟ್ಟಿದ್ದ ಆರೋಪಿ ಕೃಷ್ಣ ರಾವ್

ಯುವತಿಗೆ ವಂಚನೆ: ಆರೋಪಿ ವಶಕ್ಕೆ

ಪುತ್ತೂರು: ಮದುವೆಯಾಗುವುದಾಗಿ ನಂಬಿಸಿ ದೈಹಿಕ ಸಂಪರ್ಕ ಬೆಳೆಸಿ, ಆಕೆ ಗರ್ಭವತಿಯಾದ ಬಳಿಕ ವಿವಾಹವಾಗಲು ನಿರಾಕರಿಸಿ ಕಳೆದ 10 ದಿನಗಳಿಂದ ನಾಪತ್ತೆಯಾಗಿದ್ದ ಬಪ್ಪಳಿಗೆ ನಿವಾಸಿ ಕೃಷ್ಣ ಜೆ. ರಾವ್ (21) ನನ್ನು ಶುಕ್ರವಾರ ಪೊಲೀಸರು ಮೈಸೂರಿನಲ್ಲಿ ವಶಕ್ಕೆ ಪಡೆದುಕೊಂಡಿದ್ದಾರೆ. ಈತನ ವಿರುದ್ಧ ದ.ಕ. ಮಹಿಳಾ ಠಾಣೆಯಲ್ಲಿ ಅತ್ಯಾಚಾರ ಮತ್ತು ನಂಬಿಕೆ ದ್ರೋಹದ ಪ್ರಕರಣ ದಾಖಲಾಗಿತ್ತು. ಸಂತ್ರಸ್ತೆ (21) ಕೂಡ ಪುತ್ತೂರು ನಗರಸಭಾ ವ್ಯಾಪ್ತಿಯ ನಿವಾಸಿಯಾಗಿದ್ದು, ಮಂಗಳೂರಿನ ಕಾಲೇಜೊಂದರಲ್ಲಿ ಪದವಿ ವ್ಯಾಸಂಗ ಪೂರ್ಣಗೊಳಿಸಿದ್ದಾರೆ. ಆರೋಪಿ ನಾಪತ್ತೆ ಆದ ನಂತರ ಆತನಿಗೆ ಆಶ್ರಯ ನೀಡಿದ್ದ ಸಂಬಂಧಿಕರನ್ನು ಪೊಲೀಸರು ತೀವ್ರ ವಿಚಾರಣೆಗೆ ಒಳಪಡಿಸಿದ್ದು, ಆ ವೇಳೆ ಆರೋಪಿಯ ಸುಳಿವು ಪತ್ತೆಯಾಗಿತ್ತು ಎನ್ನಲಾಗಿದೆ.

ಬಂಧನದ ಬೆನ್ನಲ್ಲೇ ಆರೋಪಿ ತಂದೆಗೆ ಜಾಮೀನು: ಮದುವೆಯಾಗುವುದಾಗಿ ನಂಬಿಸಿ ದೈಹಿಕ ಸಂಪರ್ಕ ಬೆಳೆಸಿ, ಆಕೆ ಗರ್ಭವತಿಯಾದ ಬಳಿಕ ವಿವಾಹವಾಗಲು ನಿರಾಕರಿಸಿ ಕಳೆದ ಹತ್ತು ದಿನಗಳಿಂದ ನಾಪತ್ತೆಯಾಗಿದ್ದ ಆರೋಪಿ ಕೃಷ್ಣ ಜೆ. ರಾವ್ (21) ಪರಾರಿಯಾಗಲು ಸಹಕರಿಸಿದ ಆರೋಪದಡಿ ಆರೋಪಿಯ ತಂದೆ ಬಿಜೆಪಿ ಮುಖಂಡ ಪಿ.ಜಿ.ಜಗನ್ನಿವಾಸ್ ರಾವ್ ಅವರನ್ನು ನನ್ನು ಬಂಧಿಸಲಾಗಿದ್ದು, ಇದೀಗ ಪುತ್ತೂರು ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ. ಆರೋಪಿ ನಾಪತ್ತೆ ಆದ ನಂತರ ಆತನಿಗೆ ಆಶ್ರಯ ನೀಡಿದ್ದ ಸಂಬಂಧಿಕರನ್ನು ಪೊಲೀಸರು ತೀವ್ರ ವಿಚಾರಣೆಗೆ ಒಳಪಡಿಸಿದ್ದು ಆ ವೇಳೆ ಆರೋಪಿಯ ಸುಳಿವು ಪತ್ತೆಯಾಗಿತ್ತು ಎನ್ನಲಾಗಿದೆ. ಆರೋಪಿ ತಪ್ಪಿಸಿಕೊಂಡ ನಂತರ ಆತನ ಸುಳಿವು ಸಿಗದಂತೆ ಜಗನ್ನಿವಾಸ ರಾವ್ ಮಾಡಿದ್ದ ಎನ್ನಲಾಗಿದೆ. ಜು.4 ರಂದೇ ಜಗನ್ನಿವಾಸ ಅವರನ್ನು ಪೊಲೀಸರು ಬಂಧಿಸಿದ್ದರು.

ರಾಜಕಾರಣಿ ಸೇರಿ 50ಕ್ಕೂ ಹೆಚ್ಚು ವಿಡಿಯೊ ಪತ್ತೆ

ಹಿಂದೂ ಮುಖಂಡ ಸಮಿತ್ ಮೊಬೈಲ್‌ನಲ್ಲಿ ಅಶ್ಲೀಲ ವಿಡಿಯೊ

ಮಂಗಳೂರು: ಬಸ್ ಮೇಲೆ ಕಲ್ಲು ತೂರಾಟ ಮಾಡಿದ್ದ ಪ್ರಕರಣದ ತನಿಖೆಗೆ ತೆರಳಿದ್ದ ಪೊಲೀಸರೇ ದಂಗಾಗಿದ್ದು, ಹಿಂದೂ ಮುಖಂಡನ ಮೊಬೈಲ್‌ನಲ್ಲಿ ರಾಜಕಾರಣಿ ಒಬ್ಬರ ಅಶ್ಲೀಲ ವಿಡಿಯೊ ಪತ್ತೆಯಾಗಿದೆ ಎಂದು ಹೇಳಲಾಗಿದೆ.

ಹಿಂದೂ ಮುಖಂಡನ ಮೊಬೈಲ್‌ನಲ್ಲಿ ರಾಜಕಾರಣಿ ಒಬ್ಬರ ಅಶ್ಲೀಲ ವಿಡಿಯೊ ಪತ್ತೆ ಆಗಿರುವ ಬಗ್ಗೆ ಕರಾವಳಿಯಲ್ಲಿ ಭಾರಿ ಸುದ್ದಿಗೆ ಕಾರಣವಾ ಗಿದ್ದು, ಮಂಗಳೂರು ಪೊಲೀಸರ ತನಿಖೆ ವೇಳೆ ಹಿಂದೂ ಜಾಗರಣಾ ವೇದಿಕೆಯ ದಕ್ಷಿಣ ಕನ್ನಡ ಜಿಲ್ಲಾ ಸಹಸಂಯೋಜಕ ಸಮಿತ್ ರಾಜ್ ಧರೆಗುಡ್ಡೆ ಮೊಬೈಲ್‌ನಲ್ಲಿ ಐವತ್ತಕ್ಕೂ ಅಧಿಕ ಅಶ್ಲೀಲ ವಿಡಿಯೊಗಳು ಪತ್ತೆಯಾಗಿದೆ ಎಂದು ಮಾಧ್ಯಮವೊಂದು ವರದಿ ಮಾಡಿದೆ.

ಇದರಲ್ಲಿ ಕರಾವಳಿ ರಾಜಕಾರಣಿಯೊಬ್ಬರ ವಿಡಿಯೊ ಕೂಡ ಇದೆ ಎನ್ನಲಾಗುತ್ತಿದೆ. ಸದ್ಯ ಈ ಕುರಿತಾಗಿ ಮೂಡಬಿದಿರೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಇನ್ನು ಈ ಹಿಂದೆ ಅಪಘಾತವೆಸಗಿದ ಖಾಸಗಿ ಬಸ್‌ಗೆ ಕಲ್ಲು ತೂರಿ ಹಾನಿಗೊಳಿಸಿದ ಪ್ರಕರಣದಲ್ಲಿ ಸಮಿತ್ ರಾಜ್ ಧರೆಗುಡ್ಡೆರನ್ನು ಮೂಡಬಿದಿರೆ ಪೊಲೀಸರು ಇತ್ತೀಚೆಗೆ ಬಂಧಿಸಿದ್ದರು. ಪ್ರಕರಣದ ಹೆಚ್ಚಿನ ತನಿಖೆಗಾಗಿ ಪೊಲೀಸರು ಆರೋಪಿಯ ಮೊಬೈಲ್ ವಶಕ್ಕೆ ಪಡೆದಿದ್ದರು. ಪೊಲೀಸರು ದತ್ತಾಂಶಗಳನ್ನು ಎಕ್ಸ್ಟ್ರ್ಯಾಕ್ಟ್ ಮಾಡಿಸಲು ಕೋರ್ಟ್ ಮತ್ತು ಮೇಲಾಧಿಕಾರಿಗಳ ಅನುಮತಿ ಪಡೆದಿದ್ದರು. ಅದರಂತೆ ಮೊಬೈಲ್ ಡೇಟಾ ಎಕ್ಸ್ಟ್ರ್ಯಾಕ್ಟ್ ವೇಳೆ ಸ್ವತಃ ಪೊಲೀಸರೇ ಬೆಚ್ಚಿ ಬಿದಿದ್ದಾರೆ. 50ಕ್ಕೂ ಹೆಚ್ಚು ಅಶ್ಲೀಲ ವಿಡಿಯೊ ತುಣುಕುಗಳು ಪತ್ತೆ ಆಗಿವೆ. ಈ ಪೈಕಿ ಆ ಭಾಗದ ಪ್ರಮುಖ ರಾಜಕಾರಣಿಯ ಅಶ್ಲೀಲ ವಿಡಿಯೊ ಕೂಡ ಪತ್ತೆಯಾಗಿದೆ ಎಂದು ಹೇಳಲಾಗಿದೆ.

ಜಾಗತಿಕ ತಾಪಮಾನ ಏರಿಕೆ ತಡೆಗೆ ಗಿಡ-ಮರ ಬೆಳೆಸುವುದು ಅಗತ್ಯ: ಮಲ್ಲಿಕಾರ್ಜುನ ಖರ್ಗೆ

ಪರಿಸರ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ದೇಶದಲ್ಲಿ ಅರಣ್ಯ ಪ್ರದೇಶದ ಸರಾಸರಿ ಮಟ್ಟ ಕಡಿಮೆಯಿದೆ. ಆದ್ದರಿಂದ ಗಿಡ-ಮರಗಳನ್ನು ನೆಟ್ಟು ಸಂರಕ್ಷಣೆ ಮಾಡುವ ಜವಾಬ್ದಾರಿ ದೇಶದ ಪ್ರತಿ ನಾಗರಿಕರ ಮೇಲಿದೆ ಎಂದು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ, ಎಐಸಿಸಿ ಅಧ್ಯಕ್ಷ ಡಾ. ಮಲ್ಲಿಕಾರ್ಜುನ ಖರ್ಗೆ ಕರೆ ನೀಡಿದರು.

ಜಿಲ್ಲಾಡಳಿತ ಹಾಗೂ ಅರಣ್ಯ ಇಲಾಖೆ ಸಹಯೋಗದಲ್ಲಿ ಕಲಬುರಗಿಯ ಎಚ್.ಕೆ.ಇ. ಪಾಲಿಟೆಕ್ನಿಕ್ ಕಾಲೇಜು ಆವರಣದಲ್ಲಿ ಆಯೋಜಿಸಿದ್ದ ವನಮಹೋತ್ಸವ-2025, ಹಸಿರು ಪಥ, ಕಲಬುರಗಿಯ ಹಸಿರು ಹೆಜ್ಜೆ ಕಾರ್ಯಕ್ರಮವನ್ನು ಅವರು ಉದ್ಘಾಟಿಸಿ ಮಾತನಾಡಿದರು.

ದೇಶದಲ್ಲಿ ಶೇ.33% ಅರಣ್ಯ ಭೂಮಿ ಇರಬೇಕಿತ್ತು. ಆದರೆ, ಸದ್ಯ ದೇಶವ್ಯಾಪಿ ಕೇವಲ 25% ರಷ್ಟು ಅರಣ್ಯ ಭೂಮಿ ಇದೆ. 12% ಅರಣ್ಯದ ಅವಶ್ಯಕತೆ ಎದ್ದು ಕಾಣುತ್ತಿದೆ. ಇದರಿಂದಲೇ ಜಾಗತಿಕ ತಾಪಮಾನದಲ್ಲಿ ಏರುಪೇರು, ಹವಾಮಾನ ಬದಲಾವಣೆಯಂತಹ ಸಮಸ್ಯೆ ಎದುರಾಗುತ್ತಿವೆ. ಜಾಗತಿಕ ಸಮಸ್ಯೆಯಿಂದ ಪಾರಾಗಲು ಪ್ರತಿಯೊಬ್ಬರು ತಮ್ಮ ಮನೆ, ಶಾಲೆ, ಕಚೇರಿಯಲ್ಲಿ ಎರಡು ಗಿಡಗಳನ್ನು ನೆಟ್ಟರೆ ನೆರಳಿನ ಪ್ರಮಾಣ ಹೆಚ್ಚಿಸಬೇಕು. ಗಿಡ-ಮರಗಳ ಪೋಷಣೆಗೆ ಸಾರ್ವಜನಿಕರು ಸರಕಾರಗಳೊಂದಿಗೆ ಕೈಜೋಡಿಸಬೇಕು ಎಂದು ಹೇಳಿದರು.

ಇಂದಿರಾ ಗಾಂಧಿ ಅವರು 1980ರಲ್ಲಿ ಅರಣ್ಯ ಸಂರಕ್ಷಣೆ ಕಾಯ್ದೆ ಜಾರಿಗೆ ತಂದರು. ರಾಜ್ಯದಲ್ಲಿ ಬರಗಾಲ ಬಂದಾಗ ಇಲ್ಲಿಗೆ ಬಂದಿದ್ದ ಅವರು ಅರಣ್ಯ ಬೆಳೆಸುವ ಬಗ್ಗೆ ಸಲಹೆ ನೀಡಿದ್ದರು. ಮನಮೋಹನ್ ಸಿಂಗ್ ಅವರ ಕಾಲದಲ್ಲಿ ಅರಣ್ಯ ಹಕ್ಕು ಕಾಯ್ದೆ ಜಾರಿಗೆ ತಂದು ಅರಣ್ಯ ನಿವಾಸಿಗಳಿಗೆ ಅನುಕೂಲ ಮಾಡಿಕೊಡಲಾಗಿತ್ತು. ಆದರೆ, ಅರಣ್ಯಕ್ಕೆ ಸಂಬಂಧಿಸಿದಂತೆ ಜಾರಿಗೆ ಬಂದ ಕಾನೂನುಗಳನ್ನು ದೇಶದ ಯಾವ ರಾಜ್ಯಗಳು ಪಾಲನೆ ಮಾಡುತ್ತಿಲ್ಲ. ಕೇಂದ್ರ ಸರಕಾರ ಈ ಕಾಯ್ದೆಗೆ ತಿದ್ದುಪಡಿ ತಂದರೂ ಪರಿಣಾಮಕಾರಿ ಅನುಷ್ಠಾನ ಮಾಡಿಲ್ಲ. ದೇಶದಲ್ಲಿ ಅರಣ್ಯ ಪ್ರದೇಶ ನಾಶ ಆಗುತ್ತ ಹೋದರೆ ಸ್ವಚ್ಛಗಾಳಿ, ಬೆಳಕು, ಆಹಾರ ಸಿಗದೆ ಜನ ಅಪಾಯಕ್ಕೆ ಸಿಲುಕುವ ಆತಂಕವಿದೆ. ಆದ್ದರಿಂದ ಪೀಳಿಗೆ ಅರಣ್ಯೀಕರಣದ ಬಗ್ಗೆ ಆಸಕ್ತಿ ತೋರಿ ಸ್ವಹಿತಾಸಕ್ತಿಯಿಂದ ಪರಿಸರ ಸಂರಕ್ಷಣೆ ಕಾರ್ಯದಲ್ಲಿ ತೊಡಗಬೇಕು. ಬಿಸಿಲು ನಾಡು ಕಲ್ಯಾಣ ಕರ್ನಾಟಕ ಭಾಗದಲ್ಲಿ ಹಸಿರು ಹೊದಿಕೆ ಹೆಚ್ಚಾಗಬೇಕು ಎಂದು ಮಲ್ಲಿಕಾರ್ಜುನ ಖರ್ಗೆ ಅವರು ಒತ್ತಾಯಿಸಿದರು.

ಕಲಬುರಗಿಯ ಎಚ್.ಕೆ.ಇ. ಪಾಲಿಟೆಕ್ನಿಕ್ ಕಾಲೇಜು ಆವರಣದಲ್ಲಿ ಆಯೋಜಿಸಿದ್ದ ವನಮಹೋತ್ಸವ, ಹಸಿರು ಪಥ, ಕಲಬುರಗಿ ಹಸಿರು ಹೆಜ್ಜೆ ಕಾರ್ಯಕ್ರಮದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾತನಾಡಿದರು.

ಡ್ಯಾಮ್ ಹಿನ್ನೀರಿನಲ್ಲಿ ಅರಣ್ಯೀಕರಣ ಆಗಲಿ

ದಕ್ಷಿಣ ಕರ್ನಾಟಕದ ಬಹುತೇಕ ಕಡೆ ರಸ್ತೆ ಬದಿ ಚೆನ್ನಾಗಿ ಮರಗಳನ್ನು ಬೆಳೆಸಿದ್ದಾರೆ. ನೋಡಲು ಸುಂದರವಾಗಿ ಕಾಣುತ್ತವೆ. ರಸ್ತೆ ಬದಿ ಬಿಟ್ಟು ಒಳಗಡೆ ಹೋದರೆ ಮರಗಳಿಲ್ಲ. ಮರ ಕತ್ತರಿಸಿ ಜಮೀನು ಮಾಡಿಕೊಂಡಿದ್ದಾರೆ. ಹೀಗಾದರೆ ಪರಿಸರ ಸಂರಕ್ಷಣೆ ಹೇಗೆ ಸಾಧ್ಯ.? ಆಲಮಟ್ಟಿ, ನಾರಾಯಣಪುರ, ಕಾರಂಜಾ ಜಲಾಶಯ, ಕೃಷ್ಣಾ-ಭೀಮಾ ನದಿ ಹಾಗೂ ಬ್ರಿಡ್ಜ್ ಕಂ ಬ್ಯಾರೇಜ್ ಬಳಿ ಹಿನ್ನಿರಿನ ನೆರವಿನಿಂದ ಗಿಡ-ಮರಗಳನ್ನು ಬೆಳೆಸಿ ಅರಣ್ಯ ಪ್ರದೇಶ ವಿಸ್ತರಿಸಬೇಕು. ಶಾಲಾ-ಕಾಲೇಜು, ರಸ್ತೆ ಬದಿ, ಮನೆ ಮುಂದೆ ಅಲ್ಲದೇ ಜಮೀನುಗಳಲ್ಲೂ ಕೂಡಾ ಸಸಿ ನೆಡಬೇಕು ಎಂದು ಮಲ್ಲಿಕಾರ್ಜುನ ಖರ್ಗೆ ಅವರು ರಾಜ್ಯ ಸರಕಾರಕ್ಕೆ ಸಲಹೆ ನೀಡಿದರು.

ರಾಜ್ಯಾದ್ಯಂತ 6,500 ಹೆಕ್ಟೇರ್ ಅರಣ್ಯ ಪ್ರದೇಶ ಒತ್ತುವರಿ ತೆರವುಗೊಳಿಸಿದೆ. ಸದ್ಯ ನೆಟ್ಟಿರುವ ಸಸಿಗಳು ಅಸ್ತಿತ್ವದಲ್ಲಿಲ್ಲ ಎನ್ನುವ ಮಾತುಗಳಿವೆ. ಮೂರನೆಯ ವ್ಯಕ್ತಿಯಿಂದ ಇದನ್ನು ತನಿಖೆ ನಡೆಸಲಾಗುತ್ತದೆ. ಜಿಯೋ ಟ್ಯಾಗ್ ಮೂಲಕ ಗಿಡದ ಪ್ರಗತಿ ವೀಕ್ಷಿಸಲಾಗುವುದು.

-ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಹೃದಯಾಘಾತದಿಂದ ಎಎಸ್‌ಐ ಸಾವು

ಗೋಕಾಕ: ಗೋಕಾಕ ಜಾತ್ರೆಗೆ ನಿಯೋಜನೆಗೊಂಡಿದ್ದ ಎಎಸ್‌ಐ ಲಾಲಾಸಾಬ್ ಮೀರಾನಾಯಿಕ ಹೃದಯಾಘಾತದಿಂದ ನಿಧನರಾಗಿದ್ದಾರೆ. ಶನಿವಾರ ದಂದು ಬೆಳಗ್ಗೆ 6.30ರ ಸುಮಾರಿಗೆ ಗೋಕಾಕ್ ನಗರದ ಎಸ್‌ಸಿಎಸ್‌ಟಿ ಹಾಸ್ಟೆಲ್‌ನಲ್ಲಿ ವಾಸ್ತವ್ಯ ಹೊಂದಿದ್ದ ಹುಬ್ಬಳ್ಳಿ ಎಪಿಎಂಸಿ ಪೊಲೀಸ್ ಠಾಣೆಯ ಸಹಾಯಕ ಉಪನಿರೀಕ್ಷಕ ಲಾಲಸಾಬ ಜೀವನಸಾಬ ಮೀರಾನಾಯಿಕ (56) ಹೃದಯಾಘಾತದಿಂದ ಅಕಾಲಿಕವಾಗಿ ನಿಧನ ಹೊಂದಿದ್ದಾರೆ. ಮೃತ ಲಾಲಸಾಬ ಅವರು 1994ರಲ್ಲಿ ಪೊಲೀಸ್ ಇಲಾಖೆಯಲ್ಲಿ ಸೇವೆ ಆರಂಭಿಸಿದ್ದರು. ಅವರು ಕಳೆದ 5ದಿನಗಳಿಂದ ಗೋಕಾಕ್ ಗ್ರಾಮದೇವತೆ ಜಾತ್ರೆಯ ಬಂದೋಬಸ್ತ್ ಕರ್ತವ್ಯಕ್ಕಾಗಿ ನಿಯೋಜನೆಗೊಂಡು ಹಾಸ್ಟೆಲ್‌ನಲ್ಲಿ ವಾಸ್ತವ್ಯದಲ್ಲಿದ್ದರು. ವಾಸ್ತವ್ಯದಲ್ಲಿದ್ದಾಗ ಶನಿವಾರ ಬೆಳಗ್ಗೆ ಈ ದುರ್ಘಟನೆ ಸಂಭವಿಸಿದೆ.

ಸಿದ್ದರಾಮಯ್ಯಗೆ ಮಹತ್ವದ ಜವಾಬ್ದಾರಿ

← ಮೊದಲಪುಟದಿಂದ

ಮುಖ್ಯಮಂತ್ರಿಯವರ ಜತೆ ಸಮಾಲೋಚಿಸಿದ ಬಳಿಕ ಮಂಡಳಿಯ ಸದಸ್ಯರು ಸಭೆಯ ಸಿದ್ಧತೆಗಳನ್ನು ಆರಂಭಿಸಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿರುವ ಸಲಹಾ ಮಂಡಳಿಯ ಸದಸ್ಯರಾಗಿರುವ ವಿಧಾನ ಪರಿಷತ್ ಸದಸ್ಯ, ಹರಿಯಾಣ ಕಾಂಗ್ರೆಸ್‌ನ ಎಐಸಿಸಿ ಉಸ್ತುವಾರಿಯಾಗಿರುವ ಬಿ.ಕೆ. ಹರಿಪ್ರಸಾದ್ ಅವರು ಸಭೆಗೆ ಆಗಬೇಕಿರುವ ಪೂರಕ ಸಿದ್ಧತೆ ಕುರಿತು ಚರ್ಚಿಸಿದ್ದಾರೆ. ಈ ಸಭೆ ಹಿಂದುಳಿದ ವರ್ಗಗಳಿಗೆ ಸಾಮಾಜಿಕ ನ್ಯಾಯ ಒದಗಿಸುವುದು ಮತ್ತು ಹಿಂದುಳಿದ ವರ್ಗಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಹುಡುಕುವ ನಿಟ್ಟಿನಲ್ಲಿ ಐತಿಹಾಸಿಕ ನಿರ್ಣಯಗಳನ್ನು ಕೈಗೊಳ್ಳುವ ಸಾಧ್ಯತೆ ಇದೆ.

ವರದಕ್ಷಿಣೆ ಕಿರುಕುಳದಿಂದ ಮಹಿಳೆ ಸಾವು

ದಾವಣಗೆರೆ: ಹಾಸನ ಜಿಲ್ಲೆಯ ಅರಸೀಕೆರೆ ರೈಲ್ವೆ ಟ್ರ್ಯಾಕ್ ಮೇಲೆ ನವ ವಿವಾಹಿತೆಯೊಬ್ಬರು ರಕ್ತಸಿಕ್ತವಾಗಿ ಬಿದ್ದಿದ್ದ ಪ್ರಕರಣಕ್ಕೆ ಟ್ವಿಸ್ಟ್ ಸಿಕ್ಕಿದೆ. ಈ ಸಾವಿಗೆ ಪತಿ ಕುಟುಂಬಸ್ಥರೇ ಕಾರಣ ಎಂದು ಮೃತ ನವವಿವಾಹಿತೆಯ ಕುಟುಂಬಸ್ಥರು ಆರೋಪ ಮಾಡಿ ಪತಿ ಮನೆ ಮುಂದೆ ಮೃತ ದೇಹ ಇಟ್ಟು ಪ್ರತಿಭಟನೆ ಮಾಡಿರುವ ಘಟನೆ ಜಿಲ್ಲೆಯ ಚನ್ನಗಿರಿ ತಾಲೂಕಿನ ಸೋಮಲಾಪುರ ಗ್ರಾಮದಲ್ಲಿ ನಡೆದಿದೆ.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯಿತಿ : ಹಾಸನ — ತಾಲ್ಲೂಕು ಪಂಚಾಯಿತಿ : ಆಲೂರು
ಗ್ರಾಮ ಪಂಚಾಯಿತಿ ಕಾರ್ಯಾಲಯ : ಬೈರಾಪುರ
ಬೈರಾಪುರ ಆಲೂರು ತಾ. ಹಾಸನ ಜಿಲ್ಲೆ-573218
ಸಂ : ಗ್ರಾ.ಪಂ/ಟೆಂಡರ್-02/2025 – 2026 — ದಿನಾಂಕ : 03-07-2025
ಟೆಂಡರ್ ಪ್ರಕಟಣೆ
ಬೈರಾಪುರ ಗ್ರಾಮ ಪಂಚಾಯಿತಿಗೆ 2025-26 ನೇ ಸಾಲಿನಲ್ಲಿ ಅಗತ್ಯವಾಗಿರುವ ಹೈಮಾಸ್ಟ್ ಬೀದಿ ದೀಪ ಖರೀದಿಗೆ ಅಂದಾಜು ಮೊತ್ತ 8,00,000/- ರೂಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (ಇ-ಪ್ರೊಕ್ಯೂರ್ಮೆಂಟ್) https://kppp.karnataka.gov.in ಮೂಲಕ ಟೆಂಡರ್ ಕರೆಯಲಾಗಿದ್ದು. ಆಸಕ್ತ ಸರಬರಾಜುದಾರರು ಬಿಡ್ ಸಲ್ಲಿಸಬಹುದಾಗಿದೆ. ಹಾಗು ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 24-07-2025 ಸಮಯ 17:30 ಗಂಟೆ ಆಗಿದ್ದು ದಿನಾಂಕ: 28-07-2025 ರಂದು ತಾಂತ್ರಿಕ ಮತ್ತು ಆರ್ಥಿಕ ಬಿಡ್ ತೆರೆಯಲಾಗುವುದು ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ರಲ್ಲಿನ ಟೆಂಡರ್ ದಸ್ತಾವೇಜು ಮತ್ತು ಬೈರಾಪುರ ಗ್ರಾಮ ಪಂಚಾಯಿತಿ ಕಛೇರಿಯನ್ನು ಸಂಪರ್ಕಿಸುವುದು.
ಸಹಿ
ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಬೈರಾಪುರ ಗ್ರಾಮ ಪಂಚಾಯಿತಿ
ಆಲೂರು ತಾಲ್ಲೂಕು, ಹಾಸನ ಜಿಲ್ಲೆ.

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 09/2025-26 ದಿನಾಂಕ:04-07-2025
ಮೇಲ್ಕಂಡ ಟೆಂಡರ್ ಪ್ರಕಟಣೆಯಲ್ಲಿ ಚಿಕ್ಕಮಗಳೂರು ಜಿಲ್ಲೆ ಲೋಕೋಪಯೋಗಿ ಇಲಾಖೆ ಉಪವಿಭಾಗಗಳಿಗೆ ಒಳಪಡುವ ಲೆಕ್ಕ ಶೀರ್ಷಿಕೆ:8443 ಠೇವಣಿ ವಂತಿಕೆ, 5054-04-337-0-01-154 ಜಿಲ್ಲಾ ಮತ್ತು ಇತರ ರಸ್ತೆಗಳು-ಸುಧಾರಣೆಗಳು, 5054-03-337-0- 17-154 ರಾಜ್ಯ ಹೆದ್ದಾರಿ-ಸುಧಾರಣೆಗಳ ಅಡಿಯಲ್ಲಿನ ಒಟ್ಟು 03 ಕಾಮಗಾರಿಗಳಿಗೆ ಕೆಪಿಪಿ ಪೋರ್ಟಲ್ ಮೂಲಕ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ (Standard Tender Document KW -1,2 &4 ರಂತೆ) ವಿವರಗಳನ್ನು ಲಗತ್ತಿಸತಕ್ಕದ್ದು, ಗುತ್ತಿಗೆದಾರರಿಗೆ ಅಧಿನಿಯಮ 3ರಲ್ಲಿ ನಮೂದಿಸಿರುವ ಕನಿಷ್ಠ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕನಿಷ್ಠ ಅಂದಾಜು ಮೊತ್ತ ರೂ.9.00 ಲಕ್ಷಗಳು ಹಾಗೂ ಗರಿಷ್ಠ ಅಂದಾಜು ಮೊತ್ತ ರೂ.125.00 ಲಕ್ಷಗಳು ಆಗಿರುತ್ತವೆ, ಕೆಪಿಪಿ ಪೋರ್ಟಲ್ ಟೆಂಡರ್ ಸಲ್ಲಿಸಬೇಕಾಗಿರುವ 03 ಕಾಮಗಾರಿಗಳಿಗೆ (ಇಂ.ಸಂಖ್ಯೆ:20537 (2ನೇ ಕರೆ), 22469, ದಿ:15.07.2025, ಇಂ,ಸಂಖ್ಯೆ:21665 (2ನೇಕರೆ), ದಿ: 21.07.2025 ರಂದು) ಸಂಜೆ 4.30 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು, ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.
ಸಹಿ/- ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಚಿ/25-26/39/541

ಕರ್ನಾಟಕ ಸರ್ಕಾರ – ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಚನ್ನಗಿರಿ ಉಪ ವಿಭಾಗ, ಚನ್ನಗಿರಿ.
Ph: :08282 266355 E mail: acfchannagiri@gmail.com
ಸಂಖ್ಯೆ: :ಸಅಸಂ.ಚನ್ನಗಿರಿ:ಟೆಂಡರ್.ಸಿ.ಆರ್-01/2025-26-1 ದಿ:25.06.2025.
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಮೂಲಕ ಕಾಲ್-2)
2025-26ನೇ ಸಾಲಿನಲ್ಲಿ ಭದ್ರಾವತಿ ಅರಣ್ಯ ವಿಭಾಗ ವ್ಯಾಪ್ತಿಯಲ್ಲಿ "Raising of plantation, Raising of mansoon plantation and Advance work including raising of seedlings in limits of the Deputy Conservator of Forests, Bhadravathi Division, Bhadravathi for the year 2025-26" ಕುರಿತು ಸಂಬಂಧಪಟ್ಟ ಅರ್ಹ ಗುತ್ತಿಗೆದಾರರಿಂದ ನಿರ್ವಹಿಸಲು https://kppp.karnataka.gov.in ಪೋರ್ಟಲ್ ಮುಖಾಂತರ ದಿನಾಂಕ:04-06-2025ರ ಸಂಜೆ 4.00 ಗಂಟೆಯವರೆಗೆ ನಿಗದಿಪಡಿಸಿ ಟೆಂಡರ್ ಅಹ್ವಾನಿಸಲಾಗಿದ್ದು, ಟೆಂಡರ್ ನಿಬಂಧನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ https://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.
ಕಾಮಗಾರಿಯ ಅಂದಾಜು ಮೊತ್ತ:-250.29000 ಲಕ್ಷಗಳು
1."Raising of plantation, Raising of mansoon plantation and Advance work including raising of seedlings in limits of the Deputy Conservator of Forests, Bhadravathi Division, Bhadravathi for the year 2025-26" *) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 10-07-2025 16:00 *) ತಾಂತ್ರಿಕ ಬಿಡ್ಡು ತೆರೆಯುವ ದಿನಾಂಕ: 11-07-2025 16.30. *) ಆರ್ಥಿಕ ಬಿಡ್ಡು ತೆರೆಯುವ ದಿನಾಂಕ: 11-07-2025 17:00
ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಚನ್ನಗಿರಿ ಉಪವಿಭಾಗ, ಚನ್ನಗಿರಿ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25-26/28/07/532

ನಗರಸಭಾ ಕಾರ್ಯಾಲಯ, ಮಂಡ್ಯ-571401
ದೂ.ಸಂ:- 08232-226749 ಫ್ಯಾಕ್ಸ್:-08232-221617
ಟಾಲ್ ಫ್ರೀ ನಂ:-1800-4253795
Website: www.mandyacity.mrc.gov.in
Email: itstaff_ulb_mandya@yahoo.co.in
No:CMC/HS/AEE(EE/CR-02/2025-26
ದಿನಾಂಕ:05-07-2025
ಮರು ಟೆಂಡರ್ ಪ್ರಕಟಣೆ – (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಮಂಡ್ಯ ನಗರಸಭೆಯಲ್ಲಿರುವ ವಿವಿಧ ವಾಹನಗಳಿಗೆ ಅವಶ್ಯಕವಾಗಿ ಬೇಕಾಗುವಂತಹ 50 ಜನ ಕ್ಲೀನರ್‌ಗಳನ್ನು ಹೊರಗುತ್ತಿಗೆಆಧಾರದ ಮೇಲೆ ಪೂರೈಸುವ ಟೆಂಡರ್‌ನ್ನು ಅಂದಾಜು ಮೊತ್ತ 139.62 ಲಕ್ಷಗಳು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರಇಂಡೆಂಟ್ ನಂಬರ್ DMA/2025-26/SE5608 ರೀತ್ಯಾ ಆಹ್ವಾನಿಸಲಾಗಿದ್ದು, ನೊಂದಾಯಿತಅರ್ಹಗುತ್ತಿಗೆದಾರರು/ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಟೆಂಡರ್‌ನಲ್ಲಿ ಭಾಗವಹಿಸ ಬಹುದಾಗಿದೆ. ಹೆಚ್ಚಿನ ವಿವರಗಳು/ಷರತ್ತುಗಳಿಗಾಗಿ ಕಛೇರಿಯ ವೆಬ್‌ಸೈಟ್ (www.mandyacity.mrc.gov.in) ವಿಳಾಸದಲ್ಲಿ ಹಾಗೂ ಕಛೇರಿಯ ದೂರವಾಣಿ ಸಂಖ್ಯೆ: 08232-226749ಗೆ ಕರೆಮಾಡಿ ಅಥವಾ ಕಛೇರಿಯ ಆರೋಗ್ಯ ಶಾಖೆಯಿಂದ ಮಾಹಿತಿಯನ್ನು ಪಡೆಯಬಹುದಾಗಿದೆ. ಟೆಂಡರ್ ಬಗ್ಗೆ ಮಾಹಿತಿಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://kppp.karnataka.gov.inನೋಡಿ ದಿನಾಂಕ:21.06.2025 ಸಂಜೆ 5:00 ಗಂಟೆಯೊಳಗಾಗಿ ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತಆಪ್‌ಲೋಡ್ ಮಾಡಬಹುದಾಗಿರುತ್ತದೆ. ತಾಂತ್ರಿಕ ಬಿಡ್‌ನ್ನು ದಿನಾಂಕ: 19.07.2025 ಸಂಜೆ 5:00 ಗಂಟೆಗೆ ತೆರೆಯಲಾಗುವುದು.ಆರ್ಥಿಕ ಬಿಡ್‌ನ್ನು ದಿನಾಂಕ:21.07.2025 ರಂದು ಬೆಳಿಗ್ಗೆ 11:00 ಗಂಟೆಗೆ ತೆರೆಯಲಾಗುವುದು.
ಸಹಿ/-ಅಧ್ಯಕ್ಷರು, ನಗರಸಭೆ, ಮಂಡ್ಯ — ಸಹಿ/-ಪೌರಾಯುಕ್ತರು, ನಗರಸಭೆ, ಮಂಡ್ಯ
ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/270/2025-26

ಕರ್ನಾಟಕ ಸರ್ಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕರ್ನಾಟಕ ಜಲಸಾರಿಗೆ ಮಂಡಳಿ
ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಕಚೇರಿ, ಕರ್ನಾಟಕ ಜಲಸಾರಿಗೆ ಮಂಡಳಿ
ಬೈತ್‌ಖೋಲ್, ಕಾರವಾರ
ಕ್ರ.ಸಂ. ಕಜಮಂ-61/ಕಾಮಗಾರಿ-II/2024-25 — ದಿನಾಂಕ: 04.07.2025
ಟೆಂಡರು ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ) (ಏಕ-ಲಕೋಟೆ ಪದ್ಧತಿ)
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಈ ಕೆಳಗೆ ನಮೂದಿಸಿದ ಕಾಮಗಾರಿಯನ್ನು ಕೈಗೊಳ್ಳಲು ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, https://kppp.karnataka.gov.in/kppp ನಲ್ಲಿ ಹೆಚ್ಚಿನ ಮಾಹಿತಿ ಪಡೆದು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಪಾಲ್ಗೊಳ್ಳಬಹುದಾಗಿದೆ. ಸದರಿ ಟೆಂಡರಿನ ಅವಧಿ ವಿಸ್ತರಣೆಯ ಮಾಹಿತಿಯನ್ನು ಮೇಲೆ ತಿಳಿಸಿರುವ ವೆಬ್‌ಸೈಟ್‌ನಿಂದ ಪಡೆಯತಕ್ಕದ್ದು. ಈ ಕುರಿತು ಪ್ರತ್ಯೇಕವಾಗಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದಿಲ್ಲ.
ಕಾಮಗಾರಿಯ ಹೆಸರು: (1) Appointment of Transaction Advisor, for the project – "Development of the 3 (Three) Islands in Bhatkal Taluka and Ankola Taluka, Uttara Kannada district, Karnataka., ಟೆಂಡರಿಗಿಟ್ಟ ಮೊತ್ತ ರೂ. 10,00,000.00 (GST ಹೊರತುಪಡಿಸಿ), ಇ.ಎಂ.ಡಿ: ರೂ. 25,000.00 (E-Payment Only), ಟೆಂಡರ್ ಬಗ್ಗೆ ಆಕ್ಷೇಪಣೆ ಮತ್ತು ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ ಹಾಗೂ ಸಮಯ: 14.07.2025 @ 17.30 hours, ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 18.07.2025 @17.30 hours
ಆಸಕ್ತ ಗುತ್ತಿಗೆದಾರರು ಹೆಚ್ಚಿನ ಮಾಹಿತಿ ಹಾಗೂ ಸಾಮಾನ್ಯ ವಿಚಾರಣೆಗಾಗಿ ಟೆಂಡರ್‌ನ ಆಕ್ಷೇಪಣೆ ಮತ್ತು ಸ್ಪಷ್ಟೀಕರಣದ ಕೊನೆಯ ದಿನಾಂಕದೊಳಗೆ ಈ ಕಛೇರಿಯ ದೂರವಾಣಿ ಸಂ.: 08382 221035 / 221494 ಕ್ಕೆ ಕಛೇರಿ ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/- ಬಂದರು ಇಂಜಿನೀಯರ್, ಕರ್ನಾಟಕ ಜಲಸಾರಿಗೆ ಮಂಡಳಿ, ಕಾರವಾರ
DIPR/KWR/KSMCA/353/25-26 Dt: 05.07.2025

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ಸಾಮಾಜಿಕ ಅರಣ್ಯ ಉಪ ವಿಭಾಗ, ಕೋಲಾರ
ಸಂಖ್ಯೆ:ಸ.ಅ.ಸ/ಸಾ.ಅ.ಉ/ಸಿಆರ್-02/2025-26 — ದಿನಾಂಕ:03.07.2025
ಮೊದಲನೇ ಬಾರಿಗೆ "ಇ" ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಈ ಮೂಲಕ ನೋಂದಾಯಿತ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ, 2025-26 ಸಾಲಿನಲ್ಲಿ ಕೋಲಾರ ಸಾಮಾಜಿಕ ಅರಣ್ಯ ವಿಭಾಗದ ವ್ಯಾಪ್ತಿಗೆ ಒಳಪಡುವ ಎಲ್ಲಾ ತಾಲ್ಲೂಕುಗಳ ಸಾಮಾಜಿಕ ಅರಣ್ಯ ವಲಯಗಳಲ್ಲಿನ Mahatma Gandhi NREGA ಯೋಜನೆಯಡಿ ಆಧಾರ ಕಡ್ಡಿಗಳನ್ನು ಸರಬರಾಜು ಮಾಡಿ ನೆಡುವ ಕಾಮಗಾರಿಗಳನ್ನು ಕೈಗೊಳ್ಳಲು ಜಿಲ್ಲಾ ಪಂಚಾಯಿತಿಯಲ್ಲಿ ನೋಂದಾಯಿತ ಗುತ್ತಿಗೆದಾರರಿಂದ (http://kppp.karnataka.gov.in) ವೆಬ್ ಸೈಟ್‌ನಲ್ಲಿ ಈ ಮುಂದಿನಂತೆ ಎರಡನೇಯ ಬಾರಿಗೆ ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಕ್ರ.ಸಂ	ವಿವರ
1	ಇ-ಪೋರ್ಟಲ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 17.07.2025
2	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 18.07.2025
3	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 19.07.2025

ಹೆಚ್ಚಿನ ವಿವರಗಳಿಗೆ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.
ಸಹಿ/-
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಸಾಮಾಜಿಕ ಅರಣ್ಯ ಉಪ ವಿಭಾಗ
ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:165/ಕೆಎಸ್‌ಎಂಸಿಎ/2025-26

ಕರ್ನಾಟಕ ಸರ್ಕಾರ
ಸಾರ್ವಜನಿಕ ಆಸ್ಪತ್ರೆ, ಜಯನಗರ,
ವೈದ್ಯಕೀಯ ಅಧೀಕ್ಷರ ಕಚೇರಿ, ಬೆಂಗಳೂರು-560041
ಸಂಖ್ಯೆ:ಸಾಆಜ/ಆಡಳಿತ/ಇ-ಟೆಂಡರ್/04/2025-26 — ದಿನಾಂಕ:05.07.2025
ಇ-ಟೆಂಡರ್ ಪ್ರಕಟಣೆ
ಸಾರ್ವಜನಿಕ ಆಸ್ಪತ್ರೆ ಜಯನಗರ ಬೆಂಗಳೂರು, ಈ ಆಸ್ಪತ್ರೆಯ 2025-26ನೇ ಸಾಲಿಗೆ ಈ ಆಸ್ಪತ್ರೆಯಲ್ಲಿ 12 ಡಾಟ ಎಂಟ್ರಿ ಆಪರೇಟರ್ ಸಿಬ್ಬಂದಿ ಹುದ್ದೆಗಳ ಕೆಲಸ ನಿರ್ವಹಣೆಗಾಗಿ ನೋಂದಾಯಿತ ಮಾನವ ಸಂಪನ್ಮೂಲ ಸಂಸ್ಥೆಗಳಿಂದ ಸೇವೆ ಪಡೆಯಲು ಇ-ಟೆಂಡರ್ ಆಹ್ವಾನಿಸಲಾಗಿದೆ.
ಟೆಂಡರ್ ಅನುಸೂಚಿಗಳು

ಟೆಂಡರ್ ವಿವರ	ದಿನಾಂಕ
ಬಿಡ್ ದಾಖಲೆಗಳನ್ನು ಇ-ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಸಹಾಯವಾಣಿ: 080-25501216/25501227, ಇ-ಮೇಲ್: Hphelpdesk.blr@intarvo.com	ದಿನಾಂಕ: 09.07.2025 ರಂದು ಸಂಜೆ 4.00 ಗಂಟೆಯಿಂದ.
ಇ-ಪೋರ್ಟಲ್ ಮೂಲಕ ಬಿಡ್ ಡಾಕ್ಯೂಮೆಂಟ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 23.07.2025ರ ಸಂಜೆ 4 ಗಂಟೆಗೆ ಅಥವಾ ಅದಕ್ಕಿಂತ ಮೊದಲು.
ತಾಂತ್ರಿಕ ಮತ್ತು ವಾಣಿಜ್ಯ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ 25.07.2025 ರಂದು ಬೆಳಗ್ಗೆ 10.00 ಗಂಟೆಗೆ. ಪ್ರಾರಂಭದ ದಿನಾಂಕವು ರಜಾದಿನವೆಂದು ಘೋಷಿಸಿದರೆ, ಮುಂದಿನ ಕೆಲಸದ ದಿನಾಂಕದಂದು ತೆರೆಯಲಾಗುವುದು.
ಆರ್ಥಿಕ ಮತ್ತು ವಾಣಿಜ್ಯ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ 27.07.2025 ರಂದು ಸಂಜೆ 4.00 ಗಂಟೆಗೆ. ಪ್ರಾರಂಭದ ದಿನಾಂಕವು ರಜಾದಿನವೆಂದು ಘೋಷಿಸಿದರೆ, ಮುಂದಿನ ಕೆಲಸದ ದಿನಾಂಕದಂದು ತೆರೆಯಲಾಗುವುದು.
ಟೆಂಡರ್‌ನ ಮೌಲ್ಯ	ರೂ.30,00,000/-
ಇ.ಎಂ.ಡಿ	ರೂ.75000/-
ಟೆಂಡರ್ ತೆರೆಯುವ ಸ್ಥಳ	ಸಾರ್ವಜನಿಕ ಆಸ್ಪತ್ರೆ, ಜಯನಗರ, 4ನೇ ಟಿ.ಬ್ಲಾಕ್, ಬೆಂಗಳೂರು-560041.

ಇ-ಟೆಂಡರುಗಳ ನಿಯಮ ಮತ್ತು ನಿಬಂಧನೆಗಳನ್ನು ಟೆಂಡರ್ ನಮೂನೆಯಲ್ಲಿ ಲಗತ್ತಿಸಲಾಗಿರುತ್ತದೆ. E-Tender upload through this website: https://kppp.karnataka.gov.in
ಸಹಿ/- ವೈದ್ಯಕೀಯ ಅಧೀಕ್ಷಕರು, ಸಾರ್ವಜನಿಕ ಆಸ್ಪತ್ರೆ, ಜಯನಗರ, ಬೆಂಗಳೂರು.
ವಾಸಸಂಇ/ಸಿಪಿ/ಎಎಎ/1655/2025-26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ನಂ:ಬೆಂಅಪ್ರಾ/ನಯೋಸ/CLU-90/1477/2025-26 — ದಿನಾಂಕ:05.07.2025
ಪ್ರಕಟಣೆ
ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ಎಸ್.ಆರ್. ಕಿಶೋರ್‌ಕುಮಾರ್ ಮತ್ತು ಆರ್.ಮುರಳೀಧರ್	ಆನೇಕಲ್	ಸರ್ಜಾಪುರ	ಕೊಮ್ಮಸಂದ್ರ	59/1	2-22	ವ್ಯವಸಾಯ ವಲಯ	ವಸತಿ

ಷರಾ: ಅರ್ಜಿದಾರರು ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಪ್ರಶ್ನಿತ ಜಮೀನುಗಳನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.
ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಕಾರ್ಯಪಾಲಕ ಅಭಿಯಂತರರು (ಪೂರ್ವ) ರವರ ಕಚೇರಿ, ಸಯ್ಯಾಜಿ ರಾವ್ ರಸ್ತೆ, ಮೈಸೂರು ಮಹಾನಗರ ಪಾಲಿಕೆ, ಮೈಸೂರು-570024, E-mail: eeemccmys@gmail.com, eewmccmys@gmail.com
ನಂ: ಹೆಚ್1/ಪವಿ/101/2022-23 — ದಿನಾಂಕ: 01.07.2025
ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ
ಮೈಸೂರು ಮಹಾನಗರ ಪಾಲಿಕೆಯ ಅನುದಾನದಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ

Tender	No. of Work	Amount (In Lakhs)	ಇ-ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
			ಬೆಳಿಗ್ಗೆ 11ರ ನಂತರ	ಸಂಜೆ 5.30 ರವರೆಗೆ	ಸಂಜೆ 5.30 ರ ನಂತರ
GOODS	04	81.12	03.07.2025	21.07.2025	22.07.2025
SERVICE	02	262.19	03.07.2025	21.07.2025	22.07.2025
EOI	04	–	03.07.2025	10.07.2025	11.07.2025

ಅರ್ಹ ಗುತ್ತಿಗೆದಾರರು (https://kppp.karnataka.gov.in) ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರವನ್ನು ಕಚೇರಿ ಸಮಯದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಸಿವಿಲ್ ಕಾ.ಅ (ಪೂ/ಪ) ರವರ ಕಚೇರಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು.
ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ / ಬದಲಾವಣೆ / ತಿದ್ದುಪಡಿಗಳಿದ್ದಲ್ಲಿ (https://kppp.karnataka.gov.in) ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.
ಸಹಿ/- ಕಾರ್ಯಪಾಲಕ ಅಭಿಯಂತರರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು.
ವಾಸಾಸಂಇ/ಮೈಸೂರು/591/ಎಸ್‌ಎಸ್‌ಸಿ/2025-26

ಸಮಾಚಾರ ಸಣ್ಣದಲ್ಲ

ನಟಿ ರಶ್ಮಿಕಾ ಮತ್ತೊಂದು ಯಡವಟ್ಟು

ಬೆಂಗಳೂರು: 'ಕೊಡವ ಸಮುದಾಯದಿಂದ ಚಿತ್ರರಂಗಕ್ಕೆ ಬಂದವಳು ನಾನೊಬ್ಬಳೇ ಎನ್ನಿಸುತ್ತದೆ' ಎಂಬ ಪೋಸ್ಟ್‌ವೊಂದನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿರುವ ಬಹುಭಾಷಾ

ನಟಿ ರಶ್ಮಿಕಾ ಮಂದಣ್ಣ ಮತ್ತೊಂದು ವಿವಾದವನ್ನು ಮೈಮೇಲೆ ಎಳೆದು ಕೊಂಡಿದ್ದಾರೆ. ರಶ್ಮಿಕಾ ಚಿತ್ರರಂಗಕ್ಕೆ ಬರುವ ಮೊದಲೇ ಪ್ರೇಮಾ ಸ್ಯಾಂಡಲ್‌ವುಡ್‌ನಲ್ಲಿ ಮಿಂಚಿದ್ದರು. ಡೈಸಿ ಬೋಪಣ್ಣ ಕನ್ನಡ ಚಿತ್ರರಂಗದಲ್ಲಿ ಗುರುತಿಸಿಕೊಂಡಿದ್ದರು, ಜತೆಗೆ ಬಾಲಿವುಡ್ ಸಿನಿಮಾಗಳಲ್ಲಿಯೂ ನಟಿಸಿ ಪ್ರಸಿದ್ಧಿ ಪಡೆದಿದ್ದಾರೆ. ಕೃಷಿ ತಾಪಂಡ, ಶ್ವೇತಾ ಚೆಂಗಪ್ಪ, ತನಿಷಾ ಹೀಗೆ ಕೊಡವ ಸಮುದಾಯದಿಂದ ಬಂದ ನಟಿಯರ ಸಾಲು ಬೆಳೆಯುತ್ತದೆ ಎಂದು ನೆಟ್ಟಿಗರು ರಶ್ಮಿಕಾಗೆ ತಿರಗೇಟು ನೀಡಿದ್ದಾರೆ.

14ಕ್ಕೆ ಶರಾವತಿ ಹಿನ್ನೀರ ಸೇತುವೆ ಉದ್ಘಾಟನೆ



ಶಿವಮೊಗ್ಗ: ದೇಶದ ಎರಡನೇ ಅತಿ ಉದ್ದದ ಕೇಬಲ್ ಸೇತುವೆಯಾದ ಸಿಗಂದೂರು ಸೇತುವೆ ಜುಲೈ 14ರಂದು ಲೋಕಾರ್ಪಣೆ ಆಗಲಿದೆ. ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು ಸೇತುವೆ ಉದ್ಘಾಟಿಸಲಿದ್ದಾರೆ ಎಂದು ಸಂಸದ ಬಿ.ವೈ. ರಾಘವೇಂದ್ರ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿಯವರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಸ್ಥಳ ಇನ್ನೂ ನಿಗದಿಯಾಗಬೇಕಿದೆ ಎಂದರು. ಶನಿವಾರದಿಂದ ಎರಡನೇ ಹಂತದ ಲೋಡ್ ಟೆಸ್ಟ್ ನಡೆಯುತ್ತಿದೆ. ಅಲ್ಲದೆ ಕೊನೆಯ ಹಂತದ ಕೆಲಸ ಕಾರ್ಯ ಬಾಕಿ ಇದೆ ಎಂದು ತಿಳಿಸಿದರು. ಸರಕಾರದ ಆದೇಶದಲ್ಲಿ ಈ ಸೇತುವೆಗೆ ಹೊಳೆಬಾಗಿಲು ಕಳಸವಳ್ಳಿ ಸೇತುವೆ ಎಂದು ಉಲ್ಲೇಖಿಸಲಾಗಿದೆ. ಆದರೆ ಈ ಸೇತುವೆಗೆ ಸಿಗಂದೂರು ಚೌಡೇಶ್ವರಿ ಸೇತುವೆ ಎಂದು ನಾಮಕರಣ ಮಾಡಬೇಕು. ಈ ಸಂಬಂಧ ರಾಜ್ಯ ಸರಕಾರ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಬೇಕು ಎಂದು ಒತ್ತಾಯಿಸುತ್ತೇವೆ ಎಂದು ಅವರು ತಿಳಿಸಿದರು.

ಜಾರಕಿಹೊಳಿ ಪುತ್ರನಿಂದ ಗಾಳಿಯಲ್ಲಿ ಗುಂಡು

ಬೆಳಗಾವಿ : ವಿಜೃಂಭಣೆಯಿಂದ ಜರುಗಿರುವ ಲಕ್ಷ್ಮೀ ದೇವಿ ಜಾತ್ರೆಯಲ್ಲಿ ಮಾಜಿ ಸಚಿವ ರಮೇಶ್

ಜಾರಕಿಹೊಳಿ ಪುತ್ರ ಬಂದೂಕಿನಿಂದ ಗಾಳಿಯಲ್ಲಿ ಗುಂಡು ಹಾರಿಸಿದ್ದು ಈ ಕುರಿತು ಪ್ರಕರಣ ದಾಖಲಾಗಿದೆ. ಜಾತ್ರೆ ಮೆರವಣಿಗೆ ಸಂದರ್ಭದಲ್ಲಿ ರಮೇಶ್ ಜಾರಕಿಹೊಳಿ ಪುತ್ರ ಸಂತೋಷ ಜಾರಕಿಹೊಳಿ ಗಾಳಿಯಲ್ಲಿ ಗುಂಡು ಹಾರಿಸಿದ್ದು, ಈ ವೀಡಿಯೋ ಸಾಮಾಜಿಕ ಜಾಲತಾಣದಲ್ಲಿ ಸಾಕಷ್ಟು ವೈರಲ್ ಆಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಗೋಕಾಕ್ ನಗರ ಠಾಣೆಯಲ್ಲಿ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ನಗರ ಪಾಲಿಕೆ ನೌಕರರಿಂದ 10ಕ್ಕೆ ಧರಣಿ

ಫ್ರೀಡಂಪಾರ್ಕ್‌ನಲ್ಲಿ ಬಿಬಿಎಂಪಿ ಸೇರಿ ರಾಜ್ಯದ 10 ಮಹಾನಗರ ಪಾಲಿಕೆ ಸಿಬ್ಬಂದಿ ಹೋರಾಟ

ಬೆಂಗಳೂರು: ನಾನಾ ಬೇಡಿಕೆ ಈಡೇರಿಸುವಂತೆ ಕೋರಿ ಮಂಗಳವಾರ (ಜುಲೈ 10) ಬಿಬಿಎಂಪಿ ಸೇರಿದಂತೆ ರಾಜ್ಯದ 10 ಮಹಾನಗರ ಪಾಲಿಕೆಗಳ ನೌಕರರು ಸಾಮೂಹಿಕ ರಜೆ ಹಾಕಿ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಲು ನಿರ್ಧರಿಸಿದ್ದಾರೆ.

6000 ಕ್ಕೂ ಹೆಚ್ಚು ಖಾಲಿ ಹುದ್ದೆಗಳು, ಲಾಗ್ ಸೇಫ್

ಹಾಜರಾತಿ ಪದ್ಧತಿ, ಅನಧಿಕೃತ ಅಮಾನತುಗಳು ಮುಂತಾದ ಸಮಸ್ಯೆಗಳನ್ನು ಬಗೆಹರಿಸುವಂತೆ ಮತ್ತು ಬೇಡಿಕೆಗಳನ್ನು ಇಡೇರಿಸುವಂತೆ ನೌಕರರು ಪ್ರತಿಭಟನೆ ನಡೆಸಲು ಮುಂದಾಗಿದ್ದಾರೆ. ಬಿಬಿಎಂಪಿಯಲ್ಲಿ ಸುಮಾರು 6000 ಕ್ಕೂ ಮೇಲ್ಪಟ್ಟು ವಿವಿಧ ವೃಂದದ ಅಧಿಕಾರಿ, ನೌಕರರ ಹುದ್ದೆಗಳು ಖಾಲಿಯಿವೆ. ಹೀಗಾಗಿ, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ, ನೌಕರರು ಒತ್ತಡದಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಮಧ್ಯೆ ಯಾವುದೇ ನೋಟಿಸ್ ನೀಡದೆ ನೌಕರರನ್ನು ಅಮಾನತು ಮಾಡಿರುವುದನ್ನು ತೆರವುಗೊಳಿಸುವಂತೆ ಅನೇಕ ಬಾರಿ ಮನವಿ ಸಲ್ಲಿಸಲಾಗಿದೆ. ಆದರೆ, ಈವರೆಗೂ ಯಾವುದೇ ರೀತಿ ಕ್ರಮ ವಹಿಸಿಲ್ಲ ಎಂದು ನೌಕರರು ಪ್ರತಿಭಟನೆ ನಡೆಸಲು ಮುಂದಾಗಿದ್ದಾರೆ.

ಯಾವ್ಯಾವ ಪಾಲಿಕೆ ನೌಕರರಿಂದ ಮುಷ್ಕರ?: ಬಿಬಿಎಂಪಿ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ತುಮಕೂರು ಮಹಾನಗರ ಪಾಲಿಕೆ, ಮಂಗಳೂರು ಮಹಾನಗರ ಪಾಲಿಕೆ, ಶಿವಮೊಗ್ಗ ಮಹಾನಗರ ಪಾಲಿಕೆ, ದಾವಣಗೆರೆ ಮಹಾನಗರ ಪಾಲಿಕೆ, ಮೈಸೂರು ಮಹಾನಗರ ಪಾಲಿಕೆ, ಬೆಳಗಾವಿ ಮಹಾನಗರ ಪಾಲಿಕೆ.

ನೌಕರರ ಬೇಡಿಕೆಗಳು

- ಬಿಬಿಎಂಪಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ ನೌಕರರು/ ಮಾಲಿ/ ಗ್ಯಾಂಗ್‌ಮೆನ್‌ಗಳು ನಾನ್ ಎಕ್ಸ್‌ಕ್ಲ್ಯೂಟಿವ್ ಆಗಿದ್ದು, ಲಾಗ್ ಸೇಫ್ ಪದ್ಧತಿಯಲ್ಲಿ ಹಾಜರಾತಿ ಸಲ್ಲಿಸಲು ಕಷ್ಟಕರವಾಗುತ್ತಿರುವುದರಿಂದ ಕೂಡಲೇ ಬಿಬಿಎಂಪಿ ಅಧಿಕಾರಿ/ ನೌಕರರಿಗೆ ಜಾರಿ ಮಾಡಿರುವ ಈ ಹಾಜರಾತಿ ಪದ್ಧತಿ ಕೈ ಬಿಡಬೇಕು.
- ಬಿಬಿಎಂಪಿ 225 ವಾರ್ಡ್‌ಗಳಲ್ಲಿ ಖಾಲಿ ಇರುವ 6000ಕ್ಕೂ ಅಧಿಕ ಹುದ್ದೆಗಳನ್ನು ಭರ್ತಿ ಮಾಡಬೇಕು.
- ಬಿಬಿಎಂಪಿ ವ್ಯಾಪ್ತಿಯ ಪ್ರಾಂಶುಪಾಲರು, ಮುಖ್ಯೋಪಾಧ್ಯಯರ ಮೇಲೆ ಕ್ಷುಲ್ಲಕ ಕಾರಣಕ್ಕೆ ಕರ್ತವ್ಯ ಲೋಪದ ಅಡಿಯಲ್ಲಿ ಕಾನೂನು ಬಾಹಿರವಾಗಿ ಇಲಾಖಾ ವಿಚರಣೆ ನಡೆಯುತ್ತಿದ್ದು, ಕೂಡಲೇ ಕೈ ಬಿಡಬೇಕು.
- ವಿಶೇಷ ಆಯುಕ್ತ (ಆಡಳಿತ) ರನ್ನು ಯಾವುದೇ ವಲಯಕ್ಕೆ ನೇಮಿಸದೆ ವಿಶೇಷ ಆಯುಕ್ತರು ಹುದ್ದೆಯಲ್ಲಿ ಮಾತ್ರ ನೇಮಿಸುವುದು.
- ಮುಖ್ಯ ಆಯುಕ್ತರ ಅಧಿಕಾರ ಪ್ರತ್ಯೋಜನೆಯನ್ನು ವಿಶೇಷ ಆಯುಕ್ತರು (ಆಡಳಿತ) ಉಪ ಆಯುಕ್ತರು (ಆಡಳಿತ) ರವರು ಕಟ್ಟುನಿಟ್ಟಾಗಿ ಪಾಲಿಸಲು ಆದೇಶಿಸಬೇಕು.
- ಬಿಬಿಎಂಪಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಕಾರ್ಯಪಾಲಕ ಅಭಿಯಂತರರ ಹುದ್ದೆಯಿಂದ ಕಾರ್ಯಕಲಾಪ ಹುದ್ದೆಗೆ ಮುಂಬಡ್ತಿ ಹಾಗೂ ಕಾರ್ಯಪಾಲ ಅಭಿಯಂತರರ ಹುದ್ದೆಯಿಂದ ಅಧೀಕ್ಷಕ ಅಭಿಯಂತರರ ಹುದ್ದೆಗೆ ಕೂಡಲೇ ಮುಂಬಡ್ತಿ ನೀಡಬೇಕು.
- ಬಿಬಿಎಂಪಿ ಕಂದಾಯ ಇಲಾಖೆಯಲ್ಲಿ ಖಾತಾ ವರ್ಗಾವಣೆ/ ಖಾತಾ ನೋಂದಣಿ/ ಖಾತಾ ವಿಭಜನೆ/ ಖಾತಾ ಒಂದುಗೂಡಿಸುವುದು ಇ-ಆಸ್ತಿ ಪದ್ಧತಿಯನ್ನು ನಿಯಮಾನುಸಾರ ಈ ಹಿಂದೆ ಇದ್ದ ಪದ್ಧತಿಯಲ್ಲಿಯೇ ಮುಂದುವರೆಸಬೇಕು.
- ಬಿಬಿಎಂಪಿಯಲ್ಲಿ ಕಾನೂನು ಬಾಹಿರವಾಗಿ ಎರವಲು ಸೇವೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತ್ತು ನೌಕರರನ್ನು ಕೂಡಲೇ ಮಾತೃ ಇಲಾಖೆಗೆ ಹಿಂತಿರುಗಿಸಬೇಕು.
- ಬಿಬಿಎಂಪಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ವೃಂದದ ಹುದ್ದೆಗಳಿಗೆ ಕೂಡಲೇ ಮುಂಬಡ್ತಿ ನೀಡಬೇಕು.
- ರಾಜ್ಯ ಸರಕಾರಿ ನೌಕರರಿಗೆ ಜಾರಿ ಮಾಡಿರುವ ಆರೋಗ್ಯ ಸೌಲಭ್ಯ/ ಯೋಜನೆಯನ್ನು ಬಿಬಿಎಂಪಿ ಅಧಿಕಾರಿ / ನೌಕರರಿಗೂ ಜಾರಿ ಮಾಡಬೇಕು.
- ಬಿಬಿಎಂಪಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಅಧಿಕಾರಿ/ನೌಕರರ ಸೇವಾ ಜ್ಯೇಷ್ಠತಾಪಟ್ಟಿಯನ್ನು ಪ್ರಚಾರ / ಅಂತಿಮಗೊಳಿಸಬೇಕು.
- ಬಿಬಿಎಂಪಿಯ ಆರೋಗ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೆಲ್ತ್ ಸೂಪರ್ ವೈಸರ್‌ಗಳು ಬಿ ಶ್ರೇಣಿ ಅಧಿಕಾರಿಗಳಿಗೆ ಉದ್ದಿಮೆ ಪರವಾನಿಗಿ ನೀಡಬೇಕು.
- ಬಿಬಿಎಂಪಿಯಲ್ಲಿ ಕಾನೂನು ಬಾಹಿರವಾಗಿ ಕಾರ್ಯನಿರ್ವಹಿಸುತ್ತಿರುವ ಮಾರ್ಷಲ್‌ಗಳ ಹುದ್ದೆ ಈ ಕೂಡಲೇ ರದ್ದು ಪಡಿಸಬೇಕು.

ರಾಜಕಾರಣದಲ್ಲಿ ಯಾವುದೇ ಕ್ರಾಂತಿ ಆಗಲ್ಲ

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಕಿಡಿ

ಯಾದಗಿರಿ: ಸೆಪ್ಟೆಂಬರ್ ಬಳಿಕ ರಾಜ್ಯ ರಾಜಕಾರಣದಲ್ಲಿ ಯಾವುದೇ ಕ್ರಾಂತಿ ಆಗಲ್ಲ ಎಲ್ಲವೂ ಶಾಂತಿಯುತವಾಗಿ ಹೋಗುತ್ತೆ.ಮೂರು ವರ್ಷ ಎಷ್ಟು ಆಗುತ್ತೋ ಅಷ್ಟು ಬಾಚುವ ಕೆಲಸ ಮಾಡ್ತಾರೆ. ರಾಜ್ಯದಲ್ಲಿ ಈಗ ಅಧಿಕಾರ ನಡೆಸುತ್ತಿರುವವರು ರಾಕ್ಷಸರು ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಕಿಡಿಕಾರಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇನ್ನೂ 3 ವರ್ಷ ಸರಕಾರದ ಅವಧಿಯಿದೆ. ಅದನ್ನು ಬಿಟ್ಟು ಹೇಗೆ ಹೋಗ್ತಾರೆ.ಮೂರು ವರ್ಷ ಎಷ್ಟು ಆಗುತ್ತೋ ಅಷ್ಟು ಬಾಚುವ ಕೆಲಸ ಮಾಡ್ತಾರೆ ಎಂದು ಆರೋಪಿಸಿದ್ದಾರೆ.

ಜೆಡಿಎಸ್ ಶಾಸಕರು ಕಾಂಗ್ರೆಸ್ ಗೆ ಸೇರುತ್ತಾರೆ ಎಂಬ ಮದ್ದೂರು ಶಾಸಕ ಉದಯ್ ಹೇಳಿಕೆಗೆ ಪ್ರತಿಕ್ರಿಯಿಸಿರುವ ಅವರು,ಜೆಡಿಎಸ್ ಶಾಸಕರು ಯಾರು ಕಾಂಗ್ರೆಸ್ ಪಕ್ಷಕ್ಕೆ ಹೋಗುವುದಿಲ್ಲ.ಜೆಡಿಎಸ್ ಪಕ್ಷದ ಶಾಸಕರೆಲ್ಲರು ನಮ್ಮ ಕುಟುಂಬದ ಸದಸ್ಯರು ಇದ್ದಹಾಗೆ,ಎಲ್ಲಾ ಜೆಡಿಎಸ್ ಶಾಸಕರು ನಿರಂತರವಾಗಿ ನಮ್ಮ ಜತೆ ಸಂಪರ್ಕದಲ್ಲಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ.

ಕಾಂಗ್ರೆಸ್ ನವರು ಮೊದಲು ಕಾಂಗ್ರೆಸ್ ಶಾಸಕರನ್ನು ಉಳಿಸಿಕೊಳ್ಳಲಿ. ಕಾಂಗ್ರೆಸ್ ಶಾಸಕರೇ ಕಾಂಗ್ರೆಸ್ ಬಿಟ್ಟು ಹೋಗುವ ವಾತಾವರಣ ಸೃಷ್ಟಿಯಾಗಿದೆ. ಇನ್ನೂ ಜೆಡಿಎಸ್ ನವರು ಕಾಂಗ್ರೆಸ್ ಯಾಕೆ ಹೋಗುತ್ತಾರೆ.? ಅವರ ಸರಕಾರ ಉಳಿಸಿಕೊಳ್ಳುವ ಕೆಲಸ ಮೊದಲು ಮಾಡಲಿ.

-ನಿಖಿಲ್ ಕುಮಾರಸ್ವಾಮಿ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ

ದೇಶಕ್ಕೆ ಆರೆಸ್ಸೆಸ್ ಕೊಡುಗೆ ಏನು?

ಕಲಬುರಗಿ: ಆರ್‌ಎಸ್‌ಎಸ್‌ಗೆ ನೂರು ವರ್ಷದ ಇತಿಹಾಸ ಇದ್ದರೆ, ಅದರ ಕೊಡುಗೆ ಏನಾದರೂ ಇದ್ದರೆ ಅದನ್ನು ಜನರಿಗೆ ತಿಳಿಸಲಿ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಆರ್‌ಎಸ್‌ಎಸ್ ಕುರಿತಾಗಿ ನೂರು ಸಾಧನೆ ಕೇಳುತ್ತಿಲ್ಲ. ಹತ್ತು ಸಾಧನೆ ಮಾತ್ರ. ದೇಶದ ಅಭಿವೃದ್ಧಿಗೆ, ಆರ್ಥಿಕ ಪ್ರಗತಿಗೆ, ದಲಿತರಿಗೆ, ಮಹಿಳೆಯರಿಗೆ ಆರ್‌ಎಸ್‌ಎಸ್ ಕೊಟ್ಟ ಕೊಡುಗೆ ಏನಿದೆ ಹೇಳಿ. ಆರ್‌ಎಸ್‌ಎಸ್ ಕಚೇರಿ ಯಲ್ಲಿ 52 ವರ್ಷ ಏಕೆ ನಮ್ಮ ರಾಷ್ಟ್ರಧ್ವಜ ಹಾರಿಸಲಿಲ್ಲ. ಸಾವರ್ಕರ್‌ಗೆ ವೀರ ಬಿರುದು ಕೊಟ್ಟವರು ಯಾರು ಬ್ರಿಟಿಷರಿಂದ ಪೆನ್ಷನ್ ತಗೊಂಡಿರೋದು ಏಕೆ? ಆರ್‌ಎಸ್‌ಎಸ್‌ನ ಟೀಕೆ ಮಾಡ್ತಿಲ್ಲ. ದೇಶಕ್ಕಾಗಿ ಏನ್ ಮಾಡಿದ್ದೀರಿ ಅಂತಾ ಕೇಳ್ತಿದ್ದೇನೆ ಎಂದು ಪ್ರಶ್ನೆಗಳನ್ನು ಮುಂದಿಟ್ಟರು.

ಬೆಂಗಳೂರಿನ ದೇವನಹಳ್ಳಿ ವಿಮಾನ ನಿಲ್ದಾಣ ಸಮೀಪ ಕೈಗಾರಿಕಾ ಪ್ರದೇಶದಲ್ಲಿ ತಮ್ಮ ಸಹೋದರ ಪಡೆದಿದ್ದ ನಿವೇಶನ ವಾಪಸ್ಸು ಮಾಡಲಾಗಿದೆ. ಆದರೆ ಇದೇ ಪ್ರದೇಶದಲ್ಲಿ ಒಂದೇ ವರ್ಷದ ಚಾಣಕ್ಯ ವಿವಿಗೆ 110 ಎಕ್ರೆ ಭೂಮಿ ನೀಡುವಲ್ಲಿ ಯಾವ ಮಾನದಂಡ ಅನುಸರಿಸಲಾಗಿತ್ತು ಎಂಬುದನ್ನು ಹಿಂದಿನ ಬಿಜೆಪಿ ಸರಕಾರ ತಿಳಿಸಲಿ ಎಂದರು.

ಛಲವಾದಿ ನಾರಾಯಣಸ್ವಾಮಿ ವಿರುದ್ಧ ಕಿಡಿ: ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿಗೆ ಅವರ ಇತಿಹಾಸನೇ ಗೊತ್ತಿಲ್ಲ. ಇನ್ನಾ ಆರ್‌ಎಸ್‌ಎಸ್ ಇತಿಹಾಸ ಅವರಿಗೇನು ಗೊತ್ತಿದೆ. ನಮ್ಮ ನಾಲ್ಕೈದು ಜನರನ್ನ ಬೈಯೋದಕ್ಕೆ ಅಂತಾನೆ ಬಿಜೆಪಿಯವರು ಅವರನ್ನು ಇಟ್ಟುಕೊಂಡಿದ್ದಾರೆ. ನಮಗೆ ಬೈದ್ರೆ ಮಾತ್ರ ಅವರ ಕುರ್ಚಿ ಕಾಯಂ ಆಗುತ್ತೆ. ನಮಗೆ ಬೈದಿರುವ ಬಗ್ಗೆ ಕೇಶವ ಕೃಪಾಗೆ ಮಾಹಿತಿ ಕೊಡಬೇಕು. ಸಂವಿಧಾನ ಶಿಲ್ಪಿ ಡಾ. ಬಿ.ಆರ್ ಅಂಬೇಡ್ಕರ್ ಅವರಿಗೆ ಸೋಲಿಸಲಾಗಿದ್ದರ ಸಂಬಂಧವಾಗಿ ದಾಖಲೆ ಬಿಡುಗಡೆ ಮಾಡಿರುವ ಹಿನ್ನಲೆಯಲ್ಲಾದರೂ ವಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ತಮಗೆ ಸವಾಲು ಹಾಕಿರುವಂತೆ ವಿಪಕ್ಷ ನಾಯಕ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ರಾಜೀನಾಮೆ ನೀಡಿದ ನಂತರವೇ ಅವರ ಬಗ್ಗೆ ಮಾತನಾಡುವುದು ಒಳಿತು ಅನ್ನಿಸುತ್ತಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ತುಂಗಭದ್ರಾ ಜಲಾಶಯದಿಂದ 64 ಸಾವಿರ ಕ್ಯೂಸೆಕ್ ನೀರು ಬಿಡುಗಡೆ

ಕೊಪ್ಪಳ: ಜಿಲ್ಲೆಯ ತುಂಗಭದ್ರಾ ಜಲಾಶಯದಿಂದ 64 ಸಾವಿರ ಕ್ಯೂಸೆಕ್ ನೀರನ್ನು ಬಿಡುಗಡೆ ಮಾಡಲಾಗಿದ್ದು, ಪರಿಣಾಮ ಐತಿಹಾಸಿಕ ಸ್ಮಾರಕಗಳು ಮುಳುಗಡೆ ಭೀತಿಯಲ್ಲಿವೆ.

ಬಳ್ಳಾರಿಯ ಹೊಸಪೇಟೆ ಹೊರವಲಯ ಹಾಗೂ ಕೊಪ್ಪಳದ ಮುನಿರಾಬಾದ್ ಬಳಿಯಿರುವ ತುಂಗಭದ್ರಾ ಜಲಾಶಯಕ್ಕೆ ಒಳಹರಿವು ಹೆಚ್ಚಾಗುತ್ತಿದೆ. ಡ್ಯಾಂನ ಸುರಕ್ಷತಾ ದೃಷ್ಟಿಯಿಂದ ಅಪಾರ ಪ್ರಮಾಣದ ನೀರನ್ನು ಹೊರಬಿಡಲಾಗಿದೆ. ಇದರಿಂದಾಗಿ ಐತಿಹಾಸಿಕ ಸ್ಮಾರಕಗಳು ಮುಳುಗಡೆ ಭೀತಿಯಲ್ಲಿವೆ.

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಆನೆಗೊಂದಿ ಬಳಿಯಿರುವ ವಿಜಯನಗರ ಸಾಮ್ರಾಜ್ಯದ ಸಾಮ್ರಾಟ ಶ್ರೀಕೃಷ್ಣದೇವರಾಯ ಸಮಾಧಿ ಮಂಟಪಕ್ಕೆ ಮುಳುಗಡೆ ಭೀತಿ ಎದುರಾಗಿದೆ. ಇದಲ್ಲದೇ ರೈತರಿಗೂ ಕೂಡ ಸಂಕಷ್ಟ ಎದುರಾಗಿದ್ದು, ಪಂಪ್‌ಸೆಟ್‌ಗಳು ಕೊಚ್ಚಿಹೋಗುತ್ತಿವೆ. ಹೀಗಾಗಿ ಪಂಪ್‌ಸೆಟ್, ಪೈಪ್‌ಗಳನ್ನು ತೆರವುಗೊಳಿಸುತ್ತಿದ್ದಾರೆ.

1,633.00 ಅಡಿ ಗರಿಷ್ಟ ಸಂಗ್ರಹ ಸಾಮರ್ಥ್ಯ ಹೊಂದಿರುವ ಜಲಾಶಯದಲ್ಲಿ ಸದ್ಯ 1,625.01 ಅಡಿ ನೀರಿದೆ. ಜಲಾಶಯಕ್ಕೆ 92.6 ಸಾವಿರ ಕ್ಯೂಸೆಕ್ ಒಳಹರಿವು ಇದ್ದು, 64 ಸಾವಿರ ಕ್ಯೂಸೆಕ್ ಹೊರಹರಿವಿದೆ.

ಗುಡ್ಡ ಕುಸಿತ- ಭಾರಿ ವಾಹನ ಸಂಚಾರಕ್ಕೆ ನಿರ್ಬಂಧ: ಜೋಯಿಡಾ ತಾಲೂಕಿನ ರಾಮನಗರದಿಂದ ಗೋವಾ ರಾಜ್ಯವನ್ನು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ 4ಅ ನಲ್ಲಿ ಭಾರಿ ಗುಡ್ಡ ಕುಸಿತ ಸಂಭವಿಸಿದೆ. ಗೋವಾದ ಮೊಳೆಂ ಬಳಿಯ ದೂದ್‌ಸಾಗರ್ ದೇವಾಲಯದ ಸಮೀಪ

ಸುಮಾರು 500 ಮೀಟರ್‌ವರೆಗೂ ಹೆದ್ದಾರಿ ಸಹಿತ ಗುಡ್ಡ ಜರಿದು ಮಣ್ಣು ಕುಸಿದಿದೆ. ಈ ಭೂಕುಸಿತದಿಂದಾಗಿ ಹೆದ್ದಾರಿಯ ಅರ್ಧ ಭಾಗ ಸಂಪೂರ್ಣವಾಗಿ ಜರಿದಿದ್ದು, ಭಾರಿ ವಾಹನಗಳ ಸಂಚಾರವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ದ್ವಿಚಕ್ರ ಮತ್ತು ನಾಲ್ಕು ಚಕ್ರದ ವಾಹನಗಳಿಗೆ ಎಚ್ಚರಿಕೆಯಿಂದ ಸಂಚರಿಸಲು ಸೂಚಿಸಲಾಗಿದೆ. ಸ್ಥಳಕ್ಕೆ ಗೋವಾ ಮತ್ತು ಕರ್ನಾಟಕ ರಾಜ್ಯದ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ವಾಹನ ಸಂಚಾರಕ್ಕೆ ತಾತ್ಕಾಲಿಕವಾಗಿ ಅನುವು ಮಾಡಿಕೊಡಲಾಗುತ್ತಿದೆ. ಪರಿಸ್ಥಿತಿಯ ಗಂಭೀರತೆಯನ್ನು ಅಳೆಯಲು ಭೂವೈಜ್ಞಾನಿಕ ಸರ್ವೇಕ್ಷಣಾ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ.

ರಾಜ್ಯದಲ್ಲಿ 2 ಲಕ್ಷ ಎಕರೆ ಅರಣ್ಯ ಭೂಮಿ ಒತ್ತುವರಿ

ಹುಲಿಗಳ ಸಾವಿಗೆ ಅಧಿಕಾರಿಗಳ ನಿರ್ಲಕ್ಷ್ಯ ಕಾರಣ: ಈಶ್ವರ್ ಖಂಡ್ರೆ

ಕಲಬುರಗಿ: ರಾಜ್ಯಾದ್ಯಂತ ಎರಡು ಲಕ್ಷ ಎಕರೆ ಅರಣ್ಯ ಭೂಮಿಯನ್ನು ದೊಡ್ಡ ಮಟ್ಟದಲ್ಲಿ ಒತ್ತುವರಿ ಮಾಡಲಾಗಿದೆ. ಒತ್ತುವರಿಯಾದ ಭೂಮಿಯನ್ನು ತೆರವುಗೊಳಿಸುವಂತೆ ಈಗಾಗಲೇ, ಆದೇಶ ನೀಡಲಾಗಿದೆ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಒತ್ತುವರಿಯಾಗಿರುವ ಭೂಮಿಯಲ್ಲಿ ಈಗಾಗಲೇ 248 ಎಕರೆ ಭೂಮಿ ತೆರವು ಮಾಡಲಾಗಿದೆ. ಮುಂಬರುವ ದಿನಗಳಲ್ಲಿ ಎಲ್ಲೆಲ್ಲಿ ಅರಣ್ಯ ಭೂಮಿ ಅನಧಿಕೃತವಾಗಿ ಒತ್ತುವರಿಯಾಗಿದೆ. ಅದನ್ನು ತೆರವುಗೊಳಿಸಲಾಗುವುದು ಎಂದು ಹೇಳಿದರು.

ಮಲೆ ಮಹದೇಶ್ವರ ವನ್ಯಜೀವಿಗಳ ಧಾಮದಲ್ಲಿ ನಡೆದ ಹುಲಿಗಳ ಸಾವಿನ ಕುರಿತು ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಸಚಿವರು, ವಿಷ ಪ್ರಾಶನದಿಂದ ಹುಲಿಗಳ ಸಾವಾಗಿದ್ದು ಅತ್ಯಂತ ದುಃಖದ ಸಂಗತಿ.ಈ ಘಟನೆಯನ್ನು ಸರಕಾರ ಗಂಭೀರವಾಗಿ ಪರಿಗಣಿಸಿ ಉನ್ನತ ಮಟ್ಟದ ಸಮಿತಿ ರಚನೆ ಮಾಡಿ ಮೂರು ದಿನಗಳಲ್ಲಿ ವರದಿ ನೀಡುವಂತೆ ತಿಳಿಸಲಾಗಿತ್ತು. ಶುಕ್ರವಾರ ಪ್ರಾಥಮಿಕವಾಗಿ ವರದಿ ಬಂದಿದ್ದು, ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ ಎಂದು ತಿಳಿದುಬಂದಿದೆ. ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣವಾಗಿದ್ದರಿಂದ ಈಗಾಗಲೇ ಇಬ್ಬರು ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ. ಒಬ್ಬ ಹಿರಿಯ ಡಿಪಿಆರ್‌ಗೆ ಅಮಾನತು ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶಿಫಾರಸ್ಸು ಮಾಡಿದ್ದೇನೆ ಎಂದು ಹೇಳಿದರು.

540 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಆರಂಭ

ಅರಣ್ಯ ಇಲಾಖೆಯಲ್ಲಿ 6000 ಹುದ್ದೆಗಳು ಖಾಲಿ ಇದ್ದು, ಅದರಲ್ಲಿ 540 ಹುದ್ದೆಗಳ ಭರ್ತಿ ಆರಂಭವಾಗಿದೆ. 540 ಹುದ್ದೆಗಳ ಜತೆಗೆ 340 ಹುದ್ದೆಗಳನ್ನು ನೇಮಕಾತಿಗೆ ಮುಂದಾಗಲಾಗುವುದು. ಎಲ್ಲೆಲ್ಲಿ ಕ್ರಿಟಿಕಲ್ ಪರಿಸ್ಥಿತಿಯಿದೆ. ಅಲ್ಲಲ್ಲಿ ಭರ್ತಿಗೆ ಕ್ರಮಕೈಗೊಳ್ಳಬೇಕು ಎಂದು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅರಣ್ಯ ಸಿಬ್ಬಂದಿಗಳಿಗೆ ಮೂರು ತಿಂಗಳಿಂದ ಸಂಬಳ ಕೊಡದೇ ಇರುವುದು ಅಕ್ಷಮ್ಯ ಅಪರಾಧ. ಹೀಗಾಗಿ ಇನ್ನೂ ಮುಂದೆ ಪ್ರತಿ ತಿಂಗಳ 5ರಂದು ಸಂಬಳವಾಗಬೇಕೆಂದು ನಿರ್ದೇಶನ ನೀಡಲಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ರಾಜ್ಯಾದ್ಯಂತ 600ಕ್ಕೂ ಅಧಿಕ ಆನೆಗಳು,560 ಹುಲಿಗಳಿವೆ. ವನ್ಯ ಜೀವಿಗಳ ಸಂರಕ್ಷಣೆ ಹಿತದೃಷ್ಟಿಯಿಂದ ಹುಲ್ಲು ಬೆಳೆಸುವುದು. ಅವುಗಳಿಗೆ ನೀರು ಒದಗಿಸುವ ಕೆಲಸಗಳು ನಡೆಯುತ್ತಿವೆ. ಮಲೈ ಮಹದೇಶ್ವರ ವನ್ಯಜೀವಿಗಳ ಧಾಮದಲ್ಲಿ ನಡೆದ ಘಟನೆ ಮರುಕಳಿಸದಂತೆ ಎಚ್ಚರ ವಹಿಸಲಾಗಿದೆ.

- ಈಶ್ವರ್ ಖಂಡ್ರೆ ಅರಣ್ಯ ಸಚಿವ

ಕಾಂಗ್ರೆಸ್‌ನಲ್ಲಿ ಕದನವೇ ಇಲ್ಲ, ವಿರಾಮ ಎಲ್ಲಿಂದ?

ಬೀದರ್: ರಾಜ್ಯ ಕಾಂಗ್ರೆಸ್‌ನಲ್ಲಿ ಮುನ್ನೆಲೆಗೆ ಬಂದಿರುವ ಸಿಎಂ ಸ್ಥಾನ ಬದಲಾವಣೆ ವಿಚಾರದ ಬಗ್ಗೆ ಬೀದರ್‌ನಲ್ಲಿ ಮಾತನಾಡಿದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ನಮ್ಮಲ್ಲಿ ಯಾವುದೇ ಕದನವೇ ಇಲ್ಲ, ಇನ್ನು ವಿರಾಮ ಎಲ್ಲಿಂದ ಬರುತ್ತೆ ಎಂದು ಪ್ರಶ್ನಿಸಿದರು.

ಸೆಪ್ಟೆಂಬರ್‌ನಲ್ಲಿ ಕಾಂಗ್ರೆಸ್‌ನಲ್ಲಿ ಕ್ರಾಂತಿ ಆಗುತ್ತೆ ಎನ್ನುತ್ತಿರುವ ಬಿಜೆಪಿ ನಾಯಕರ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು, ಯಾರು ಹೇಳಿದ್ದಾರೆ ಅವರಿಗೆ ಕೇಳಿ. ನಮ್ಮಲ್ಲಿ ಯಾವುದೇ ಕ್ರಾಂತಿ ಇಲ್ಲ. ನಮ್ಮಲ್ಲಿ ಬರೀ ಶಾಂತಿ ಮಾತ್ರ. ಕಾಂಗ್ರೆಸ್ ಪಕ್ಷದ ಒಗ್ಗಟ್ಟನ್ನು ಒತ್ತಿಹೇಳಿದ್ದು, ನಾವು ಯಾರ ಬೆಂಬಲಿಗರೂ ಅಲ್ಲ, ನಾವು ಕಾಂಗ್ರೆಸ್‌ನ ಬೆಂಬಲಿಗರು. ನಮ್ಮಲ್ಲಿ ಒಬ್ಬರು ಮಾಸ್ ಲೀಡರ್, ಇನ್ನೊಬ್ಬರು ಸಂಘಟನಾ ಚತುರ. ನಾವು ಅವರಿಬ್ಬರ ಬೆಂಬಲಿಗರು ಎಂದು ಹೇಳಿದ ಲಕ್ಷ್ಮೀ ಹೆಬ್ಬಾಳ್ಕರ್ ಪಕ್ಷದ ಒಳಗಿನ ಒಡಕುಗಳ ಕುರಿತ ಚರ್ಚೆಗೆ ತೆರೆ ಎಳೆದಿದ್ದಾರೆ.

ಶೀಘ್ರದಲ್ಲೇ ಗೃಹಲಕ್ಷ್ಮಿ ಹಣ: ಗೃಹಲಕ್ಷ್ಮಿ ಯೋಜನೆಯಡಿ ಫಲಾನುಭವಿಗಳಿಗೆ ಕೊಡುವ 2,000 ರು. ಆರ್ಥಿಕ ನೆರವು ವಿಳಂಬದ ಬಗ್ಗೆ ಮಾತಾಡಿದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮೇ 30, 2025ರವರೆಗಿನ ಎಲ್ಲಾ ಕಂತುಗಳ ಹಣ ಫಲಾನುಭವಿಗಳ ಖಾತೆಗೆ ಜಮೆಯಾಗಿದೆ. ಜೂನ್ ತಿಂಗಳ ಹಣವನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು. ನಮ್ಮ ಬಳಿ ಯೋಜನೆಗೆ ಅಗತ್ಯವಾದ ಹಣವಿದೆ. ಕೊಟ್ಟ ಮಾತಿನಂತೆ ನಾವು ನಡೆದುಕೊಳ್ಳುತ್ತಿದ್ದೇವೆ ಎಂದು ಹೇಳಿದರು.

ರಾಜ್ಯದಲ್ಲಿ 30 ರಿಂದ 40 ಲಕ್ಷ ಗೃಹಲಕ್ಷ್ಮಿ ಸಂಘಗಳನ್ನು ರಚಿಸುವ ಯೋಜನೆಯಿದ್ದು, ಈ ಮೂಲಕ ಯಜಮಾನಿಯರಿಗೆ ಆರ್ಥಿಕವಾಗಿ ಬಲ ತುಂಬಲು ಕ್ರಮ ಕೈಗೊಳ್ಳಲಾಗುವುದು. ಈ ವರ್ಷ ಅಂಗನವಾಡಿ ಆರಂಭವಾಗಿ 50 ವರ್ಷ ತುಂಬುತ್ತಿದ್ದು, ಅಕ್ಟೋಬರ್‌ನಲ್ಲಿ ಸುವರ್ಣ ಮಹೋತ್ಸವ ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಗೃಹಲಕ್ಷ್ಮಿ ಸಂಘಗಳ ಘೋಷಣೆ ಮಾಡಿ ಇನ್ನಷ್ಟು ಬಲ ತುಂಬಲಾಗುವುದು.

-ಲಕ್ಷ್ಮೀ ಹೆಬ್ಬಾಳ್ಕರ್ ಸಚಿವೆ

ಮೇಕೆದಾಟು: ತ.ನಾ.ಒಪ್ಪಿಸುವ ತಾಕತ್ತು ಕೈಗಿಲ್ಲ

ಮೈಸೂರು: ಮೇಕೆದಾಟು ಯೋಜನೆ ಬಗ್ಗೆ ಸುಮ್ಮನೆ ಮಾತಿನಲ್ಲಿ ಕಾಲಹರಣ ಮಾಡುತ್ತಿರುವ ರಾಜ್ಯ ಕಾಂಗ್ರೆಸ್ ಸರಕಾರಕ್ಕೆ, ತಮಿಳುನಾಡಿನ ಸರಕಾರವನ್ನು ಒಪ್ಪಿಸುವ ಶಕ್ತಿ ಇಲ್ಲ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಕಾಂಗ್ರೆಸ್ ಸರಕಾರಕ್ಕೆ ಶಕ್ತಿ ಇದ್ದರೆ ತಮಿಳುನಾಡಿನ ತನ್ನ ಮೈತ್ರಿ ಪಕ್ಷವನ್ನು ಮೇಕೆದಾಟು ಯೋಜನೆಗೆ ಒಪ್ಪಿಸಲಿ. ನಾನು ಐದೇ ನಿಮಿಷದಲ್ಲಿ ಈ ಯೋಜನೆಗೆ ಪ್ರಧಾನಮಂತ್ರಿಗಳ ಒಪ್ಪಿಗೆ ಕೊಡಿಸುತ್ತೇನೆ. ಚುನಾವಣೆ ಸಂದರ್ಭದಲ್ಲಿ ಹೇಳಿದ್ದ ನನ್ನ ಈ ಮಾತಿಗೆ ನಾನು ಈಗಲೂ ಬದ್ಧವಾಗಿದೇನೆ ಎಂದು ಪುನರುಚ್ಚರಿಸಿದರು.

ಕಾಂಗ್ರೆಸ್ ನವರಿಗೆ ಮಿತ್ರಪಕ್ಷದ ಮುಲಾಜು ಇದೆ. ಅವರಿಗೆ ತಮಿಳುನಾಡು ಸರಕಾರವನ್ನು ಒಪ್ಪಿಸುವ ಶಕ್ತಿ ಇಲ್ಲ. ಡಿಎಂಕೆ ಪಕ್ಷವನ್ನು ಎದುರು ಹಾಕಿಕೊಳ್ಳುವ ಅಥವಾ ಅವರನ್ನು ಧಿಕ್ಕರಿಸುವ ಶಕ್ತಿಯೂ ಇಲ್ಲ. ತಮಿಳುನಾಡು ಸರಕಾರವನ್ನು ಧೈರ್ಯವಾಗಿ ಧಿಕ್ಕರಿಸಿ ಮೇಕೆದಾಟು ಯೋಜನೆ ಕೈಗೆತ್ತಿಗೊಂದರೆ ಅದು ಸಾಧ್ಯ ಆಗುತ್ತದೆ ಎಂದು ಹೇಳಿದರು.

ಕಾಂಗ್ರೆಸ್‌ಗೆ ಜನರ ಕೆಲಸ ಮಾಡುವುದು ಬಿಟ್ಟು ರಾಜಕೀಯ ಮಾಡುವುದರಲ್ಲಿ ಹೆಚ್ಚು ಆಸಕ್ತಿ ಇದೆ. ಕಾಂಗ್ರೆಸ್ ಪಕ್ಷಕ್ಕೆ ನನ್ನನ್ನು ಕಂಡರೆ ಭಯ. ನನ್ನೊಬ್ಬನ ಮೇಲೆಯೇ ಆ ಪಕ್ಷಕ್ಕೆ ಅತಿಯಾದ ಭಯವಿದೆ. ಹಾಗಾಗಿ ಪದೇಪದೇ ಕಾಂಗ್ರೆಸ್ ಮುಖಂಡರು ನನ್ನ ಹೆಸರನ್ನು ಜಪ ಮಾಡುತ್ತಿರುತ್ತಾರೆ. ಬಿಜೆಪಿ - ಜೆಡಿಎಸ್ ಜತೆಯಾದ ಮೇಲಂತೂ ಕಾಂಗ್ರೆಸ್ ನಾಯಕರಿಗೆ ನಿದ್ದೆಯೇ ಬರುತ್ತಿಲ್ಲ. ಈಗಾಗಿ ನನ್ನ ಮೇಲೆ ಪದೇಪದೇ ಟಾರ್ಗೆಟ್ ಮಾಡಿ ಮಾತನಾಡುತ್ತಿದ್ದಾರೆ.

-ಎಚ್.ಡಿ.ಕುಮಾರಸ್ವಾಮಿ ಕೇಂದ್ರ ಸಚಿವ

ಪ್ರವಾಸಿ ಪ್ರಪಂಚ ಅಂದ್ರೆ ಬರೀ ಪತ್ರಿಕೆ ಅಷ್ಟೇ ಅಲ್ಲ! ಕ್ಷಣ ಕ್ಷಣಕ್ಕೂ ಮಾಹಿತಿ ನೀಡುವ ಸಮಗ್ರ ವೆಬ್‌ಸೈಟ್
ವಿಸಿಟ್ ಮಾಡಿ
www.pravasiprapancha.com

ಬೆಳಗಾವಿಗೆ ಹೋಗಿ ಕುಂದಾ ನೋಡಿ, ರುಚಿ ಸವಿಯದೇ ಬಂದಂತೆ!

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
vbhat@me.com
vveditoped@gmail.com

ಬ್ರಿಟನ್‌ನ ವೇಲ್ಸ್ ರಾಜಧಾನಿ ಕಾರ್ಡಿಫ್‌ನಲ್ಲಿ ಓದುವಾಗ, ನಾನು ಶನಿವಾರ ಮತ್ತು ಭಾನುವಾರ ಹಾಗೂ ಇನ್ನಿತರ ರಜಾದಿನಗಳು ಬಂದರೆ, ಸುತ್ತಮುತ್ತಲಿನ ಪ್ರದೇಶಗಳನ್ನು ನೋಡಲು ಹೋಗುತ್ತಿದ್ದೆ. ಬ್ರಿಟನ್‌ನಲ್ಲಿ ಸ್ಕಾಟ್‌ಲ್ಯಾಂಡ್ ಬಹಳ ಸುಂದರ ಅಂತಾರೆ. ಸ್ಕಾಟ್‌ಲ್ಯಾಂಡ್‌ಗೆ ತೀವ್ರ ಪೈಪೋಟಿ ನೀಡುವ ಇನ್ನೊಂದು ಪ್ರದೇಶವಿದ್ದರೆ ಅದು ವೇಲ್ಸ್. ಅಲ್ಲಿನ ಹಳ್ಳಿಗಳನ್ನು ವರ್ಣಿಸುವುದು ಕಲ್ಪನೆಗಳ ಮೇಲೆ ಸವಾರಿ ಮಾಡಿದಂತೆ. ಕಾರ್ಡಿಫ್‌ಗೆ ಹತ್ತಿರದಲ್ಲಿ ಬ್ರೆಕಾನ್ ಬೀಕನ್ಸ್ ನ್ಯಾಷನಲ್ ಪಾರ್ಕ್ ಇದೆ. ಇದು ಪ್ರಕೃತಿಯ ವಿಸ್ಮಯಗಳನ್ನು ತನ್ನ ಒಡಲೊಳಗೆ ಹುದುಗಿಸಿಕೊಂಡಿರುವ ನಿಸರ್ಗದ ಒಂದು ಅದ್ಭುತ ವಿಸ್ಮಯ. ಆ ಪ್ರದೇಶದಲ್ಲಿ ಕನಿಷ್ಠ ನೂರಕ್ಕೂ ಹೆಚ್ಚು ಜಲಪಾತಗಳಿದ್ದಿರಬಹುದು. ಆ ಪ್ರದೇಶದಲ್ಲಿ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಯಾವುದಾದರೂ ದಿಕ್ಕಿನಲ್ಲಿ ಸುಮ್ಮನೆ ಕೆಮರಾ ಬಟನ್ ಅಮುಕಿದರೂ ಅದ್ಭುತ ಫೋಟೋ ಸೆರೆಯಾಗಿರುತ್ತದೆ. ಅಂಥ ಮನಮೋಹಕ ಪರಿಸರವದು.

ನಾನು ಅಲ್ಲೊಂದು ಜಲಪಾತ ನೋಡಲು ಹೋಗಿದ್ದೆ. ಆ ಜಲಪಾತದ ಹಾದಿಯಲ್ಲಿ ಹತ್ತಾರು ಸಣ್ಣ-ಪುಟ್ಟ ಜಲಪಾತಗಳನ್ನು ಬಳಸಿ ಹೋಗಬೇಕಿತ್ತು. ಸಾಮಾನ್ಯವಾಗಿ ವೇಲ್ಸ್‌ನ ಊರುಗಳ ಹೆಸರುಗಳನ್ನು ಸುಲಭವಾಗಿ ಹೇಳಲು ಬರುವುದಿಲ್ಲ. ವೇಲ್ಸ್‌ನ ಅಂಗ್ಲೇಸೇಯ್ ಎಂಬ ದ್ವೀಪದ ಸನಿಹ ಐವತ್ತೆಂಟು ಅಕ್ಷರಗಳ ಬಹಳ ಉದ್ದ ಹೆಸರಿನ (Llanfairpwllgwyn gyllgogerychwyrndrobwllllan tysiliogogogoch) ಊರಿದೆ. ಅದೊಂದೇ ಕಾರಣಕ್ಕೆ ಜನ ಜಗತ್ತಿನ ಎಲ್ಲೆಲ್ಲಿಂದಲೋ ಆ ಊರಿಗೆ ಭೇಟಿ ನೀಡುತ್ತಾರೆ. ಆ ಊರಿನ ಹೆಸರನ್ನು ಇಂಗ್ಲಿಷಿನಲ್ಲಿ ಅನುವಾದಿಸಿದರೆ, St. Mary's Church in the hollow of the white hazel near a rapid whirlpool and the Church of St. Tysilio of the red cave ಎಂದಾಗುತ್ತದೆ.

ಇರಲಿ, ನಾವು ನೋಡಲು ಹೋದ ಆ ಜಲಪಾತದ ಹೆಸರನ್ನು ಹೇಳುವುದು ಕಷ್ಟ. ಕಾರಣ ಅದನ್ನು ಉಚ್ಚರಿಸಲು ಬರುತ್ತಿರಲಿಲ್ಲ. Ddwli Falls ಎಂದು ಬರೆದರೆ ಏನೆಂದು ಉಚ್ಚರಿಸುವುದು? ನಾನು ಯಾವ ಅಕ್ಷರಕ್ಕೂ ಅನ್ಯಾಯವಾಗಬಾರದೆಂದು 'ಡಿಡಿವಿಲಿ ಫಾಲ್ಸ್' ಎಂದು ಹೇಳುತ್ತಿದ್ದೆ. ಈ ಜಲಪಾತದ ಹೆಸರನ್ನು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಹೇಳುತ್ತಿದ್ದರು. ಸ್ಥಳೀಯರು ಈ ಜಲಪಾತವನ್ನು 'Sgwd Ddwli Isaf' ಎಂದು ಬೇರೆ ಹೇಳುತ್ತಾರೆ.

ಈ ಜಲಪಾತದ ವೈಶಿಷ್ಟ್ಯ ಏನೆಂದರೆ ಇದು Waterfall Country ಎಂದೇ ಪ್ರಖ್ಯಾತಿ ಪಡೆದ ಪ್ರದೇಶದ ಒಂದು ಭಾಗ. ಇಲ್ಲಿ ಹಲವಾರು ಜಲಪಾತಗಳಿದ್ದು, ಪ್ರತಿಯೊಂದು ವಿಭಿನ್ನ ಶೈಲಿಯಲ್ಲಿ ಬಿದ್ದು, ಸುತ್ತಲಿನ ಪರಿಸರಕ್ಕೆ ವಿಶೇಷ ಸೌಂದರ್ಯವನ್ನು ನೀಡುತ್ತದೆ. ಆ ಜಲಪಾತವನ್ನು ಹೆಚ್ಚು ಹುದುಗಿದ ರತ್ನ (hidden gem) ಎಂದು ಸ್ಥಳೀಯರು ಹೇಳುತ್ತಿದ್ದರು. ವಿಶಾಲವಾದ ನದಿಯೊಂದು ಇದ್ದಕ್ಕಿದ್ದಂತೆ ಜಲಪಾತವಾದರೆ ಹೇಗಿರುವುದೋ, ಹಾಗಿದೆ. ಅಷ್ಟು ಎತ್ತರದಿಂದ ನೀರು ಧುಮುಕಿದರೂ, ಸ್ವಲ್ಪವೂ ಸದ್ದೇ ಇಲ್ಲ. ಇದನ್ನು ಮೌನ ಜಲಪಾತ ಅಂತಾನೂ ಕರೆಯುತ್ತಾರೆ.

ಆ ಫಾಲ್ಸ್‌ಗೆ ಹೋಗುವುದೇ ಒಂದು ವಿಶೇಷ ಅನುಭವ. ಆ ಮಾರ್ಗವೇ ಒಂದು ಪ್ರೇಕ್ಷಣೀಯ ಸ್ಥಳ. ಇದು ಕೇವಲ ಜಲಪಾತವಲ್ಲ. ಅದು ಒಂದು ನಿಸರ್ಗದ ಇಂಪಾದ ನಾದ. ಅದು ನಿಮ್ಮ ಹೃದಯದ ನಿಶ್ಶಬ್ದದೊಂದಿಗೆ ಸಂಗತಿಯಾಗುವ ಒಂದು ಪಯಣ. ಎಂಟು ಕಿ.ಮೀ. ಉದ್ದದ ನದಿಯ ಉದ್ದಕ್ಕೂ ಇಪ್ಪತ್ತಕ್ಕೂ ಹೆಚ್ಚು ಕೊಳಗಳು ಇವೆ, ಇದನ್ನು ವಾಟರ್‌ಫಾಲ್ ವುಡ್ಸ್ ಎಂದೂ ಕರೆಯಲಾಗುತ್ತದೆ. ಅದೃಷ್ಟವಿದ್ದರೆ, ಉತ್ತಮ ಹವಾಮಾನದ ದಿನಗಳಲ್ಲಿ ನೀವು ಹತ್ತಾರು ಸಲ ಮಳೆಬಿಲ್ಲುಗಳನ್ನು ನೋಡಬಹುದು.

ನಾನು ಈಗ ಆ ಜಲಪಾತದ ಬಗ್ಗೆ ಯಾಕೆ ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ ಎಂದು ನಿಮಗೆ ಅನಿಸಬಹುದು. ಕೆಲ ದಿನಗಳ ಹಿಂದೆ, ಪ್ರವಾಸ ಸಾಹಿತ್ಯಕ್ಕೆ ಹೆಸರಾದ 'ಲೋನ್ಲಿ ಪ್ಲಾನೆಟ್' ಒಂದು ಅಪರೂಪದ ಪುಸ್ತಕವನ್ನು ಪ್ರಕಟಿಸಿದ್ದು ಅದರ ಹೆಸರು- You Only Live Once: name of travel adventures for the explorer in all of us. ಈ ಕೃತಿಯಲ್ಲಿ ಒಂದು ಅಧ್ಯಾಯವಿದೆ. ಅದರ ಶೀರ್ಷಿಕೆ- Take a waterfall shower. ಜೀವನದಲ್ಲಿ ಎಂದಾದರೂ ಜಲಪಾತ ಸ್ನಾನ ಮಾಡುವುದಿದ್ದರೆ ಈ ನಾಲ್ಕರ ಪೈಕಿ ಪೈಕಿ ಒಂದರಲ್ಲಾದರೂ ಮಾಡಲೇಬೇಕು ಎಂದು 'ಲೋನ್ಲಿ ಪ್ಲಾನೆಟ್' ಆ ಪುಸ್ತಕದಲ್ಲಿ ಹೇಳಿದೆ. ಆ ನಾಲ್ಕು ಜಲಪಾತಗಳಲ್ಲಿ 'ಡಿಡಿವಿಲಿ ಫಾಲ್ಸ್' ಕೂಡ ಒಂದು!

ಅದನ್ನು ಓದುತ್ತಿದ್ದಂತೆ ಮನಸ್ಸು ಇಪ್ಪತ್ತೇಳು ವರ್ಷಗಳ ಹಿಂದೆ ಹೋಗಿ ನಿಂತಿತು. ನಾನು ಆ ಜಲಪಾತದ ಸುಂದರ ತಪ್ಪಲಲ್ಲಿ ಒಂದು ಇಡೀ ದಿನ ಕಳೆದಿದ್ದೆ. ಆದರೆ ಸ್ನಾನ ಮಾಡಿರಲಿಲ್ಲ. 'ಅಲ್ಲಿ ಹೋಗಿ ಸ್ನಾನ ಮಾಡದೇ ಬಂದರೆ ನಿರರ್ಥಕ' ಎಂದು ಬರೆದಿದ್ದನ್ನು ಕಂಡು ಮನಸ್ಸಿಗೆ ಬಹಳ ಪಿಚ್ಚೆನಿಸಿತು. ಜಲಪಾತ ಸ್ನಾನಕ್ಕೆ ಜಗತ್ತಿನಲ್ಲಿಯೇ ಪ್ರಸಿದ್ಧವಾದ ಸ್ಥಳಕ್ಕೆ ಹೋಗಿ, ಹಾಗೆ ಬಂದೆನಲ್ಲ ಎಂದು ಖೇದವಾಯಿತು. ಬೆಳಗಾವಿಗೆ ಹೋಗಿ ಕುಂದಾ ನೋಡಿ, ರುಚಿ ಸವಿಯದೇ ಬಂದ ಹಾಗೆ.

ಮತ್ತೊಮ್ಮೆ ಅಲ್ಲಿಗೆ ಹೋಗಲು ಒಂದು ನೆಪವೂ ಸಿಕ್ಕಿತು ಅನ್ನಿ.

ಪಾಪು ಹೇಳಿದ ಪ್ರಮಾದಗಳು

ಪಾಟೀಲ ಪುಟ್ಟಪ್ಪನವರು ಹೆಡ್‌ಲೈನ್‌ಗಳಲ್ಲಿ ಪದಗಳನ್ನು ಬೇಕಾಬಿಟ್ಟಿ ಕತ್ತರಿಸುವುದರಿಂದ ಆಗುವ ಅವಾಂತರಗಳ ಬಗ್ಗೆ ರಸವತ್ತಾಗಿ ಬಣ್ಣಿಸುತ್ತಿದ್ದರು. ವಿಜಯಲಕ್ಷ್ಮಿ ಬಾಯಿ ತೇರದಾಳ ಎಂಬುವವರು ನಿಧನರಾದಾಗ, ವಿಜಯಲಕ್ಷ್ಮಿ/ ಬಾಯಿ ತೆರದಾಳ/ ನಿಧನ ಎಂದು ಪ್ರಕಟವಾಗಿತ್ತು. ಉತ್ತರ ಕರ್ನಾಟಕದ ಭಾಗಗಳಲ್ಲಿ 'ಬಾಯಿ ತೆರದಾಳ' ಅಂದರೆ ನಿಧನಳಾದಳು ಎಂದೇ ಅರ್ಥ. ಹೀಗಾಗಿ ಹೆಸರನ್ನು ಬೇಕಾಬಿಟ್ಟಿ ಕತ್ತರಿಸಿದ್ದರಿಂದ ಅರ್ಥವ್ಯತ್ಯಾಸವಾಗಿ ಎಡವಟ್ಟಾಗಿತ್ತು.

ಪಂಡಿತ ಜವಾಹರಲಾಲ್ ನೆಹರು ಅವರ ಸಹೋದರಿ ವಿಜಯಲಕ್ಷ್ಮಿ ಪಂಡಿತ್ ಅಮೆರಿಕ ರಾಯಭಾರಿಯಾಗಿ ನೇಮಕವಾದರು. ಆರು ತಿಂಗಳಲ್ಲಿ ಅವರು ಅಮೆರಿಕವನ್ನು ಸುತ್ತಿ ಬಂದರು. ಅದನ್ನೇ ಕನ್ನಡದ ಪತ್ರಿಕೆಯೊಂದು ದೊಡ್ಡ ಸುದ್ದಿ ಮಾಡಿತು. 'ಅಮೆರಿಕೆಯಲ್ಲಿ/ ವಿಜಯಲಕ್ಷ್ಮಿಯವರ/ ಸಂಚಾರ' ಎಂಬ ಶೀರ್ಷಿಕೆ 'ಅಮೆರಿಕೆಯಲ್ಲಿ/ ವಿಜಯಲಕ್ಷ್ಮಿಯ/ ವರ ಸಂಚಾರ' ಎಂದು ಪ್ರಕಟವಾಗಿಬಿಟ್ಟಿತು. 'ವಿಜಯಲಕ್ಷ್ಮಿಯವರ' ಎಂಬ ಪದ ಮೊದಲ ಸಾಲಿನಲ್ಲಿ ಫಿಟ್ ಆಗದೇ ಇದ್ದುದು ಈ ಪ್ರಮಾದಕ್ಕೆ ಕಾರಣವಾಗಿತ್ತು.

ಇನ್ನೊಂದು ಪ್ರಸಂಗ. ಒಮ್ಮೆ ಕೇಂದ್ರದ ಕೃಷಿ ಮತ್ತು ಆಹಾರ ಸಚಿವ ಕನ್ಹಯ್ಯಾಲಾಲ್ ಮುನಸಿಯವರು ತಮ್ಮ ಪತ್ನಿಯೊಂದಿಗೆ ಸೂರತ್ ನಗರಕ್ಕೆ ಭೇಟಿ ನೀಡಿದ್ದರು. ಆ ಸಂದರ್ಭದಲ್ಲಿ ಅವರು ಸಮಾರಂಭದಲ್ಲಿ ಭಾಗವಹಿಸಿದ್ದರು. ಈ ಸುದ್ದಿ ಕನ್ನಡ ಪತ್ರಿಕೆಗಳಿಗೆ ಪಿಟಿಐ ಮತ್ತು ಯುಎನ್‌ಐ ಸಂಸ್ಥೆಗಳ ಮೂಲಕ ಬಂದಿತು. ಅದನ್ನು ಕನ್ನಡಕ್ಕೆ ಅನುವಾದಿಸಿ ಸುದ್ದಿಯಾಗಿ ತೆಗೆದುಕೊಳ್ಳಲಾಯಿತು. ಕನ್ನಡದ ಒಂದು ಪ್ರಮುಖ ಪತ್ರಿಕೆಯಲ್ಲಿ ಈ ಸುದ್ದಿ, 'ಮುನಸಿ ದಂಪತಿಗಳ ಸುರತ ಸಮಾರಂಭ' ಎಂದು ಪ್ರಕಟವಾಗಿತ್ತು. ಸೂರತ್ ಪದ ಸುರತ ಆಗಿ ಮುಜುಗರಕ್ಕೆ ಕಾರಣವಾಗಿತ್ತು.

ಮಹಾತ್ಮ ಗಾಂಧಿಯವರು ದಂಡಿ ಸತ್ಯಾಗ್ರಹಕ್ಕೆ ಸಿದ್ಧತೆ ಮಾಡುತ್ತಿದ್ದಾಗ ತಮ್ಮನ್ನು ಬಂಧಿಸಬಹುದು ಎಂಬ ಸಂದೇಹ ಅವರನ್ನು ಕಾಡಲಾರಂಭಿಸಿತು. ಒಂದು ವೇಳೆ ತಮ್ಮ ಬಂಧನವಾದರೆ ಜನ ಯಾವ ರೀತಿ ಪ್ರತಿಕ್ರಿಯಿಸಬೇಕು ಎಂಬುದನ್ನು ತಿಳಿಸುವುದಕ್ಕಾಗಿ ಅವರು 'ಬಾಂಬೆ ಕ್ರಾನಿಕಲ್' ಪತ್ರಿಕೆಗೆ ಒಂದು ಸಂದರ್ಶನ ನೀಡಿದರು. ಆಗ ಆ ಪತ್ರಿಕೆಯ ಸಂಪಾದಕರಾಗಿದ್ದ ಸೈಯದ್ ಅಬ್ದುಲ್ಲಾ ಬ್ರೆಲ್ವಿ ಅವರೇ ಖುದ್ದಾಗಿ ಗಾಂಧಿಯವರ ಸಂದರ್ಶನ ಮಾಡಿದರು.

ಆ ಸಂದರ್ಶನಕ್ಕೆ ಬ್ರೆಲ್ವಿಯವರೇ, Mahatma Gandhi's message to the masses ಎಂಬ ಶೀರ್ಷಿಕೆ ನೀಡಿದರು. ಆ ದಿನಗಳಲ್ಲಿ ಅಚ್ಚುಮೊಳೆಯಲ್ಲಿ ಅಕ್ಷರಗಳನ್ನು ಜೋಡಿಸುತ್ತಿದ್ದರು. masses ಎಂಬ ಪದದಲ್ಲಿ 'm' ಅಕ್ಷರ ಎಗರಿ ಹೋಗಿ, asses (ಕತ್ತೆ ಅಥವಾ ಅಂಡು) ಎಂದಾಗಿಬಿಟ್ಟಿತು. ಇದನ್ನು ಖುದ್ದು ಗಾಂಧಿಯವರೇ ನೋಡಿ ಖೇದ ವ್ಯಕ್ತಪಡಿಸಿದರು.

ಉತ್ತಮ ಫೀಲ್ಡರ್ ಕೂಡ!

ಕೆಲವು ದಿನಗಳ ಹಿಂದೆ, 'ದಿ ಹಿಂದು' ಪತ್ರಿಕೆಯಲ್ಲಿ ಖ್ಯಾತ ಕ್ರಿಕೆಟ್ ಬರಹಗಾರ ಸುರೇಶ ಮೆನನ್, 'ಭಾರತದ ಕ್ರಿಕೆಟ್‌ನಲ್ಲಿ ಫೀಲ್ಡಿಂಗ್ ಮಹತ್ವವನ್ನು ಎತ್ತಿ ತೋರಿದ ಟೈಗರ್ ಪಟೌಡಿ' ಎಂಬ ಅಂಕಣ ಬರೆದಿದ್ದರು. ಪಟೌಡಿ ಒಬ್ಬ ಶ್ರೇಷ್ಠ ಬ್ಯಾಟ್ಸಮನ್ ಎಂಬ ಸಂಗತಿ ಎಲ್ಲರಿಗೂ ಗೊತ್ತು. ಆದರೆ ಅವರೊಬ್ಬ ಅದ್ಭುತ ಫೀಲ್ಡರ್ ಆಗಿದ್ದರು ಮತ್ತು ಫೀಲ್ಡಿಂಗ್ ಮಹತ್ವವನ್ನು ಭಾರತ ತಂಡಕ್ಕೆ ಮನಗಾಣಿಸಿದ ನಾಯಕರಾಗಿದ್ದರು ಎಂಬುದು ಗೊತ್ತಿರಲಿಕ್ಕಿಲ್ಲ. ಭಾರತ ತಂಡದಲ್ಲಿ ವಿನೂ ಮಂಕಡ್ ಅದ್ಭುತ ಫೀಲ್ಡರ್ ಆಗಿ ಹೊರಹೊಮ್ಮಿದ್ದರು. ಹೇಮು ಅಧಿಕಾರಿ ಕವರ್ ಪಾಯಿಂಟಿನಲ್ಲಿ ಅದ್ಭುತ ಆಟಗಾರನಾಗಿ ಗಮನ ಸೆಳೆದಿದ್ದರು. ಆದರೆ ಟೈಗರ್ ಪಟೌಡಿ ಬಂದ ನಂತರ ಫೀಲ್ಡಿಂಗ್ ಚಿತ್ರಣವೇ ಬದಲಾಯಿತು.



ಫೀಲ್ಡಿಂಗ್‌ಗೆ ಸಂಬಂಧಿಸಿದಂತೆ, ಇಂದಿನ ದಿನಗಳ ಆಟಗಾರರು ಮಾಡುವುದನ್ನು ಪಟೌಡಿ ಅರವತ್ತರ ದಶಕದಲ್ಲೇ ಮಾಡಿದ್ದರಂತೆ. ದಕ್ಷಿಣ ಆಫ್ರಿಕಾದಲ್ಲಿ ಪಂದ್ಯ ನಡೆದಾಗ ಅಲ್ಲಿನ ಅದ್ಭುತ ಕವರ್ ಫೀಲ್ಡರ್ ಎಂದು ಖ್ಯಾತರಾಗಿರುವ ಕೊಲಿನ್ ಬ್ಲಾಂಡ್, ಸುರೇಶ ಮೆನನ್ ಅವರಿಗೆ ಹೇಳಿದ್ದರಂತೆ- ಜಾಂಟಿ ರೋಡ್ಸ್‌ಗಿಂತ ಪಟೌಡಿ ಅದ್ಭುತವಾದ ಫೀಲ್ಡರ್ ಆಗಿದ್ದರು ಮತ್ತು ಅವರ ನಿರೀಕ್ಷಣಾ ಸಾಮರ್ಥ್ಯ ವಿಶೇಷವಾಗಿತ್ತು.

'ನಾನು ನನ್ನ ಫೀಲ್ಡಿಂಗ್‌ನ ದುರಭಿಮಾನಿಯಾಗಿದ್ದೆ' ಎಂದು ಪಟೌಡಿ ಒಂದೆಡೆ ಬರೆದುಕೊಂಡಿದ್ದರಂತೆ. ಇಂಗ್ಲೆಂಡಿನಲ್ಲಿ ಆಡುವಾಗ ಪಟೌಡಿ ಅವರು ತಮ್ಮ ಟೀಮ್ ಸದಸ್ಯರೊಂದಿಗೆ ಮಾತನಾಡುತ್ತಾ, 'ನಾವು ಪೆವಿಲಿಯನ್‌ನಿಂದ ಹೊರಹೋಗಬೇಕಾದರೆ ವಿಶೇಷವಾದದ್ದನ್ನು ಸಾಧಿಸಿರಬೇಕು. ನಮ್ಮ ಮೊಣಕಾಲು ಮೈದಾನದ ಧೂಳಿನಿಂದ ಕೊಳಕಾಗಿರಬೇಕು, ಅಂಥದ್ದೊಂದು ತಂಡ ನನ್ನ ಜತೆಗಿರಬೇಕು' ಎಂದು ಹೇಳಿದ್ದರಂತೆ.

ಪಟೌಡಿ ಈ ಮಾತನ್ನು ಆಗಾಗ ಹೇಳುತ್ತಿದ್ದರಂತೆ. ಪೆವಿಲಿಯನ್‌ಗೆ ಮರಳುವಾಗ ಆಟಗಾರನೊಬ್ಬನ ಡ್ರೆಸ್ ನೀಟಾಗಿದ್ದನ್ನು ನೋಡಿದ ಪಟೌಡಿ, 'ಏನು, ನೀವು ಪಾರ್ಟಿಗೆ ಹೋಗುತ್ತಿದ್ದೀರಾ ಅಥವಾ ಆಡಲು ಹೋಗುತ್ತಿದ್ದೀರಾ?' ಎಂದು ತೀಕ್ಷ್ಣವಾಗಿ ಹೇಳಿದ್ದರಂತೆ. ಪಟೌಡಿ ಗರಡಿಯಲ್ಲಿ ಪಳಗಿದವರೇ ಆದ ಅಜಿತ್ ವಾಡೇಕರ್, ಏಕನಾಥ ಸೋಲ್ಕರ್, ಆಬಿದ್ ಆಲಿ, ವೆಂಕಟರಾಘವನ್, ಸುನಿಲ್ ಗಾವಸ್ಕರ್ ಫೀಲ್ಡರ್ ಆಗಿಯೂ ಗಮನ ಸೆಳೆದವರು.

ಬೌಂಡರಿ ಹತ್ತಿರವಿದ್ದ ಆಟಗಾರರು ನೆಲಕ್ಕೆ ಬಿದ್ದು ಚೆಂಡನ್ನು ತಡೆಯದಿದ್ದಾಗ, ಆಟಗಾರನ ಹತ್ತಿರ ಓಡಿ ಬರುತ್ತಿದ್ದ ಪಟೌಡಿ, 'ಚೆಂಡು ಯಾವತ್ತೂ ನಮ್ಮ ಕೈಗೆ ಬಂದು ಬೀಳುವುದಿಲ್ಲ. ನಾವು ಅದರ ಬೆನ್ನಟ್ಟಿ ಹಿಡಿಯಬೇಕಾಗುತ್ತದೆ. ಬಿದ್ದು ಹಿಡಿಯಬೇಕಾಗುತ್ತದೆ' ಎಂದು ಹೇಳುತ್ತಿದ್ದರಂತೆ. ಫೀಲ್ಡಿಂಗ್ ಬಗ್ಗೆ ಪಟೌಡಿ ಅವರ ಧೋರಣೆಯಿಂದಾಗಿ ಆಟದ ಫಲಿತಾಂಶದಲ್ಲಿ ಗಣನೀಯ ಬದಲಾವಣೆ ಕಾಣಲಾರಂಭಿಸಿತು. ಫೀಲ್ಡಿಂಗ್ ಕೂಡ ಆಟದ ಗತಿಯನ್ನು ಬದಲಿಸಬಲ್ಲುದು ಎಂಬುದನ್ನು ಪಟೌಡಿ ಪದೇ ಪದೆ ತೋರಿಸಿಕೊಟ್ಟರು. ಅದಾದ ಬಳಿಕ ತಂಡದ ಆಟಗಾರರನ್ನು ಆಯ್ಕೆ ಮಾಡುವಾಗ, ಉತ್ತಮ ಫೀಲ್ಡರ್ ಗುಣವೂ ಮಾನದಂಡವಾಯಿತು.

ಜಗತ್ತಿನ ಅತ್ಯುತ್ತಮ ಫೀಲ್ಡರ್ ಎಂದೇ ಹೆಸರುವಾಸಿಯಾದ ಜಾಂಟಿ ರೋಡ್ಸ್ ಕೂಡ ಪಟೌಡಿ ಬಗ್ಗೆ ಪ್ರಶಂಸೆಯ ಮಾತುಗಳನ್ನಾಡಿದ್ದಾರೆ. 'ಪಟೌಡಿ ಒಬ್ಬ ಅದ್ಭುತ ಫೀಲ್ಡರ್ ಕೂಡ ಆಗಿದ್ದರು ಎಂದು ಕೇಳಿದ್ದೇನೆ. ಅವರಿಂದ ಪ್ರೇರಣೆ ಪಡೆದಿದ್ದೇನೆ' ಎಂದು ಹೇಳಿದ್ದನ್ನು ಮರೆಯುವಂತೆಯೇ ಇಲ್ಲ. (ಇಲ್ಲಿ ನನಗೆ ಜಾಂಟಿ ರೋಡ್ಸ್ ಅವರ I got more bruises, grass burns and cuts in practice than in match play ಎಂಬ ಮಾತು ನೆನಪಾಗುತ್ತಿದೆ. ಒಮ್ಮೆ ಯಾರೋ ರೋಡ್ಸ್‌ಗೆ ಕೇಳಿದರಂತೆ- 'ಆ ಕ್ಯಾಚನ್ನು ನೀವು ಹೇಗೆ ಹಿಡಿದಿರಿ?' ಅದಕ್ಕೆ ರೋಡ್ಸ್- 'ಪ್ರಾಕ್ಟೀಸ್ ಸೆಷನ್‌ನಲ್ಲಿ ನಾನು ಪ್ರತಿದಿನ ಅಂಥ ಇಪ್ಪತ್ತು ಕ್ಯಾಚ್ ಹಿಡಿದಿರುತ್ತೇನೆ' ಎಂದು ಹೇಳಿದ್ದನ್ನು ಮರೆಯುವಂತೆಯೇ ಇಲ್ಲ).

ಅಮ್ಮಾವ್ರ ಗಂಡನಾಗುವುದು

ಜಗತ್ತಿನಲ್ಲಿ ಅತ್ಯಂತ ಆಕರ್ಷಕ, ಆದರೆ ಯಮಯಾತನೆಯ ಹುದ್ದೆ ಅಂದ್ರೆ ಇಂಗ್ಲೆಂಡಿನ ಎಲಿಜಬೆತ್ ರಾಣಿಯ ಗಂಡನಾಗುವುದಂತೆ. ಈ ಜವಾಬ್ದಾರಿಯನ್ನು ರಾಣಿಯ ಗಂಡ ಪ್ರಿನ್ಸ್ ಫಿಲಿಪ್ ಸುಮಾರು ಎಪ್ಪತ್ತು ವರ್ಷಗಳ ಕಾಲ ನಿಭಾಯಿಸಿದ ಅಂದ್ರೆ, ಅವರ ಗುಣವನ್ನು ಮೆಚ್ಚಲೇಬೇಕು. ಪ್ರಿನ್ಸ್ ಫಿಲಿಪ್ ಜೀವನದುದ್ದಕ್ಕೂ ರಾಣಿಯ ಗಂಡನಂತೆ ವರ್ತಿಸಿದನೇ ಶಿವಾಯ್, ಎಂದೂ ರಾಜ ಎಂದು ಅನಿಸಿಕೊಳ್ಳಲೇ ಇಲ್ಲ.

ಆ ಹುದ್ದೆಯೇ ಅಂಥದ್ದು. ಅಮ್ಮಾವ್ರ ಗಂಡನಾಗಿರಬೇಕು. ಅರಮನೆಯಲ್ಲಿರಲಿ, ಸರಕಾರದಲ್ಲಿರಲಿ ಅಥವಾ ಇನ್ನೆಲ್ಲಿಯೇ ಇರಲಿ ಪ್ರಥಮ ಪ್ರಾಶಸ್ತ್ಯ ರಾಣಿಗೇ. ರಾಜನಾದವನು ರಾಣಿಯನ್ನು ಹಿಂಬಾಲಿಸಬೇಕಷ್ಟೆ. ಇದಕ್ಕೆ ಅತ್ಯಂತ ವಿಶಾಲ ಹೃದಯ ಬೇಕು. ಅಮ್ಮಾವ್ರ ಗಂಡನಾಗುವುದು ಸಣ್ಣ ಕೆಲಸವಲ್ಲ. ಗಂಡನಾದರೂ ಪ್ರತಿ ನಿತ್ಯ ಹೆಂಡತಿಯ ನಂತರದ ಸ್ಥಾನಕ್ಕೆ ತೃಪ್ತನಾಗುವುದು ಸುಲಭದ ವಿಷಯವಲ್ಲ.

ವಿದೇಶಿ ಗಣ್ಯರು ಬರಲಿ, ರಾಯಲ್ ಸಮಾರಂಭವಿರಲಿ, ವಿದೇಶಿ ಗಣ್ಯರ ಜತೆಗೆ ಭೋಜನಕೂಟವಿರಲಿ, ಎಲ್ಲೆಡೆಯೂ ರಾಣಿಗೆ ಅಗ್ರತಾಂಬೂಲ. ಕೆಲವು ಸಲ ಪ್ರಿನ್ಸ್ ಫಿಲಿಪ್ ಅವರ ಹೆಸರನ್ನು ಹೇಳಲು ಮರೆತುಬಿಡುತ್ತಿದ್ದರು ಅಥವಾ ಇನ್ಯಾರೋ ನೆನಪಿಸಿದ ಬಳಿಕ ಅವರ ಹೆಸರನ್ನು ಹೇಳುತ್ತಿದ್ದರು. ಇಂಥ ಅನೇಕ ಪ್ರಸಂಗಗಳಾಗಿವೆ. ಆದರೆ ಪ್ರಿನ್ಸ್ ಫಿಲಿಪ್ ಬೇಸರಿಸಿಕೊಳ್ಳುತ್ತಿರಲಿಲ್ಲ.

ಒಂದು ಸಂದರ್ಭದಲ್ಲಿ ತಮ್ಮ ಹೆಸರನ್ನು ಯಾರೂ ಹೇಳದಿದ್ದಾಗ, ತಾವೇ ಎದ್ದು ನಿಂತು, ತಾನೂ ಉಪಸ್ಥಿತನಿದ್ದೇನೆ ಎಂದು ಕೈಯೆತ್ತಿ ಜ್ಞಾಪಿಸಿದ್ದರು. ಕಾರ್ಯಕ್ರಮಗಳಲ್ಲಿ ರಾಣಿ ಹೆಸರನ್ನು ಹತ್ತು ಸಲ ಹೇಳಿ, ತಮ್ಮ ಹೆಸರನ್ನು ಹೇಳಲು ಮರೆತಾಗ, ಶಿಷ್ಟಾಚಾರ ಉಲ್ಲಂಘನೆಯಾದಾಗ, ಅವರು ಅದನ್ನು ಗಂಭೀರವಾಗಿ ಪರಿಗಣಿಸುತ್ತಿರಲಿಲ್ಲ. 'ಇವೆಲ್ಲಾ ನನಗೆ ರೂಢಿಯಾಗಿದೆ' ಎಂದು ನಗುತ್ತಲೇ ಹೇಳಿ, ವಾತಾವರಣ ತಿಳಿಗೊಳಿಸುತ್ತಿದ್ದರು. ರಾಣಿಯ ಗಂಡನಾಗಿ ಎಪ್ಪತ್ತು ವರ್ಷಗಳ ಕಾಲ ಅವರು ಇಂಥ ಅದೆಷ್ಟೋ 'ಅಪಮಾನ'ಗಳನ್ನು ಅನುಭವಿಸಿದ್ದರೋ, ಅವರಿಗೊಂದೇ ಗೊತ್ತಿರಲು ಸಾಧ್ಯ. ಆದರೆ ಅವರೆಂದೂ ತಮ್ಮ ಅಸಮಾಧಾನವನ್ನು ಸಾರ್ವಜನಿಕವಾಗಿ ತೋರಿಸಿಕೊಳ್ಳಲಿಲ್ಲ.

ಒಮ್ಮೆ ರಾಣಿ ನ್ಯೂಜಿಲ್ಯಾಂಡಿಗೆ ಹೋಗಿದ್ದಾಗ, ಅಂತಾರಾಷ್ಟ್ರೀಯ ಚಾರಿಟಿ ಸಂಸ್ಥೆಯೊಂದು ಏರ್ಪಡಿಸಿದ ಕಾರ್ಯಕ್ರಮದಲ್ಲಿ, ಪ್ರಿನ್ಸ್ ಫಿಲಿಪ್ ಅವರನ್ನು ವೇದಿಕೆಗೆ ಕರೆಯಲೇ ಇಲ್ಲ. ತಮ್ಮನ್ನು ಮೇಲೆ ಕರೆಯಬಹುದು ಎಂದು ಪ್ರಿನ್ಸ್ ನಿರೀಕ್ಷಿಸಿದ್ದರು. ಆದರೆ ಕೊನೆ ತನಕವೂ ಅವರಿಗೆ ಆಹ್ವಾನವೇ ಬರಲಿಲ್ಲ. ವೇದಿಕೆ ಮೇಲೆ ದೇಶದ ಪ್ರಧಾನಿ ಸೇರಿದಂತೆ ಗಣ್ಯಮಾನ್ಯ ವ್ಯಕ್ತಿಗಳಿದ್ದರು. ಕಾರ್ಯಕ್ರಮದ ಕೊನೆಯಲ್ಲಿ ಅದೊಂದು ಲೋಪವೆಂಬುದು ಗೊತ್ತಾಯಿತು.

ಕಾರ್ಯಕ್ರಮ ಸಂಘಟಕರು ಅದಕ್ಕೆ ಕ್ಷಮೆಯಾಚಿಸಿದರು. ಆ ಸಭೆಯ ಮೊದಲ ಸಾಲಿನಲ್ಲಿ ತಾವು ಕುಳಿತಲ್ಲಿಂದಲೇ ಎದ್ದು ನಿಂತ ಪ್ರಿನ್ಸ್ ಫಿಲಿಪ್, 'ನೀವು ವೇದಿಕೆಗೆ ನನ್ನನ್ನು ಕರೆಯಲಿಲ್ಲ. ನಾನು ಅದನ್ನು ಅವಮಾನ ಎಂದು ಭಾವಿಸಿರಲಿಲ್ಲ. ಆದರೆ ವೇದಿಕೆಗೆ ಕರೆಯದೇ ಇದ್ದುದು ಲೋಪವಾಯಿತೆಂದು ನನಗಾದ ಗಾಯದ ಮೇಲೆ ಉಪ್ಪು ಸವರಿ ನನಗೆ ಅಪಮಾನ ಮಾಡಿದಿರಿ' ಎಂದು ಬಹಿರಂಗವಾಗಿ ನಗುನಗುತ್ತಲೇ ಹೇಳಿದರು.

ಒಮ್ಮೆ ರಾಣಿ, ಫಿಲಿಪ್ ಜತೆಗೆ ಆಸ್ಟ್ರೇಲಿಯಾಕ್ಕೆ ಹೋಗಿದ್ದಳು. ಅಲ್ಲಿನ ಪ್ರತಿಷ್ಠಿತ ವಿಶ್ವವಿದ್ಯಾಲಯವೊಂದು ರಾಣಿಗಾಗಿ ಔತಣಕೂಟವೊಂದನ್ನು ಏರ್ಪಡಿಸಿತ್ತು. ಆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವರನ್ನು ರಾಣಿ ಮತ್ತು ಅವಳ ಪತಿಗೆ ಪರಿಚಯ ಮಾಡಿಕೊಡುತ್ತಿದ್ದರು. ಪ್ರಿನ್ಸ್ ಫಿಲಿಪ್‌ಗೆ ಒಬ್ಬನನ್ನು ಪರಿಚಯಿಸಿದಾಗ, 'ಹಿಸ್ ಹೈನೆಸ್, ನಾನು ಅಂಥ ದೊಡ್ಡ ವ್ಯಕ್ತಿಯೇನಲ್ಲ, ನಾನು ನನ್ನ ಪತ್ನಿಯ ಜತೆಗೆ ಬಂದಿದ್ದೇನೆ. ನನ್ನ ಪತ್ನಿ ದೊಡ್ಡ ಸಾಧನೆ ಮಾಡಿದ್ದಾಳೆ. ದಂಪತಿಗಳನ್ನು ಆಹ್ವಾನಿಸಿದ್ದರಿಂದ ಅವಳ ಜತೆಗೆ ನಾನೂ ಬಂದಿದ್ದೇನೆ' ಎಂದು ಅತ್ಯಂತ ಮುಜುಗರದಿಂದ ಹೇಳಿದ.

ಆತನ ಭುಜದ ಮೇಲೆ ಕೈಹಾಕಿದ ಪ್ರಿನ್ಸ್ ಫಿಲಿಪ್, 'ಅಷ್ಟಕ್ಕೇ ಬೇಸರಿಸಿಕೊಳ್ಳಬೇಕಿಲ್ಲ. ನಾನು ಮತ್ತು ನೀವು ಒಂದೇ ದೋಣಿಯ ಪಯಣಿಗರು. ನಿಮ್ಮ ಸ್ಥಿತಿ ಹೇಗಿದೆಯೋ, ನನ್ನದೂ ಹಾಗೇ ಇದೆ. ನಾನೂ ನನ್ನ ಪತ್ನಿಯ ಜತೆಗೆ ಬಂದಿದ್ದೇನೆ' ಎಂದು ಹೇಳಿ ಸಂತೈಸಿದ್ದರು.

ಪ್ರಿನ್ಸ್ ಫಿಲಿಪ್‌ಗೆ ಅದು ಹೊಸತೇನೂ ಆಗಿರಲಿಲ್ಲ. ಹಾಗೆಂದು ಅದಕ್ಕಾಗಿ ಅವರು ಬೇಸರಿಸಿಕೊಳ್ಳುತ್ತಿರಲಿಲ್ಲ. ಒಳಗಿನಿಂದ ಅತೀವ ಹಿಂಸೆಯಾಗುತ್ತಿದ್ದರೂ ತೋರಗೊಡುತ್ತಿರಲಿಲ್ಲ. ತಾನು ಇರಬೇಕಾದುದೇ ಹಾಗೆ ಎಂಬುದು ಅವರಿಗೆ ಗೊತ್ತಿತ್ತು. ಅಮ್ಮಾವ್ರ ಗಂಡನಾಗಿರುವುದೇ ತಮ್ಮ ರೋಲು ಎಂಬುದನ್ನು ಅವರು ಸ್ವೀಕರಿಸಿದ್ದರು.

ಎಂಥ ಗಂಡನಿಗೂ ಹೆಂಡತಿ ಮುಂದೆ ಹಾಗಿರುವುದು ಕಷ್ಟವೇ. ಆದರೆ ಪ್ರಿನ್ಸ್ ಫಿಲಿಪ್ 'ಪಾಲಿಗೆ ಬಂದಿದ್ದು ಪಂಚಾಮೃತ' ಎಂದು ಪರಿಗಣಿಸಿದ್ದರು. ಅವರ ಮನಸ್ಸಿನಲ್ಲಿ ಒಂದು ಕ್ಷಣ ಕೀಳರಿಮೆ ಬಾಧಿಸಿದ್ದರೆ ಅವರಿಗೆ ತಮ್ಮ ಪಾತ್ರವನ್ನು ನಿಭಾಯಿಸಲು ಸಾಧ್ಯವಾಗುತ್ತಿರಲಿಲ್ಲ. ಈ ದೃಷ್ಟಿಯಿಂದ ನೋಡಿದರೆ, ಪ್ರಿನ್ಸ್ ಫಿಲಿಪ್ ಅದೆಷ್ಟು ದೊಡ್ಡ ವ್ಯಕ್ತಿಯಾಗಿದ್ದರು ಎಂಬುದು ಗೊತ್ತಾಗುತ್ತದೆ.

ಬೆಡ್‌ರೂಮ್ ವಾಸನೆ

ನಾನು ಎಲ್ಲೋ ಓದಿದ್ದು.

ಮದುವೆಯಾದ ನಂತರ, ಬೆಡ್‌ರೂಮಿನಲ್ಲಿ ವಾಸನೆ ಹೇಗಿರುತ್ತದೆ?

ಮೊದಲ ಮೂರು ವರ್ಷಗಳಲ್ಲಿ... ಅತ್ತರು (ಪರ್ಫ್ಯೂಮ್), ಹೂವು, ಚಾಕೊಲೇಟ್, ಹಣ್ಣಿನ ವಾಸನೆಯಿರುತ್ತದೆ.

ಐದು ವರ್ಷಗಳ ನಂತರ... ಬೇಬಿ ಪೌಡರ್, ಜಾನ್ಸನ್ ಕ್ರೀಮ್, ಲೋಷನ್, ಬೇಬಿ ಆಯಿಲ್ ವಾಸನೆಯಿರುತ್ತದೆ.

ಮೂವತ್ತು ವರ್ಷಗಳ ನಂತರ... ಟೈಗರ್ ಬಾಮ್, ಅಮೃತಾಂಜನ, ವಿಕ್ಸ್ ವಾಸನೆ ಸೂಸುತ್ತಿರುತ್ತದೆ.

ಐವತ್ತು ವರ್ಷಗಳ ನಂತರ... ಬರೀ ಅಗರಬತ್ತಿ ವಾಸನೆ!

ಆತ್ತಿಚ್ಚೂಡಿ: ತಮಿಳು ವರ್ಣಮಾಲೆಯಲ್ಲಿ ನೀತಿವಾಕ್ಯಗಳ ಸೂಡಿ

ತಿಳಿರು ತೋರಣ
ಶ್ರೀವತ್ಸ ಜೋಶಿ
vveditoped@gmail.com
srivathsajoshi@yahoo.com

ಅವ್ವೈಯಾರ್ ಎಂಬ ಪ್ರಾಚೀನ ತಮಿಳು ಕವಯಿತ್ರಿಯೊಬ್ಬಳು ಬರೆದ ಏಕವಾಕ್ಯ ನೀತಿಸೂಕ್ತಿಗಳ ವಿಶಿಷ್ಟ ಗ್ರಂಥವೊಂದಿದೆ ಎಂದು ನನಗೆ ಮೊನ್ನೆಯಷ್ಟೇ ತಿಳಿದದ್ದು. Athichudi: Ageless Aphorisms ಎಂಬ ಶೀರ್ಷಿಕೆಯಿದ್ದ ಇಂಗ್ಲಿಷ್ ಬರಹವೊಂದು ಅಂತರ್ಜಾಲದಲ್ಲಿ ಸಿಕ್ಕಿದ್ದರಿಂದ. Aphorism ಎಂದರೆ ಗಾದೆಮಾತು. ನಾಣ್ಣುಡಿ, ನೀತಿವಾಕ್ಯ, ನುಡಿಗಟ್ಟು ಅಂತ ಬೇಕಿದ್ದರೂ ಹೇಳಬಹುದು. ಸಾಮಾನ್ಯವಾಗಿ ಗಾದೆಗಳಿಗೆ, ನಾಣ್ಣುಡಿಗಳಿಗೆ ಮೂಲಕರ್ತೃ ಯಾರೆಂಬ ವಿವರಗಳಿರುವುದಿಲ್ಲ. ಹಾಗಾಗಿ ಇಲ್ಲಿ ನೀತಿವಾಕ್ಯಗಳು ಎಂದು ಅರ್ಥೈಸಿಕೊಳ್ಳುವುದು ಒಳ್ಳೆಯದು. ಅಷ್ಟಾಗಿ, ಅವ್ವೈಯಾರ್ ಎಂಬುದು ಈ ಕವಯಿತ್ರಿಯ ನಿಜವಾದ ಹೆಸರೇನಲ್ಲ, ಕಾವ್ಯನಾಮವೂ ಅಲ್ಲ. ತಮಿಳಿನಲ್ಲಿ 'ಗೌರವಾರ್ಹ ಒಳ್ಳೆಯ ಹೆಂಗಸು' ಎಂಬರ್ಥದಲ್ಲಿ ಜನರು ಈಕೆಯನ್ನು ಗುರುತಿಸಿದ ರೀತಿ ಅಷ್ಟೇ. ತಮಿಳು ವಾಙ್ಮಯದಲ್ಲಿ ಈಕೆಯಲ್ಲದೆ ಇನ್ನೂ ಇಬ್ಬರು ಅವ್ವೈಯಾರ್ ಎಂದು ಗುರುತಿಸಲ್ಪಟ್ಟವರಿದ್ದಾರಂತೆ. ಪುರಾಣಗಳಲ್ಲಿ, ಮುರುಗನ್‌ನಿಂದ 'ಬೆಂದ ಫಲ ಬೇಕೋ, ಬೇಯದ ಫಲ ಬೇಕೋ?' ಎಂದು ಪರೀಕ್ಷೆಗೊಳಗಾದ ಭಕ್ತೆಯೊಬ್ಬಳು ಮೊದಲನೆಯವಳು; ಕ್ರಿ.ಪೂ. 2ನೆಯ ಶತಮಾನದಿಂದ ಕ್ರಿ.ಶ. 1ನೆಯ ಶತಮಾನದವರೆಗಿನ ಅವಧಿಯಲ್ಲಿ ಜೀವಿಸಿದ್ದ ಸಂಗಮ ಕವಿಗಳ ಪೈಕಿಯವಳಿರಬೇಕೆಂದು ಪರಿಗಣಿಸಲಾದವಳು ಎರಡನೆಯವಳು. ಅವರಂತಲ್ಲದೆ ಈ ಮೂರನೆಯ ಅವ್ವೈಯಾರ್ ಕ್ರಿ.ಶ. 12ನೆಯ ಶತಮಾನದ ಚೋಳ ಸಾಮ್ರಾಜ್ಯ ಕಾಲದಲ್ಲಿ ಬದುಕಿದ್ದವಳು, ತಮಿಳಿನ ಪ್ರಖ್ಯಾತ ಕಂಬರಾಮಾಯಣವನ್ನು ಬರೆದ ಕಂಬನ್‌ನ ಸಮಕಾಲೀನಳು ಎಂದು ಹೇಳಲಾಗಿದೆ. ಈಕೆ ಊರೂರು ಅಲೆದಾಡುತ್ತ, ಅಲ್ಲಿಯ ಹಿರಿಕಿರಿಯರನ್ನೆಲ್ಲ ತನ್ನವರೆಂದೇ ತಿಳಿದು ಅವರಿಗೆ ಬದುಕಿನ ನೀತಿಗಳನ್ನು ಬೋಧಿಸುತ್ತ, ಅವರಲ್ಲಿ ಜೀವನೋತ್ಸಾಹ ತುಂಬುತ್ತ ಇದ್ದವಳು. ಅಂಥ ನೀತಿವಾಕ್ಯಗಳ ಸಂಗ್ರಹವೇ ಆತ್ತಿಚ್ಚೂಡಿ. ಅತ್ತಿಹೂವುಗಳ ಮಾಲೆ ಧರಿಸಿದವನು, ಪರಶಿವ ಎಂದು ಈ ಪದದ ಭಾವಾರ್ಥ.

ನಾನೋದಿದ ಇಂಗ್ಲಿಷ್ ಲೇಖನದಲ್ಲಿ ಆತ್ತಿಚ್ಚೂಡಿಯಿಂದ ಆಯ್ದ ನಾಲ್ಕಾರು ನೀತಿವಾಕ್ಯಗಳ ಇಂಗ್ಲಿಷ್ ಅನುವಾದ ಮತ್ತು ಪುರಾಣ ಕಥೆಗಳ ಉದಾಹರಣೆಗಳೊಂದಿಗೆ ವ್ಯಾಖ್ಯಾನವೂ ಇತ್ತು. ಆತ್ತಿಚ್ಚೂಡಿಯಲ್ಲಿ ಒಟ್ಟು 109 ನೀತಿವಾಕ್ಯಗಳಿವೆ, ಒಂದೊಂದೂ ಸಾರ್ವಕಾಲಿಕ ಮೌಲ್ಯವುಳ್ಳ ಆಣಿಮುತ್ತುಗಳೇ ಆಗಿವೆ ಎಂಬ ವಿವರಣೆಯೂ ಅದರಲ್ಲಿತ್ತು. ಆಮೇಲೆ ಅಂತರ್ಜಾಲದಲ್ಲಿ ಆತ್ತಿಚ್ಚೂಡಿ ಬಗ್ಗೆ ಹುಡುಕಿದಾಗ ಎಲ್ಲ 109 ನೀತಿವಾಕ್ಯಗಳ ತಮಿಳು ಮೂಲರೂಪ ಮತ್ತು ಅವುಗಳ ಇಂಗ್ಲಿಷ್ ಅನುವಾದವೂ ಸಿಕ್ಕಿತು. ಲೇಖನದಲ್ಲಿದ್ದ ಬಣ್ಣನೆಯಂತೆ ಪ್ರತಿಯೊಂದು ನೀತಿವಾಕ್ಯವೂ ಗಾಢ ಉಪದೇಶವುಳ್ಳದ್ದೂ, ವ್ಯಕ್ತಿತ್ವವಿಕಸನಕ್ಕೆ ಪೋಷಕಾಂಶ ಒದಗಿಸುವಂಥದ್ದೂ ಆಗಿರುವುದು ಹೌದೆಂದು ಮನದಟ್ಟಾಯಿತು. ಇವೆಲ್ಲಕ್ಕಿಂತ ನನಗಿದು ವಿಶೇಷ ಆಕರ್ಷಣೆಯಾಗಿ ಕಂಡಿದ್ದು ಈ 109 ನೀತಿವಾಕ್ಯಗಳು ತಮಿಳು ವರ್ಣಮಾಲೆಯ ಅಕ್ಷರಗಳಿಗೆ ಅನುಗುಣವಾಗಿ ಒಂಬತ್ತು ವರ್ಗಗಳಾಗಿ ವಿಂಗಡಣೆ ಆಗಿರುವುದು, ಮತ್ತು ಹಿಂದಿನ ಕಾಲದಲ್ಲಿ ಮಕ್ಕಳಿಗೆ ತಮಿಳು ವರ್ಣಮಾಲೆ ಕಲಿಸಲಿಕ್ಕೆ ಈ ಆತ್ತಿಚ್ಚೂಡಿ ನೀತಿವಾಕ್ಯಗಳನ್ನೇ ಬಳಸುತ್ತಿದ್ದರೆಂಬ ವಿಚಾರ. ಅಂದರೆ, ಕನ್ನಡದಲ್ಲಿ ನಾವು ಅ ಆ ಇ ಈ... ಅಕ್ಷರಕಲಿಕೆಗೆ ಅಗಸ ಆಟ ಇಲಿ ಈಶ ಉದಯ ಊಟ ಋಷಿ... ಎಂದು, ಅಥವಾ ಇಂಗ್ಲಿಷ್‌ನಲ್ಲಾದರೆ A for Apple, B for Boy, C for Cat... ಎಂದು ಪದಗಳನ್ನು ಬಳಸುತ್ತೇವಲ್ಲ, ಹಾಗೆ ತಮಿಳಿನಲ್ಲಿ ''ಅರನ್ಸೆಯವಿರುಮ್ಬು'', ''ಆರುವತುಸಿನಮ್'', ''ಇಯಲ್ವತುಕರವೇಲ್'', ''ಈವದುವಿಲಕ್ಕೇಲ್''... ಎಂದು ಆತ್ತಿಚ್ಚೂಡಿ ನೀತಿವಾಕ್ಯಗಳ ಬಳಕೆಯಿತ್ತಂತೆ!

ಅಕ್ಷರ ಕಲಿಯುವ ನಾಲ್ಕೈದು ವಯಸ್ಸಿನ ಮಕ್ಕಳಿಗೆ ಈ ನೀತಿವಾಕ್ಯಗಳು ಅಥವಾ ಪ್ರಕಾಂಡ ಪದಪುಂಜಗಳು ಅರ್ಥವಾಗುತ್ತವೆಯೇ? ಇಲ್ಲ. ಆ ಹಂತದಲ್ಲಿ ಅರ್ಥವಾಗಬೇಕೆಂಬುದು ಉದ್ದೇಶವೇ ಅಲ್ಲ. ಅಕ್ಷರವನ್ನು ಗುರುತಿಸಿ ನೆನಪಿಟ್ಟುಕೊಂಡರೆ ಸಾಕು. ಪದಪುಂಜವೇನಿದ್ದರೂ ಕಂಠಪಾಠ ಮಾಡಿಡಲಿಕ್ಕೆ. ಹಸಿಗೋಡೆಯಲ್ಲಿ ಹರಳು ನೆಟ್ಟಂತೆ ಅದು ಮಗುವಿನ ಮಿದುಳಿನಲ್ಲಿ ಅಚ್ಚೊತ್ತಿ ನಿಲ್ಲಬೇಕು. ಮುಂದೆ ಮಗು ದೊಡ್ಡವನಾಗಿ ಬೆಳೆದಾಗ ಆ ನೀತಿವಾಕ್ಯವು ಬದುಕಿಗೆ ದಾರಿದೀಪವಾಗಬೇಕು. ಸಜ್ಜನಿಕೆ, ಸಾಮರಸ್ಯ, ಸಾಧನೆ, ಸಂತೃಪ್ತಿಗಳುಳ್ಳ ಒಂದು ಅರ್ಥಪೂರ್ಣ ಜೀವನಕ್ಕೆ ಕೈಪಿಡಿಯಾಗಬೇಕು. ಎಂಥ ಚಂದದ ಏರ್ಪಾಡು ಅಲ್ಲವೇ? ಬಹುಶಃ ಜಗತ್ತಿನ ಬೇರಾವ ಭಾಷೆಯಲ್ಲೂ ಈ ರೀತಿಯ ಅಕ್ಷರಕಲಿಕೆ ಕ್ರಮ ಇಲ್ಲವೇನೋ. ಅಷ್ಟಾಗಿ, ಆ ನೀತಿವಾಕ್ಯಗಳೆಲ್ಲ ಬಂದಿರುವುದು ಒಬ್ಬ ಅಲೆಮಾರಿ ಹೆಂಗಸು ಅವ್ವೈಯಾರ್‌ಳಿಂದ. ನೀತಿವಾಕ್ಯಗಳ ಸಾರ್ವಕಾಲಿಕ ಮೌಲ್ಯದಿಂದಾಗಿ, ಮಕ್ಕಳಿಗೆ ಎಳವೆಯಲ್ಲೇ ಅಕ್ಷರಗಳೊಂದಿಗೆ ಪರೋಕ್ಷವಾಗಿ ಜೀವನಮೌಲ್ಯಗಳನ್ನೂ ಪರಿಚಯಿಸಿ ಕಲಿಸುವುದರಿಂದಾಗಿ ತಮಿಳರ ಪಾಲಿಗೆ ಅವ್ವೈಯಾರ್ ಅಜರಾಮರಳಾಗಿದ್ದಾಳೆ. ಚೆನ್ನೈಯಲ್ಲಿ ಮರೀನಾ ಬೀಚ್‌ನಲ್ಲಿ ಅವ್ವೈಯಾರ್‌ಳದೊಂದು ಪ್ರತಿಮೆಯೂ ಇದೆಯಂತೆ.

ಒಳ್ಳೆಯ ವಿಚಾರಗಳು ಎಲ್ಲಿಂದ ಬಂದರೇನು? ''ಆ ನೋ ಭದ್ರಾಃ ಕ್ರತವೋ ಯಂತು ವಿಶ್ವತಃ'' ಎಂದಿರುವ ಉದಾತ್ತ ಸಂಸ್ಕೃತಿ ನಮ್ಮದು. ಅಂದಮೇಲೆ ಪಕ್ಕದ ರಾಜ್ಯದವರ ಭಾಷೆಯ ಸಾಹಿತ್ಯದಿಂದ ಒಳ್ಳೆಯದನ್ನು ಹೆಕ್ಕಿಕೊಳ್ಳುವುದಕ್ಕೆ ನಮಗೆ ಮಡಿವಂತಿಕೆ ಅಥವಾ ಮುಜುಗರ ಬೇಡ. ನಮ್ಮದೇ ದೇಶದ ಇನ್ನೊಂದು ಭಾಷೆಯಲ್ಲಿರುವುದನ್ನು ಅರ್ಥ ಮಾಡಿಕೊಳ್ಳಲಿಕ್ಕೆ ಮಧ್ಯವರ್ತಿಯಾಗಿ ನಮಗೆ ಇಂಗ್ಲಿಷ್ ಬೇಕಾಗುತ್ತದೆನ್ನುವುದು ವಿಪರ್ಯಾಸವೇ ಹೌದಾದರೂ ಅದರ ಬಗ್ಗೆ ವ್ಯಥೆಯೂ ಬೇಡ. ಇಲ್ಲಿ ಭಾಷೆ ಮುಖ್ಯವಲ್ಲ, ಬೋಧನೆ ಮುಖ್ಯ. ಮಾಧ್ಯಮ ಮುಖ್ಯವಲ್ಲ, ಸಂದೇಶ ಮುಖ್ಯ. ಈ ನೀತಿವಾಕ್ಯಗಳನ್ನು ನಿತ್ಯ ಪಾಠವಾಗಿಸಿಕೊಂಡರೆ, ನಿಯಮಗಳಂತೆ ಕಟ್ಟುನಿಟ್ಟಾಗಿ ಪಾಲಿಸಿದರೆ ನಮಗೇ ಒಳ್ಳೆಯದಲ್ಲವೇ? ಏಕೆಂದರೆ ಮನುಷ್ಯನ ಮೂಲಭೂತ ಅಗತ್ಯಗಳಾದ ಆಹಾರ, ಬಟ್ಟೆ ಮತ್ತು ವಾಸಸ್ಥಳವನ್ನು ಪೂರೈಸಿಕೊಳ್ಳುವುದರ ಮಹತ್ತ್ವ; ಸಂಪತ್ತು, ಸಂತೋಷ, ಮತ್ತು ಧರ್ಮವನ್ನು ಎತ್ತಿಹಿಡಿಯುವ ಮೂಲಕ ಶಾಶ್ವತ ಶ್ರೇಷ್ಠತೆಯನ್ನು ಸಾಧಿಸುವುದರ ಮಹತ್ತ್ವ- ಎಲ್ಲವೂ ಇದೆ ಆತ್ತಿಚ್ಚೂಡಿಯಲ್ಲಿ! ಈ ಆಶಯದಿಂದ ಎಲ್ಲ 109 ನೀತಿವಾಕ್ಯಗಳ ಕನ್ನಡ ಅನುವಾದವನ್ನು ಇಂದಿನ ತೋರಣವಾಗಿಸಿದ್ದೇನೆ. ಕನ್ನಡದಲ್ಲಿ ಇವು ಈ ಮೊದಲೂ ಪ್ರಕಟವಾಗಿವೆಯೋ ಇಲ್ಲವೋ ಗೊತ್ತಿಲ್ಲ. ಆಗಿದ್ದರೂ ಮತ್ತೊಮ್ಮೆ ಒಪ್ಪಿ ಅಪ್ಪಿಕೊಳ್ಳುವುದಕ್ಕೆ ಅಡ್ಡಿಯೇನಿಲ್ಲ. ಅಂದಹಾಗೆ ಇಲ್ಲಿ ನಾನು ಕೊಡುತ್ತಿರುವುದು ಇಂಗ್ಲಿಷ್‌ನಿಂದ ಕನ್ನಡ ಅನುವಾದ. ವರ್ಣಮಾಲೆಯ ಅನುಕ್ರಮ ಆಯ್ದುಕೊಂಡಿರುವುದು ಮಾತ್ರ ಮೂಲ ತಮಿಳು ವಾಕ್ಯಗಳದು.

ಮೊದಲಿಗೆ ಸ್ವರಾಕ್ಷರಗಳ ಗುಂಪು 'ಉಯಿರ್ ವರುಕ್ಕಮ್'. ಇದರಲ್ಲಿ 'ಅ'ದಿಂದ 'ಅಃ'ವರೆಗೆ ಒಟ್ಟು ಹದಿಮೂರು ಅಕ್ಷರಗಳಿಗೆ ಹೊಂದಿಕೊಂಡ ಹದಿಮೂರು ನೀತಿವಾಕ್ಯಗಳು: 1. ಯಾವಾಗಲೂ ಧರ್ಮಮಾರ್ಗದಲ್ಲೇ ನಡೆ. 2. ಕೋಪವನ್ನು ನಿಯಂತ್ರಣದಲ್ಲಿಟ್ಟುಕೋ. 3. ಸಾಧ್ಯವಾದಾಗಲೆಲ್ಲ ಕೊಡುಗೈ ದಾನಿಯಾಗಿ ಇತರರಿಗೆ ನೆರವಾಗು. 4. ಇತರರ ಒಳ್ಳೆಯ ಕಾರ್ಯಗಳಿಗೆ ತಡೆಯಾಗಬೇಡ. 5. ಸಾಮರ್ಥ್ಯ-ಸಂಪತ್ತುಗಳ ಬಗ್ಗೆ ಜಂಭಪಡಬೇಡ. 6. ಭರವಸೆ ಮತ್ತು ಪ್ರೇರಣೆಯನ್ನು ಎಂದಿಗೂ ಕಳೆದುಕೊಳ್ಳಬೇಡ. 7. ಅಕ್ಷರಗಳಾಗಲೀ ಸಂಖ್ಯೆಗಳಾಗಲೀ ನಗಣ್ಯವೆಂದುಕೊಳ್ಳಬೇಡ. 8. ಭಿಕ್ಷೆ ಬೇಡುವ ಸ್ಥಿತಿ ತಂದುಕೊಳ್ಳಬೇಡ. 9. ಉಣ್ಣುವ ಮೊದಲು ಇತರರಿಗೂ ಹಂಚು. 10. ಬದಲಾಗುತ್ತಿರುವ ಜಗತ್ತಿನೊಡನೆ ಹೊಂದಿಕೋ. 11. ಕಲಿಕೆ ನಿರಂತರವೆಂದು ತಿಳಿ. 12. ಇತರರ ಬಗ್ಗೆ ಕೆಟ್ಟ ಮಾತಾಡಬೇಡ. 13. ಅಭಿವೃದ್ಧಿ ಅಥವಾ ಸರ್ಜನಶೀಲತೆಗೆ ಅಡ್ಡಿಯಾಗಬೇಡ.

ಎರಡನೆಯದು ವ್ಯಂಜನಗಳ 'ಉಯಿರ್ಮೆಯ್ ವರುಕ್ಕಮ್' ಗುಂಪು. ದೇವನಾಗರಿ ಅಥವಾ ಕನ್ನಡದಂತಲ್ಲದೆ ತಮಿಳಿನಲ್ಲಿ ಹತ್ತೇ ವರ್ಗೀಯ ವ್ಯಂಜನಗಳು (ಕ, ಙ, ಚ, ಞ, ಟ, ಣ, ತ, ನ, ಪ, ಮ) ಮತ್ತು ಎಂಟು ಅವರ್ಗೀಯ ವ್ಯಂಜನಗಳು. ಆದ್ದರಿಂದ ಈ ಗುಂಪಿನಲ್ಲಿ ಹದಿನೆಂಟು ನೀತಿವಾಕ್ಯಗಳು: 14. ನೋಡುವುದೊಂದು ಹೇಳುವುದೊಂದು ಮಾಡಬೇಡ. 15. ತಮಿಳಿನ ಙ ಅಕ್ಷರದಂತೆ ಬಾಗುವುದನ್ನು ಕಲಿ. 16. ಶನಿವಾರ ತಲೆಸ್ನಾನ ಮಾಡು. 17. ಮಾತು ಮೃದುಮಧುರವಾಗಿರಲಿ. 18. ಮನೆಯೊಳಗಿನ ಜೋಡಣೆ ಅಚ್ಚುಕಟ್ಟಾಗಿರಲಿ. 19. ಸಜ್ಜನರ ಸಂಗ ಬೆಳೆಸು. 20. ಹೆತ್ತವರ ರಕ್ಷಣೆ ಮಾಡು. 21. ಕೃತಜ್ಞನಾಗಿರಲು ಮರೆಯಬೇಡ. 22. ಕಾಲಮಾನಕ್ಕನುಗುಣವಾಗಿ ಉತ್ತಿಬಿತ್ತಿ ಬೆಳೆ. 23. ಪರರ ಆಸ್ತಿ ಕಸಿದುಕೊಳ್ಳಬೇಡ. 24. ಕೀಳು ಅಭಿರುಚಿಯ ಕೃತ್ಯಗಳಿಂದ ದೂರವಿರು. 25. ಸರ್ಪಗಳೊಡನೆ ಸರಸ ಬೇಡ. 26. ಹತ್ತಿಯ ಹಾಸಿಗೆಯ ಮೇಲೆ ಮಲಗು. 27. ಕಪಟ-ಕುತಂತ್ರ ಮಾಡದಿರು. 28. ಕೊಳಕು ಕೆಲಸಗಳನ್ನು ಮಾಡಬೇಡ. 29. ಎಳವೆಯಲ್ಲೇ ಸಾಧ್ಯವಿದ್ದಷ್ಟೂ ಕಲಿತುಕೋ. 30. ಕರ್ತವ್ಯಚ್ಯುತನಾಗಬೇಡ. 31. ಅತಿಯಾಗಿ ನಿದ್ದೆ ಮಾಡುವುದು ಅಸಹ್ಯಕರ.

ಮುಂದೆ ವ್ಯಂಜನಗಳ ಕಾಗುಣಿತಾಕ್ಷರ ವರ್ಗಗಳು. ಏಳು ಮುಖ್ಯ ವ್ಯಂಜನಗಳ ತಲಾ ಹನ್ನೊಂದು ಕಾಗುಣಿತಗಳ ನೀತಿವಾಕ್ಯಗಳು. ಕ-ಕಾ ವರ್ಗದಲ್ಲಿ ಮಾತ್ರ ಹನ್ನೆರಡು ಇವೆ: 32. ಇತರರನ್ನು ಹಳಿಯಬೇಡ. 33. ಧಾನ್ಯದ ಉಳಿತಾಯ ಉಪವಾಸಕ್ಕೆ ಸಮಾನ. 34. ಕಾಲಕ್ಕೆ ತಕ್ಕಂತೆ ಬದುಕು. 35. ಬಡತನ ನೀಗಿಸಲು ಯತ್ನಿಸು. 36. ಶೀಲ ಕಳೆದುಕೊಳ್ಳದಿರು. 37. ಸ್ನೇಹವನ್ನು ಬಿಡಬೇಡ. 38. ದ್ವೇಷವನ್ನು ಬಿಟ್ಟುಬಿಡು. 39. ಪ್ರಶ್ನೆ ಕೇಳಿ ಅರಿತುಕೋ. 40. ಯಾವುದಾದರೊಂದು ಕರಕುಶಲಕಲೆಯನ್ನು ಕಲಿತುಕೋ. 41. ಮೋಸ ಮಾಡಬೇಡ. 42. ನೋಯಿಸುವ ಆಟಗಳಲ್ಲಿ ಪಾಲ್ಗೊಳ್ಳಬೇಡ. 43. ಬೆನ್ನಹಿಂದೆ ಕೆಟ್ಟ ಮಾತಾಡುವುದನ್ನು ಬಿಡು.

ಚ-ಚಾ ವರ್ಗದ ಹನ್ನೊಂದು: 44. ನೀ ನಿಂತ ನೆಲದ ಕಾನೂನನ್ನು ಗೌರವಿಸು. 45. ಅರಿತವರೊಡನೆ ಒಡನಾಟ ಬೆಳೆಸು. 46. ಉತ್ಪ್ರೇಕ್ಷೆ ಮಾಡುವುದನ್ನು ನಿಲ್ಲಿಸು. 47. ಸದಾ ನೀತಿವಂತನಾಗಿರು. 48. ಇನ್ನೊಬ್ಬರ ಭಾವನೆಗಳನ್ನು ಘಾಸಿಗೊಳಿಸದಿರು. 49. ಜೂಜಾಡಬೇಡ. 50. ಅತ್ಯುತ್ತಮ ವರ್ತನೆ ಪ್ರದರ್ಶಿಸು. 51. ಒಳ್ಳೆಯ ಸ್ನೇಹಿತರನ್ನು ಹುಡುಕಿಕೋ. 52. ಅವಮಾನಿತನಾಗುವುದಕ್ಕೆ ಆಸ್ಪದ ಕೊಡಬೇಡ. 53. ಇನ್ನೊಬ್ಬರೊಡನೆ ಸಂಭಾಷಿಸುವಾಗ ಆಯಾಸ-ಅನಾಸಕ್ತಿ ತೋರದಿರು. 54. ಸೋಮಾರಿಯಾಗಿರಬೇಡ.

ತ-ತಾ ವರ್ಗದ ಹನ್ನೊಂದು: 55. ನಂಬಲರ್ಹವಾಗಿರು. 56. ನತದೃಷ್ಟರಿಗೆ ಕರುಣಾಮಯಿ ಆಗಿರು. 57. ತಿರುಮಲ ಸ್ವಾಮಿಯ ಸೇವಕನಾಗು. 58. ಪಾಪಕೃತ್ಯಗಳನ್ನು ಎಸಗಬೇಡ. 59. ಯಾತನೆಯನ್ನು ಸೆಳೆದುಕೊಳ್ಳಬೇಡ. 60. ಸದುದ್ದೇಶದ ಕೆಲಸಗಳನ್ನಷ್ಟೇ ಮಾಡು. 61. ದೈವವನ್ನು ಕಡೆಗಣಿಸಬೇಡ. 62. ದೇಶವಾಸಿಗಳೊಡನೆ ಒಗ್ಗಟ್ಟಿನಿಂದ ಬಾಳು. 63. ದುರುದ್ದೇಶಪೂರಿತ ಭಾಷಣಗಳಿಂದ ದೂರವಿರು. 64. ಚರಿತ್ರೆಯಿಂದ ಪಾಠ ಕಲಿ. 65. ಸೋಲು ಖಚಿತವಿದ್ದರೆ ಸ್ಪರ್ಧಿಸಬೇಡ.

ನ-ನಾ ವರ್ಗದವು: 66. ಪ್ರಯೋಜನಕಾರಿಯಾದದ್ದನ್ನು ಪಾಲಿಸು. 67. ರಾಷ್ಟ್ರಕ್ಕೆ ಸ್ವೀಕಾರಾರ್ಹವಾದದ್ದನ್ನು ಮಾಡು. 68. ಉತ್ತಮ ಸ್ಥಿತಿಯಿಂದ ಜಾರಿಕೊಳ್ಳಬೇಡ. 69. ಜಲಸಮಾಧಿಗೆ ಇಳಿಯಬೇಡ. 70. ತಿಂಡಿಪೋತನಾಗಬೇಡ. 71. ಒಳ್ಳೆಯ ಪುಸ್ತಕಗಳನ್ನು ಹೆಚ್ಚುಹೆಚ್ಚು ಓದು. 72. ಕೃಷಿಕಾರ್ಯದಲ್ಲಿ ತೊಡಗಿಸಿಕೋ. 73. ಯಾವಾಗಲೂ ಒಳ್ಳೆಯ ನಡತೆಯನ್ನು ತೋರಿಸು. 74. ವಿನಾಶಕೃತ್ಯಗಳಲ್ಲಿ ಕೈಜೋಡಿಸಬೇಡ. 75. ಅಶ್ಲೀಲತೆ ಬೇಡ. 76. ಅನಾರೋಗ್ಯಕರ ಜೀವನಶೈಲಿ ಅಳವಡಿಸಿಕೊಳ್ಳಬೇಡ.

ಪ-ಪಾ ವರ್ಗದ ಹನ್ನೊಂದು: 77. ಅಸಭ್ಯವಾದ ಮಾತಾಡಬೇಡ. 78. ದುಷ್ಟರಿಂದ ದೂರವಿರು. 79. ಸ್ವಯಂ ಅಪರಾಧದ ಬಗ್ಗೆ ಎಚ್ಚರದಿಂದಿರು. 80. ಗೌರವದ ಮಾರ್ಗವನ್ನು ಅನುಸರಿಸು. 81. ಉಪಕಾರಿಯನ್ನು ರಕ್ಷಿಸು. 82. ಬೇಸಾಯ ಮಾಡಿ ಉಣಿಸು ಮತ್ತು ಉಣ್ಣು. 83. ಅಗತ್ಯವಾದಾಗ ಹಿರಿಯರಿಂದ ಮತ್ತು ಬಲ್ಲವರಿಂದ ಸಹಾಯ ಪಡೆದುಕೋ. 84. ಅಜ್ಞಾನವನ್ನು ತೊಡೆದುಹಾಕು. 85. ಮೂರ್ಖರೊಡನೆ ಮೈತ್ರಿ ಬೇಡ. 86. ಸಂಪತ್ತನ್ನು ಉಳಿಸಿ ಬೆಳೆಸು. 87. ಕಾಲುಕೆರೆದು ಜಗಳಕ್ಕಿಳಿಯಬೇಡ.

ಮ-ಮಾ ವರ್ಗದವು: 88. ದೃಢತೆಯನ್ನು ಕಳೆದುಕೊಳ್ಳಬೇಡ. 89. ಶತ್ರುವನ್ನು ಒಳಸೇರಿಸಿಕೊಳ್ಳಬೇಡ. 90. ಯಾವುದನ್ನೂ ನಾಟಕೀಯವಾಗಿಸಬೇಡ. 91. ಹೊಟ್ಟೆಬಾಕ ಆಗಬೇಡ. 92. ನ್ಯಾಯಸಮ್ಮತವಲ್ಲದ ಜಗಳದಲ್ಲಿ ಮೂಗು ತೂರಿಸಬೇಡ. 93. ಹಠಮಾರಿತನವನ್ನು ಒಪ್ಪಬೇಡ. 94. ಆದರ್ಶ ಸತಿಯನ್ನು ತೊರೆಯಬೇಡ. 95. ಪುರಾಣಪುರುಷರ ಮಾತನ್ನಾಲಿಸು. 96. ಹೊಟ್ಟೆಕಿಚ್ಚಿನವರ ಬಳಿಯಿಂದ ಹೊರನಡೆ. 97. ಮಾತಿನಲ್ಲಿ ಸ್ಪಷ್ಟತೆಯಿರಲಿ. 98. ಕಾಮದ ಪ್ರಲೋಭನೆಗೆ ಒಳಗಾಗಬೇಡ.

ಕೊನೆಯಲ್ಲಿ ವ-ವಾ ವರ್ಗದವು ಹನ್ನೊಂದು: 99. ತನ್ನ ಬಣ್ಣಿಸಬೇಡ. 100. ವದಂತಿಗಳನ್ನು ಹರಡಬೇಡ. 101. ಹೊಸ ಕಲಿಕೆಗೆ ತೆರೆದುಕೋ. 102. ಶಾಂತಿಯುತ ಬಾಳ್ವೆಯನ್ನು ಧ್ಯೇಯವಾಗಿಸು. 103. ಮಾದರಿ ಜೀವನ ನಡೆಸು. 104. ಸೌಹಾರ್ದಯುತವಾಗಿ ಬದುಕು. 105. ನಡೆ-ನುಡಿಯಲ್ಲಿ ಕಠೋರತನ ಬೇಡ. 106. ಹಾನಿಯನ್ನು ಯೋಜಿಸಬೇಡ. 107. ಬೆಳಗ್ಗೆ ಬೇಗ ಏಳುವ ಅಭ್ಯಾಸವಿಟ್ಟುಕೋ. 108. ಶತ್ರುಪಾಳಯ ಸೇರಿಕೊಳ್ಳಬೇಡ. 109. ಯಾವುದೇ ನಿರ್ಣಯದಲ್ಲಿ ನಿಷ್ಪಕ್ಷಪಾತಿಯಾಗಿರು.

ತಮಿಳು ವರ್ಣಮಾಲೆ ಮತ್ತು ಭಾಷೆ ಕಲಿಕೆಯ ವಿಧಾನವಾಗಿ ಈ ಆತ್ತಿಚ್ಚೂಡಿ ನೀತಿವಾಕ್ಯಗಳ ಸೂಡಿಯನ್ನು ಗಮನಿಸಿದಾಗ ನನಗೊಂದು ವಿಚಾರ ನೆನಪಾಗುತ್ತಿದೆ. 'ಭಾಷೆ ಇಲ್ಲದವನು' ಎಂಬೊಂದು ಬೈಗುಳ ನಮ್ಮ ಕರಾವಳಿ ಪ್ರದೇಶದಲ್ಲಿ ಸಾಮಾನ್ಯವಾಗಿ ಬಳಕೆಯಾಗುತ್ತದೆ. ಎಲ್ಲ ಜೀವನಮೌಲ್ಯಗಳನ್ನು ಕಳೆದುಕೊಂಡವನು ಅಥವಾ ಗಾಳಿಗೆ ತೂರಿದವನು ಎಂಬರ್ಥದಲ್ಲಿ. ಯಾವುದೇ ಭಾಷೆಯನ್ನಾಗಲೀ ನಾವು ಕಲಿತುಕೊಳ್ಳುವುದೇ ನಮ್ಮ ವ್ಯಕ್ತಿತ್ವವನ್ನು ಬೆಳಗಿಸಲಿಕ್ಕೆ ಮತ್ತು ಬೆಳೆಸುವುದಕ್ಕೆ. ಅಂಥದರಲ್ಲಿ ಭಾಷೆ ಕಲಿಕೆಯ ಜತೆಜತೆಗೇ ಜೀವನಮೌಲ್ಯಗಳ ಕಲಿಕೆ ನಮಗೆ ನಿಜಕ್ಕೂ ಶ್ರೇಷ್ಠ ಸಂಸ್ಕಾರ ಒದಗಿಸಬಲ್ಲದು. ಕನ್ನಡದಲ್ಲಿ ತಮಿಳಿಗಿಂತ ಹೆಚ್ಚು ಅಕ್ಷರಗಳಿವೆ. ಇನ್ನಷ್ಟು ಜೀವನಮೌಲ್ಯಗಳನ್ನು ಉಪದೇಶಿಸುವ ವಾಕ್ಯರಚನೆ ಸಾಧ್ಯವಿದೆ. ಕನ್ನಡದಲ್ಲೂ ಯಾರಾದರೂ ಅವ್ವೈಯಾರ್ ಹುಟ್ಟಿಬಂದರೆ ಇಂಥದೊಂದು ಅಜರಾಮರ ಅಕ್ಷರಮಾಲೆ ಕಟ್ಟಬಹುದು!

ಅವ್ವೈಯಾರ್ ಬಗ್ಗೆ ಶೋಧಿಸಿದಾಗ ಮತ್ತೊಂದಿಷ್ಟು ವಿಚಾರಗಳೂ ತಿಳಿದುಬಂದವು. ಆತ್ತಿಚ್ಚೂಡಿ ಅಷ್ಟೇಅಲ್ಲದೆ ಕೊಂಡ್ರೈವೆಂಡನ್, ನಲ್ವಳಿ, ಮತ್ತು ಮೂಧುರೈ ಎಂಬ ಇನ್ನೂ ಮೂರು ಕಾವ್ಯಗಳನ್ನು ಅವ್ವೈಯಾರ್ ರಚಿಸಿದ್ದಾಳೆ. ಎಲ್ಲವೂ ನೀತಿಬೋಧೆ ರೀತಿಯವೇ. ಸಂಖ್ಯೆ ಇಷ್ಟೇ ಆದರೂ, ತಮಿಳು ಭಾಷೆಯ 2500 ವರ್ಷಗಳ ಇತಿಹಾಸದಲ್ಲಿ ಅತಿಪ್ರಮುಖ ಕವಯಿತ್ರಿ ಮತ್ತು ಹೆಚ್ಚು ಜನರಿಗೆ ಹೆಸರು ಕೇಳಿ ಗೊತ್ತಿರುವವಳು ಎಂಬ ಖ್ಯಾತಿ ಅವ್ವೈಯಾರ್‌ಗೆ ಇದೆ. ಹಳೆ ಕಾಲದ ತಮಿಳಿಗರಿಗೆ ಅವಳ ಕೃತಿಗಳು ಸುಭಾಷಿತಗಳಂತೆ, ಅಮರಕೋಶದಂತೆ ಕಂಠಪಾಠವೇ ಆಗಿವೆ. ಆದರೂ ಸೂಕ್ತ ಅನುವಾದಕರಿಲ್ಲದೆ ಅವ್ವೈಯಾರ್ ರಚನೆಗಳು ತಮಿಳೇತರರಿಗೆ ತಿಳಿದಿಲ್ಲ. ಚಕ್ರವರ್ತಿ ರಾಜಗೋಪಾಲಾಚಾರಿ ಅವರು 1971ರಲ್ಲಿ ಭಾರತೀಯ ವಿದ್ಯಾಭವನದ ಪ್ರಕಟಣೆಯಾಗಿ ಒಂದು ಇಂಗ್ಲಿಷ್ ತರ್ಜುಮೆಯನ್ನು ಹೊರತಂದಿದ್ದರಂತೆ. ಅದು ಮರುಮುದ್ರಣಗಳನ್ನು ಕಂಡಿದ್ದಿಲ್ಲ. ಅಲ್ಲದೇ ಆ ಅನುವಾದವೂ ಕಾವ್ಯಾತ್ಮಕವಾಗಿರದೆ ಪದಶಃ ಇಂಗ್ಲಿಷ್ ಭಾಷಾಂತರ ರೀತಿಯಲ್ಲಿ ಇತ್ತಂತೆ.

ಅಮೆರಿಕದ ಲೇಖಕ, ಅನುವಾದಕ ಥಾಮಸ್ ಹಿತೋಷಿ ಪ್ರುಯ್‌ಕ್ಸ್‌ಮಾ ಎಂಬಾತ ಫುಲ್‌ಬ್ರೈಟ್ ಸ್ಕಾಲರ್‌ಶಿಪ್ ಯೋಜನೆಯಡಿ ಭಾರತಕ್ಕೆ, ತಮಿಳುನಾಡಿನ ಮಧುರೈಗೆ ಹೋಗಿ ಅಲ್ಲಿ ದಿ ಅಮೆರಿಕನ್ ಕಾಲೇಜ್‌ನಲ್ಲಿ ಡಾ. ಕೆ.ವಿ.ರಾಮಕೋಟಿ ಎಂಬುವವರಲ್ಲಿ ತಮಿಳು ಭಾಷೆಯನ್ನೂ, ಸಾಹಿತ್ಯವನ್ನೂ ಕಲಿತನು; ಅವ್ವೈಯಾರ್‌ಳ ಆತ್ತಿಚ್ಚೂಡಿ ಮತ್ತಿತರ ಕೃತಿಗಳ ನವನೀತವನ್ನು ಸಂಗ್ರಹಿಸಿದನು. 2009ರಲ್ಲಿ ಲಾಸ್ ಏಂಜಲೀಸ್‌ನ ರೆಡ್ ಹೆನ್ ಪ್ರೆಸ್ ಪ್ರಕಾಶನದಿಂದ Give, Eat, and Live: Poems by Avviyar ಎಂಬ ಕೃತಿಯನ್ನು ಪ್ರಕಟಿಸಿದನು. ಇದು ಕಾವ್ಯಾತ್ಮಕ ಇಂಗ್ಲಿಷ್‌ನಲ್ಲಿದ್ದು ಅವ್ವೈಯಾರ್‌ಳ ಪ್ರತಿಭೆಯನ್ನೂ ಕಾವ್ಯಶಕ್ತಿಯನ್ನೂ ಸಮೃದ್ಧವಾಗಿ ಪ್ರದರ್ಶಿಸಿದೆ. 12ನೆಯ ಶತಮಾನದಲ್ಲಿ ರಚಿಸಿದ್ದು 21ನೆಯ ಶತಮಾನಕ್ಕೂ ಪ್ರಸ್ತುತವೇ ಆಗಿದೆಯೆಂದು ಸಾಬೀತುಪಡಿಸಿದೆ.

ಆದರೂ, ಕುದುರೆಯನ್ನು ನೀರಿನ ಬಳಿಗೆ ಕರೆದುಕೊಂಡು ಹೋಗಬಹುದಷ್ಟೇ ಹೊರತು ಅದು ನೀರು ಕುಡಿಯುವಂತೆ ಮಾಡಲಿಕ್ಕಾಗದು ಎಂಬ ಗಾದೆಯಂತೆ ಯಾವ ಅವ್ವೈಯಾರ್ ಯಾವ ಆತ್ತಿಚ್ಚೂಡಿ ಅಥವಾ ಯಾವ ಅನುವಾದಗಳೇ ಇದ್ದರೂ ಅಳವಡಿಸಿಕೊಳ್ಳುವಿಕೆ ಅವರವರಿಗೆ ಬಿಟ್ಟದ್ದು. ಏನಂತೀರಿ?

ಹೊಸಬಾಳೆಯವರು ಹೊಸದೇನನ್ನೂ ಹೇಳಿರಲಿಲ್ಲ...



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com
vinayakavbhat@autoaxle.com

ಯಾವುದೇ ದೇಶದ ಅಥವಾ ಅದರ ಒಂದು ಭಾಗದ ಭದ್ರತೆಗೆ ಯುದ್ಧ, ಬಾಹ್ಯದಾಳಿ ಅಥವಾ ಆಂತರಿಕ ಸಶಸ್ತ್ರ ದಂಗೆಯಿಂದ ಬೆದರಿಕೆ ಉಂಟಾದಾಗ ರಾಷ್ಟ್ರೀಯ ತುರ್ತು ಪರಿಸ್ಥಿತಿಯನ್ನು ಘೋಷಿಸುವುದು ವಾಡಿಕೆ. ನಮ್ಮ ದೇಶದಲ್ಲೂ ಇಂಥ ಪರಿಸ್ಥಿತಿ ತಲೆದೋರಿದಾಗ, ರಾಷ್ಟ್ರಪತಿಗಳು ವಿಧಿ 352ರ ಅಡಿಯಲ್ಲಿ ರಾಷ್ಟ್ರೀಯ ತುರ್ತು ಪರಿಸ್ಥಿತಿಯನ್ನು ಘೋಷಿಸಬಹುದಾಗಿದೆ. ಆದರೆ, ಅರ್ಧ ಶತಮಾನದ ಕೆಳಗೆ, ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರು ತುರ್ತುಪರಿಸ್ಥಿತಿಯನ್ನು ರಾಷ್ಟ್ರಪತಿಗಳ ಮೂಲಕ ಘೋಷಿಸುವಲ್ಲಿ ಸಫಲರಾದಾಗ, ಭಾರತದ ಯಾವುದೇ ಭಾಗದಲ್ಲಿ ಯುದ್ಧ, ಬಾಹ್ಯದಾಳಿ ಅಥವಾ ಆಂತರಿಕ ಸಶಸ್ತ್ರ ದಂಗೆ ಯಾವುದೂ ಇರಲಿಲ್ಲ. ಆದರೂ ವಾಮ ಮಾರ್ಗವನ್ನು ಬಳಸಿ ತುರ್ತು ಪರಿಸ್ಥಿತಿಯನ್ನು ಘೋಷಿಸುವಲ್ಲಿ ಅವರು ಸಫಲರಾಗಿದ್ದರು ಎನ್ನುವುದು ಈಗ ಇತಿಹಾಸ.

ಪ್ರತಿವರ್ಷ ಜೂನ್ 25 ಬಂತೆಂದರೆ, ದೇಶಾದ್ಯಂತ ತುರ್ತುಪರಿಸ್ಥಿತಿಯನ್ನು ಘೋಷಿಸಿದ ಕಾಂಗ್ರೆಸ್ಸಿನ ನಿರ್ಧಾರದ ಕುರಿತು ಚರ್ಚೆಗಳು ನಡೆಯುತ್ತಲೇ ಇರುತ್ತವೆ. ನಾಗರಿಕರ ಸಂವಿಧಾನ ಪ್ರದತ್ತವಾದ ಹಕ್ಕುಗಳನ್ನು ಕಸಿದುಕೊಂಡ ಈ ಕರಾಳ ಘಟನೆಗೆ 50 ವರ್ಷ ಸಂದ ಈ ಸಲ ಕೇಳಬೇಕೆ? ದೇಶದ ಎಲ್ಲ ಭಾಷೆಗಳ ಮಾಧ್ಯಮಗಳು ಸುಮಾರು ಒಂದು ತಿಂಗಳಿನಿಂದ ಈ ಘಟನೆಯ ಕುರಿತು ಪುಂಖಾನುಪುಂಖವಾಗಿ ಬರೆದವು. ನಮ್ಮ 'ವಿಶ್ವವಾಣಿ'ಯನ್ನೂ ಸೇರಿ ಎಲ್ಲ ಪತ್ರಿಕೆಗಳಲ್ಲಿ ನೂರಾರು ಲೇಖನಗಳು ಪ್ರಕಟವಾದವು. ದೃಶ್ಯ ಮಾಧ್ಯಮಗಳಂತೂ, ದಿನಬಿಟ್ಟು ದಿನ ವಿಶೇಷ ಕಾರ್ಯಕ್ರಮಗಳನ್ನು ಪ್ರಸಾರಮಾಡಿದವು. ತುರ್ತುಪರಿಸ್ಥಿತಿಯ ಕರಾಳ ದಿನಗಳನ್ನು ಕಂಡು ಅನುಭವಿಸಿದವರು, ತಮ್ಮ ಅನಿಸಿಕೆಗಳನ್ನು ಹಂಚಿಕೊಂಡು ಕಾಂಗ್ರೆಸ್ ಪಕ್ಷವನ್ನು ಹಾಗೂ ಅದರ ರೂವಾರಿಯಾಗಿದ್ದ ಇಂದಿರಾ ಗಾಂಧಿಯವರನ್ನು ವಿಧವಿಧವಾಗಿ ಹಳಿದರು. ತುರ್ತು ಪರಿಸ್ಥಿತಿಯ ಘೋಷಣೆಯ ವಿರುದ್ಧದ, ಇಂದಿರಾ ಗಾಂಧಿಯವರು ನಿರೀಕ್ಷಿಸಿರದಿದ್ದ, ಸಮಷ್ಟಿಯ ಹೋರಾಟ ಹಾಗೂ ಜನಾಂದೋಲನಗಳ ಕಾರಣದಿಂದ ಅದು ಅಂತ್ಯವಾಗಿ, ಮುಂದೆ 1977ರಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಸೋಲನ್ನು ಕಂಡಿತು. ಪರಿಣಾಮವಾಗಿ, ಭಾರತದಲ್ಲಿ ಪ್ರಜಾಪ್ರಭುತ್ವ ಪುನಃ ಸ್ಥಾಪನೆಯಾಗುವಂತಾಯ್ತು. ಅದಲ್ಲದಿದ್ದರೆ, ಸರ್ವಾಧಿಕಾರಿ ಆಡಳಿತ ಮುಂದುವರಿಯುತ್ತಿತ್ತು ಎಂದು ವಿಶ್ಲೇಷಣೆ ಮಾಡಲಾಯಿತು.

ಪ್ರತಿವರ್ಷ, 'ತುರ್ತುಪರಿಸ್ಥಿತಿ ಜಾರಿಯಾದ ದಿನ' ಬಂತೆಂದರೆ, ಈಗಿರುವ ಕಾಂಗ್ರೆಸ್ ಪಕ್ಷಕ್ಕೆ ಹಾಗೂ ಅದರ ನಾಯಕತ್ವಕ್ಕೆ ಗಂಟಲಿನಲ್ಲಿ ನೀರಿಳಿಯದಂತಾಗುತ್ತದೆ. ನಾಯಕರುಗಳು ಮುಖ ಹಿಂಡಿಕೊಂಡು ಓಡಾಡುವ ಹಾಗಾಗುತ್ತದೆ. ಅದು ಸ್ವಾಭಾವಿಕ ಕೂಡಾ ಬಿಡಿ. ಸಂವಿಧಾನದ ವಿಡಂಬನೆ ಮಾಡಿದ ತಮ್ಮ ಪಕ್ಷದ ಆ ನಿರ್ಧಾರವನ್ನು ಸಮರ್ಥನೆ ಮಾಡಿಕೊಳ್ಳುವ ಹಾಗೂ ಇಲ್ಲ, ವಿರೋಧಿಸಲಂತೂ ಸಾಧ್ಯವೇ ಇಲ್ಲ. ಬಿಸಿತುಪ್ಪವನ್ನು ಬಾಯಿಗೆ ಸುರಿದುಕೊಂಡವರ ಸ್ಥಿತಿ ಕಾಂಗ್ರೆಸ್ಸಿಗರದ್ದು; ಉಗುಳಲೂ ಆಗದು, ನುಂಗಿದರೆ ಗಂಟಲು ಸುಡುವುದಂತೂ ಗ್ಯಾರಂಟಿ. ತುರ್ತುಪರಿಸ್ಥಿತಿಯ ಘೋಷಣೆ, ದೆಹಲಿಯಲ್ಲಿ ನಡೆದ ಸಿಖ್ಖರ ಹತ್ಯಾಕಾಂಡ ಇವೆರಡು ಘಟನೆಗಳು, ಕಾಂಗ್ರೆಸ್ಸೆಂಬ ಪಕ್ಷ ಇರುವವರೆಗೂ ಬೆಂಬಿಡದ ಭೂತವಾಗಿ ಕಾಡುವುದರಲ್ಲಿ ಅನುಮಾನವಿಲ್ಲ. ಅದಕ್ಕೇ ಹೇಳುವುದು 'ಏಕಃ ಪಾಪಾನಿ ಕುರುತೇ ಫಲಂಭುಂಕ್ತೇ ಮಹಾ ಜನಾಃ' ಅಂತ. ಪಾಪಕಾರ್ಯವೆಸಗಿದವನು ಒಬ್ಬನಾದರೆ, ಅದರ ಫಲವನ್ನು ಎಲ್ಲರೂ ಉಣ್ಣಬೇಕಾಗಿಬರುತ್ತದೆ. ಒಬ್ಬ ಇಂದಿರಾ ಮಾಡಿದ ಕರ್ಮದಿಂದ, ಇಂದು ಮತ್ತು ಎಂದೆಂದೂ ಆ ಪಕ್ಷದ ಎಲ್ಲರೂ ತಲೆತಗ್ಗಿಸಿ ನಡೆಯಬೇಕಾಗಿದೆ.

ಪಾಪ, ಕಾಂಗ್ರೆಸ್ಸಿನ ಈಗಿನ ಅಥವಾ ಮುಂಬರುವ ನಾಯಕತ್ವದ ಪರಿಸ್ಥಿತಿ ನೋಡಿ! ಬಹುತೇಕ ನಾಯಕರು ತುರ್ತುಪರಿಸ್ಥಿತಿಯ ಆ ಸಮಯದಲ್ಲಿ ಇರಲೇ ಇಲ್ಲ (ಸ್ವತಃ ಮೇರು ನಾಯಕರಾದ ರಾಹುಲ್ ಗಾಂಧಿಯವರಿಗೆ ಆಗ ಆರೇಳು ವರ್ಷಗಳಾಗಿದ್ದವೇನೋ). ಮಲ್ಲಿಕಾರ್ಜುನ ಖರ್ಗೆ, ಜೈರಾಮ್ ರಮೇಶ್ ಮುಂತಾದ ಸ್ವಲ್ಪ ಜನವಿದ್ದರೂ, ಆ ಕೆಟ್ಟ ನಿರ್ಧಾರದಲ್ಲಿ ಅವರು ಪಾಲುದಾರರಾಗಿರಲಿಲ್ಲ. ಆದರೆ, ಇವರುಗಳು ಪಕ್ಷದಲ್ಲಿ ಇರುವವರೆಗೂ, ಹಾವೂ ಸಾಯದಂತೆ ಕೋಲೂ ಮುರಿಯದಂತೆ ನಯವಾಗಿ ಎಲ್ಲರಿಗೂ ಉತ್ತರ ಹೇಳಬೇಕು. ಈಗಾಗಿದ್ದೂ ಅದೇ ತಾನೆ? ಕಾಂಗ್ರೆಸ್ಸೆಂಬ ಪಕ್ಷ ಅಥವಾ ಒಬ್ಬ ವ್ಯಕ್ತಿ, ತನ್ನ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳಲು ಅಥವಾ ಭಾರತದ ರಾಜಕೀಯ ಬಾನಂಗಳದಲ್ಲಿ ತನ್ನ ಪ್ರಸ್ತುತಿಯನ್ನು ಉಳಿಸಿಕೊಳ್ಳಲು ಅಂದು ತೆಗೆದುಕೊಂಡ ಒಂದು ಕೆಟ್ಟ ನಿರ್ಧಾರದಿಂದ, ಇಡೀ ಪಕ್ಷ ಶಾಶ್ವತವಾಗಿ ತಲೆತಗ್ಗಿಸುವಂತಾಯ್ತು. ಆಡಳಿತ ಪಕ್ಷವಾದ ಬಿಜೆಪಿಯನ್ನು ಬಿಡಿ, ತಟಸ್ಥ ಮಾಧ್ಯಮಗಳು ಇಂದು, ತಿಂಗಳಾನುಗಟ್ಟಲೇ ದೇಶಾದ್ಯಂತ ಜನಾಭಿಪ್ರಾಯ ಮೂಡುವಂತೆ ಕಾಂಗ್ರೆಸ್ಸಿನ ಬಣ್ಣ ಬಯಲುಮಾಡುವ ಕಾರ್ಯಕ್ಕಿಳಿದರೆ, ಇನ್ನೇನು ಮುಳುಗುವ ಸ್ಥಿತಿಯಲ್ಲಿರುವ ಹಡಗಿನ ಮೇಲೆ ಸುನಾಮಿ ಪ್ರವಾಹವೇರಿ ಬಂದತಾಗುವುದಿಲ್ಲವೆ? ಹಾಗಾಗಿ, ಕಾಂಗ್ರೆಸ್ ನಾಯಕರ ಚಡಪಡಿಕೆ ಜನರಿಗೆ ಅರ್ಥವಾಗುವಂಥಾದ್ದೇ ಆಗಿದೆ. ಎಂದಿನಂತೆ, ಮಾಧ್ಯಮದವರನ್ನು ಬಯ್ಯಾಡುವಂತೆಯೂ ಇಲ್ಲ. ಸುಮ್ಮನಿರಲೂ ಸಾಧ್ಯವಿಲ್ಲ.

1975ರಲ್ಲಿ ಆಗಿನ ಪ್ರಧಾನಿ ಇಂದಿರಾ ಗಾಂಧಿಯವರ ಸರಕಾರ ಹೇರಿದ್ದ ತುರ್ತು ಪರಿಸ್ಥಿತಿಯ ದಿನವನ್ನು 'ಸಂವಿಧಾನ ಹತ್ಯಾ ದಿವಸ್' ಎಂಬ ಹೆಸರಿನಲ್ಲಿ ಆಚರಿಸಲಾಗುತ್ತಿದೆ. ತುರ್ತು ಪರಿಸ್ಥಿತಿ ವಿರೋಧಿ ಹೋರಾಟ ಮತ್ತು ಅದರಲ್ಲಿ ಭಾಗವಹಿಸಿದವರ ತ್ಯಾಗಗಳನ್ನು ಗೌರವಿಸಲು ಕೇಂದ್ರ ಸರಕಾರ ಈ ನಿರ್ಣಯವನ್ನು ಅಂಗೀಕರಿಸಿದೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಬಿಜೆಪಿಯ ಹಲವು ಹಿರಿಯ ನಾಯಕರುಗಳು, ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿದ್ದ ಕಾಂಗ್ರೆಸ್ ವಿರುದ್ಧ ವಿವಿಧ ವೇದಿಕೆಗಳಲ್ಲಿ ಹರಿಹಾಯ್ದಿದ್ದಾರೆ.

ಇದಕ್ಕೆ ಪ್ರತಿಯಾಗಿ ಸ್ವಾತಂತ್ರ್ಯ ಹೋರಾಟ ಅಥವಾ ಸಂವಿಧಾನ ರಚನೆಗೆ ಏನೂ ಕೊಡುಗೆ ನೀಡದವರು, ಈಗ ಅದನ್ನು ಸಮರ್ಥಿಸಿಕೊಳ್ಳುವುದಾಗಿ ಹೇಳಿಕೊಳ್ಳುತ್ತಿದ್ದಾರೆ. ದೇಶವು ಮರೆತುಹೋಗಿರುವ ಸಂಗತಿಯನ್ನು ಪದೇ ಪದೆ ಕೆದುಕುವ ಮೂಲಕ, ಅದನ್ನು ಒಂದು ಸಮಸ್ಯೆಯಾಗಿ ಜೀವಂತವಾಗಿಡಲು ಪ್ರಯತ್ನಿಸುತ್ತಿದ್ದಾರೆ ಎಂದು ಕಾಂಗ್ರೆಸ್ ಕೂಡ ಬಿಜೆಪಿಯ ಮತ್ತು ಅದರ ಸೈದ್ಧಾಂತಿಕ ಮಾರ್ಗದರ್ಶಕ ಸಂಘಟನೆ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್) ವಿರುದ್ಧ ತೀಕ್ಷ್ಣ ಪ್ರತಿಕ್ರಿಯೆಗಳನ್ನು ನೀಡಿದೆ. ''ಅವರು ಸಂವಿಧಾನವನ್ನು ಬದಲಾಯಿಸುವ ಮತ್ತು ದೇಶದಲ್ಲಿ ಮನುಸ್ಮೃತಿಯನ್ನು ಹೇರುವ ಮನಸ್ಥಿತಿಯನ್ನು ಹೊಂದಿದ್ದಾರೆ. ಐವತ್ತು ವರ್ಷಗಳ ಹಿಂದಿನ ಯಾವುದೋ ಘಟನೆಯನ್ನು ಹಿಡಿದುಕೊಂಡು ಬಿಜೆಪಿಯವರು ಹಾಗೂ ಸಂಘದವರು ಎಳೆದಾಡುತ್ತಿದ್ದಾರೆ. ಅದರಿಂದ ಆಗುವ ಸಾಧನೆಯಾದರೂ ಏನು? ಅವರಿಗೆ ಮಾಡಲು ಬೇರೆ ಏನೂ ಕೆಲಸವಿಲ್ಲ, ಹಾಗಾಗಿ ಈ ಕೆಲಸ ಮಾಡುತ್ತಿದ್ದಾರೆ'' ಎಂದು ಕಾಂಗ್ರೆಸ್ಸಿನ ಪಂಚಾಯತ್ ಮಟ್ಟದಿಂದ ಹಿಡಿದು ರಾಷ್ಟ್ರಮಟ್ಟದವರೆಗಿನ ನಾಯಕರುಗಳು ಮಾತಾಡುತ್ತಿದ್ದಾರೆ. ಇನ್ನು ಕೆಲವರು, ''ಈಗ ಮೋದಿಯವರ ಕಾಲದಲ್ಲಿ, ದೇಶದಲ್ಲಿ ತುರ್ತುಪರಿಸ್ಥಿತಿಗಿಂತ ಕೆಟ್ಟ ವಾತಾವರಣವಿದೆ, ಸಂವಿಧಾನ ಅಪಾಯದಲ್ಲಿದೆ'' ಎನ್ನುತ್ತಾ ಓಡಾಡುತ್ತಿದ್ದಾರೆ.

ಹೀಗೆ, ದೇಶಾದ್ಯಂತ ತುರ್ತುಪರಿಸ್ಥಿತಿಯ ವಿರುದ್ಧದ ಮನಸ್ಥಿತಿ ರೂಪುಗೊಳ್ಳುತ್ತಿರುವಾಗ, ಈ ನಕಾರಾತ್ಮಕ ಪ್ರಚಾರಕ್ಕೆ ವಿರುದ್ಧವಾಗಿ, ಏನು ಮಾಡುವುದೆಂದು ತೋಚದೇ ಕಾಂಗ್ರೆಸ್ ನಾಯಕತ್ವ ಚಿಂತಿಸುತ್ತಿರುವ ಹೊತ್ತಿನಲ್ಲಿ, ಆರೆಸ್ಸೆಸ್ ನಾಯಕ ದತ್ತಾತ್ರೇಯ ಹೊಸಬಾಳೆಯವರ ಭಾಷಣವೊಂದು, ಪ್ರವಾಹದಲ್ಲಿ ಮುಳುಗೇಳುತ್ತಿರುವವರಿಗೆ ಕಟ್ಟಿಗೆಯೊಂದು ಸಿಕ್ಕಹಾಗೆ ಒದಗಿತು. ಕಾಂಗ್ರೆಸ್ಸಿನ ಕೇಂದ್ರ ನಾಯಕತ್ವದಿಂದ ಹಿಡಿದು ಪಂಚಾಯತ್ ಮಟ್ಟದವರೆಗೆ ಎಲ್ಲ ನಾಯಕರೂ ದತ್ತಾತ್ರೇಯ ಹೊಸಬಾಳೆ, ಆರೆಸ್ಸೆಸ್ ಹಾಗೂ ಬಿಜೆಪಿಯ ಮೇಲೆ ಒಂದೇ ಸಮನೇ ಮುಗಿಬಿದ್ದು ಹೇಳಿಕೆಗಳನ್ನು ಕೊಡಲು ಶುರುಮಾಡಿದರು. ''ಹೊಸಬಾಳೆ ಅವರು ಒಬ್ಬ ಮನುಸ್ಮೃತಿಯ ವ್ಯಕ್ತಿ. ಬಡವರ್ಗದ ಜನರು ಏಳಿಗೆ ಹೊಂದುವುದು ಅವರಿಗೆ ಇಷ್ಟವಿಲ್ಲ. ಸಾವಿರ ವರ್ಷಗಳಿಗೂ ಹೆಚ್ಚು ಕಾಲ ಪಾಲಿಸಿಕೊಂಡು ಬಂದಿರುವುದನ್ನು ಅವರು ಇನ್ನೂ ಮುಂದುವರಿಸಲು ಬಯಸುತ್ತಿದ್ದಾರೆ. ಅದಕ್ಕಾಗಿಯೇ ಅವರು ಸಮಾಜವಾದ, ಜಾತ್ಯತೀತತೆ, ಧರ್ಮ ನಿರಪೇಕ್ಷ ಒಕ್ಕೂಟ ವ್ಯವಸ್ಥೆ, ಸ್ವಾತಂತ್ರ್ಯ, ಸಮಾನತೆ ಅಥವಾ ಭ್ರಾತೃತ್ವದಲ್ಲಿ ನಂಬಿಕೆ ಇಡುವುದಿಲ್ಲ. ಎಲ್ಲಾ ಮೌಲ್ಯಗಳನ್ನು ತಿರಸ್ಕರಿಸುತ್ತಾರೆ'' ಎಂದು ವಾಗ್ದಾಳಿ ನಡೆಸಿದರು.

ಹಾಗೆ ನೋಡಿದರೆ, ಹೊಸಬಾಳೆಯವರು ಹೊಸದಾಗಿ ಏನನ್ನೂ ಹೇಳಿರಲಿಲ್ಲ, ಇದ್ದ ವಿಷಯವನ್ನೇ ಪ್ರಸ್ತಾಪ ಮಾಡಿದ್ದರು. ''ಸಂವಿಧಾನದ ಪ್ರಸ್ತಾವನೆಯಲ್ಲಿರುವ ಸಮಾಜವಾದ ಮತ್ತು ಜಾತ್ಯತೀತ ಪದಗಳನ್ನು ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಸಂಸತ್ತಿನಲ್ಲಿ ಚರ್ಚೆಗೊಳಪಡಿಸದೇ ಒತ್ತಾಯವಾಗಿ ಸೇರಿಸಲಾಗಿದ್ದು, ಇವುಗಳ ಅಗತ್ಯತೆಯ ಬಗ್ಗೆ ದೇಶ ಇದೀಗ ಚರ್ಚೆ ನಡೆಸಬೇಕಿದೆ'' ಎಂದಷ್ಟೇ ಹೊಸಬಾಳೆಯವರು ಅಭಿಪ್ರಾಯಪಟ್ಟಿದ್ದರು. 'ತುರ್ತು ಪರಿಸ್ಥಿತಿಗೆ 50 ವರ್ಷ' ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ''ಸಂವಿಧಾನದ ಮೂಲ ಪೀಠಿಕೆಯ ಭಾಗವಾಗಿರದ ಹಾಗೂ ತುರ್ತು ಪರಿಸ್ಥಿತಿಯ ಸಂದರ್ಭವನ್ನು ಬಳಸಿಕೊಂಡು ಸೇರಿಸಲಾದ ಈ ಪದಗಳು ಅವಶ್ಯಕವೇ? ಎಂಬುದನ್ನು ಚರ್ಚೆಯ ಮೂಲಕ ದೇಶ ನಿರ್ಧರಿಸಲಿ'' ಎಂದು ಕರೆ ನೀಡಿದ್ದರು.

ತುರ್ತು ಪರಿಸ್ಥಿತಿಯ ದುರ್ಲಾಭ ಪಡೆದು, ಈ ಪದಗಳನ್ನು ದೇಶದ ಮೇಲೆ ಹೇರಿದ ಜನರೇ, ಇಂದು ಸಂವಿಧಾನದ ಪ್ರತಿಗಳೊಂದಿಗೆ ದೇಶ ಸುತ್ತುತ್ತಿದ್ದಾರೆ. ಸಂವಿಧಾನದ ಆಶಯಗಳನ್ನು ಗಾಳಿಗೆ ತೂರಿ ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿದ್ದಕ್ಕೆ ಅವರು ಇದುವರೆಗೂ ಭಾರತದ ಜನರಲ್ಲಿ ಕ್ಷಮೆ ಯಾಚಿಸಿಲ್ಲ ಎನ್ನುವುದು ಅವರ ಭಾಷಣದ ಸಾರಾಂಶವಾಗಿತ್ತು. ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನರನ್ನು ಜೈಲಿಗೆ ಹಾಕಲಾಗಿತ್ತು. ತುರ್ತು ಪರಿಸ್ಥಿತಿ ವಿರೋಧಿಸಿದ್ದ 250ಕ್ಕೂ ಹೆಚ್ಚು ಪತ್ರಕರ್ತರಿಗೆ ಜೈಲುಶಿಕ್ಷೆ ವಿಧಿಸಲಾಗಿತ್ತು. ಜನರಿಂದ ಮೂಲಭೂತ ಹಕ್ಕುಗಳನ್ನು ಕಸಿದುಕೊಂಡಿದ್ದ ಸರಕಾರ, 60 ಲಕ್ಷ ಭಾರತೀಯರನ್ನು ಒತ್ತಾಯಪೂರ್ವಕವಾಗಿ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಗೆ ಒಳಪಡಿಸಿತ್ತು. ನ್ಯಾಯಾಂಗದ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿ ಸರ್ವಾಧಿಕಾರಿಯಂತೆ ಮೆರೆದವರು ಈಗ 'ಸಂವಿಧಾನ ಅಪಾಯದಲ್ಲಿದೆ' ಎಂದು ಬೊಬ್ಬೆ ಹೊಡೆಯುತ್ತಿದ್ದಾರೆ ಎಂದು ಅವರು ಕಿಡಿಕಾರಿದ್ದರು. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಾದ ಇಷ್ಟೆಲ್ಲಾ ಅನಾಹುತಕ್ಕೆ, ಈಗ ಆ ಪಕ್ಷವನ್ನು ಮುನ್ನಡೆಸುತ್ತಿರುವವರು ನೇರವಾಗಿ ಹೊಣೆಗಾರರಲ್ಲವಾದರೂ, ಅವರ ಪೂರ್ವಜರು ಮಾಡಿದ ತಪ್ಪಿಗೆ ಕ್ಷಮೆಯನ್ನಾದರೂ ಕೇಳುವ ಸೌಜನ್ಯವನ್ನು ತೋರಬಹುದಾಗಿತ್ತು ಎನ್ನುವುದು ಹೊಸಬಾಳೆ ಅವರ ವಾದ.

ಈ ಮಾತನ್ನು ಹೊಸಬಾಳೆಯವರು ಹೇಳಿದ್ದಲ್ಲ, ಬಿಜೆಪಿಯವರು ಅವರ ಬಾಯಿಂದ ಹೇಳಿಸಿದ್ದಾರೆ ಎಂದು ಕಾಂಗ್ರೆಸ್ಸಿಗರು ಹೇಳುತ್ತಿದ್ದಾರೆ. ಇಷ್ಟುದಿನ ಆರೆಸ್ಸೆಸ್ ತನ್ನ ಮಾತನ್ನು ಬಿಜೆಪಿಯ ಮುಖಾಂತರ ಆಡಿಸುತ್ತಿದೆ ಎನ್ನುತ್ತಿದ್ದವರು, ಈಗ 'ಯು-ಟರ್ನ್' ಹೊಡೆದಿದ್ದಾರೆ. ಸಂಘಟನೆಯಲ್ಲಿ ಸರಸಂಘಚಾಲಕರನ್ನು ಬಿಟ್ಟರೆ ಎರಡನೇ ಸ್ಥಾನದಲ್ಲಿರುವ ಹೊಸಬಾಳೆಯವರು, ಬಿಜೆಪಿಯವರ ಆಣತಿಯಂತೆ ಕೆಲಸಮಾಡುತ್ತಿದ್ದಾರೆ ಅಥವಾ ಆರೆಸ್ಸೆಸ್ ಅಷ್ಟು ದುರ್ಬಲವಾಗಿದೆ ಎಂದು ನನಗಂತೂ ಅನಿಸುವುದಿಲ್ಲ. ಮುಂದಿನ ಸರಸಂಘಚಾಲಕರು ಎಂದು ಬಿಂಬಿಸಲ್ಪಡುವ ಅವರು, ಬಿಜೆಪಿಗೆ ಮಾರ್ಗದರ್ಶನ ಮಾಡುವ ಕ್ಷಮತೆಯನ್ನು ಇನ್ನೂ ಉಳಿಸಿಕೊಂಡಿದ್ದಾರೆ ಎನಿಸುತ್ತದೆ. ದೇಶದ ಭವಿಷ್ಯದ ಕುರಿತು ತಮ್ಮದೇ ಆದ ಅಭಿಪ್ರಾಯ ಹೊಂದುವ ಸಾಮರ್ಥ್ಯವನ್ನು ಹಾಗೂ ಸ್ವಾತಂತ್ರ್ಯವನ್ನು ಅವರು ಖಂಡಿತ ಹೊಂದಿಯೇ ಇದ್ದಾರೆ. ಅಷ್ಟಕ್ಕೂ, ಅವರು ಸುಳ್ಳನ್ನಂತೂ ಹೇಳಿಲ್ಲ, ಇರುವ ವಿಷಯವನ್ನೇ ಪುನಃ ಪ್ರತಿಪಾದಿಸಿದ್ದಾರೆ ಅಷ್ಟೇ.

ಕಾಂಗ್ರೆಸ್ ಪಕ್ಷಕ್ಕೆ, ಸಂವಿಧಾನದಲ್ಲಿ ಜಾತ್ಯತೀತ ಶಬ್ದ ಇರಬೇಕು. ಆದರೆ, ಜನಗಣತಿ ಮಾತ್ರ ಜಾತಿ ಆಧಾರದಲ್ಲೇ ಆಗಬೇಕು. ಹೇಳಿಕೊಳ್ಳಲು ಮಾತ್ರ ದೇಶವು 'ಧರ್ಮ ನಿರಪೇಕ್ಷ'ವಾಗಿರಬೇಕು. ಆದರೆ, ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ತಮಗೆ ಬೇಕಾದ ಕೆಲವು ಧರ್ಮಗಳಿಗೆ ಮೀಸಲಾತಿ ಸೌಲಭ್ಯ ನೀಡುವುದು ಅಪೇಕ್ಷಣೀಯವಾಗಬೇಕು. ಚುನಾವಣೆಯ ಸಂದರ್ಭದಲ್ಲಿ ರಾಹುಲ್ ಗಾಂಧಿಯವರು, ಮನುಸ್ಮೃತಿಯನ್ನು ಪಾಲಿಸುವ ಜನಿವಾರಧಾರಿ (ಜನೇವುಧಾರಿ) ಬ್ರಾಹ್ಮಣರಾಗಬೇಕು, ಅದಾದ ಮೇಲೆ ಮನುಸ್ಮೃತಿಯನ್ನು ತಿರಸ್ಕರಿಸಬೇಕು. ತಮಗೆ ಬೇಕಾದಾಗ ಬುದ್ಧ, ಬಸವ, ಅಂಬೇಡ್ಕರ್ ಹಾಗೂ ಗಾಂಧಿಯವರನ್ನು ಸ್ಮರಿಸಬೇಕು. ಆದರೆ, ಅವರ ತತ್ವಗಳನ್ನು ಅನುಷ್ಠಾನಕ್ಕೆ ತರುವಾಗ ಮಾತ್ರ, ಅದಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳಬೇಕು. ದೇಶದಲ್ಲಿ ಬೇರೆ ಪಕ್ಷ ಅಧಿಕಾರದಲ್ಲಿದ್ದಾಗ ಸಂವಿಧಾನ ನಿಂತ ನೀರಾಗೇ ಇರಬೇಕು. ಅದೇ, ತಾವು ಅಧಿಕಾರದಲ್ಲಿದ್ದಾಗ, ಅದೇ ಸಂವಿಧಾನದ ವಿಡಂಬನೆಮಾಡಿ, ಸ್ವಾರ್ಥಕ್ಕಾಗಿ ತುರ್ತುಪರಿಸ್ಥಿತಿಯನ್ನು ಹೇರುವುದೂ ಸೇರಿದಂತೆ ತಮಗೆ ಬೇಕಾದ ಬದಲಾವಣೆಗಳನ್ನು ತರಬಹುದು ಎಂದರೆ, ಇದು ಕಾಂಗ್ರೆಸ್ಸಿನ ವಿರೋಧಾಭಾಸದ ಹಾಗೂ ದ್ವಂದ್ವಮಯ ಧೋರಣೆಯಲ್ಲದೇ ಮತ್ತಿನ್ನೇನು?

ಹಾಗೊಮ್ಮೆ ಕಾಂಗ್ರೆಸ್ಸಿನ ನಾಯಕತ್ವ, ಐವತ್ತು ವರ್ಷಗಳ ಕೆಳಗಿನ ಪಕ್ಷದ ಅಥವಾ ಅದರ ಅಧಿನಾಯಕಿ ಇಂದಿರಾ ಅವರ ಈ ನಿರ್ಧಾರವನ್ನು ಕುರಿತು, 'ಅವರು ಯಾಕೆ ಆ ನಿರ್ಧಾರ ಮಾಡಿದರೋ ನಮಗೆ ತಿಳಿಯದು. ಆದರೆ, ಅದೊಂದು ತಪ್ಪು ನಿರ್ಧಾರವಾಗಿತ್ತು, ಅಂದು ಹಾಗಾಗಬಾರದಿತ್ತು ಎನ್ನುವುದು ನಮಗೂ ಮನವರಿಕೆಯಾಗಿದೆ' ಎಂದು ಒಪ್ಪಿಕೊಂಡು, ಜನರಲ್ಲಿ ಕ್ಷಮೆ ಕೇಳಿ ಮುಂದೆ ಸಾಗುವ ಧೈರ್ಯಮಾಡಿದ್ದರೆ, ಈ ಪಕ್ಷ ಇಂದಿರುವ ಪರಿಸ್ಥಿತಿಗಿಂತ ಉತ್ತಮ ಸ್ಥಿತಿಯಲ್ಲಿರುತ್ತಿತ್ತೇನೋ!

'ಅವಶ್ಯಮನುಭೋಕ್ತವ್ಯಂ ಕೃತಂಕರ್ಮ ಶುಭಾಶುಭಮ್' ಎಂಬ ಕರ್ಮಸಿದ್ಧಾಂತದ ಈ ಮಾತಿನಂತೆ, ಶುಭವಾಗಲಿ ಅಶುಭವಾಗಲಿ, ತಾವು ಮಾಡಿದ ಕರ್ಮದ ಫಲವನ್ನು ತಾವೇ ಅನುಭವಿಸಬೇಕು. ಕನ್ನಡದಲ್ಲಿ 'ಮಾಡಿದ್ದುಣ್ಣೋ ಮಾರಾಯಾ' ಎನ್ನುತ್ತಾರಲ್ಲಾ, ಹಾಗೆ....!

ಪ್ರಾಮಾಣಿಕ ಪ್ರಾರ್ಥನೆಗೆ ಪರವಶನಾಗನೇ ಪರಮಾತ್ಮ?



ರಸದೌತಣ
ಯಗಟಿ ರಘು ನಾಡಿಗ್
vveditoped@gmail.com
naadigru@gmail.com

ಹಸಿ ಕಡಲೇಕಾಯಿ ಮತ್ತು ಬೆಲ್ಲವನ್ನು ಮೆಲ್ಲುತ್ತಾ, ಆ ಬೆಳದಿಂಗಳ ರಾತ್ರಿಯಲ್ಲಿ ಮತ್ತೊಂದು ಜಾಗರಣೆ ಮಾಡುತ್ತಾ, ಹತಭಾಗ್ಯೆ ಶಾರದೆಯ ಕಥೆಯ ಮುಂದುವರಿದ ಭಾಗವನ್ನು ಅವಧೂತರ ಬಾಯಿಂದ ಕೇಳಬೇಕು ಎಂದು ಶಿಷ್ಯರು ಉತ್ಸುಕರಾಗಿದ್ದೇನೋ ಖರೆ. ಆದರೆ ಅವಧೂತರ ಆಪ್ತಸಹಾಯಕರು ನೀಡಿದ 'ಬ್ರೇಕಿಂಗ್ ನ್ಯೂಸ್' ಶಿಷ್ಯರನ್ನು ಮತ್ತಷ್ಟು ಕುತೂಹಲಕ್ಕೆ ದೂಡಿತು. ಅದರಲ್ಲೂ ನಿರ್ದಿಷ್ಟವಾಗಿ, ''ಶಾರದೆಗೆ ಒದಗಿದ ಸಂಕಷ್ಟಕ್ಕೆ ಕಾರಣರಾಗಿರಬಹುದಾದವರ ಪಟ್ಟಿಯಲ್ಲಿ ಈಗಾಗಲೇ ನಾಲ್ವರು ಮಹಾಪುರುಷರನ್ನು ಕಂಡಾಯಿತು. ಇವರ ಪೈಕಿ, ಕಥಾನಾಯಕಿ ಶಾರದೆಗೆ ಖಳನಾಯಕನಾಗಿ ಒದಗಿದ್ದು ಯಾರು? ಎಂಬುದನ್ನು ಮೊದಲು ನಮಗೆ ಹೇಳಿಬಿಡಿ. ನಂತರ ನೀವು ಕಥೆಯ ಒಂದೊಂದು ಹಂತವನ್ನೂ ಸವಿಸ್ತಾರವಾಗಿ ಹೇಳಿಕೊಂಡು ಹೋಗಿ'' ಎಂದು ತವಕಿಸಿ ಪ್ರಾರ್ಥಿಸಿದ್ದ ಹೊಸಶಿಷ್ಯರಂತೂ ಮತ್ತಷ್ಟು ಕದಲಿಕೆಗೆ ಒಳಗಾದರು. ಅದರ ಗುಂಗಿನಲ್ಲೇ ಅವರು, ''ಗುರುಗಳೇ... ಮಠದ ಸ್ವಾಮೀಜಿ, ಸಂಸ್ಥೆಯ ಮ್ಯಾನೇಜರ್, ರಾಜಕಾರಣಿ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ ಎಂಬ ತೊರೆಗಳು ಸೇರಿಕೊಂಡು ಈಗಾಗಲೇ ಮಹಾನದಿಯೇ ಆಗಿಬಿಟ್ಟಿರುವ ಕಥೆಗೆ, ಈಗ 'ನಳಪಾಕ' ಎಂಬ ಹೊಸದೊಂದು ಉಪನದಿ ಸೇರುವಂತಾಯಿತಲ್ಲಾ? ಆತ ಸಂಸ್ಥೆಯ ವಿದ್ಯಾರ್ಥಿ ನಿಲಯದ ಅಡುಗೆಯವನು ಎಂದು ನೀವು ಹೇಳಿ ನಿಗೂಢವಾಗಿ ನಕ್ಕುಬಿಟ್ಟಿರಿ. ಹೀಗೆಯೇ ದಿನಕ್ಕೊಂದು 'ಉಪನದಿ' ಸೇರುತ್ತಾ ಹೋದರೆ, 'ಉಪಕಥೆ'ಗಳ ಭಾರದಲ್ಲಿ ಶಾರದೆಯ ಮುಖ್ಯ ಕಥನ ಸೊರಗುವುದಿಲ್ಲವೇ? ಅವಳ ಬದುಕಿಗೆ ಖಳನಾಯಕನಾಗಿದ್ದು ಯಾರೆಂಬುದನ್ನು ಮೊದಲು ಹೇಳಿಬಿಡಿ ಗುರುಗಳೇ... ಸಂಸ್ಥೆಯ ಆವರಣದಲ್ಲಿ ತೂರಿಕೊಂಡಿರುವ ಆ 'ಕಳ್ಳಬೆಕ್ಕು' ಯಾವುದೆಂದು ಮೊದಲು ಗೊತ್ತಾಗಿಬಿಡಲಿ...'' ಎಂದು ಅಲವತ್ತುಕೊಂಡರು, ತಮಗಿದ್ದ ಸ್ವಾತಂತ್ರ್ಯವನ್ನು ಕೊಂಚ ಹೆಚ್ಚಾಗಿಯೇ ಬಳಸಿಕೊಂಡು..!

ಆಗ ಮನದುಂಬಿ ನಕ್ಕ ಅವಧೂತರು, ''ಅಯ್ಯಾ, ನಿಮ್ಮ ತವಕ ನನಗರ್ಥವಾಗುತ್ತೆ. ನಾನು ನನ್ನನ್ನೇನೂ 'ಪತ್ತೇದಾರ ಪುರುಷೋತ್ತಮ' ಅಂತಲೋ, 'ಷರ್ಲಾಕ್ ಹೋಮ್ಸ್' ಅಂತಲೋ ಭಾವಿಸಿಕೊಂಡಿಲ್ಲ. ಶಾರದೆಯ ಕಥನದಲ್ಲಿ ಉದ್ದೇಶಪೂರ್ವಕವಾಗಿ ಸಸ್ಪೆನ್ಸ್ ಅಂಶವನ್ನು ತೂರಿಸಬೇಕೆಂಬ ಇರಾದೆಯೂ ನನಗಿಲ್ಲ. ಆದರೆ, ಶಿವರಾತ್ರಿಯ ಜಾಗರಣೆಯ ತರುವಾಯದಲ್ಲಿ ಲೋಕಾಭಿರಾಮದ ಮಾತುಕತೆಯೊಂದಿಗೆ ಬಿಚ್ಚಿಕೊಂಡ ಈ ಕಥಾಸುರುಳಿಯಲ್ಲಿ ಶಾರದೆಯೇ ಕೇಂದ್ರಬಿಂದು ಎಂದು ನಾನು ಹೇಳುತ್ತಿದ್ದಂತೆ, ಅಲ್ಲಿಯವರೆಗೂ 'ಧರ್ಮಸೂಕ್ಷ್ಮ'ದ ನೆಲೆಯಲ್ಲೇ ಈ ಕಥೆಯನ್ನು ಗ್ರಹಿಸುತ್ತಿದ್ದ ನೀವು ಅಚಾನಕ್ಕಾಗಿ 'ಪತ್ತೇದಾರಿ' ಶೈಲಿಯಲ್ಲಿ ಅದನ್ನು ಮನಸ್ಸಿಗೆ ಇಳಿಸಿಕೊಳ್ಳುವಂತಾಯಿತಷ್ಟೇ. ಜತೆಗೆ, ನಾವು ಜಾಗರಣೆ ಮುಗಿಸಿ ಹೊರಡಲು ಸನ್ನದ್ಧರಾದಾಗ ಶಾರದೆಯು ಕಾರಿನ ಬಳಿ ಬಂದು ಕೃತಜ್ಞತಾಪೂರ್ವಕವಾಗಿ ನಮಗೆ ನಮಸ್ಕರಿಸಿದ್ದು, ಮಾರ್ಗಮಧ್ಯದಲ್ಲಿ ಮ್ಯಾನೇಜರ್ ಫೋನ್ ಮಾಡಿ ಅಲವತ್ತುಕೊಂಡಿದ್ದು, ನಂತರದಲ್ಲಿ ಮಠದ ಸ್ವಾಮೀಜಿ ನಮ್ಮನ್ನು ಹುಡುಕಿಕೊಂಡು ಮನೆಗೇ ಬಂದಿದ್ದು, ಸಾಲದೆಂಬಂತೆ ಅಂದು ರಾತ್ರಿ ಒಬ್ಬ ರಾಜಕಾರಣಿ ಹಾಗೂ ಸರ್ಕಲ್ ಇನ್ಸ್‌ಪೆಕ್ಟರ್ ನಮ್ಮ ಭೇಟಿಗೆ ಆಗಮಿಸಿ ಅವಕೃಪೆಗೆ ಪಾತ್ರರಾಗಿದ್ದು, ತರುವಾಯದಲ್ಲಿ ವಿದ್ಯಾರ್ಥಿ ನಿಲಯದ ಅಡುಗೆಯವನ ಫೋನ್ ಬಂದಿದ್ದು- ಹೀಗೆ ಸಮಾಜದ ವಿವಿಧ ಸ್ತರಗಳಿಗೆ ಸೇರಿದ ಪಾತ್ರಗಳು 'ಕಥೆಯ ಕಿಟಕಿ'ಯಲ್ಲಿ ಒಂದೊಂದಾಗಿ ಇಣುಕತೊಡಗಿದ್ದನ್ನು ಕಂಡು ನಿಮ್ಮ ಕೌತುಕ ಹೆಚ್ಚಾಯಿತೇನೋ?! ಆದರೆ, ಒಂದು ವಿಷಯವನ್ನು ಗಮನದಲ್ಲಿಟ್ಟುಕೊಳ್ಳಿ. ಆ ಸಂಸ್ಥೆಯ ಆವರಣದಲ್ಲಿ ಮಡುಗಟ್ಟಿದ್ದ 'ನಕಾರಾತ್ಮಕ ಛಾಯೆ'ಯನ್ನು ತೊಡೆದುಹಾಕುವ ಸಂಕಲ್ಪದ ಭಾಗವಾಗಿ ನಾನು ಮ್ಯಾನೇಜರ್‌ಗೆ 'ನಿಮ್ಮಲ್ಲೊಂದು ಕಳ್ಳಬೆಕ್ಕು ಸೇರಿಕೊಂಡಿದೆ; ಅದನ್ನು ಅಲ್ಲಿಂದ ತೊಲಗಿಸಿದರೆ ಒಳ್ಳೆಯದಾಗುತ್ತದೆ' ಎಂದು ಹೇಳಿದ್ದೆ. ಆದರೆ, 'ಕಳ್ಳಬೆಕ್ಕು' ಎಂಬುದನ್ನು ವಾಚ್ಯಾರ್ಥದಲ್ಲಿ ಗ್ರಹಿಸಿದ ಆ ಮ್ಯಾನೇಜರ್, ತಮ್ಮ ಕಸರತ್ತಿನಲ್ಲಿ ವಿಫಲರಾದರು. ಆಗ ನಾನು ಅಖಾಡಕ್ಕೆ ಇಳಿಯಬೇಕಾಗಿ ಬಂತು. ಈ ಕೆಲಸವನ್ನು ನಾನು ಮೊದಲೇ ಮಾಡಬಹುದಿತ್ತು. ಆದರೆ, 'ಈ ಸೃಷ್ಟಿಯಲ್ಲಿ ಯಾವ ಜೀವವೂ ಶ್ರೇಷ್ಠವಲ್ಲ, ನಿಕೃಷ್ಟವಲ್ಲ, ಎಲ್ಲವೂ ಸಮಾನ' ಎಂಬುದನ್ನು ಕೆಲವರಿಗೆ ಮನವರಿಕೆ ಮಾಡಿಕೊಡಬೇಕಿತ್ತು. 'ವಿದ್ಯೆಯ ಹಸಿವು' ಇದ್ದ ಕಾರಣ ಸಂಸ್ಥೆಯ ವಿದ್ಯಾರ್ಥಿ ನಿಲಯದಲ್ಲಿ ಆಸರೆ ಪಡೆದಿದ್ದ ಅಮಾಯಕಿ ಶಾರದೆಯನ್ನು, ಆಕೆಯ ಅಸಹಾಯಕತೆ, ಸಾಮಾಜಿಕ ಮತ್ತು ಆರ್ಥಿಕ ದುಸ್ಥಿತಿಯ ಹಿನ್ನೆಲೆಯಲ್ಲಿ 'ಸುಲಭದ ತುತ್ತು' ಎಂದೇ ಭಾವಿಸಿ, ಆಕೆಯಿಂದ ತಮ್ಮ 'ಕಾಮದ ಹಸಿವು' ನೀಗಿಸಿಕೊಳ್ಳಲು ತವಕಿಸಿದ ಮಹಾನುಭಾವರಿಗೆ ಅವರ ತಪ್ಪಿನ ಅರಿವು ಮೂಡಿಸಬೇಕಿತ್ತು. ಆತ್ಮಸಾಕ್ಷಿಗೆ ಮೋಸಮಾಡಿಕೊಂಡು, ಅವರ ಕಾಮವಾಂಛೆಯನ್ನು ಈಡೇರಿಸಲು ಸಿದ್ಧಳಿರದ ಶಾರದೆ ಮೌನವಾಗಿಯೇ ಪ್ರಲಾಪಿಸತೊಡಗಿದಳು. ಗುರು ಮತ್ತು ದೇವರಲ್ಲಿ ಅಸೀಮ ನಂಬಿಕೆಯಿಟ್ಟಿರುವ, ನೀತಿ-ನಿಜಾಯತಿಯ ಬೇಲಿ ಹಾರದೆ ತನ್ನ ಅಸ್ಮಿತೆ ಮತ್ತು ಅಸ್ತಿತ್ವವನ್ನು ಕಾಪಿಟ್ಟುಕೊಳ್ಳಲು ಹೆಣಗುವ ಜೀವವೊಂದು ಹೀಗೆ ಪ್ರಲಾಪಿಸಿದಾಗ, ಅದುವೇ ಗುರು ಮತ್ತು ದೇವರನ್ನು ತಲುಪುವ ಪ್ರಾರ್ಥನೆಯಾಗುತ್ತದೆ. ಹೃದಯಾಂತರಾಳದ ಇಂಥ ಪ್ರಾರ್ಥನೆಗೆ ಯಾವುದೇ ಧಾರ್ಮಿಕ ವಿಧಿ-ವಿಧಾನಗಳ, ಪೂಜೆ-ಪುನಸ್ಕಾರಗಳ ಹಂಗಿಲ್ಲ. ವ್ರತಾಚರಣೆಗಳ ನಿಯಮವಿಲ್ಲ. ಮಡಿಯುಟ್ಟು, ದಿನಪೂರ್ತಿ ಉಪವಾಸವಿದ್ದು, ಬಗೆಬಗೆಯ ಪೂಜಾದ್ರವ್ಯಗಳನ್ನು ಒಟ್ಟುಮಾಡಿ, ಬೇರೆಯವರ ಗಮನ ಸೆಳೆಯಲು 'ಶಬ್ದಾಡಂಬರ'ದ ಮಂತ್ರಗಳನ್ನು ಹೇಳಿಕೊಂಡೇ ಅದನ್ನು ಗುರು-ದೇವರಿಗೆ ತಲುಪಿಸಬೇಕು ಎಂದೇನಿಲ್ಲ. ಅದೊಂದು ತೆರನಾದ ಅಗೋಚರ ಸಂವಹನಾ ವ್ಯವಸ್ಥೆ. ಬೇಕಿದ್ದರೆ ನೀವು ಅದನ್ನು 'ವೈರ್‌ಲೆಸ್ ಮೆಸೇಜ್', 'ಟೆಲಿಪತಿ', 'ಆತ್ಮನಿವೇದನೆ', 'ಪರಮೋಚ್ಚ ಶಕ್ತಿಯೊಂದಿಗಿನ ಮೌನ ಸಂಭಾಷಣೆ' ಹೀಗೆ ಯಾವ ಹೆಸರಿನಿಂದ ಬೇಕಿದ್ದರೂ ಕರೆಯಬಹುದು. ಅಂಥ ಆರ್ತಜೀವದ ಪ್ರಾರ್ಥನೆಯು ನಿಜಕ್ಕೂ ಪ್ರಾಮಾಣಿಕವಾಗಿದ್ದರೆ, ನೈತಿಕತೆಯ ಭಂಡಾರವನ್ನೇ ತುಂಬಿಕೊಂಡಿದ್ದರೆ, ಯಾವ ಗುರು ಅಥವಾ ದೇವರನ್ನು ಉದ್ದೇಶಿಸಿ ಅದು ಸಲ್ಲಿಕೆಯಾಗಿರುತ್ತದೋ ಅಂಥ 'ಉದ್ದೇಶಿತ ದಿವ್ಯಶಕ್ತಿಗಳು' ಆ ಪ್ರಾರ್ಥನೆಗೆ ಓಗೊಡುತ್ತವೆ. ಇದರ ಪರಿಣಾಮವಾಗಿ, ಸಂತ್ರಸ್ತರ ಸಂಕಟ-ಸಂಕಷ್ಟಗಳಿಗೆ ಕಾರಣರಾದವರೆಲ್ಲಾ ಆ ಪ್ರಕರಣದಲ್ಲಿ 'ಸಾಕ್ಷ್ಯ ಹೇಳುವುದಕ್ಕೆ' ಬರಬೇಕಾಗುತ್ತದೆ ಎಂಬುದನ್ನು ನಿಮಗೆ ಪ್ರತ್ಯಕ್ಷವಾಗಿ ಮನವರಿಕೆ ಮಾಡಿಕೊಡುವುದಿತ್ತು. ಹತಭಾಗ್ಯೆ ಶಾರದೆಯ ಕಥನವನ್ನು ನಿಮ್ಮೊಂದಿಗೆ ನಾನು ಹೇಳಿಕೊಳ್ಳಲು ಶುರುವಿಟ್ಟುಕೊಂಡ ತರುವಾಯ, ಹೀಗೆ ಒಂದಾದ ಮೇಲೆ ಒಂದರಂತೆ ಬಂದವಲ್ಲಾ ಮ್ಯಾನೇಜರ್, ಸ್ವಾಮೀಜಿ, ರಾಜಕಾರಣಿ, ಸರ್ಕಲ್ ಇನ್ಸ್‌ಪೆಕ್ಟರ್ ಮುಂತಾದ ಪಾತ್ರಗಳು? ಇವರನ್ನೆಲ್ಲ ಕರೆಸಿದ್ದು ಆ ದೈವವೇ ನಿರ್ಮಿಸಿದ ಅಗೋಚರ ನ್ಯಾಯಾಲಯವೇ...'' ಎಂದು ಸುದೀರ್ಘ ವಿವರಣೆ ನೀಡಿ, ಅರ್ಧಹಿಡಿಯಷ್ಟು ಹಸಿ ಕಡಲೇಕಾಯಿಗೆ ಒಂದಷ್ಟು ಬೆಲ್ಲದ ತುಣುಕುಗಳನ್ನು ಬೆರೆಸಿ ಆಸ್ವಾದಿಸಿದರು...

ಭಾಗ-8

ಶಿಷ್ಯರೆಲ್ಲರೂ ಬಿಟ್ಟ ಕಣ್ಣು ಬಿಟ್ಟಂತೆಯೇ ನೋಡುತ್ತಿದ್ದರು. ಕಾರಣ, 'ಪತ್ತೇದಾರಿ' ಶೈಲಿಯಲ್ಲಿ ಸಾಗುತ್ತಿದ್ದ ಶಾರದೆಯ ಕಥನಕ್ಕೆ ಈಗ 'ಧರ್ಮಸೂಕ್ಷ್ಮ'ದ ತಿರುವು ಸಿಕ್ಕಿತ್ತು. ಜತೆಗೆ, ಅಧಿಕಾರದ ಅಮಲಿನಲ್ಲೋ, ಜೇಬಿನಲ್ಲಿ ಹಣದ ಕಂತೆ ಕುಣಿಯುತ್ತಿರುವ ಅಹಮ್ಮಿನಲ್ಲೋ, ಯೌವನದ ಮದದಲ್ಲೋ, ದೈಹಿಕವಾಗಿ ನಾನೇ ಬಲಶಾಲಿ ಎಂಬ ಹುಸಿಗತ್ತಿನಲ್ಲೋ ನಾವು ಮತ್ತೊಬ್ಬರಿಗೆ ನೀಡುವ ನೋವು, ಸಂಕಷ್ಟ, ದುಃಖ ಇತ್ಯಾದಿಗಳು ಸಾಕಷ್ಟು ಬಡ್ಡಿ-ಚಕ್ರಬಡ್ಡಿ ಸೇರಿಸಿಕೊಂಡು ನಮ್ಮೆಡೆಗೇ ಮರಳುತ್ತವೆ. ನಮ್ಮ 'ನವರಂಗಿ ನಾಟಕ'ವನ್ನು ಯಾರೂ ನೋಡುತ್ತಿಲ್ಲ ಎಂಬ ಭ್ರಮೆಯಲ್ಲೇ ಮೆರೆಯುವ ನಾವು, 'ಮೇಲೆ ಕೂತಿರುವವ' ಅದಕ್ಕೆ ಸಾಕ್ಷಿಯಾಗಿದ್ದಾನೆ ಎಂಬುದನ್ನೇ ಮರೆಯುತ್ತೇವೆ. ಮತ್ತೊಬ್ಬರಿಂದ ವಿನಾಕಾರಣ ನೋವಿಗೆ, ದುಃಖಕ್ಕೆ, ಸಂಕಷ್ಟಕ್ಕೆ, ಸಂಕಟಕ್ಕೆ, ಕಣ್ಣೀರಿಗೆ ಒಳಗಾದವರು ಪರಿಹಾರಕ್ಕೆಂದು ಈ ಬ್ರಹ್ಮಾಂಡದ ದಿವ್ಯಶಕ್ತಿಯಲ್ಲಿ ಆರ್ತರಾಗಿ ಮೊರೆಯಿಟ್ಟರೆ, ಮಾನವನಿರ್ಮಿತ ನ್ಯಾಯನೀಡಿಕೆಯ ವ್ಯವಸ್ಥೆಯಲ್ಲೂ ಕೆಲವೊಮ್ಮೆ ಸಿಗದ ಪರಿಹಾರವು 'ದೈವನಿರ್ಮಿತ' ಅಗೋಚರ ವ್ಯವಸ್ಥೆಯಲ್ಲಿ ಸಿಗುತ್ತದೆ. ಗುರುಗಳು, ಅವಧೂತರು ಎನಿಸಿಕೊಂಡವರು ಈ ನಿಟ್ಟಿನಲ್ಲಿ ಮಾರ್ಗದರ್ಶಕರಾಗುತ್ತಾರೆ ಎಂಬ ವಿಶಿಷ್ಟ ಅರಿವು ಆ ಶಿಷ್ಯರಲ್ಲಿ ಒಡಮೂಡತೊಡಗಿತು. ಇಂಥ ಅನನ್ಯ ಅನುಭೂತಿಯನ್ನು ತಮಗೆ ಪ್ರತ್ಯಕ್ಷವಾಗಿ ಕಟ್ಟಿಕೊಟ್ಟ ಅವಧೂತರಿಗೆ ಶಿಷ್ಯರೆಲ್ಲರೂ ಮನದಲ್ಲೇ ನಮಿಸಿದರು...

ಶಿಷ್ಯರು ಕಟ್ಟಿಕೊಂಡಿದ್ದ ಮೌನಕೋಟೆಯನ್ನು ಮುರಿಯುವವರಂತೆ ಅವಧೂತರು, ''ಏನ್ರಯ್ಯಾ, ಕಥೆ ಮುಂದುವರಿಸಿ ಅಂತ ಇಷ್ಟೂ ಹೊತ್ತು ಪೀಡಿಸುತ್ತಿದ್ದವರು ಈಗ ಸುಮ್ಮನಾಗಿಬಿಟ್ಟರಲ್ಲಾ? ಯಾರಾದರೊಬ್ಬರು ಕಥೆ ಹೇಳುವಾಗ, ಕೇಳುವವರು 'ಹೂಂ... ಹೂಂ' ಅಂತ 'ಹೂಂ'ಗುಟ್ಟುತ್ತಿರಬೇಕು, ಇಲ್ಲವೇ 'ಆಮೇಲೆ... ಆಮೇಲೆ..?' ಅಂತ ಕೇಳುತ್ತಿರಬೇಕು ಎಂಬುದನ್ನು ಮರೆತೇಬಿಟ್ಟಿರಾ?'' ಎಂದು ತಮಾಷೆ ಮಾಡಿದರು. ಅದೇ ಅವಧೂತರ ವೈಶಿಷ್ಟ್ಯ. ಪಾರಮಾರ್ಥಿಕತೆ, ಲೌಕಿಕತೆ, ವ್ಯಾವಹಾರಿಕ ಜೀವನ, ಪ್ರಾಯೋಗಿಕ ಸಿದ್ಧಾಂತ, ವಾಕ್ ಸ್ವಾತಂತ್ರ್ಯ, ಎಲ್ಲವನ್ನೂ ಪ್ರಶ್ನಿಸಿಯೇ ಒಪ್ಪಿಕೊಳ್ಳುವಿಕೆ- ಹೀಗೆ ಜೀವಿಯೊಂದರ ಬದುಕನ್ನು ಆವರಿಸುವ ವಿವಿಧ ಆಯಾಮಗಳು, ವಿಚಾರಗಳು ಅಥವಾ ಸ್ಥಿತಿಗಳ ಪೈಕಿ ಮಹತ್ತರವಾಗಿರುವಂಥದ್ದನ್ನು ಹೆಕ್ಕಿ ತೆಗೆದು 'ರಸಪಾಕ' ಮಾಡಿ ಶಿಷ್ಯರಿಗೆ ಉಣಬಡಿಸುವುದು ಅವರ ಕೌಶಲವಾಗಿತ್ತು. ಅದು ದಶಕಗಳವರೆಗೆ ಅವರು ಕೈಗೊಂಡ ಸಾಧನೆ, ತಪಸ್ಸು, ಅದರಿಂದ ದಕ್ಕಿದ 'ಅನುಭವ' ಮತ್ತು 'ಅನುಭಾವ'ಗಳ ಫಲಶ್ರುತಿಯಾಗಿತ್ತು ಎನ್ನಲಡ್ಡಿಯಿಲ್ಲ.

ಅವಧೂತರೇ ಮಾತಿಗೆ ಉತ್ತೇಜಿಸಿದ್ದರಿಂದ ಹೊಸ ಶಿಷ್ಯರೊಬ್ಬರು, ''ಗುರುಗಳೇ, ಶಾರದೆಗೆ ಒದಗಿದ ಸಂಕಷ್ಟಕ್ಕೆ ನೀವು ಉಲ್ಲೇಖಿಸಿದ ನಾಲ್ಕೂ ಮಹನೀಯರು ಕಾರಣರೇ? ಅಂದರೆ ಕುಕೃತ್ಯದಲ್ಲಿ ಅವರೆಲ್ಲರೂ ಪಾಲುದಾರರು ಎಂಬುದು ನಿಮ್ಮ ಮಾತಿನ ಅರ್ಥವೇ? ಶಾರದೆಯ ಕಥನದ ಗಾಳಿಪಟಕ್ಕೆ ಬಾಲಂಗೋಚಿಯಂತೆ ಹೊಸದಾಗಿ ಸೇರಿಕೊಂಡ ವಿದ್ಯಾರ್ಥಿ ನಿಲಯದ ಅಡುಗೆಯವ 'ನಳಪಾಕ'ನ ಪಾತ್ರವೂ ಈ ಕುಕೃತ್ಯದಲ್ಲಿ ಇದೆಯೇ? ಅವನು ನಿಮಗೆ ಕರೆಮಾಡಿದ್ದೇಕೆ? 'ಅವನಿಗೆ ನಾಳೆ ಸಂಜೆ ಫೋನು ಮಾಡುವಂತೆ ತಿಳಿಸಿ ಸ್ವಾಮೀ' ಅಂತ ನೀವು ನಿಮ್ಮ ಆಪ್ತ ಸಹಾಯಕರಿಗೆ ಸೂಚಿಸಿದ್ದೇಕೆ?'' ಎಂದು ಪ್ರಶ್ನೆಯ ಸುರಿಮಳೆಯನ್ನೇ ಸುರಿಸಿದರು.

ಈ ಮಾತಿಗೆ ಅವಧೂತರು, ''ಶಾರದೆಯ ಸಂಕಟ ತೀವ್ರವಾಗುವುದಕ್ಕೆ ಆ 'ನಳಪಾಕ'ನೇ ಮುಖ್ಯಕಾರಣ. ಅದರ ಬಿಸಿ ತಾಕಿದ್ದರಿಂದಲೇ ಹಾಗೆ ರಾತ್ರಿಯಲ್ಲಿ ಆತ ಕರೆಮಾಡಿದ. ಅವನ ಕುರಿತು ನಾಳೆ ತಿಳಿಯುವಿರಂತೆ'' ಎಂದರು.

ಆಗ ಮಗುವಿನಂತೆ ರಚ್ಚೆಹಿಡಿದ ಆ ಶಿಷ್ಯರು, ''ಕಥೆ ಕೇಳುತ್ತಾ ಬೆಳದಿಂಗಳ ರಾತ್ರಿಯಲ್ಲಿ ಜಾಗರಣೆ ಮಾಡೋಣ ಅಂದಿದ್ರಿ... ಕೆಲ ಹೊತ್ತಿನ ಮುಂಚೆ 'ಹರಿಕಥಾ ವಿದ್ವಾನ್' ಆಗಿದ್ದವರು, ಈಗ ಮತ್ತೆ 'ಷರ್ಲಾಕ್ ಹೋಮ್ಸ್' ಆಗಿಬಿಟ್ಟಿರಲ್ಲಾ ಗುರುಗಳೇ'' ಎಂದು ಹುಸಿಮುನಿಸು ತೋರಿದಾಗ ಅವಧೂತರು, ''ಅಯ್ಯಾ, ಈಗಾಗಲೇ ರಾತ್ರಿ 12 ಗಂಟೆಯಾಯಿತು. ನೀವೆಲ್ಲಾ ಬೆಳಗ್ಗೆ ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು ಸಾಧನೆ ಮಾಡಬೇಕಲ್ಲವೇ? ಲೌಕಿಕದ ಕಥೆಯ ಗುಂಗಿನಲ್ಲಿ ಪರಮಾರ್ಥವನ್ನು ಮರೆತರೆ ಹೇಗೆ ದೊರೆ...?'' ಎನ್ನುತ್ತಾ ಅಕ್ಷರಶಃ ಮಗುವನ್ನು ಸಮಾಧಾನಿಸುವಂತೆ ತಲೆ ನೇವರಿಸಿದರು. ಆ ಶಿಷ್ಯರ ಕಂಗಳು ನೀರಾಡಿದವು...

(ಮುಂದುವರಿಯುವುದು)

ಡಿಕ್ಷನರಿ = ಅರ್ಥಶಾಸ್ತ್ರ

ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

ರಾಜೇಂದ್ರಸಿಂಗ್ ಬಾಬು ಹೊಸ ಸಿನಿಮಾ ನಿರ್ದೇಶನ ಮಾಡುತ್ತಿದ್ದಾರೆ ಅನ್ನೋ ಮಾತಿಗೆ ದಶಕಗಳ ಹಿಂದೆ ಚಿತ್ರಪ್ರೇಮಿಗಳನ್ನು ರೋಮಾಂಚನಗೊಳಿಸುವ ತಾಕತ್ತು ಇತ್ತು. ಆದರೆ ಈಗ ಅದೇ ಮಾತು ಹೇಳಿದರೆ, 'ನಿರ್ದೇಶನ ಮಾಡ್ತಾರೆ, ಆದ್ರೆ ನಿಜವಾಗ್ಲೂ ಮಾಡ್ತಾರಾ, ಮಾಡಿದ್ರೆ ಕಂಪ್ಲೀಟ್ ಮಾಡ್ತಾರಾ, ಮಾಡಿದ್ರೆ ರಿಲೀಸ್ ಮಾಡ್ತಾರಾ?' ಅನ್ನೋ ಪ್ರಶ್ನೆ ಬಂದರೆ ತಪ್ಪಿಲ್ಲ. ಯಾಕಂದ್ರೆ, ಸಿಂಗ್ ಬಾಬು ಅಭಿಮಾನಿಗಳಿಗೆ ಇತ್ತೀಚಿನ ವರ್ಷಗಳಲ್ಲಿ ಖುಷಿಪಡುವ ಅವಕಾಶವನ್ನೇ ಕೊಟ್ಟಿಲ್ಲ. ಕುರಿ, ಕೋತಿ, ಕತ್ತೆಗಳ ನಂತರ ಸಿಂಗ್ ಬಾಬು ಅವರಿಗೆ ಪ್ರೇಕ್ಷಕರ ನಿರೀಕ್ಷೆಯನ್ನು ತಲುಪಲಾಗಿಲ್ಲ. ತಮ್ಮ ಪುತ್ರ ಆದಿತ್ಯ ಅವರೊಂದಿಗೆ ಒಂದಷ್ಟು ಪ್ರಯತ್ನ ಮಾಡಿದರೂ ಅದಾವುದೂ ಕೈಹಿಡಿಯಲಿಲ್ಲ. ಜತೆಗೆ ಉಪೇಂದ್ರ ಮತ್ತು ರಮ್ಯಾ ಅವರಿದ್ದ 'ಭೀಮೂಸ್ ಬ್ಯಾಂಗ್ ಬ್ಯಾಂಗ್ ಕಿಡ್ಸ್' ಅನ್ನೋ ಸಿನಿಮಾ ಮುಗಿದಿದ್ದರೂ, ಬಿಡುಗಡೆ ಮಾಡಿದ್ರೆ ಲಾಸ್ ಆಗುತ್ತೆ ಅನ್ನೋ ವಿಚಿತ್ರ ಕಾರಣಕ್ಕೆ ಡಬ್ಬಾ ಸೇರಿಕೊಂಡಿದೆ. ಜತೆಗೆ ಇತ್ತೀಚಿನ ದಿನಗಳಲ್ಲಿ ಅಂದಿನ ಕಾಲದ ಸಿಂಗ್ ಬಾಬು ಅವರ ನಿರ್ದೇಶನದ ಝಲಕ್ ಸಿನಿಪ್ರಿಯರಿಗೆ ಕಾಣಿಸುತ್ತಿಲ್ಲ. ಹಾಗಂತ ಬಾಬು ಡಲ್ ಆಗಿದ್ದಾರೆ ಎಂದರ್ಥ ಅಲ್ಲ. ಆದರೆ ಅವರ ಕಾನ್ಸೆಪ್ಟ್‌ಗಳು ಇಂದಿನ ಪೀಳಿಗೆಯ ಚಿತ್ರಗಳಿಗೆ ಮ್ಯಾಚ್ ಆಗುತ್ತಿಲ್ಲ. ಸುನಿಲ್ ಕುಮಾರ್ ದೇಸಾಯಿ ಸೇರಿದಂತೆ ಅನೇಕ ಹಿರಿಯ ನಿರ್ದೇಶಕರು ಎದುರಿಸುತ್ತಿರೋ ಸವಾಲು ಇದು. ಇಂಥ ಸಂದರ್ಭದಲ್ಲಿ ಈಗ ಸಿಂಗ್ ಬಾಬು ಮತ್ತೊಂದು ಸಿನಿಮಾ ಮಾಡುತ್ತಿದ್ದಾರೆ ಅನ್ನೋ ಸುದ್ದಿ ಬಂದಿತ್ತು. ಆದರೆ ಈ ಸುದ್ದಿಗೆ ತೂಕ ಬಂದಿದ್ದು ಸಿನಿಮಾದ ಹೆಸರು 'ಬಂಧನ 2' ಅನ್ನೋ ಕಾರಣಕ್ಕಾಗಿ. ತಮ್ಮ ಯಶಸ್ವಿ ಚಿತ್ರ 'ಬಂಧನ'ದ ಮುಂದುವರಿದ ಭಾಗವನ್ನು ಸಿಂಗ್ ಬಾಬು ನಿರ್ದೇಶನ ಮಾಡುತ್ತಿದ್ದಾರೆ ಅನ್ನೋ ಮಾತು ಕೇಳಿ ಎಲ್ಲರೂ ರೋಮಾಂಚಿತರಾಗಿದ್ದರು. ಆದರೆ ಅದೇ ಸಮಯದಲ್ಲಿ ಈ ಚಿತ್ರದ ನಾಯಕ ನಟ ಆದಿತ್ಯ ಅನ್ನೋ ಮಾತು ಕೇಳಿ ಖುಷಿ ಪಡಬೇಕಾ ಬೇಡ್ವಾ ಅಂತ ಗೊಂದಲದಲ್ಲಿದ್ದರು- 'ಇಂಥ ಸಿನಿಮಾ ಮಾಸ್ ಇಮೇಜ್ ಇರೋ ಆದಿತ್ಯ ಅವರಿಗೆ ಸೂಟ್ ಆಗುತ್ತಾ?' ಅಂತ. ಮೂಲಗಳ ಪ್ರಕಾರ ಈ ಚಿತ್ರದಲ್ಲಿ ಸುಹಾಸಿನಿ, ಜೈಜಗದೀಶ್ ಇರುತ್ತಾರೆ ಎನ್ನಲಾಗಿತ್ತು. ಆದರೆ ಈ ಚಿತ್ರದ ಬಗ್ಗೆ ಈಗ ಮಾತೇ ಇಲ್ಲ. ಚಿತ್ರ ಅನೌನ್ಸ್ ಆಗಿದ್ದನ್ನ ನೋಡಿ ಕೆಲವರು 'ಸಿಂಗ್ ಬಾಬು ಹೊಸ ಚಿತ್ರ ಬರ್ತಾ ಇದೆ. ಅದೂ ಬಂಧನ 2' ಅಂತ ಥ್ರಿಲ್ ಆಗಿದ್ದರೆ, ಇನ್ನು ಕೆಲವರು, 'ಹೌದಾ, ಮಾಡಿ ರಿಲೀಸ್ ಮಾಡ್ಲಿ, ಆಮೇಲೆ ಮಾತಾಡೋಣ' ಅನ್ನೋ ವೈರಾಗ್ಯವನ್ನೂ ತೋರಿಸುತ್ತಿದ್ದರು. ಈಗ ಬಾಬು ಅವರು ಸಿನಿಮಾ ಮಾಡೋದನ್ನು ಮರೆತು ಮೊನ್ನೆ ಮೈಸೂರಿನ ಫಿಲ್ಮ್ ಸಿಟಿ ವಿಷಯದಲ್ಲಿ ಕಾಣಿಸಿಕೊಂಡಿದ್ದನ್ನು ನೋಡಿದಾಗ ಇದೆಲ್ಲ ನೆನಪಾಯ್ತು.

ಲೂಸ್ ಟಾಕ್ ▸▸ ಯೋಗಿ ಆದಿತ್ಯನಾಥ್

- **ನಿಮ್ಮನ್ನ ಸ್ವಾಮಿ ಅಂತ ಕರಿಬೇಕಾ, ಸರ್ ಅಂತ ಕರಿಬೇಕಾ ಅನ್ನೋದೇ ಕನ್‌ಫ್ಯೂಷನ್.**
- ಮುಖ್ಯಮಂತ್ರಿ ಆಗಿರೋದ್ರಿಂದ ಸರ್ ಅನ್ನೋದು. ಆದ್ರೆ, ಶಬರಿಮಲೆ ಸೀಸನ್ನಲ್ಲಿ ಮಾತ್ರ, ಸ್ವಾಮಿ ಅಂತ ಕರೆಯಬಹುದು.
- **ಸರಿ, ನಿಮ್ಮ ಯುಪಿ ದೇಶದಲ್ಲೇ ನಂಬರ್ ಒನ್ ಅಂತ ಎಲ್ಲಾ ಕಡೆ ಜಾಹೀರಾತು ಕೊಡ್ತಾ ಇದ್ದೀರಲ್ಲ, ಇದು ನಿಜ್ವಾಗ್ಲೂ ನಿಜನಾ?**
- ನಂಬರ್ ಒನ್ ಅಂತ ಹೇಳಿದ್ದೀವಿ, ಯಾವುದರಲ್ಲಿ, ಯಾವ ಕಡೆಯಿಂದ ಅಂತೆಲ್ಲಾ ಮಾತ್ರ ಕೇಳಬೇಡಿ.
- **ಆದ್ರೂ, ಯುಪಿಯಲ್ಲಿ ಕ್ರೈಮ್ ರೇಟ್ ಜಾಸ್ತಿ ಇದೆ ಅಂತ ವರದಿಗಳು ಹೇಳ್ತಾವಲ್ಲ?**
- ಏನ್ ಮಾಡೋದು ಅಲಹಾಬಾದ್ ಹೆಸರನ್ನು ಪ್ರಯಾಗ್‌ರಾಜ್ ಅಂತ ಬದಲಾವಣೆ ಮಾಡಿದ ಮೇಲೆ, ನಮ್ಮ ಆಡಳಿತ 'ಪ್ರಯಾಸ್‌ರಾಜ್' ಆಗಿಬಿಟ್ಟಿದೆ.
- **ಅದ್ಸರಿ, ಯುಪಿಯಲ್ಲಿ ಏನ್ ತೊಂದರೆ ಆದ್ರೂ, ಅದಕ್ಕೆಲ್ಲಾ ಹಿಂದಿನ ಸರಕಾರಗಳೇ ಕಾರಣ ಅಂತ ಹೇಳ್ತಾ ಇರ್ತೀರಲ್ಲ?**
- ಏನ್ ಮಾಡೋದು, ಹಿಸ್ಟರಿ ಕ್ರಿಯೇಟ್ ಮಾಡೋದು ಕಷ್ಟ, ಅದಕ್ಕೆ ತಿದ್ದುತ್ತಾ ಇದ್ದೀವಿ.
- **ಸರಿ, ನೀವು ಪೇಪರ್ ಓದ್ತೀರಾ ಅಂತ ಗೊತ್ತು. ಪೇಪರ್‌ಗಳಲ್ಲಿ ನಿಮ್ಮ ಇಷ್ಟದ ಸೆಕ್ಷನ್ ಯಾವುದು?**
- ಹೆಸರು ಬದಲಾವಣೆ

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಖೇಮು ಒಂದು ಹುಡುಗೀನ ತುಂಬಾ ಲವ್ ಮಾಡ್ತಾ ಇದ್ದ. ಆದರೆ ಆ ಹುಡುಗಿ ಇವನನ್ನು ಇಷ್ಟಪಡ್ತಾ ಇರಲಿಲ್ಲ. ತುಂಬಾ ಯತ್ನಿಸಿದ ಮೇಲೂ ಹುಡುಗಿ ಖೇಮುವನ್ನು ಮದುವೆ ಆಗಲು ಒಪ್ಪಲಿಲ್ಲ. ಖೇಮುಗೆ ದೊಡ್ಡ ನಿರಾಸೆ ಆಗುವಂತೆ ಅವಳ ಮದುವೆ ಕೂಡ ಫಿಕ್ಸ್ ಆಯ್ತು. ಈಗ ಖೇಮು ತೀರಾ ನಿರಾಸೆಗೊಳಗಾದ. ಸ್ನೇಹಿತ ಸೋಮುವನ್ನು 'ಎಣ್ಣೆ ಹೊಡಿಬೇಕು ಬಾ' ಅಂತ ಕರೆದು ತನ್ನ ಮನಸ್ಸಿನ ನೋವನ್ನೆಲ್ಲಾ ತೋಡಿಕೊಂಡ. ಅದಕ್ಕೆ ತುಂಬಾ ಯೋಚಿಸಿದ ಸೋಮು, 'ನೋಡು, ಒಂದ್ ಕೆಲ್ಸ ಮಾಡು. ಅವಳನ್ನು ಮದ್ವೆ ಆಗ್ತಾ ಇರೋ ಹುಡುಗನ ಹತ್ರ ಹೋಗಿ, ನನಗೆ ಆ ಹುಡುಗಿ ಜತೆ ಅಫೇರ್ ಇತ್ತು ಅಂತ ಹೇಳು. ಆಗ ಮದುವೆ ಮುರಿದು ಬೀಳತ್ತೆ' ಅಂದ. 'ಅವನು ಹೆಂಗ್ ನಂಬ್ತಾನೆ?' ಅಂತ ಕೇಳಿದ ಖೇಮು. ಅದಕ್ಕೆ ಸೋಮು, 'ನನ್ನ ಮೈ ಮೇಲೆ ಟೋಟಲ್ 6 ಮಚ್ಚೆ ಇದೆ ಅಂತ ನನ್ ತಂಗಿ ಹತ್ರ ನಿನ್ ಹುಡುಗಿ ಹೇಳಿದ್ಳಂತೆ. ನೀನು ಸುಮ್ನೆ, ಅವಳ ದೇಹದಲ್ಲಿ ಇಂಥ ಕಡೆ ಮಚ್ಚೆ ಇದೆ ಅಂತ ಮದುವೆ ಆಗೋ ಹುಡುಗನಿಗೆ ಹೇಳು. ಮದುವೆ ಮುರಿದು ಬೀಳುತ್ತೆ' ಅಂತ ಹೇಳಿದ. ಸರಿ ಖೇಮು ಮರುದಿನ ಸೋಮು ಹೇಳಿದ ಪ್ಲ್ಯಾನ್ ವರ್ಕ್‌ಔಟ್ ಮಾಡೋಕೆ ಹೋಗಿ ಸಪ್ಪೆ ಮೋರೆ ಹಾಕ್ಕೊಂಡು ಬಂದ. ಅವನನ್ನು ನೋಡಿದ ಸೋಮು, 'ಏನಾಯ್ತೋ?' ಅಂತ ಕೇಳಿದ. ಅದಕ್ಕೆ ಖೇಮು ಹೇಳಿದ, 'ಇಲ್ಲಾ ಕಣೋ, ನಮ್ಮ ಪ್ಲ್ಯಾನ್ ವರ್ಕ್‌ಔಟ್ ಆಗ್ಲಿಲ್ಲ. ನಾನು, ನೀನು ಹೇಳಿದ ಐಡಿಯಾ ಪ್ರಕಾರ ಹೇಳಿದ್ದಕ್ಕೆ ಆ ಹುಡುಗ, ಅದಕ್ಕೇನಿವಾಗ? ಅಂತ ತುಂಬಾ ಕ್ಯಾಷುವಲ್ ಆಗಿ ಹೇಳಿಬಿಟ್ಟ. ವಾಪಸ್ಸು ಬಂದೆ'. 'ಸರಿ, ನೀನು ಏನಂತ ಹೇಳಿದೆ?' ಅಂತ ಸೋಮು ಕೇಳಿದ. ಅದಕ್ಕೆ ಖೇಮುವಿನಿಂದ ಉತ್ತರ ಬಂತು- 'ನಾನ್ ಒಂದ್ ಮಾತು ಹೇಳ್ತೀನಿ. ಇದಕ್ಕೇನರ್ಥ ಅಂತ ನೀನೇ ಡಿಸೈಡ್ ಮಾಡು. ನೀನು ಮದ್ವೆ ಆಗ್ತಾ ಇರೋ ಹುಡುಗಿಯ ಎಡಗೆನ್ನೆಯ ಮೇಲೆ ಒಂದು ಮಚ್ಚೆ ಇದೆ, ಅಂತ ಹೇಳಿದೆ'.

ಲೈನ್‌ಮ್ಯಾನ್

- **ಲೈಫಲ್ಲಿ ಏನೂ ಸಾಧನೆ ಮಾಡಿರದ ತಮ್ಮ ಮಕ್ಕಳನ್ನ ಬಾಲಿವುಡ್ ಮಂದಿ ಹೆಂಗೆ ಬಯ್ತಾರೆ?**
- ಆ ಹೀರೋನ ನೋಡಿ ಕಲ್ತ್ಕೋ, ನಿನ್ ವಯಸ್ಸಿಗೆ ಮೂರ್ ಮೂರ್ ಮದ್ವೆ ಆಗಿದ್ದ ಅವ್ನು
- **ಹಂಗಾದ್ರೆ, ಸಲ್ಮಾನ್ ಖಾನ್ ಕಥೆ?**
- ಅವ್ನಿಗೆ ಅವ್ನ್ ಅಪ್ಪ ಅಮ್ಮನೇ ಬಯ್ತಾರೆ: ನಿನ್ ಜತೆಗಿದ್ದ 'ಹುಡಿಗೀರಿಗೆಲ್ಲಾ' ಮದ್ವೆ ಆಗಿ ಮಕ್ಕಳಾಯ್ತು, ನಿಂದ್ಯಾವಾಗ್ಲೋ?
- **ಕಿವಿ ಚುಚ್ಚುವವರ ಕೆಲಸಕ್ಕೆ ಏನಂತಾರೆ?**
- ಇಯರ್ ರಿಂಗ್ ಏಯ್ಡ್
- **ಡಿಕ್ಷನರಿಗೆ ಇನ್ನೊಂದು ಹೆಸರು**
- 'ಅರ್ಥ' ಶಾಸ್ತ್ರ
- **ಅಮೆರಿಕಕ್ಕೆ ಸಂಬಂಧಪಟ್ಟ ಸುದ್ದಿ**
- 'ಸ್ಟೇಟ್ಸ್' ಲೆವೆಲ್ ಸುದ್ದಿ
- **ಒನ್ ಡೇ ಮ್ಯಾಚಲ್ಲಿ ಸೆಂಚುರಿ ಹೊಡೆದು ಟೆಸ್ಟ್ ಮ್ಯಾಚಲ್ಲಿ ಸೊನ್ನೆಗೆ ಔಟಾಗೋ ಬ್ಯಾಟ್ಸ್‌ಮನ್ ನೋಡಿ ಹೇಳೋ ಮಾತು**
- ಎವ್ವೆರಿ ಡೇ ಈಸ್ ನಾಟ್ ಒನ್ ಡೇ
- **'ಸಿನಿಮಾರಂಗ'ದಲ್ಲಿ ಒಂದು ಸೂಪರ್‌ಹಿಟ್ ಕೊಟ್ಟು ನಂತರದ ಸಿನಿಮಾ ಫ್ಲಾಪ್ ಆದ್ರೆ ಜನ ಏನಂತಾರೆ?**
- ಎವ್ವೆರಿ ಡೇ ಈಸ್ ನಾಟ್ 'ಫ್ರೈಡೇ'
- **ಕಾಲೇಜಿನಲ್ಲಿ ವಿದ್ಯಾರ್ಥಿಗಳು ಡೆಸ್ಕ್ ಅಥವಾ ಬೆಂಚ್ ಮೇಲೆ ಬರೆಯುವ ಕವಿತೆಗಳು**
- 'ಬೆಂಚ್ ಮಾರ್ಕ್' ಸಾಹಿತ್ಯ

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:173

ಸಮಾಚಾರ ಸಣ್ಣದಲ್ಲ

ಸಹಕಾರಿ ವಿವಿ ಕಟ್ಟಡಕ್ಕೆ ಅಮಿತ್ ಶಾ ಅಡಿಗಲ್ಲು

ಅಹಮದಾಬಾದ್: ದೇಶದ ಪ್ರಥಮ ರಾಷ್ಟ್ರೀಯ ಸಹಕಾರಿ ವಿಶ್ವವಿದ್ಯಾಲಯದ ಕಟ್ಟಡಕ್ಕೆ ಗುಜರಾತ್‌ನ ಆನಂದ್ ಜಿಲ್ಲೆಯಲ್ಲಿ 'ವಾಟರ್ ಅಂಡ್ ಲ್ಯಾಂಡ್ ಮ್ಯಾನೇಜ್‌ಮೆಂಟ್ ಇನ್‌ಸ್ಟಿಟ್ಯೂಟ್ ಕ್ಯಾಂಪಸ್‌ನಲ್ಲಿ ಕೇಂದ್ರದ ಸಹಕಾರಿ ಮತ್ತು ಗೃಹ ಖಾತೆ ಸಚಿವ ಅಮಿತ್ ಶಾ ಶನಿವಾರ ಪೂಜೆ ಸಲ್ಲಿಸಿ ಮೊದಲ ಅಡಿಗಲ್ಲು ಇರಿಸಿದರು. ಈ ಸಂದರ್ಭ ಗುಜರಾತ್ ಮುಖ್ಯಮಂತ್ರಿ ಭುಪೇಂದ್ರ ಭಾಯ್ ಪಟೇಲ್, ಕೇಂದ್ರದ ಸಹಕಾರಿ ಖಾತೆ ಸಹಾಯಕ ಸಚಿವರಾದ ಕೃಷ್ಣಪಾಲ್ ಗುರ್ಜರ್ ಮತ್ತು ಮುರಳಿಧರ್ ಮೊಹೊಲ್ ಉಪಸ್ಥಿತರಿದ್ದರು. ನೂತನ ಶಿಕ್ಷಣ ಸಂಸ್ಥೆಗೆ 'ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯ' ಎಂದು ಹೆಸರಿಡಲಾಗಿದ್ದು, ಪ್ರೈಮರಿ ಅಗ್ರಿಕಲ್ಚರಲ್ ಕ್ರೆಡಿಟ್ ಸೊಸೈಟೀಸ್(ಪಿಎಸಿಎಸ್), ಡೇರಿ, ಫಿಷರೀಸ್ ಮೊದಲಾದ ಕ್ಷೇತ್ರಗಳಿಗೆ ಅಗತ್ಯವಾದ ವೃತ್ತಿಪರರನ್ನು ರೂಪಿಸುವ ಗುರಿ ಇಟ್ಟುಕೊಂಡಿದೆ.

ಅಮರನಾಥ: 5 ಬಸ್ ಡಿಕ್ಕಿ, 36 ಜನಕ್ಕೆ ಗಾಯ

ರಾಂಬನ್: ಜಮ್ಮು-ಕಾಶ್ಮೀರದ ರಾಂಬನ್ ಜಿಲ್ಲೆಯಲ್ಲಿ ಅಮರನಾಥ ಯಾತ್ರಿಕರ 5 ಬಸ್‌ಗಳು ಸರಣಿಯೋಪಾದಿ ಡಿಕ್ಕಿಯಾಗಿದ್ದು, 36 ಯಾತ್ರಿಕರು ಗಾಯಗೊಂಡಿದ್ದಾರೆ. ಜಮ್ಮುವಿನ ಭಗವತಿ ನಗರದಿಂದ ದಕ್ಷಿಣ ಕಾಶ್ಮೀರದ ಪಹಲ್ಗಾಮ್ ಮೂಲ ಶಿಬಿರಕ್ಕೆ ಬಸ್‌ಗಳು ತೆರಳುತ್ತಿದ್ದವು. ರಾಷ್ಟ್ರೀಯ ಹೆದ್ದಾರಿಯಲ್ಲಿ ಚಂದರ್ ಕೂಟ್ ಬಳಿ ಬೆಳಗ್ಗೆ 8ರ ವೇಳೆ ಸರಣಿ ಅಪಘಾತವಾಗಿದೆ. ಬೆಂಗಾವಲು ಪಡೆಯ ವಾಹನವೊಂದರ ಬ್ರೇಕ್ ವಿಫಲವಾಗಿದ್ದರಿಂದ ಸರಣಿ ಡಿಕ್ಕಿಯಾಗಿದೆ. ಪರಿಣಾಮ 4 ಬಸ್‌ಗಳಲ್ಲಿದ್ದ 36 ಯಾತ್ರಿಕರು ಗಾಯಗೊಂಡರು. ಗಾಯಾಳುಗಳನ್ನು ರಾಂಬನ್ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ.

ಸಂಜಯ್ ಭಂಡಾರಿ ಘೋಷಿತ ಅಪರಾಧಿ

ದೆಹಲಿ: ಜಾರಿ ನಿರ್ದೇಶನಾಲಯ(ಇ.ಡಿ) ಮನವಿ ಮೇರೆಗೆ ಬ್ರಿಟನ್ ಮೂಲದ ಶಸ್ತ್ರಾಸ್ತ್ರ ವ್ಯಾಪಾರಿ ಸಂಜಯ್ ಭಂಡಾರಿ ತಲೆಮರೆಸಿಕೊಂಡಿರುವ ಘೋಷಿತ ಅಪರಾಧಿ ಎಂದು ದೆಹಲಿ ನ್ಯಾಯಾಲಯ ಶನಿವಾರ ಘೋಷಿಸಿದೆ. 'ಫಜಿಟಿವ್ ಎಕನಾಮಿಕ್ ಅಫೆಂಡರ್ಸ್ ಆಕ್ಟ್-2018'ರಡಿ ಸಂಜಯ್ ಭಂಡಾರಿ 'ಘೋಷಿತ ಅಪರಾಧಿ' ಎಂದು ವಿಶೇಷ ನ್ಯಾಯಾಲಯ ಆದೇಶ ಹೊರಡಿಸಿದೆ. ಭಂಡಾರಿ 2016ರಿಂದ ಬ್ರಿಟನ್‌ನಲ್ಲಿ ತಲೆಮರೆಸಿಕೊಂಡಿದ್ದು, ಆತನನ್ನು ಹಸ್ತಾಂತರಿಸುವಂತೆ ಕೋರಿದ್ದ ಭಾರತದ ಅರ್ಜಿಯನ್ನು ಇತ್ತೀಚೆಗೆ ಇ.ಡಿ. ನ್ಯಾಯಾಲಯ ತಿರಸ್ಕರಿಸಿದೆ. ಕಪ್ಪು ಹಣ ವಿರೋಧಿ ಕಾನೂನಿನಡಿ ಇ.ಡಿ. 2017ರ ಫೆಬ್ರವರಿಯಲ್ಲಿ ಭಂಡಾರಿ ಮತ್ತು ಇತರರ ವಿರುದ್ಧ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಡಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ ಇಡಿ 2020 ರಲ್ಲಿ ಸಂಜಯ್ ಭಂಡಾರಿ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸಿದೆ.

ಜಾರ್ಖಂಡ್: ಕಲ್ಲಿದ್ದಲು ಗಣಿ ಕುಸಿದು 4 ಸಾವು

ರಾಮಗಢ: ಜಾರ್ಖಂಡ್‌ನ ರಾಮಗಢ ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದ ಕಲ್ಲಿದ್ದಲು ಗಣಿಯಲ್ಲಿನ ಒಂದು ಭಾಗ ಶನಿವಾರ ಹಠಾತ್ ಕುಸಿದಿದ್ದು, ಅವಶೇಷಗಳಡಿ ಸಿಲುಕಿದವರಲ್ಲಿ ನಾಲ್ವರು ಕಾರ್ಮಿಕರು ಸಾವಿಗೀಡಾಗಿದ್ದಾರೆ. ಇನ್ನೂ ಹಲವು ಕಾರ್ಮಿಕರು ಕುಸಿದ ಗಣಿಯೊಳಗೆ ಸಂಕಷ್ಟಕ್ಕೆ ಸಿಲುಕಿರುವ ಭೀತಿ ಇದೆ ಎಂದು ಪೊಲೀಸರು ತಿಳಿಸಿದ್ದಾರೆ. ಜಿಲ್ಲೆಯ ಕುಜು ಹೊರಠಾಣೆಯ ಕಮರ್ ಪ್ರದೇಶದಲ್ಲಿ ಶನಿವಾರ ನಸುಕಿನಲ್ಲಿ ಅವಘಡವಾಗಿದೆ. ಸ್ಥಳದಿಂದ ನಾಲ್ವರು ಕಾರ್ಮಿಕರ ಶವಗಳನ್ನು ಹೊರತೆಗೆಯಲಾಗಿದೆ ಎಂದು ರಾಮಗಢದ ಎಸ್‌ಡಿಪಿಒ ಪರಮೇಶ್ವರ ಪ್ರಸಾದ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಈ ಮಧ್ಯೆ, ಪೊಲೀಸರು ಸ್ಥಳಕ್ಕೆ ಬರುವ ಮೊದಲೇ ಗ್ರಾಮಸ್ಥರು 3 ಶವಗಳನ್ನು ತೆಗೆದುಕೊಂಡು ಹೋದರು ಎಂದು ಮತ್ತೊಬ್ಬ ಅಧಿಕಾರಿ ತಿಳಿಸಿದ್ದಾರೆ.

ಹಣ ಕೆಲ ಧನಿಕರ ಬಳಿ ಕೇಂದ್ರೀಕೃತ

ನಾಗಪುರ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರಕಾರ ದೇಶದಲ್ಲಿ ಬಡವರ ಸಂಖ್ಯೆ ಕಡಿಮೆಯಾಗಿದೆ ಎಂದು ಹೇಳುತ್ತಿದ್ದರೆ, ಕೇಂದ್ರದ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ದೇಶದಲ್ಲಿ ಬಡವರ ಸಂಖ್ಯೆ ನಿಧಾನವಾಗಿ ಹೆಚ್ಚುತ್ತಿದೆ ಎಂದು ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ. ಅಲ್ಲದೇ ಸಂಪತ್ತು ಕೆಲವೇ ಕೆಲವು ಶ್ರೀಮಂತರ ಬಳಿ ಶೇಖರಗೊಳ್ಳುತ್ತಿದೆ ಎಂದು ಹೇಳಿದ್ದಾರೆ. ನಗರದಲ್ಲಿ ಶನಿವಾರ ಕಾರ್ಯಕ್ರಮವೊಂದರಲ್ಲಿ ಸಂಪತ್ತಿನ ವಿಕೇಂದ್ರೀಕರಣದ ಅವಶ್ಯಕತೆ ಕುರಿತು ಗಡ್ಕರಿ ಮಾತನಾಡಿದರು. ಕೃಷಿ, ಉತ್ಪಾದನೆ, ತೆರಿಗೆ ಮತ್ತು ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವ ಸೇರಿದಂತೆ ಹಲವು ವಿಷಯಗಳನ್ನೂ ಪ್ರಸ್ತಾಪಿಸಿದರು.

{ ರಾಹುಲ್ ಗಾಂಧಿ } ಪ್ರತಿಪಕ್ಷ ನಾಯಕ

ಭಾರತ-ಅಮೆರಿಕ ವ್ಯಾಪಾರ ಒಪ್ಪಂದ ವಿಚಾರದಲ್ಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಪ್ರಧಾನಿ ನರೇಂದ್ರ ಮೋದಿ ತಲೆಬಾಗಲಿದ್ದಾರೆ. ಕೇಂದ್ರದ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ಏನೇ ಬೇಕಾದರೂ ಹೇಳಬಹುದು, ಎಷ್ಟೇ ಪ್ರಯತ್ನ ಮಾಡಬಹುದು. ಆದರೆ, ಟ್ರಂಪ್ ಪ್ರತಿಸುಂಕ ಹೇರುವ ಗಡುವಿಗೆ ಮೋದಿ ತಲೆಬಾಗುತ್ತಾರೆ.

20 ವರ್ಷ ಬಳಿಕ ಒಗ್ಗೂಡಿದ ರಾಜ್, ಉದ್ಧವ್ ಠಾಕ್ರೆ | ಸಿಎಂ ದೇವೇಂದ್ರ ಫಡ್ನವೀಸ್‌ಗೆ ವ್ಯಂಗ್ಯ ಬಾಣಬಿರುಸು

ಮರಾಠಾ ನೆಲದಲ್ಲಿ ಹಳೆ ಹುಲಿಗಳ ಮರು ಮೈತ್ರಿ

ಮುಂಬೈ: ಮರಾಠಾ ನಾಡಿನ ಬಾಳಾ ಠಾಕ್ರೆ ಕಾಲದಲ್ಲಿದ್ದ ಮೂಲ ಶಿವಸೇನೆಯ ಹಳೆಯ ಯುವವ್ಯಾಘ್ರಗಳು ಈಗ ಮರಳಿ ಒಗ್ಗೂಡಿವೆ. ಮರಾಠಾ ಅಸ್ಮಿತೆಯ ನೆಲದಲ್ಲಿ ಶಿವಸೇನೆಯ ಆರಂಭದ ದಿನಗಳ ನೆನಪು ಮರುಕಳಿಸಿದೆ. ಸೋದರ ಸಂಬಂಧಿಗಳಾದ ಉದ್ಧವ್ ಠಾಕ್ರೆ ಮತ್ತು ರಾಜ್ ಠಾಕ್ರೆ, 20 ವರ್ಷಗಳ ನಂತರ ಮತ್ತೆ ಒಂದುಗೂಡಿದ್ದು, ಶನಿವಾರ ಒಟ್ಟಿಗೇ ವೇದಿಕೆಯೇರಿ ಒಗ್ಗಟ್ಟು ಪ್ರದರ್ಶಿಸಿದರು.

ಮಹಾರಾಷ್ಟ್ರ ಶಾಲೆಗಳಲ್ಲಿ 1ನೇ ತರಗತಿಯಿಂದ 3ನೇ ಭಾಷೆಯಾಗಿ ಹಿಂದಿ ಪರಿಚಯಿಸುವ ಯೋಜನೆಯನ್ನು ಸರಕಾರ ರದ್ದುಗೊಳಿಸಿದ ಹಿನ್ನೆಲೆ ಆಯೋಜಿಸಲಾಗಿದ್ದ 'ಮರಾಠಿ ವಿಜಯೋತ್ಸವ ರ‍್ಯಾಲಿ'ಯ ವೇದಿಕೆಯಲ್ಲಿ ಇಬ್ಬರು ಸೋದರ ಸಂಬಂಧಿಗಳು ಅಕ್ಕಪಕ್ಕದ ಆಸನದಲ್ಲಿ ಆಸೀನರಾಗಿದ್ದರು.

ಸಿಎಂ ಬಗ್ಗೆ ವ್ಯಂಗ್ಯ: 2 ದಶಕಗಳ ಹಿಂದೆ ದೂರವಾದ ನಮ್ಮನ್ನು ಮತ್ತೆ ಜತೆಗೂಡಿಸಿದ ಕೀರ್ತಿ ಸಿಎಂ ಫಡ್ನವೀಸ್‌ಗೆ ಸಲ್ಲಬೇಕು ಎಂದು ಮಹಾರಾಷ್ಟ್ರ ನವನಿರ್ಮಾಣ ಸೇನೆ(ಎಂಎನ್‌ಎಸ್) ಮುಖ್ಯಸ್ಥ ರಾಜ್ ಠಾಕ್ರೆ, ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ವಿರುದ್ಧ ವ್ಯಂಗ್ಯದ ಬಾಣ ಬಿಟ್ಟರು. 20 ವರ್ಷ ಬಳಿಕ ಉದ್ಧವ್ ಮತ್ತು ರಾಜ್ ಒಟ್ಟಾಗಿದ್ದಾರೆ. ಬಾಳಾ ಸಾಹೇಬ್ ಠಾಕ್ರೆ ಮಾಡಲಾಗದ್ದನ್ನು ಫಡ್ನವಿಸ್ ಮಾಡಿದ್ದಾರೆ ಎಂದರು. 'ಈಗಿನ ಮರು ಮಿಲನ ಸಾಂಕೇತಿಕವಲ್ಲ. ಅದಕ್ಕಿಂತಲೂ ಹೆಚ್ಚಿನದಾಗಿದೆ. ನಾವು ಒಟ್ಟಾಗಿಯೇ ಇರುತ್ತೇವೆ' ಎನ್ನುವ ಮೂಲಕ ಶಿವಸೇನೆ(ಯುಬಿಟಿ) ನಾಯಕ ಉದ್ಧವ್ ಠಾಕ್ರೆ, ರಾಜಕೀಯ ಮೈತ್ರಿಯ ಸುಳಿವು ನೀಡಿದರು.

'ಶಿವಸೇನೆಯನ್ನು ಬಿಜೆಪಿ ಬಳಸಿಕೊಂಡು ಬಹಳ ಪ್ರಯೋಜನ ಪಡೆದುಕೊಂಡಿದೆ. ಬಾಳಾ ಸಾಹೇಬ್ ಬೆಂಬಲ ನಿಮಗಿಲ್ಲದಿದ್ದರೆ ಮಹಾರಾಷ್ಟ್ರದಲ್ಲಿ ಬಿಜೆಪಿ ಗೆಲ್ಲಲು ಸಾಧ್ಯವಿತ್ತೆ? ರಾಜ್ಯದಲ್ಲಿ ನಿಮ್ಮ ಬಗ್ಗೆ ಯಾರಿಗೆ ತಿಳಿದಿತ್ತು. ನಮಗೆ ಹಿಂದುತ್ವದ ಪಾಠ ಹೇಳಲು ಬಿಜೆಪಿಗೆಲ್ಲಿದೆ ಅಧಿಕಾರ? ಎಂದು ಉದ್ಧವ್ ವಾಗ್ದಾಳಿ ನಡೆಸಿದರು. ಶಿವಸೇನೆ (ಯುಬಿಟಿ) ಮತ್ತು ಎಂಎನ್‌ಎಸ್ ಬೆಂಬಲಿಗರು ರ‍್ಯಾಲಿಗೆ ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿದ್ದರು. ಎರಡೂ ಪಕ್ಷಗಳ ಬೆಂಬಲಿಗರು ಮುಖ್ಯದ್ವಾರ ಮುರಿದು ಸಭಾಂಗಣದತ್ತ ಒಮ್ಮೆಲೇ ನುಗ್ಗಿದಾಗ ಗೊಂದಲ ಉಂಟಾಗಿತ್ತು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮುಂಬೈನಲ್ಲಿ ಒಂದೇ ವೇದಿಕೆಯಲ್ಲಿ ಅಕ್ಕಪಕ್ಕ ಆಸೀನ ರಾಜ್ ಮತ್ತು ಉದ್ದವ್ ಠಾಕ್ರೆ

ಬಾಳಾ ಸಾಹೇಬ್ ಅವರಿಂದಲೂ ಮಾಡಲಾಗದ್ದನ್ನು (ಉದ್ದವ್-ರಾಜ್ ಒಗ್ಗೂಡಿಸುವುದು) ಮಹಾರಾಷ್ಟ್ರ ಸಿಎಂ ದೇವೇಂದ್ರ ಫಡ್ನವಿಸ್ ಸಾಧ್ಯವಾಗಿಸಿದರು ಎಂದು ರಾಜ್ ಠಾಕ್ರೆ ವ್ಯಂಗ್ಯವಾಗಿ ಹೇಳಿದ್ದಾರೆ. ಅದು ನಿಜವೇ ಆಗಿದ್ದರೆ ಬಾಳಾ ಠಾಕ್ರೆ ಅವರು ನನ್ನನ್ನು ಮೇಲಿನಿಂದಲೇ ಆಶೀರ್ವದಿಸುತ್ತಿ ರುತ್ತಾರೆ ಎಂದು ನಂಬುವೆ. ರಾಜ್ ಠಾಕ್ರೆ ಜತೆಗೂಡಿದ ವೇದಿಕೆಯಲ್ಲಿ ಉದ್ದವ್ ಠಾಕ್ರೆಯ ಭಾಷಣ ವಿಜಯೋತ್ಸವ ಭಾಷಣದಂತೆ ಇರಲಿಲ್ಲ. ಬದಲಾಗಿ, 'ರುಡಾಲಿ'(ಶವಸಂಸ್ಕಾರ ವೇಳೆ ರಾಗವಾಗಿ ಅಳುವವಳು) ರೀತಿಯಲ್ಲಿತ್ತು.

-ದೇವೇಂದ್ರ ಫಡ್ನವಿಸ್ ಮಹಾರಾಷ್ಟ್ರ ಸಿಎಂ

ಮಹಾರಾಷ್ಟ್ರದ ಶಾಲೆಗಳಲ್ಲಿ ರಾಜ್ಯ ಸರಕಾರ ಹಿಂದಿ ಹೇರಿಕೆಗೆ ಮುಂದಾಗಿದ್ದಾಗ ಅದನ್ನು ಯಶಸ್ವಿಯಾಗಿ ತಡೆದಿದ್ದನ್ನು ತಮ್ಮದೇ ಪ್ರಯತ್ನ ಎಂಬಂತೆ ಉದ್ದವ್ ಠಾಕ್ರೆ ಮತ್ತು ರಾಜ್ ಠಾಕ್ರೆ ಹೇಳಿಕೊಳ್ಳುತ್ತಿದ್ದಾರೆ. ಇದು ಸರಿಯಲ್ಲ. ಹಿಂದಿ ಹೇರಿಕೆ ತಡೆಯುವುದರಲ್ಲಿ ಹಲವರ ಶ್ರಮವಿದೆ. ಈ ಇಬ್ಬರು ಠಾಕ್ರೆಗಳು ಮಾತ್ರವೇ ಹಿಂದಿ ಹೇರುವಿಕೆ ತಡೆಯುವುದಕ್ಕೆ ಶ್ರಮಿಸಿಲ್ಲ.

-ಹರ್ಷವರ್ಧನ್ ಸಾಪ್ಕಲ್ ಎಂಪಿಸಿಸಿ ಅಧ್ಯಕ್ಷ

ಐದು ಎಂಎನ್‌ಎಸ್ ಕಾರ್ಯಕರ್ತರ ಸೆರೆ

ಮುಂಬೈ: ಮರಾಠಿ ಕಲಿಯಲ್ಲ ಎಂದು ಸಾಮಾಜಿಕ ಮಾಧ್ಯಮದಲ್ಲಿ ಬರೆದು ರಾಜ್ ಠಾಕ್ರೆಗೆ ಸವಾಲೆಸೆದಿದ್ದ ಉದ್ಯಮಿ ಸುಶೀಲ್ ಕೇಡಿಯಾ ಕಚೇರಿಗೆ ಐವರು ಮಹಾರಾಷ್ಟ್ರ ನವ ನಿರ್ಮಾಣ ಸೇನೆ ಕಾರ್ಯಕರ್ತರು ದಾಳಿ ನಡೆಸಿ ಕಚೇರಿ ಧ್ವಂಸಗೊಳಿಸಿದ್ದಾರೆ.

ಆ ಬಳಿಕ ಕೆಲ ಹೊತ್ತಿನಲ್ಲೇ ಉದ್ಯಮಿ ಕೇಡಿಯಾ, ಜಾಲತಾಣದ ಮೂಲಕ ರಾಜ್ ಠಾಕ್ರೆಯ ಕ್ಷಮೆ ಕೋರಿದ್ದಾರೆ. 'ಮುಂಬೈನಲ್ಲಿ 30 ವರ್ಷಗಳಿಂದ ನೆಲೆಸಿದ್ದರೂ ಸ್ಥಳೀಯರಂತೆ ಮರಾಠಿ ನಿರರ್ಗಳವಾಗಿ ಮಾತನಾಡಲು ಮಾತನಾಡಲಾಗುತ್ತಿಲ್ಲ' ಎಂದಿರುವ ಕೇಡಿಯಾ, ರಾಜ್ ಠಾಕ್ರೆ ಅವರ ಮರಾಠಿ ಭಾಷಾ ಪ್ರೇಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಈ ಮಧ್ಯೆ, ಸುದ್ದಿ ತಿಳಿದು ಸ್ಥಳಕ್ಕೆ ತೆರಳಿ ಪರಿಶೀಲಿಸಿದ ಮುಂಬೈ ಪೊಲೀಸರು, ಬಳಿಕ ಐವರು ಎಂಎನ್‌ಎಸ್ ಕಾರ್ಯಕರ್ತರನ್ನು ಶನಿವಾರ ಬಂಧಿಸಿದ್ದಾರೆ.

ಬಾಳಾ ಠಾಕ್ರೆ ಜೀವಿತ ಕಾಲದಲ್ಲೇ ಮುಖಕೊಟ್ಟು ಮಾತನಾಡದಂತಿದ್ದ ಉದ್ದವ್-ರಾಜ್

ಹಿಂದಿಯ ವಿರುದ್ಧವಿಲ್ಲ. ಮರಾಠಾ ಸಾಮ್ರಾಜ್ಯದ ಅವಧಿಯಲ್ಲಿ ಮರಾಠಿಗರು ಬಹಳಷ್ಟು ರಾಜ್ಯಗಳನ್ನು ಆಳಿದ್ದರು. ಆದರೆ ಆಗ ಮರಾಠಿಯನ್ನು ಜಾರಿಗೊಳಿಸಲಿಲ್ಲ. ಈಗ ಹಿಂದಿ ಹೇರಲು ಆರಂಭಿಸಿದ್ದಾರೆ. ನಾವು ಈಗ ವಿರೋಧಿಸದೇ ಇದ್ದರೆ ಮಹಾರಾಷ್ಟ್ರದಿಂದ ಮುಂಬೈಯನ್ನು ಪ್ರತ್ಯೇಕಿಸಿಬಿಡುತ್ತಾರೆ.

-ರಾಜ್ ಠಾಕ್ರೆ ಎಂಎನ್‌ಎಸ್ ಮುಖ್ಯಸ್ಥ

ಬೆಂಕಿ ಭಯ: ವಿಮಾನದಿಂದ ಜಿಗಿದ 18 ಮಂದಿಗೆ ಗಾಯ

ಮ್ಯಾಡ್ರಿಡ್: ಸ್ಪೇನ್ ದೇಶದ 'ಪಾಲ್ಮಾ ಡಿ ಮಲ್ಲೋರ್ಕಾ' ವಿಮಾನ ನಿಲ್ದಾಣ (ಪಿಎಂಐ)ದಲ್ಲಿ 'ರಯಾನ್ ಏರ್ ಬೋಯಿಂಗ್ 737' ವಿಮಾನ ಇನ್ನೇನು ಹೊರಟು ಆಕಾಶಕ್ಕೆ ಜಿಗಿಯಬೇಕು ಎನ್ನುವಷ್ಟರಲ್ಲೇ 'ಫೈರ್ ಅಲಾರಾಂ'(ಬೆಂಕಿ ಹೊತ್ತಿ ಎಚ್ಚರಿಕೆ ಗಂಟೆ) ಮೊಳಗಿದೆ. ಭಯಗೊಂಡ ಪ್ರಯಾಣಿಕರು ವಿಮಾನದಿಂದ ಹೊರಕ್ಕೆ ತರಾತುರಿಯಲ್ಲಿ ಜಿಗಿದಿದ್ದಾರೆ. ಪರಿಣಾಮ 18 ಮಂದಿ ಗಾಯಗೊಂಡಿದ್ದಾರೆ. ಶನಿವಾರ ನಸುಕಿನಲ್ಲಿ ಮ್ಯಾಂಚೆಸ್ಟರ್‌ಗೆ ತೆರಳುತ್ತಿದ್ದ ವಿಮಾನ ಟೇಕಾಫ್ ವೇಳೆ ಘಟನೆ ನಡೆದಿರುವುದಾಗಿ ವರದಿಯಾಗಿದೆ.

ಪ್ರಾದೇಶಿಕ ತುರ್ತು ಸಮನ್ವಯ ಕೇಂದ್ರದ ಸಿಬ್ಬಂದಿ ಎರಡು ಜೀವ ರಕ್ಷಕ ಘಟಕಗಳೊಡನೆ ತಕ್ಷಣವೇ ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ನಡೆಸಿದ್ದಾರೆ. 4 ಆಂಬ್ಯುಲೆನ್ಸ್‌ಗಳೂ ವಿಮಾನದ ಬಳಿಗೆ ಧಾವಿಸಿವೆ. ಅಗ್ನಿಶಾಮಕ ದಳ ಮತ್ತು ಸಿವಿಲ್ ಗಾರ್ಡ್ ಸದಸ್ಯರು ರಕ್ಷಣಾ ಕಾರ್ಯದಲ್ಲಿ ನೆರವಾಗಿದ್ದಾರೆ. ಸದ್ಯ ಯಾವುದೇ ಪ್ರಾಣಹಾನಿಯಾಗಿಲ್ಲ.

ಬೆಂಕಿ ಎಚ್ಚರಿಕೆ ಗಂಟೆ ಮೊಳಗುತ್ತಲೇ ವಿಮಾನದ ಸಿಬ್ಬಂದಿಯೇ ಮೊದಲಾಗಿ ಪ್ರಯಾಣಿಕರನ್ನು ತುರ್ತು ನಿರ್ಗಮನ ದ್ವಾರಗಳ ಮೂಲಕ ಕೆಳಕ್ಕೆ ಇಳಿಸಲು ಕ್ರಮ ಕೈಗೊಂಡರು. ಆದರೆ, ಬಹಳ ಭಯಗೊಂಡಿದ್ದ ಕೆಲವು ಪ್ರಯಾಣಿಕರು ಸಹನೆ ಕಳೆದುಕೊಂಡು ವಿಮಾನ ಬಾಗಿಲಿನಿಂದ ನೇರ ನೆಲದತ್ತ ಜಿಗಿದು ಕೈಕಾಲುಗಳಿಗೆ ಪೆಟ್ಟು ಮಾಡಿಕೊಂಡರು ಎಂದು ಪ್ರತ್ಯಕ್ಷದರ್ಶಿಗಳನ್ನು ಉಲ್ಲೇಖಿಸಿ ವರದಿ ಪ್ರಕಟವಾಗಿದೆ. ತುರ್ತು ನಿರ್ಗಮನ ದ್ವಾರದಿಂದ ಹೊರಬಂದ ಕೆಲವರು ಜಾರುಬಂಡಿ ಮೆಟ್ಟಲು ತೆರೆದುಕೊಳ್ಳುವವರೆಗೂ ಕಾಯಲಾಗದೇ ವಿಮಾನದ ರೆಕ್ಕೆಯ ಮೇಲಿನಿಂದ ನೆಲದತ್ತ ಜಿಗಿದು ಗಾಯಗೊಂಡಿದ್ದಾರೆ. ಈ ಸಂದರ್ಭದ ವೀಡಿಯೊ ಜಾಲತಾಣದಲ್ಲಿ ವೈರಲ್ ಆಗಿದೆ.

ಜನಪ್ರಿಯ ನಟ ಅಲ್ಲು ಅರ್ಜುನ್ ತಂದೆ

ಬ್ಯಾಂಕ್‌ಗೆ ವಂಚನೆ: ಅಲ್ಲು ಅರವಿಂದ್ ಇ.ಡಿ ವಿಚಾರಣೆ

ಹೈದರಾಬಾದ್: ಬ್ಯಾಂಕ್‌ನಿಂದ ದೊಡ್ಡ ಮೊತ್ತದ ಸಾಲ ಪಡೆದು ವಂಚನೆ ಎಸಗಿದ ಪ್ರಕರಣ ಸಂಬಂಧ ತೆಲುಗು ಚಿತ್ರರಂಗದ ಖ್ಯಾತ ನಿರ್ಮಾಪಕ ಅಲ್ಲು ಅರವಿಂದ್‌ರನ್ನು ಜಾರಿ ನಿರ್ದೇಶನಾಲಯದ(ಇ.ಡಿ) ಅಧಿಕಾರಿಗಳು ವಿಚಾರಣೆಗೆ ಒಳಪಡಿಸಿದ್ದಾರೆ.

ರಾಮಕೃಷ್ಣ ಎಲೆಕ್ಟ್ರಾನಿಕ್ಸ್ ಬ್ಯಾಂಕ್‌ನಿಂದ 101.4 ಕೋಟಿ ರು. ಸಾಲ ಪಡೆದು ವಂಚಿಸಿದ್ದಾರೆ ಎಂದು ನಿರ್ಮಾಪಕ ಅಲ್ಲು ಅರವಿಂದ್ ವಿರುದ್ಧ ಆರೋಪ ಹೊರಿಸಿ ಅಪರಾಧ ಪ್ರಕರಣ ದಾಖಲಾಗಿದೆ. ಅದರಲ್ಲಿ ದೊಡ್ಡ ಮೊತ್ತವನ್ನು ಅಕ್ರಮವಾಗಿ ಸಾಗಣೆ ಮಾಡಿದ ಪ್ರಕರಣವನ್ನು ದಾಖಲಿಸಿಕೊಂಡಿರುವ ಜಾರಿ ನಿರ್ದೇಶನಾಲಯದ ಅಧಿಕಾರಿಗಳು, ಅಲ್ಲು ಅರವಿಂದ್‌ರನ್ನು ಪ್ರಶ್ನೆ ಮಾಡುತ್ತಿದ್ದಾರೆ. ಅಲ್ಲು ಅರವಿಂದ್, ಪುಷ್ಪಾ ಸರಣಿ ಚಿತ್ರಗಳ ಜನಪ್ರಿಯ ನಟ ಅಲ್ಲು ಅರ್ಜುನ್ ಅವರ ತಂದೆ ಎಂಬುದು ಉಲ್ಲೇಖಾರ್ಹ. ಈ ಹಿಂದೆ ಇ.ಡಿ ಅಧಿಕಾರಿಗಳೆದುರು ವಿಚಾರಣೆಗೆ ಹಾಜರಾಗಿದ್ದಾಗ ಅರವಿಂದ್ ಸಮರ್ಪಕ ಹಣಕಾಸಿನ ದಾಖಲೆಗಳನ್ನು ಸಲ್ಲಿಸುವುದರಲ್ಲಿ ವಿಫಲರಾಗಿದ್ದರು. ಮುಂದುವರಿದ ವಿಚಾರಣೆಯಲ್ಲಿ ಹೈದರಾಬಾದ್ ನ ಇಡಿ ಕಚೇರಿಗೆ ಶನಿವಾರ ಬೆಳಗ್ಗೆ ಆಗಮಿಸಿದ ಅಲ್ಲು ಅರವಿಂದ್ ಹೇಳಿಕೆ ದಾಖಲಿಸಿದ್ದಾರೆ. ಅರವಿಂದ್‌ರನ್ನು ಅಧಿಕಾರಿಗಳು 3 ಗಂಟೆಗಳ ಕಾಲ ವಿಚಾರಣೆ ನಡೆಸಿದ್ದಾರೆ. ಮುಂದಿನವಾರವೂ ವಿಚಾರಣೆಗೆ ಬರುವಂತೆ ಸೂಚನೆ ನೀಡಿದ್ದಾರೆ ಎಂದು ತಿಳಿದುಬಂದಿದೆ. ನಿರ್ಮಾಪಕ ಅಲ್ಲು ಅರವಿಂದ್ 2017ರಲ್ಲಿ ರಾಮಕೃಷ್ಣ ಎಲೆಕ್ಟ್ರಾನಿಕ್ಸ್ ಬ್ಯಾಂಕ್‌ನ ಮೈನರ್ ಷೇರುದಾರನಾಗಿದ್ದೆ. ಆಗ ಒಂದು ಆಸ್ತಿ ಖರೀದಿಸಲು ಸಾಲ ಪಡೆದಿದ್ದೆ. ಬಳಿಕ ಸಾಲ ಮರುಪಾವತಿಸಲಿಲ್ಲ. ಸಾಲದ ಪುಸ್ತಕದಲ್ಲಿ ನನ್ನ ಹೆಸರು ಇರುವುದರಿಂದ ಇ.ಡಿ ವಿಚಾರಣೆಗೆ ಕರೆದಿದೆ ಎಂದು ಹೇಳಿದರು.

ಬಂಧಿಸಿ ಗಡಿಪಾರು: ಸಿಬಿಐ-ಇ.ಡಿ ಕೋರಿಕೆ | ವಜ್ರೋದ್ಯಮಿ ನೀರವ್ ಮೋದಿ ಸೋದರ

ನೇಹಾಲ್ ಮೋದಿ ಅಮೆರಿಕದಲ್ಲಿ ಸೆರೆ

ವಾಷಿಂಗ್ಟನ್: ಭಾರತದಲ್ಲಿ ವಂಚನೆ ಎಸಗಿದ ಆರೋಪದಡಿ ನೇಹಾಲ್ ಮೋದಿ(46) ಎಂಬಾತನನ್ನು ಭಾರತ ಸರಕಾರದ ಕೋರಿಕೆ ಮೇರೆಗೆ ಅಮೆರಿಕ ಪೊಲೀಸರು ಬಂಧಿಸಿದ್ದು, ಗಡಿಪಾರಿಗೆ ಸಿದ್ಧತೆ ನಡೆಸಿದ್ದಾರೆ.

ಬಂಧಿತ ನೇಹಾಲ್ ಮೋದಿ, ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ಸಾವಿರಾರು ಕೋಟಿ ರು. ವಂಚನೆ ಮಾಡಿ ದೇಶ ಬಿಟ್ಟು ಓಡಿಹೋಗಿ ಲಂಡನ್‌ನಲ್ಲಿ ಅಡಗಿಕೊಂಡಿರುವ 'ಘೋಷಿತ ಆರ್ಥಿಕ ಅಪರಾಧಿ', ದಶಕಗಳ ಹಿಂದಿನ ವಜ್ರದ ವ್ಯಾಪಾರಿ ನೀರವ್ ಮೋದಿಯ ಕಿರಿಯ ಸೋದರ.

ಸದ್ಯ ಬೆಲ್ಜಿಯಂ ಪ್ರಜೆಯಾಗಿರುವ ನೇಹಾಲ್ ಮೋದಿಯನ್ನು ಬಂಧಿಸಿ ಕಸ್ಟಡಿಗೆ ತೆಗೆದುಕೊಳ್ಳಲಾಗಿದೆ. ಜು.17ರಂದು ಬಂಧಿತನ ವಿಚಾರಣೆ ನಡೆಯಲಿದೆ. ಮುಂದಿನ ವಿಚಾರಣೆ ವೇಳೆ ನೇಹಾಲ್ ಜಾಮೀನು ಅರ್ಜಿ ಸಲ್ಲಿಸುವ ಸಾಧ್ಯತೆಯಿದೆ ಎಂದು ಅಮೆರಿಕ ಪೊಲೀಸರು, ಭಾರತದ ಸಿಬಿಐ ಮತ್ತು ಇ.ಡಿ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ನೀರವ್ ಮೋದಿ, ನೇಹಾಲ್ ಮೋದಿ ಮತ್ತು ಅವರ ಚಿಕ್ಕಪ್ಪ ಮೆಹುಲ್ ಚೋಕ್ಸಿ ಒಟ್ಟಾಗಿ ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ 13,000 ಕೋಟಿ ರು. ವಂಚಿಸಿದ್ದಾರೆ. ಹಾಗಾಗಿ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ)-2002 ಮತ್ತು ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳಡಿ ಆರೋಪಿ ನೇಹಾಲ್ ವಿರುದ್ಧ ಭಾರತದಲ್ಲಿ ಹಲವು ಆರ್ಥಿಕ ಅಪರಾಧ ಪ್ರಕರಣ ದಾಖಲಾಗಿವೆ. ಆದ್ದರಿಂದ ನೇಹಾಲ್‌ನನ್ನು ಬಂಧಿಸಿ ಗಡಿಪಾರು ಮಾಡುವಂತೆ ಕೇಂದ್ರ ತನಿಖಾ ದಳ(ಸಿಬಿಐ) ಮತ್ತು ಜಾರಿ ನಿರ್ದೇಶನಾಲಯ(ಇ.ಡಿ) ಅಮೆರಿಕ ಪೊಲೀಸರಿಗೆ ಕೋರಿಕೆ ಸಲ್ಲಿಸಿದ್ದವು. ಅದರಂತೆ ನೇಹಾಲ್‌ನನ್ನು ಜುಲೈ 4ರಂದು ಬಂಧಿಸಲಾಗಿದೆ ಎಂದು ಅಮೆರಿಕದ ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ. ಪ್ರಸ್ತುತ ಲಂಡನ್ ಜೈಲಿನಲ್ಲಿರುವ ನೀರವ್ ಮೋದಿ ಪರವಾಗಿ ನೇಹಾಲ್ ಅಕ್ರಮ ಹಣ ವರ್ಗಾವಣೆಯಲ್ಲಿ ತೊಡಗಿದ್ದ ಆರೋಪ ಎದುರಿಸುತ್ತಿದ್ದಾನೆ.

ಆಪರೇಷನ್ ಸಿಂಧೂರ ಬಳಿಕ ನಿರ್ಧಾರ | 12 ಯುದ್ಧನೌಕೆಗೆ 44,000 ಕೋಟಿ ರು.

₹1 ಲಕ್ಷ ಕೋಟಿ ರಕ್ಷಣಾ ಖರೀದಿ: ಸಂ.ಸಮಿತಿ ಅಸ್ತು

ದೆಹಲಿ: ಭಯೋತ್ಪಾದಕರ ದೇಶ ಪಾಕಿಸ್ತಾನದ ವಿರುದ್ಧ ಮೇ ತಿಂಗಳಲ್ಲಿ ಆಪರೇಷನ್ ಸಿಂಧೂರ ಸೇನಾ ಕಾರ್ಯಾಚರಣೆ ನಡೆಸಿ ಯಶಸ್ವಿಯಾದ ಬಳಿಕ ಬಲು ಉತ್ಸಾಹದಲ್ಲಿರುವ ಭಾರತದ ರಕ್ಷಣಾ ವಲಯಕ್ಕೆ ಅಗತ್ಯ ಶಸ್ತ್ರಾಸ್ತ್ರಗಳು, ಯುದ್ಧ ಸಾಮಗ್ರಿಗಳ ಖರೀದಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಈಗ 1 ಲಕ್ಷ ಕೋಟಿ ರು.ಗೂ ಅಧಿಕ ಮೊತ್ತದ 10 ರಕ್ಷಣಾ ಸಾಮಗ್ರಿ ಖರೀದಿಗೆ ರಕ್ಷಣಾ ಖರೀದಿಗಳಿಗೆ ಸಂಬಂಧಿಸಿದ ಸಂಪುಟ ಸಮಿತಿ ಪ್ರಾಥಮಿಕ ಅನುಮೋದನೆ ನೀಡಿದೆ.

ಚೀನಾ ಹಾಗೂ ಪಾಕಿಸ್ತಾನ ತನ್ನ ರಕ್ಷಣಾ ಸಾಮರ್ಥ್ಯಗಳನ್ನು ನಿರಂತರವಾಗಿ ಹೆಚ್ಚಿಸುತ್ತಿರುವ ಹೊತ್ತಿನಲ್ಲೇ ನಡುವೆ ಭಾರತದ ರಕ್ಷಣಾ ಇಲಾಖೆ ನಿರ್ಣಾಯಕ ಹೆಜ್ಜೆ ಇಟ್ಟಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದ ರಕ್ಷಣಾ ಸ್ವಾಧೀನ ಮಂಡಳಿಯ ಸಭೆಯಲ್ಲಿ ಅನುಮೋದನೆ ಸಿಕ್ಕಿದೆ. ಪ್ರಮುಖವಾಗಿ 3 ದೊಡ್ಡ ಮತ್ತು 7 ಸಣ್ಣ ರಕ್ಷಣಾ ಸಾಮಗ್ರಿಗಳ ಖರೀದಿ ಯೋಜನೆಗಳಿವೆ. ಅತ್ಯಾಧುನಿಕ ಕಣ್ಗಾವಲು ವಿಮಾನಗಳು, ನೀರಿನಲ್ಲೂ ಚಲಿಸಬಲ್ಲ ಡ್ರೋನ್‌ಗಳು ಈಗಿನ ಖರೀದಿಯಲ್ಲಿ ಸೇರಿವೆ. ಬಹುತೇಕ ಹೆಚ್ಚಿನ ರಕ್ಷಣಾ ಸಾಧನಗಳು ಸ್ವದೇಶಿ ನಿರ್ಮಿತ ಆಗಿರಲಿವೆ. ಬ್ರಹ್ಮೋಸ್, ಸುಖೋಯ್ ಯುದ್ಧ ವಿಮಾನಗಳನ್ನೂ ಭಾರತ ದಲ್ಲೇ ನಿರ್ಮಾಣ ಮಾಡುವುದಕ್ಕೆ ಒತ್ತು ನೀಡಲಾಗುತ್ತಿದೆ. ಯುದ್ಧ ನೌಕೆಗಳನ್ನು ನಾಶ ಮಾಡುವ ಮತ್ತು ಶತ್ರುಗಳ ಯುದ್ಧ ನೌಕೆಗಳು ಇರುವ ಜಾಗವನ್ನು ನಿಖರವಾಗಿ ಪತ್ತೆಹಚ್ಚುವ ರಕ್ಷಣಾ ಸಾಧನಗಳ ಖರೀದಿಗೂ ಸಂಪುಟ ಸಮಿತಿಯ ಅನುಮೋದನೆ ಸಿಕ್ಕಿದೆ.



12 ವಿಶೇಷ ಯುದ್ಧನೌಕೆ

ಪ್ರಸ್ತುತ ರಕ್ಷಣಾ ಇಲಾಖೆ ಖರೀದಿಸಲು ಮುಂದಾಗಿರುವುದರಲ್ಲಿ 12 ವಿಶೇಷ ಯುದ್ಧ ನೌಕೆಗಳು ಪ್ರಮುಖವಾಗಿವೆ. 44,000 ಕೋಟಿ ರು. ವೆಚ್ಚದಲ್ಲಿ 12 'ಸ್ಫೋಟಕಗಳ ನಾಶಕ ಯುದ್ಧ ನೌಕೆಗಳ ಸ್ವದೇಶಿ ನಿರ್ಮಾಣ' ಯೋಜನೆಗೆ ಅನುಮೋದನೆ ಸಿಕ್ಕಿದೆ. 12 ಯುದ್ಧ ನೌಕೆಗಳ ನಿರ್ಮಾಣಕ್ಕೆ 10 ವರ್ಷ ವಾಗಬಹುದು. ಈ ವಿಶೇಷ ಯುದ್ಧನೌಕೆಗಳು ತಲಾ 1000 ಟನ್ ತೂಕವಿರಲಿದ್ದು, ಶತ್ರು ಪಡೆಗಳ ಸಮುದ್ರದಲ್ಲಿ ಮುಚ್ಚಿಟ್ಟಿರುವ ಸ್ಫೋಟಕ ಸಾಮಗ್ರಿಗಳನ್ನು ಪತ್ತೆ ಹಚ್ಚಿ ನಾಶ ಮಾಡಲು ಸಮರ್ಥವಾಗಿರಲಿವೆ.

ಮಿಂಚಿನಂಥ ಕ್ಷಿಪಣಿ: ವಾಯು ರಕ್ಷಣಾ ವ್ಯವಸ್ಥೆ ಬಲವರ್ಧನೆಗೆ 36,000 ಕೋಟಿ ರು. ವೆಚ್ಚದಲ್ಲಿ ಡಿಆರ್‌ಡಿಒ ಅಭಿವೃದ್ಧಿಪಡಿಸಿರುವ ಭೂಮಿಯಿಂದ- ಆಕಾಶಕ್ಕೆ ಚಿಮ್ಮುವ ಕ್ಷಿಪಣಿಗಳ ಖರೀದಿ ಮಾಡಲಾಗುತ್ತಿದೆ.

ಬಂಧಿತರಲ್ಲಿ ಕರ್ನಾಟಕದ ಇಬ್ಬರು ಆರೋಪಿಗಳು

ಡ್ರಗ್ಸ್, ಶಸ್ತ್ರಾಸ್ತ್ರ: ಪಂಜಾಬಲ್ಲಿ 9 ಜನ ಸೆರೆ

ಚಂಡೀಗಢ: ಪಾಕಿಸ್ತಾನ ಮತ್ತು ಮಲೇಷ್ಯಾ ಮೂಲದವರಿಂದ ಪಂಜಾಬ್‌ನಲ್ಲಿನ ನಡೆಯುತ್ತಿದ್ದ ಶಸ್ತ್ರಾಸ್ತ್ರ ಮತ್ತು ಮಾದಕ ವಸ್ತುಗಳ ಸಾಗಣೆ ಮತ್ತು ಮಾರಾಟ ಚಟುವಟಿಕೆಯನ್ನು ಅಮೃತಸರ ಪೊಲೀಸರು ಯಶಸ್ವಿಯಾಗಿ ಬೇಧಿಸಿದ್ದು, ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಒಟ್ಟು 9 ಮಂದಿಯನ್ನು ಶನಿವಾರ ಬಂಧಿಸಿದ್ದಾರೆ. ಬಂಧಿತರಲ್ಲಿ ಕರ್ನಾಟಕದ ಇಬ್ಬರು ಸೇರಿದ್ದಾರೆ.

ಮಾದಕ ವಸ್ತು ಹಾಗೂ ಹವಾಲಾ ಹಣ ಪ್ರಕರಣದಲ್ಲಿ ಡ್ಯಾನಿಶ್, ಸಲೋನಿ, ಜೋಬನ್ ಪ್ರೀತ್, ಕುಲ್ವಿಂದರ್ ಸಿಂಗ್, ಕರ್ನಾಟಕದ ಅಬ್ದುಲ್ ರೆಹಮಾನ್, ಪ್ರದೀಪ್ ಪಿಂಟು ಬಂಧಿತರು. ಉಳಿದವರ ಬಂಧನಕ್ಕೆ ಶೋಧ ಮುಂದುವರಿದಿದೆ. ಈ ಕಾರ್ಯಾಚರಣೆ ವೇಳೆ, ಹಲವು ಅತ್ಯಾಧುನಿಕ ಬಂದೂಕುಗಳು, ಮಾದಕ ವಸ್ತುಗಳನ್ನು ಬಂಧಿತರಿಂದ ವಶಪಡಿಸಿಕೊಳ್ಳಲಾಗಿದೆ ಎಂದು ಅಮೃತಸರ ಪೊಲೀಸ್ ಆಯುಕ್ತ ಗುರುಪ್ರೀತ್ ಸಿಂಗ್ ಸುದ್ದಿಸಂಸ್ಥೆಗೆ ಶನಿವಾರ ತಿಳಿಸಿದ್ದಾರೆ.

ಮೂವರು ಆರೋಪಿಗಳು ಮಲೇಷ್ಯಾದಿಂದ ಹಿಂದಿರುಗುತ್ತಿದ್ದಾಗ ವಿಮಾನ ನಿಲ್ದಾಣದಲ್ಲೇ ಸೆರೆ ಸಿಕ್ಕರು. 9 ಎಂಎಂನ 3 ಗ್ಲಾಕ್ ಪಿಸ್ತೂಲ್‌ಗಳು ಮತ್ತು 2.30 ಬೋರ್ ಚೈನೀಸ್ ಪಿಸ್ತೂಲ್ ಸೇರಿದಂತೆ 5 ಅತ್ಯಾಧುನಿಕ ಶಸ್ತ್ರಾಸ್ತ್ರಗಳು ಹಾಗೂ ಒಟ್ಟು 9.7 ಲಕ್ಷ ರು. ಮೌಲ್ಯದ 1 ಕಿಲೊ ಹೆರಾಯಿನ್ ಮತ್ತು ಹವಾಲಾ ಹಣವನ್ನು ಆರೋಪಿಗಳಿಂದ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಅಧಿಕಾರಿ ವಿವರಿಸಿದ್ದಾರೆ.

ಮಾದಕದ್ರವ್ಯವನ್ನು ಪಾಕಿಸ್ತಾನದಿಂದ ಗಡಿಯಂಚಿಗೆ ತಂದು ಡ್ರೋನ್ ಮೂಲಕ ಅಂತಾರಾಷ್ಟ್ರೀಯ ಗಡಿ ದಾಟಿಸಿ ಭಾರತದೊಳಕ್ಕೆ ಸಾಗಿಸಲಾಗುತ್ತಿದೆ. ಮಾದಕ ದ್ರವ್ಯ ಮತ್ತ ಅಕ್ರಮ ಶಸ್ತ್ರಾಸ್ತ್ರದ ಜಾಲ ದುಬೈನಿಂದ ಪಾಕಿಸ್ತಾನದವರೆಗೂ ಹಬ್ಬಿದೆ. ಸಮಗ್ರ ತನಿಖೆ ಆರಂಭಿಸಲಾಗಿದೆ ಎಂದು ಸಿಂಗ್ ವಿವರಿಸಿದ್ದಾರೆ.

ಜೂ.30: ಮಾದಕದ್ರವ್ಯ ವಶ

ಈ ಮೊದಲು ಅಮೃತಸರ ಪೊಲೀಸ್, ಬಿಎಸ್‌ಎಫ್ ಮತ್ತು ರಾಜಸ್ಥಾನ ಪೊಲೀಸ್ ತಂಡಗಳು ಜೂ.30ರಂದು ಜಂಟಿ ಕಾರ್ಯಾಚರಣೆ ನಡೆಸಿ ಕೆನಡಾ ಮೂಲದ ವ್ಯಕ್ತಿ ನಡೆಸುತ್ತಿದ್ದ ಮಾದಕ ದ್ರವ್ಯ ದಂಧೆ ಬಯಲಿಗೆಳೆದು, ಅಪಾರ ಪ್ರಮಾಣದ ಹೆರಾಯಿನ್ ವಶಪಡಿಸಿಕೊಂಡಿದ್ದರು.

ವಯೋಮಿತಿ ನಿಯಮ ಉಲ್ಲಂಘಿಸಿ ಚುನಾವಣೆ

ಅಹಮದಾಬಾದ್: ಗುಜರಾತ್‌ನ ಮೆಹ್ಸಾನಾ ಜಿಲ್ಲೆಯ ಗಿಲೋಸನ್ ಗ್ರಾಮದಲ್ಲಿ 21 ವರ್ಷದ ಕನಿಷ್ಠ ವಯೋಮಿತಿ ನಿಯಮ ಉಲ್ಲಂಘನೆ ಮಾಡಿ 19 ವರ್ಷದ ಯುವತಿಯನ್ನು ಸರಪಂಚ್ ಆಗಿ ಆಯ್ಕೆ ಮಾಡಲಾಗಿದೆ ಎಂಬ ಆರೋಪ ಕೇಳಿಬಂದಿದ್ದು, ರಾಜ್ಯ ಚುನಾವಣಾ ಆಯೋಗ ತೀವ್ರ ಟೀಕೆಗೊಳಗಾಗಿದೆ. ಕಿರಿಯ ವಯಸ್ಸಿನ ಯುವತಿ ಫೋಜ್‌ಬಾನು ಸಿಪ್ಪೆ ಸರಪಂಚ್ ಆಗಿ ಆಯ್ಕೆಯಾದವರು.



ಗಿಲೋಸನ್ ಗ್ರಾಮ ಪಂಚಾಯತ್‌ನ ಚುನಾವಣಾ ಪ್ರಕ್ರಿಯೆ ವೇಳೆ ವಯೋಮಿತಿ ನಿಯಮ ಉಲ್ಲಂಘನೆಯ ಲೋಪದತ್ತ ಯಾರ ಗಮನವೂ ಹರಿದಿರಲಿಲ್ಲ. ಸದ್ಯದಲ್ಲೇ ಮುಖ್ಯಮಂತ್ರಿಯಿಂದ ಸನ್ಮಾನ ಪಡೆಯುವ ಯುವ ಸರಪಂಚರ ಪಟ್ಟಿ ಸಿದ್ಧಪಡಿಸುವಾಗ ಪ್ರಮಾದ ತಿಳಿದುಬಂದಿದೆ. ಇದು ಚುನಾವಣಾಧಿಕಾರಿ ಮತ್ತು ರಿಟರ್ನಿಂಗ್ ಆಫೀಸರ್ ಕರ್ತವ್ಯ ಲೋಪ ಎನ್ನಲಾಗಿದೆ. ಈ ಸಂಬಂಧ ಮೆಹ್ಸಾನಾ ಪ್ರಾಂತೀಯ ಅಧಿಕಾರಿ ಉರ್ವಿಶ್ ವಾಲ್ಯಾಂಡ್, ತಾಲ್ಲೂಕು ಅಭಿವೃದ್ಧಿ ಅಧಿಕಾರಿಗೆ ವರದಿ ಸಲ್ಲಿಸಿದ್ದಾರೆ. ಪಂಚಾಯತ್ ಆಡಳಿತ ಈಗ ನಿಯಮಗಳಡಿ ರಾಜೀನಾಮೆ ನೀಡುವಂತೆ ಒತ್ತಾಯಿಸುತ್ತಿದೆ. ಆದರೆ, ಅಪ್ರಾಪ್ತರು ಎಂಬುದು ತಿಳಿದ ಬಳಿಕವೂ ಪರ್ಮಾರ್ ಅಫ್ರೋಜ್ ಬಾನು ರಾಜೀನಾಮೆ ನೀಡಲು ನಿರಾಕರಿಸಿದ್ದಾರೆ ಎನ್ನಲಾಗಿದೆ.

ಐದು ದೇಶಗಳ ಬ್ರಿಕ್ಸ್ 11 ರಾಷ್ಟ್ರಗಳಿಗೆ ವಿಸ್ತಾರ

ದೆಹಲಿ: ಬ್ರೆಜಿಲ್, ರಷ್ಯಾ, ಇಂಡಿಯ, ಚೀನಾ, ದಕ್ಷಿಣ ಆಫ್ರಿಕಾ ದೇಶಗಳ ಹೆಸರಿನ ಮೊದಲಕ್ಷರವನ್ನು ಆಯ್ದು ಸೇರಿಸಿ 'ಬಿಆರ್ ಐಸಿಎಸ್' ಅರ್ಥಾತ್ 'ಬ್ರಿಕ್ಸ್' ಎಂದು ಒಕ್ಕೂಟ ರಚಿಸಲಾಗಿತ್ತು. ಆ ಒಕ್ಕೂಟಕ್ಕೆ ಹೊಸದಾಗಿ 6 ರಾಷ್ಟ್ರಗಳು ಸೇರಿಕೊಂಡಿದ್ದು, 'ಬ್ರಿಕ್ಸ್' ಗಾತ್ರ ಈಗ 11 ರಾಷ್ಟ್ರಗಳಿಗೆ ವಿಸ್ತಾರಗೊಂಡಿದೆ. 2025ರ ಜುಲೈನಲ್ಲಿ ಬ್ರಿಕ್ಸ್ 11 ದೇಶಗಳ ಪ್ರಬಲ ಸಂಘಟನೆಯಾಗಿ ಬೆಳವಣಿಗೆ ಕಂಡಿದೆ. ಪ್ರಸ್ತುತ ಜಾಗತಿಕ ಆರ್ಥಿಕತೆಯ ಸುಧಾರಣೆ ಮತ್ತು ದೇಶಗಳ ನಡುವೆ ಡಾಲರ್ ಹೊರತಾದ ಆಮದು-ರಫ್ತು ವ್ಯವಹಾರವನ್ನು ಉತ್ತೇಜಿಸುವುದೇ 'ಬ್ರಿಕ್ಸ್' ಒಕ್ಕೂಟದ ಮುಖ್ಯ ಗುರಿಯಾಗಿದೆ. ಸಂಸ್ಥೆಯ ವಿಸ್ತರಣೆ ಸಂಖ್ಯೆಗೆ ಸೀಮಿತವಾಗಿಲ್ಲ ಎಂಬುದೇ ಹೊಸ ನಿಯಮವಾಗಿದೆ. ಸದ್ಯ ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾ ದೇಶಗಳ ಜತೆಗೆ ಈಗ ಹೊಸದಾಗಿ ಈಜಿಪ್ಟ್, ಇಥಿಯೋಪಿಯ, ಇರಾನ್, ಯುನೈಟೆಡ್ ಅರಬ್ ಎಮಿರೇಟ್ಸ್ ಮತ್ತು ಇಂಡೋನೇಷಿಯ ಸೇರಿಕೊಂಡಿವೆ. ಸೌದಿ ಅರೇಬಿಯ 'ಬ್ರಿಕ್ಸ್' ಸದಸ್ಯತ್ವ ಸ್ವೀಕರಿಸದೇ ಇದ್ದರೂ ಒಕ್ಕೂಟದ ಪಾಲುದಾರ ರಾಷ್ಟ್ರವಾಗಿದೆ ಗುರುತಿಸಿಕೊಂಡಿದೆ. ಈ ವಿಸ್ತರಣೆಯಿಂದಾಗಿ ಬ್ರಿಕ್ಸ್ ಜಾಗತಿಕ ವೇದಿಕೆಯಲ್ಲಿ ಹಿಂದೆಂದಿಗಿಂತಲೂ ಹೆಚ್ಚು ಪ್ರಭಾವಶಾಲಿ ಎನಿಸಿಕೊಂಡಿದೆ.



ಬಿಹಾರದಲ್ಲಿ ಗುಂಡಿಕ್ಕಿ ಬಿಜೆಪಿ ನಾಯಕನ ಹತ್ಯೆ

ಪಟನಾ: ಬಿಹಾರದ ರಾಜಧಾನಿ ಪಟನಾದಲ್ಲಿ ಬಿಜೆಪಿ ನಾಯಕ ಹಾಗೂ ಉದ್ಯಮಿ ಗೋಪಾಲ್ ಖೇಮ್ಕಾರನ್ನು ದುಷ್ಕರ್ಮಿಗಳು ಶನಿವಾರ ಗುಂಡಿಕ್ಕಿ ಕೊಂದಿದ್ದಾರೆ. ಪಟನಾದಲ್ಲಿನ ಮನೆಗೆ ಖೇಮ್ಕಾ ಅವರು ಮರಳುತ್ತಿದ್ದಾಗ ಗಾಂಧಿ ಮೈದಾನ ಪೊಲೀಸ್ ಠಾಣೆ ಪ್ರದೇಶದಲ್ಲಿನ ಹೋಟೆಲೊಂದರ ಬಳಿ ದುಷ್ಕರ್ಮಿಗಳು ಗುಂಡಿಕ್ಕಿ ಪರಾರಿಯಾಗಿದ್ದಾರೆ. ರಕ್ತದ ಮಡುವಿನಲ್ಲಿ ಕುಸಿದು ಬಿದ್ದ ಖೇಮ್ಕಾ ಸ್ಥಳದಲ್ಲೇ ಅಸುನೀಗಿದ್ದಾರೆ.

ಕೃತ್ಯ ನಡೆದ ಸ್ಥಳದಲ್ಲಿ ಒಂದು ಗುಂಡು ಬಿದ್ದಿದ್ದು, ಪೊಲೀಸರು ವಶಪಡಿಸಿಕೊಂಡಿದ್ದಾರೆ. ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿರುವ ಪೊಲೀಸರು ಸಮೀಪದ ಸ್ಥಳದ ಸಿಸಿಟಿವಿ ದೃಶ್ಯಾವಳಿ ಪರಿಶೀಲಿಸುತ್ತಿದ್ದಾರೆ. ಖೇಮ್ಕಾ ಅವರ ಮಗ ಗುಂಜನ್ ಖೇಮ್ಕಾರನ್ನು 3 ವರ್ಷಗಳ ಹಿಂದೆ ಇದೇ ರೀತಿ ಗುಂಡಿಕ್ಕಿ ಕೊಲ್ಲಲಾಗಿತ್ತು.

ಘಟನಾ ಸ್ಥಳಕ್ಕೆ ಭೇಟಿ ನೀಡಿದ ಸಂಸದ ರಾಜೇಶ್ ರಂಜನ್, ನಿತೀಶ್ ಕುಮಾರ್ ಆಡಳಿತದ ಬಿಹಾರದಲ್ಲಿ ಯಾರೂ ಸುರಕ್ಷಿತವಾಗಿಲ್ಲ. ರಾಜ್ಯ ಅಪರಾಧಿಗಳಿಗೆ ಆಶ್ರಯ ತಾಣವಾಗಿದೆ. 3 ವರ್ಷ ಹಿಂದೆ ಖೇಮ್ಕಾ ಅವರ ಮಗನ ಕೊಲೆಯಾದಾಗಲೇ ಸರಕಾರ ಕಠಿಣ ಕ್ರಮ ಕೈಗೊಂಡಿದ್ದರೆ ಈಗ ಗೋಪಾಲ್ ಖೇಮ್ಕಾ ಕೊಲೆಯಾಗುತ್ತಿರಲಿಲ್ಲ ಎಂದು ವಾಗ್ದಾಳಿ ನಡೆಸಿದ್ದಾರೆ.

ಠಾಕ್ರೆಗಳಿಬ್ಬರ ರ‍್ಯಾಲಿ ಹಿಂದೂ ವಿರೋಧಿ

ಮುಂಬೈ: 20 ವರ್ಷಗಳಿಂದ ಮುನಿಸಿಕೊಂಡಿದ್ದ ಸೋದರ ಸಂಬಂಧಿಗಳಾದ ಉದ್ಧವ್ ಠಾಕ್ರೆ ಮತ್ತು ರಾಜ್ ಠಾಕ್ರೆ ಮುಂಬೈನಲ್ಲಿ ಶನಿವಾರ ಜಂಟಿ ರ‍್ಯಾಲಿ ಮಾಡಿರುವುದಕ್ಕೆ ಮಹಾರಾಷ್ಟ್ರ ಸಚಿವ ನಿತೇಶ್ ರಾಣೆ ಅಣಕವಾಡಿದ್ದಾರೆ. ಇದು ಸಮಾಜವನ್ನು ವಿಭಜಿಸುವ ಮತ್ತು ರಾಜ್ಯವನ್ನು ದುರ್ಬಲಗೊಳಿಸುವ ಗುರಿ ಹೊಂದಿರುವ ಜಿಹಾದಿ ಮತ್ತು ಹಿಂದೂ ವಿರೋಧಿ ರ‍್ಯಾಲಿ ಎಂದೂ ಕಟುವಾಗಿ ಟೀಕಿಸಿದ್ದಾರೆ.

'ನಾವು ಹಿಂದೂಗಳು ಮತ್ತು ಹೆಮ್ಮೆಯ ಮರಾಠಿಗರು. ಜಿಹಾದಿಗಳು ನಮ್ಮ ಸಮಾಜವನ್ನು ವಿಭಜಿಸಲು ಪ್ರಯತ್ನಿಸುತ್ತಿದ್ದಾರೆ' ಎಂದು ಠಾಕ್ರೆ ಸೋದರ ಸಂಬಂಧಿಗಳನ್ನು ಉಲ್ಲೇಖಿಸಿ ವಾಗ್ದಾಳಿ ನಡೆಸಿದ್ದಾರೆ.

ವರ್ಲಿಯಲ್ಲಿ ಆಯೋಜಿಸಿದ ಸಭೆ ಹಿಂದೂಗಳು ಮತ್ತು ಮರಾಠಿ ಜನರ ವಿರುದ್ಧವಾದುದಾಗಿದೆ. ಸಮುದಾಯವನ್ನು ವಿಭಜಿಸುವ ಗುರಿ ಹೊಂದಿದೆ. ಇದು ಪಿಎಫ್‌ಐ ರ‍್ಯಾಲಿಗಳಿಗೆ ಸಮನಾಗಿದೆ. ಹಿಂದೂಗಳಿಗೆ ದೊಡ್ಡ ಹಾನಿ ಉಂಟು ಮಾಡುವಂತಹುದಾಗಿದೆ ಎಂದು ಟೀಕಿಸಿದ್ದಾರೆ. 3ನೇ ಭಾಷೆಯಾಗಿ ಹಿಂದಿ ಪರಿಚಯಿಸುವ ಯೋಜನೆಯನ್ನು ಸರಕಾರ ರದ್ದುಗೊಳಿಸಿದ ಹಿನ್ನೆಲೆ 'ಮರಾಠಿ ವಿಜಯೋತ್ಸವ ರ‍್ಯಾಲಿ' ಶಿವಸೇನೆ ಆಯೋಜಿಸಿತ್ತು.

ಸಮಾಚಾರ ಸಣ್ಣದಲ್ಲ

ಸಚಿವ ತಂಗಡಗಿ ಜಿಲ್ಲಾ ಪ್ರವಾಸ ಇಂದಿನಿಂದ

ಕೊಪ್ಪಳ: ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಜುಲೈ 6 ಮತ್ತು 7 ರಂದು ಕೊಪ್ಪಳ ಜಿಲ್ಲೆ ಪ್ರವಾಸದಲ್ಲಿದ್ದಾರೆ. ಸಚಿವರು ಜು. 6ರಂದು ಕೊಪ್ಪಳ ಜಿಲ್ಲೆಯ ಕಾರಟಗಿಯ ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗವಹಿಸುವರು ಹಾಗೂ ಕನಕಗಿರಿ ವಿಧಾನಸಭೆ ಕ್ಷೇತ್ರದ ಸಾರ್ವಜನಿಕರ ಭೇಟಿ ಮತ್ತು ಕುಂದುಕೊರತೆ ವಿಚಾರಣೆ ಮಾಡುವರು. ಜು. 7ರಂದು ಬೆಳಗ್ಗೆ 11.30ಕ್ಕೆ ಕೊಪ್ಪಳಕ್ಕೆ ಆಗಮಿಸಿ, ಸಿಎಂ ಕೊಪ್ಪಳ ಜಿಲ್ಲಾ ಪ್ರವಾಸದ ಹಿನ್ನೆಲೆ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ನಡೆಸುವರು. ಸಂಜೆ 5 ಗಂಟೆ ನಂತರ ಕಾರಟಗಿಯಲ್ಲಿಕನಕಗಿರಿ ವಿಧಾನಸಭೆ ಕ್ಷೇತ್ರದ ಸಾರ್ವಜನಿಕರ ಭೇಟಿ ಮತ್ತು ಕುಂದುಕೊರತೆಗಳ ವಿಚಾರಣೆ ನಡೆಸುವರು.

ಶಿಕ್ಷಣ ಸಚಿವರ ಜಿಲ್ಲಾ ಪ್ರವಾಸ ನಾಳೆ

ಕೊಪ್ಪಳ: ಶಾಲಾ ಶಿಕ್ಷಣ ಸಚಿವ ಎಸ್.ಮಧು ಬಂಗಾರಪ್ಪ ಜುಲೈ 7ರಂದು ಕೊಪ್ಪಳ ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಬೆಳಗ್ಗೆ 10.30ಕ್ಕೆ ಜಿಲ್ಲೆಯ ಯಲಬುರ್ಗಾ ತಾಲೂಕು ಹಿರೇವಂಕಲಕುಂಟ ಗ್ರಾಮದ ನೂತನ ಸರಕಾರಿ ಬಾಲಕಿಯರ ಪ್ರೌಢಶಾಲೆ ಉದ್ಘಾಟನೆ ಮಾಡುವರು. ಮಧ್ಯಾಹ್ನ 12ಕ್ಕೆ ಹುಲೇಗುಡ್ಡ ಗ್ರಾಮದ ಮತ್ತು 2 ಗಂಟೆಗೆ ದ್ಯಾಂಪುರ ಗ್ರಾಮದ ನೂತನ ಸರಕಾರಿ ಪ್ರೌಢಶಾಲೆ ಉದ್ಘಾಟನೆ ಕಾರ್ಯಕ್ರಮಗಳಲ್ಲಿ ಭಾಗವಹಿಸುವರು. ನಂತರ ಗದಗ ಜಿಲ್ಲೆಯ ಕಡೆಗೆ ಪ್ರಯಾಣ ಬೆಳಸುವರು ಎಂದು ಸಚಿವರ ಆಪ್ತ ಕಾರ್ಯದರ್ಶಿ ತಿಳಿಸಿದ್ದಾರೆ.

ಸಾಕು ನಾಯಿ, ಬೆಕ್ಕಿಗೆ ರೇಬಿಸ್ ಲಸಿಕೆ

ಕೊಪ್ಪಳ: ಪ್ರಸ್ತುತ 2025ನೇ ಸಾಲಿನ ''ವಿಶ್ವ ಪ್ರಾಣಿಜನ್ಯ ರೋಗ ದಿನಾಚರಣೆ'' ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ ಕೊಪ್ಪಳದ ಪಾಲಿಕ್ಲಿನಿಕ್ ನಿಂದ ನಡೆಯುತ್ತಿದ್ದು, ಸಾಕು ನಾಯಿ ಮತ್ತು ಬೆಕ್ಕುಗಳಿಗೆ ರೇಬಿಸ್ ಲಸಿಕೆ ಉಚಿತ ನೀಡಲಾಗುತ್ತಿದೆ. ಜುಲೈ 7 ರಿಂದ ಆಗಸ್ಟ್ 6ರ ವರೆಗೆ ಜಿಲ್ಲಾ ಪಾಲಿಕ್ಲಿನಿಕ್ ಆವರಣದಲ್ಲಿ ಲಸಿಕಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು ತಮ್ಮ ಸಾಕು ನಾಯಿ ಮತ್ತು ಬೆಕ್ಕುಗಳಿಗೆ ರೇಬಿಸ್ ಲಸಿಕೆ ಉಚಿತವಾಗಿ ಹಾಕಿಸಬೇಕು ಎಂದು ಕೊಪ್ಪಳ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಪಾಲಿಕ್ಲಿನಿಕ್ ಉಪ ನಿರ್ದೇಶಕರು ತಿಳಿಸಿದ್ದಾರೆ.

ರಸಗೊಬ್ಬರ ಕೊರತೆ ಇಲ್ಲ: ಕೃಷಿ ಇಲಾಖೆ

ಕೊಪ್ಪಳ: ಜಿಲ್ಲೆಯಲ್ಲಿ ಬೇಡಿಕೆಗೆ ತಕ್ಕಷ್ಟು ರಸಗೊಬ್ಬರದ ದಾಸ್ತಾನು ಇದ್ದು, ಯಾವುದೇ ರಸಗೊಬ್ಬರದ ಕೊರತೆ ಇಲ್ಲ ಎಂದು ಜಂಟಿ ಕೃಷಿ ನಿರ್ದೇಶಕ ಟಿ.ಎಸ್. ರುದ್ರೇಶಪ್ಪ ತಿಳಿಸಿದ್ದಾರೆ. ಏಪ್ರಿಲ್ ನಿಂದ ಜುಲೈ ವರೆಗೆ ರಸಗೊಬ್ಬರ ಬೇಡಿಕೆ 69,536 ಟನ್ ಇದ್ದು, 73,376 ಟನ್ ರಸಗೊಬ್ಬರ ದಾಸ್ತಾನೀಕರಿಸಲಾಗಿದೆ. ಈಗಾಗಲೇ ಸುಮಾರು 39,206 ಟನ್ ರಸಗೊಬ್ಬರ ವಿತರಣೆ ಮಾಡಲಾಗಿದೆ. ಬಾಕಿ ಉಳಿದಿರುವ ದಾಸ್ತಾನು 34,170 ಟನ್ ರಸಗೊಬ್ಬರಗಳಲ್ಲಿ ಯೂರಿಯಾ 9,450 ಟನ್, ಡಿಎಪಿ 2,948 ಟನ್, ಎಂಒಪಿ 2,262 ಟನ್, ಕಾಂಪ್ಲೆಕ್ಸ್ 18,706 ಟನ್ ಇದೆ. ಜೊತೆಗೆ 4,890 ಲೀಟರ್ ನ್ಯಾನೋ ಯೂರಿಯಾ ಹಾಗೂ 2,160 ಲೀಟರ್ ನ್ಯಾನೋ ಡಿಎಪಿ ಕೃಷಿ ಪರಿಕರ ಮಾರಾಟಗಾರರ ಮಳಿಗೆಗಳಲ್ಲಿ ಲಭ್ಯವಿದೆ. ರಸಗೊಬ್ಬರದ ಕೊರತೆ ಇರುವುದಿಲ್ಲ. ನ್ಯಾನೋ ಯೂರಿಯಾ ಹಾಗೂ ನ್ಯಾನೋ ಡಿಎಪಿ ಸ್ಪ್ರೇ ಮಾಡುವುದರಿಂದ ಗಿಡಗಳಿಗೆ ನೇರವಾಗಿ ಪೋಷಕಾಂಶ ದೊರೆಯುವುದರಿಂದ ನೀರು ಹಾಗೂ ಮಣ್ಣು ಸಂರಕ್ಷಿಸಬಹುದು ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜುಲೈ 25ರವರೆಗೂ ಹಸಿರು ಅಭಿಯಾನ

ಸಿಂಧನೂರು: ಚಿಲ್ಡ್ರನ್ ಇಸ್ಲಾಮಿಕ್ ಆರ್ಗನೈಸೇಶನ್, ಜಮಾಅತೆ ಇಸ್ಲಾಮಿ ಹಿಂದ್ ಹಾಗೂ ವನಸಿರಿ ಫೌಂಡೇಶನ್‌ನ ಸಹಯೋಗದಲ್ಲಿ 'ಮಣ್ಣಿನೊಂದಿಗೆ ಕೈಗಳು, ಭಾರದೊಂದಿಗೆ ಹೃದಯಗಳು' ಘೋಷವಾಕ್ಯದಡಿ ಜೂ.25ರಿಂದ ಜು.25 ರವರೆಗೆ ಮಾಸ ಪೂರ್ತಿ ಹಸಿರು ಅಭಿಯಾನದ ಮೂಲಕ ಪರಿಸರ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ' ಎಂದು ವಿದ್ಯಾರ್ಥಿನಿ ಮುನಿಬಾ ಯಾಕೂಬ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,'ಮಕ್ಕಳಲ್ಲಿ ಸಾಮಾಜಿಕ, ನೈತಿಕ, ಧಾರ್ಮಿಕ ಹಾಗೂ ಪರಿಸರ ಜಾಗೃತಿ ಮೂಡಿಸುವ ಉದ್ದೇಶದಿಂದ 7ರಿಂದ 14 ವರ್ಷದ ಮಕ್ಕಳನ್ನು ಒಳಗೊಂಡು ಆರ್ಗನೈಸೇಶನ್ ಸ್ಥಾಪನೆ ಮಾಡಲಾಗಿದೆ.

ಅಸಂಘಟಿತ ಕಾರ್ಮಿಕರಿಗೆ ಸುರಕ್ಷತೆ, ಸಾಮಾಜಿಕ ಭದ್ರತೆಯೇ ನಮ್ಮ ಸರಕಾರದ ಉದ್ದೇಶ: ಕಾರ್ಮಿಕ ಸಚಿವ ಸಂತೋಷ ಲಾಡ್

ವಿವಿಧ ವರ್ಗಗಳ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್

ಬಳ್ಳಾರಿ: ಅಸಂಘಟಿತ ವಿವಿಧ ವಲಯಗಳಡಿ ದುಡಿಯುವ ಕಾರ್ಮಿಕರನ್ನು ಗುರುತಿಸಿ ಅವರಿಗೆ ಸುರಕ್ಷತೆ ಮತ್ತು ವಿಶೇಷ ಸಾಮಾಜಿಕ ಭದ್ರತೆ ಒದಗಿಸುವುದು ರಾಜ್ಯ ಸರಕಾರದ ಧ್ಯೇಯೋದ್ದೇಶವಾಗಿದೆ ಎಂದು ಕಾರ್ಮಿಕ ಸಚಿವರು ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ್ ಎಸ್.ಲಾಡ್ ಹೇಳಿದರು.

ಕಾರ್ಮಿಕ ಇಲಾಖೆ, ಕರ್ನಾಟಕ ರಾಜ್ಯ ಅಸಂ ಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ, ಸಾರಿಗೆ ಇಲಾಖೆ, ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾ ಯಿತಿ ಸಂಯುಕ್ತಾಶ್ರಯದಲ್ಲಿ ನಗರದ ಸ್ಟೇಡಿಯಂ ರಸ್ತೆಯ ವಾಲ್ಮೀಕಿ ಭವನದಲ್ಲಿ ಶನಿವಾರ ಏರ್ಪಡಿ ಸಿದ್ದ ಬಳ್ಳಾರಿ ಜಿಲ್ಲೆಯ ವಿವಿಧ ವರ್ಗಗಳ ಅಸಂಘ ಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಣೆ ಹಾಗೂ ವಿವಿಧ ಯೋಜನೆಗಳ ಕುರಿತು ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ದೇಶದಲ್ಲಿ ಸುಮಾರು ಶೇ.90 ರಷ್ಟು ಕಾರ್ಮಿಕರು ಅಸಂಘಟಿತ ವಿವಿಧ ವಲಯಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಸುಮಾರು ಶೇ.85 ರಷ್ಟು ಕಾರ್ಮಿಕರು ಇದ್ದಾರೆ. ದೇಶದ ಶೇ.50 ರಷ್ಟು ಜಿಡಿಪಿ ಯು ಅಸಂಘಟಿತ ವಲಯಗಳ ಕಾರ್ಮಿಕರ ಆದಾಯದಿಂದ ಬರುತ್ತದೆ. ಹಾಗಾಗಿ ಅವರ ಸುರಕ್ಷತೆ ಮತ್ತು ಸಾಮಾಜಿಕ ಭದ್ರತೆಯು ನಮ್ಮ

ಬಳ್ಳಾರಿ ಜಿಲ್ಲೆಯ ವಿವಿಧ ವರ್ಗಗಳ ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಣೆ ಹಾಗೂ ವಿವಿಧ ಯೋಜನೆಗಳ ಕುರಿತು ಅರಿವು ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಸರಕಾರದ ಆದ್ಯತೆಯಾಗಿದೆ ಎಂದರು.

ರಾಜ್ಯದಲ್ಲಿ 91 ಅಸಂಘಟಿತ ವರ್ಗಗಳಡಿಯ ಇ-ಶ್ರಮ ಪೋರ್ಟಲ್ ನಲ್ಲಿ ಸುಮಾರು 1.53 ಕೋಟಿ ಕಾರ್ಮಿಕರು ಕಂಡುಬಂದಿದ್ದಾರೆ. ನೋಂದಾಯಿಸಿಕೊಂಡ ಅಸಂಘಟಿತ ಕಾರ್ಮಿಕರಿಗೆ ಈ ಯೋಜನೆಯಡಿ ಅಪಘಾತ ಪರಿಹಾರ ಸೌಲಭ್ಯ ಅಪಘಾತದಿಂದ ಮರಣ ಹೊಂದಿದಲ್ಲಿ, ಸಂಪೂರ್ಣ ದುರ್ಬಲತೆ ಹೊಂದಿದಲ್ಲಿ ಅವರ ನಾಮನಿರ್ದೇಶಿತರಿಗೆ 1 ಲಕ್ಷ ರು.ಪರಿಹಾರ, ಶಾಶ್ವತ ದುರ್ಬಲತೆ ಹೊಂದಿದರೆ ಮತ್ತು ತಾತ್ಕಾಲಿಕ ದುರ್ಬಲತೆ ಹೊಂದಿದರೆ ಆಸ್ಪತ್ರೆ ಚಿಕಿತ್ಸೆ ವೆಚ್ಚಕ್ಕಾಗಿ 1 ಲಕ್ಷ ರೂ.ವರೆಗೆ ಪರಿಹಾರ ಧನ ಸಹಾಯ ನೀಡಲಾಗುತ್ತದೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಮೋಟಾರು ಸಾರಿಗೆ ಹಾಗೂ ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಮಂಡಳಿ ರೂಪಿಸಿ ಅಧಿನಿಯಮವನ್ನು ಜಾರಿಗೊಳಿಸಿ 20 ವರ್ಗಗಳನ್ನು ಗುರುತಿಸಿ ಸೌಲಭ್ಯಗಳನ್ನು ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಯೋಜನೆಯಡಿ ಅಪಘಾತದಿಂದ ಫಲಾನುಭವಿ ನಿಧನರಾದರೆ 5 ಲಕ್ಷ ರು ಪರಿಹಾರ ನೀಡಲಾಗುತ್ತಿದೆ. ಜಿಲ್ಲೆಯಲ್ಲಿ ಹೆಲ್ಮೆಟ್ ಕಡ್ಡಾಯ ಎಂದು ಜಾರಿ ಮಾಡಿರುವುದು ಉತ್ತಮ ಕೆಲಸವಾಗಿದೆ ಎಂದು ಜಿಲ್ಲಾ ಪೊಲೀಸ್ ಇಲಾಖೆಗೆ ಅಭಿನಂದಿಸಿದರು.

> **ಸಿಎಂ ಸಿದ್ದರಾಮಯ್ಯನವರಿಗೆ ರಾಜ್ಯ ಸರಕಾರದ ಪೆಟ್ರೋಲ್ ಮತ್ತು ಡಿಸೇಲ್‌ನಿಂದ ರಾಜ್ಯಕ್ಕೆ ಬರುವ ತೆರಿಗೆ ಸಂಗ್ರಹದಲ್ಲಿ ಕನಿಷ್ಟ ಶೇ.1 ರಷ್ಟು ಹಣವನ್ನು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಗೆ ನೀಡಬೇಕೆಂದು ಕೋರಲಾಗಿದೆ. ಮುಖ್ಯಮಂತ್ರಿಗಳ ಒಪ್ಪಿಗೆ ದೊರೆತಲ್ಲಿ, 1,500 ಕೋಟಿ ರು. ಸಂಗ್ರಹವಾಗಲಿದೆ ಅದನ್ನು ನೇರವಾಗಿ ಸ್ಮಾರ್ಟ್ ಕಾರ್ಡ್ ಫಲಾನುಭವಿಗಳಿಗೆ ನೀಡಲಾಗುವುದು.**
>
> **- ಸಂತೋಷ್ ಎಸ್.ಲಾಡ್**, ಸಚಿವ

ರಾಜ್ಯದ ಜನತೆಗೆ ವರ್ಷಕ್ಕೆ ನೇರವಾಗಿ 60 ಸಾವಿರ ಕೋಟಿ ರು. ನೀಡುತ್ತಿದ್ದು, ಐದು ವರ್ಷಕ್ಕೆ 3 ಲಕ್ಷ ಕೋಟಿ ನೀಡುವ ದೇಶದ ಏಕೈಕ ಸಿಎಂ ಸಿದ್ದರಾಮಯ್ಯ ನೇತೃತ್ವದ ಸರಕಾರ, ನಮ್ಮ ಸರಕಾರವಾಗಿದೆ. ಕೆರೆಯ ನೀರನ್ನು ಕೆರೆಗೆ ಚೆಲ್ಲಿ ಎಂಬ ಗಾದೆಯಂತೆ ತೆರಿಗೆ ಹಣವನ್ನು ಜನರಿಗೆ ವಾಪಸ್ ನೀಡುತ್ತಿದ್ದೇವೆ ಎಂದು ಪ್ರತಿಪಾದಿಸಿದರು.

ಸಂದರ್ಭದಲ್ಲಿ ಸಿರುಗುಪ್ಪ ಶಾಸಕ ಬಿ. ಎಂ.ನಾಗರಾಜ, ಡಾ.ಬಾಬು ಜಗಜೀವನ್‌ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಮುಂಡರಗಿ ನಾಗರಾಜ, ಮಹಾನಗರ ಪಾಲಿಕೆಯ ಮಹಾಪೌರ ಮುಲ್ಲಂಗಿ ನಂದೀಶ್, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್. ಆಂಜನೇಯಲು, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ, ಕಾರ್ಮಿಕ ಆಯುಕ್ತರು ಹಾಗೂ ರಾಜ್ಯ ವಿಮಾ ಯೋಜನಾ ವೈದ್ಯಕೀಯ ಸೇವೆಗಳ ಆಯುಕ್ತ ಡಾ.ಎಚ್.ಎನ್.ಗೋಪಾಲಕೃಷ್ಣ, ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರೀಸ್ ಸುಮೈರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ.ವಿ.ಜೆ., ಜಂಟಿ ಕಾರ್ಮಿಕ ಆಯುಕ್ತರು ಹಾಗೂ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಜಂಟಿ ಕಾರ್ಯದರ್ಶಿ ಡಾ.ಎಸ್.ಬಿ ರವಿಕುಮಾರ್, ದಾವಣಗೆರೆಯ ಬಳ್ಳಾರಿ ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತ ಡಾ.ಅವಿನಾಶ್ ನಾಯಕ್, ಬಳ್ಳಾರಿ ಉಪ ವಿಭಾಗ ಕಾರ್ಮಿಕ ಅಧಿಕಾರಿ ಸಿದ್ದಪ್ಪ ಖೈನೂರು ಸೇರಿದಂತೆ ಜಿಲ್ಲೆಯ ಎಲ್ಲಾ ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಸದಸ್ಯರು, ಕಾರ್ಮಿಕ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಸಾರ್ವಜನಿಕರು ಹಾಗೂ ಇತರರು ಉಪಸ್ಥಿತರಿದ್ದರು.

ಮುದಗಲ್: ಮೊಹರಂ ಭಾವೈಕ್ಯತೆಯ ಪ್ರತೀಕ

ಬಸವರಾಜ ಹೂನುರು, ಮುದಗಲ್

ಪಟ್ಟಣದ ಮೊಹರಂ ಭಾವೈಕ್ಯತೆ ಪ್ರತೀಕವಾಗಿದೆ. ಐತಿಹಾಸಿಕ ಹಿನ್ನಲೆಯ ಜತೆ ದಕ್ಷಿಣ ಭಾರತದಲ್ಲೇ ಮೊಹರಂ ಆಚರಣೆಗೆ ಪ್ರಸಿದ್ಧಿ ಕೂಡ ಪಡೆದಿದೆ. ಇಲ್ಲಿ ನಡೆಯುವ ಮೊಹರಂ ಆಚರಣೆ ವೀಕ್ಷಣೆಗೆ ರಾಜ್ಯ, ನೆರೆ ರಾಜ್ಯಗಳ ಸಹಸ್ರಾರು ಭಕ್ತರು ಸೇರುವುದು ವಿಶೇಷವಾಗಿದೆ.

ವಿಜಯಪುರದ ಆದಿಲ್ ಶಾಹಿ ಯುದ್ದದಲ್ಲಿ ಮುದಗಲ್ಲ ಕೋಟೆ ವಶಪಡಿಸಿಕೊಂಡ ನಂತರ ತನ್ನೊಂದಿಗೆ ತಂದಿದ್ದ ಆಲಂ (ದೇವರು) ಗಳನ್ನು ಇಲ್ಲಿ ಸ್ಥಾಪಿಸಿ ಪೂಜಿಸಿದ್ದ ಎಂಬ ಪ್ರತೀತಿ ಇದೆ. ಅಂದಿನಿಂದ ಪಟ್ಟಣದಲ್ಲಿ ಮೊಹರಂ ಆಚರಿಸಲಾಗುತ್ತಿದೆ. ಶ್ರೀಮಂತ-ಬಡವ, ಮೇಲು-ಕೀಳು ಎಂಬ ಭೇದವಿಲ್ಲದೆ ಸರ್ವ ಧರ್ಮದವರು ಇದರಲ್ಲಿ ಭಾಗಿಯಾಗುವುದು ವಿಶೇಷ. ಇಲ್ಲಿರುವ ಆಲಂ ದೇವರುಗಳಿಗೆ ಕಲ್ಯಾಣದ ರಾಜ ದತ್ತಿಗಳನ್ನು ಕಳಿಸುತ್ತಿದ್ದ ಎಂದು ಇತಿಹಾಸದ ದಾಖಲೆಗಳಿಂದ ತಿಳಿದು ಬರುತ್ತದೆ. ಹುಸೇನಿ ಆಲಂ ದರ್ಗಾಕ್ಕೆ ಹೊಸ ಕಟ್ಟಡ ನಿರ್ಮಿಸಿದಾಗಿನಿಂದ ಹಬ್ಬದ ಕಳೆ ಹೆಚ್ಚಿದೆ.

ಮನಮೋಹಕ: ಕೋಟೆಯೊಳಗಿನ ದರ್ಗಾದ ಪೀರ್‌ಗಳ ಸವಾರಿ ವೈಭವದಿಂದ ನಡೆಯುತ್ತದೆ. ಇದನ್ನು ಸಾವಿರಾರು ಭಕ್ತರು ಕಣ್ಣುಂಬಿಕೊಳ್ಳುತ್ತಾರೆ. ದರ್ಗಾದ ಮುಂದಿರುವ ಅಲಾವಿ ಕುಣಿ ಮುಂದೆ ಯುವಕರ ಹೆಜ್ಜೆ ಹಾಕುತ್ತಾರೆ. ಕರ್ ಬಲಾ ಕಾಳಗ ಯುದ್ಧದ ಘೋರ ವರ್ಣನೆ, ಅನ್ಯಾಯ, ವಂಚನೆ, ಸಾವು-ನೋವು, ಶೌರ್ಯ-ಮನಮೋಹಕ: ಕೋಟೆಯೊಳಗಿನ ದರ್ಗಾದ ಪೀರ್‌ಗಳ ಸವಾರಿ ವೈಭವದಿಂದ ನಡೆಯುತ್ತದೆ. ಇದನ್ನು ಸಾವಿರಾರು ಭಕ್ತರು ಕಣ್ಣುಂಬಿಕೊಳ್ಳುತ್ತಾರೆ. ದರ್ಗಾದ ಮುಂದಿರುವ ಅಲಾವಿ

ಕುಣಿ ಮುಂದೆ ಯುವಕರ ಹೆಜ್ಜೆ ಹಾಕುತ್ತಾರೆ. ಕರ್‌ಬಲಾ ಕಾಳಗ ಯುದ್ಧದ ಘೋರ ವರ್ಣನೆ, ಅನ್ಯಾಯ, ವಂಚನೆ, ಸಾವು-ನೋವು, ಶೌರ್ಯ-ಬಲಿದಾನಗಳ ಕಥನವನ್ನು ಹಾಡುಗಾರರು ಹಾಡಿ ವರ್ಣಿಸುತ್ತಾರೆ.

ಸಿಂಗಾರ: ಮೊಹರಂ ಅಂಗವಾಗಿ ಪಟ್ಟಣದ ಮುಸ್ಲಿಂ-ಹಿಂದೂ ಸಮುದಾಯದವರು ಮನೆಗೆ ಸುಣ್ಣ ಬಣ್ಣ ಬಳಿದು ಸಿಂಗರಿಸಿ ಹಬ್ಬ ಆಚರಿಸುತ್ತಾರೆ. ಹರಕೆ ಹೊತ್ತವರು ಆಲಂಗಳಿಗೆ ಮುಡಿಪು ಅರ್ಪಿಸುತ್ತಾರೆ. ಮುದಗಲ್ಲ ಮೊಹರಂ ದಕ್ಷಿಣ ಭಾರತದಲ್ಲಿಯೇ ಪ್ರಸಿದ್ಧಿ ಪಡೆದಿದೆ. ಪಟ್ಟಣದ ಕೋಟೆ ಹೊರಭಾಗದಲ್ಲಿ ನಡೆಯುವ ಹಸನ್-ಹುಸೇನ್ ಸಹೋದರರ ಬೆಳ್ಳಿ ಪಾಂಜಾಗಳ ಮುಖಾಮುಖೀ ದೃಶ್ಯ ಕಣ್ಣುಂಬಿಕೊಳ್ಳಲು ದೇಶ-ವಿದೇಶದ ಜನರು ಆಗಮಿಸುತ್ತಾರೆ. ಹಿಜರಿ ಸಂವತ್ಸರದ ಮೊದಲನೇ ತಿಂಗಳು ಹತ್ತು ದಿನಗಳ ಕಾಲ ಮೊಹರಂ ಆಚರಿಸಲಾಗುತ್ತದೆ. ಪಟ್ಟಣದಲ್ಲಿ ಸತತ 10 ದಿನಗಳ ಕಾಲ ಆಚರಿಸುವ ಮೊಹರಂದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆಯುತ್ತವೆ. 1ರಿಂದ 5ನೇ ದಿನ ಮೊಹರಂ ಎಂದು ಆಚರಿಸಿದರೆ, 5ನೇ ದಿನ ಜಿಹಾಲ್ ಎಂದು, 7ನೇ ದಿನ ಖಾಸಿಂ ಪೀರಾ ಸವಾರಿ, 8ನೇ ದಿನ ಮೌಲಾಲಿ ಪೀರಾ ಸವಾರಿ, 9ನೇ ದಿನ ಹಸನ್-ಹುಸೇನ್ (ಖತಲ್ ರಾತ್ರಿ) ಸವಾರಿ ಎಂದು ಹಾಗೂ ಕೊನೆಯ 10ನೇ ದಿನ ದಫನ್ ಕಾರ್ಯಕ್ರಮ ನಡೆಯುತ್ತವೆ. ಆಲಂ(ದೇವರು) ಗಳ ಕೊನೆಯ ಭೇಟಿ ರೊಮಾಂಚನಕಾರಿಯಾಗಿರುತ್ತದೆ.

> **30 ಸಿಸಿ ಕ್ಯಾಮರಾ ಹಾಗೂ 7 ಕಡೆ ಬ್ಯಾರಿಕೆಡ ಅಳವಡಿಸಿ ಪೊಲೀಸ್ ಇಲಾಖೆ ಯಿಂದ ಶಾಂತಿಯುತವಾಗಿ ಮೊಹರಂ ಹಬ್ಬ ಆಚರಣೆ ಸೂಕ್ತ ಕ್ರಮ ಕೈಗೊಳ್ಳಲಾಗಿದೆ.**
>
> **- ದತ್ತಾತ್ರೇಯ ಕರ್ನಾಡ್**, ಡಿವೈಎಸ್‌ಪಿ

> **ಮೊಹರಂ ಹಬ್ಬದ ಆಚರಣೆಗೆ ಬರುವ ಜನರಿಗೆ ತೊಂದರೆ ಯಾಗಂತೆ ಕುಡಿಯುವ ನೀರು, ಸ್ವಚ್ಛತೆ, ಶೌಚಾಲಯ, ಸೇರಿದಂತೆ ಪುರಸಭೆ ಯಿಂದ ಮೂಲಭೂತ ಸೌಕರ್ಯ ಒದಗಿಸಲಾಗಿದೆ.**
>
> **-ಪ್ರವೀಣಕುಮಾರ ಬೋಗಾರ**, ಮುಖ್ಯಾಧಿಕಾರಿ

ಅಂಧತ್ವ ಪ್ರಮಾಣ ಇಳಿಕೆಗೆ ಆಶಾಕಿರಣ ದೃಷ್ಟಿ ಕೇಂದ್ರ

ಹೊಸಪೇಟೆ: ರಾಷ್ಟ್ರೀಯ ಅಂಧತ್ವ ನಿಯಂತ್ರಣಾ ಕಾರ್ಯಕ್ರಮದಡಿಯಲ್ಲಿ ಅಂಧತ್ವ ಪ್ರಮಾಣ ದರವನ್ನು ಇಳಿಸುವ ಉದ್ದೇಶದಿಂದ ರಾಜ್ಯ ಸರಕಾರ ಆಶಾಕಿರಣ ಕಾರ್ಯಕ್ರಮವನ್ನು ಜಾರಿಗೊಳಿಸಿದೆ. ಜಿಲ್ಲೆಯಲ್ಲಿ ಒಟ್ಟು 12 ದೃಷ್ಟಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕರಿಗೆ ಸೇವೆ ಆರಂಭಿಸಲಾಗಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಶಂಕರ ನಾಯ್ಕ್.ಎಲ್.ಆರ್ ತಿಳಿಸಿದ್ದಾರೆ.

ನಗರದ ಸರಕಾರಿ ಸಾರ್ವಜನಿಕ ನೂರು ಹಾಸಿಗೆ ಆಸ್ಪತ್ರೆ ಆವರಣದಲ್ಲಿ ನೂತನ ಆಶಾಕಿರಣ ದೃಷ್ಟಿಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದರು. ಸಾರ್ವಜನಿಕರಲ್ಲಿ ಕಣ್ಣಿನ ಪೊರೆ ಮತ್ತು ವಕ್ರೀಕಾರಕ ದೋಷಗಳಿಂದ ದೃಷ್ಟಿ ಸಮಸ್ಯೆಗಳ ಸಂಭವವನ್ನು ಕಡಿಮೆ ಮಾಡಲು ಮತ್ತು ದೃಷ್ಟಿ ಕೇಂದ್ರಗಳಲ್ಲಿ ಕಣ್ಣಿನ ತಪಾಸಣೆ ಮತ್ತು ಆರೋಗ್ಯ ಜಾಗೃತಿ ಕಾರ್ಯಕ್ರಮವನ್ನು ನಡೆಸುವುದು ಇವುಗಳ ಉದ್ದೇಶವಾಗಿದೆ. ಈಗಾಗಲೇ ತಾಲೂಕಿನ ಹೊಸಪೇಟೆ, ಹಗರಿಬೊಮ್ಮನಹಳ್ಳಿ, ಹರಪಹಳ್ಳಿ, ಕೂಡ್ಲಿಗಿ, ಹಡಗಲಿ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಹಾಗೂ ಹಂಪಸಾಗರ, ಇಟಗಿ. ತೆಲಗಿ, ಅರಸೀಕೆರಿ, ಚಿಕ್ಕಜೋಗಿಹಳ್ಳಿ, ಕೊಟ್ಟೂರು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ದೃಷ್ಟಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಡಾ.ಕೆ. ರಾಧಿಕಾ, ಡಾ.ಡಿ.ಭಾಸ್ಕರ್, ಡಾ. ಹರಿಪ್ರಸಾದ್, ಡಾ.ರಾಜಶೇಖರ್, ಡಾ. ರಾಘವೇಂದ್ರ, ಡಾ.ಕೊಟ್ರೇಶ್, ನಜಬುನ್ನಿಸಾ ಬೇಗಂ, ವೆಂಕಟೇಶ್, ಹನುಮಂತರೆಡ್ಡಿ, ಗಿಡ್ಡ ಗಂಗಪ್ಪ, ಗುಂಡಿ ರಾಘು ಭಾಗವಹಿಸಿದ್ದರು.

ನಗರದ ಸರಕಾರಿ ಸಾರ್ವಜನಿಕ ನೂರು ಹಾಸಿಗೆ ಆಸ್ಪತ್ರೆ ಆವರಣದಲ್ಲಿ ನೂತನ ಆಶಾಕಿರಣ ದೃಷ್ಟಿಕೇಂದ್ರವನ್ನು ಉದ್ಘಾಟಿಸಲಾಯಿತು.

ಹೆಜ್ಜೆ ಕುಣಿತ ಮೊಹರಂ ಆಕರ್ಷಣೆ

ಶ್ರೀಕಾಂತ ಆರ್ ಜಿ, ಲಿಂಗಸೂಗೂರು

ಹಬ್ಬ ಎಂದರೆ ಸಂತೋಷ ಸಡಗರ ಮನೆ ಮಾಡಿರುವುದು ಸಹಜ. ಆದರೆ ಮುಸ್ಲಿಮರಿಗೆ ಈ ಮೊಹರಂ ಹಬ್ಬವು ದುಃಖವನ್ನು ಸೂಚಿಸುವ ಹಾಗೂ ಶೋಕಾಚರಣೆಯ ಹಬ್ಬ ಇದಾಗಿದೆ. ಇಸ್ಲಾಮಿಕ್ ಕ್ಯಾಲೆಂಡರ್ ಪ್ರಕಾರ ಮೊದಲ ತಿಂಗಳೇ ಈ ಮಹರಂ. ರೋಜ್-ಎ-ಅಶುರಾ ದಿನವನ್ನೇ ಕ್ಯಾಲೆಂಡರ್ ನಲ್ಲಿ ಮೊಹರಂ ಎಂದು ಕರೆಯಲಾಗುತ್ತದೆ. ಇದು ಹಿಂದೂ-ಮುಸ್ಲಿಂರ ಭಾವೈಕ್ಯತೆ ಸಾರುವ ಹಬ್ಬವಾಗಿದ್ದು, ಸರಿಸುಮಾರು ಹತ್ತು ದಿನಗಳವರೆಗೆ ಮೊಹರಂ ಹಬ್ಬದ ಆಚರಣೆಯಿರುತ್ತದೆ.

ಮೊಹರಂ ಹಬ್ಬ ಹಿಂದೂ ಹಾಗೂ ಮುಸ್ಲಿಮರ ಭಾವೈಕ್ಯತೆಯನ್ನು ಸೂಚಿಸುವ ಹಬ್ಬವೆನ್ನಬಹುದು. ಈ ದಿನದಂದು ಇಮಾಮ್ ಹುಸೇನ್ ರ ತ್ಯಾಗವನ್ನು ನೆನಪಿಸಿಕೊಳ್ಳುವ ದಿನವಾಗಿದೆ. ತಮ್ಮ ಹಿರಿಯರ ತ್ಯಾಗ-ಹೋರಾಟಗಳನ್ನು ನೆನೆಯುವ ಉದ್ದೇಶದಿಂದ ಈ ಹಬ್ಬವು ಮಹತ್ವದ್ದಾಗಿದೆ. ಸುನ್ನಿ ಮುಸ್ಲಿಮರಿಗೆ, ಈ ತಿಂಗಳು ಇಸ್ಲಾಮಿಕ್ ಹೊಸ ವರ್ಷದ ಆರಂಭವಾಗಿದೆ. ಆದರೆ ಈ ಇಸ್ಲಾಂನ ಶಿಯಾವನ್ನು ಅನುಸರಿಸುವ ಮುಸ್ಲಿಮರಿಗೆ, ಈ ತಿಂಗಳು ಇಸ್ಲಾಮಿಕ್ ಇತಿಹಾಸದಲ್ಲಿ ದುಃಖದ ದಿನವಾಗಿದೆ.

> ### ಹೆಜ್ಜೆ ಕುಣಿತದಲ್ಲಿ ಯುವಜನತೆ ಭಾಗಿ
>
> **ಮೊಹರಂ ಹಬ್ಬದಲ್ಲಿ ವಿಶೇಷ ಅಂದರೆ ಹೆಜ್ಜೆ ಕುಣಿತ ಈ ಕಲೆ ಅನಾದಿ ಕಾಲದಿಂದಲು ನಡೆದುಕೊಂಡು ಬಂದಿದೆ ಆದರೆ ಇತ್ತಿಚಿನ ದಿನಗಳಲ್ಲಿ ತುಂಬಾ ಅಪರೂವಾಗಿದೆ ಗ್ರಾಮೀಣ ಭಾಗದಲ್ಲಿ ಈ ಕಲೆಗಳು ನಶಿಸಿ ಹೋಗುವ ಕಾಲದಲ್ಲಿ ತಾಲೂಕಿನ ಸರ್ಜಾಪುರ ಗ್ರಾಮದಲ್ಲಿ ಮೊಹರಂ ಪ್ರಯುಕ್ತ ಯುವಜನತೆ ಬಹಳ ಉತ್ಸಹದಿಂದ ಹೆಜ್ಜೆ ಕುಣಿತದಲ್ಲಿ ಭಾಗಿಗಳಾಗಿದ್ದರು. ಈ ಕಲೆಗೆ ಬೆನ್ನುಲುಬಾಗಿ ಸರ್ಜಾಪುರ ಗ್ರಾಮದ ಕಾಶಪ್ಪ ಅನ್ವರಿ, ಸಂಜೀವ ಯಾದಗೇರಿ ,ರಮೇಶ್ ಗುಂಟಿ,ಗುರುಚರಣ ಸಾಹುಕಾರ, ಮಲ್ಲಿಕಾರ್ಜುನ ನಾಗರಾಳ, ಹನು ಮೇಶ ಗುಂಟಿ, ರಾಮಣ್ಣ ದಳಪತಿ ಊರಿನ ಮುಖಂಡರು ಪ್ರೊತ್ಸಾಹ ನೀಡುತ್ತಿದ್ದಾರೆ.**

ಭಗೀರಥ ಯುವಕ ಮಂಡಳಿ ಯಿಂದ ಹೆಜ್ಜೆ ಕುಣಿತ ಹಮ್ಮಿಕೊಳ್ಳಲಾಯಿತು.

ವಿನೂತನ ರೀತಿ ವೃತ್ತಗಳ ನಿರ್ಮಿಸಲು ಯೋಜನೆ: ಡಿಸಿ

ರಾಯಚೂರು: ನಗರದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನರಾಮ್ ಅವರ ವೃತ್ತಗಳ ಅಭಿವೃದ್ಧಿ ಹಾಗೂ ಉನ್ನತೀಕಣ ಕಾಮಗಾರಿಗಳ ಕುರಿತು ಚರ್ಚಿಸುವ ಮಹತ್ವದ ಪೂರ್ವಭಾವಿ ಸಭೆಯು ಜಿಲ್ಲಾಧಿಕಾರಿ ನಿತೀಶ್ ಕೆ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಮೊದಲಿಗೆ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದ ಅಭಿವೃದ್ಧಿಯ ಪ್ರಾತ್ಯಕ್ಷಿಕೆಯ 3 ಡಿ ಡಿಜೈನ್ ತೋರಿಸಲಾಯಿತು. ಈ ವೃತ್ತದಲ್ಲಿ ಯಾವುದೇ ಸಿಗ್ನಲ್ ಇರುವುದಿಲ್ಲ. ಡಾ.ಅಂಬೇಡ್ಕರ್ ಅವರ ಬದುಕಿನ ಗಾಥೆಯ ಸಂಕ್ಷಿಪ್ತ ಮಾಹಿತಿ, ಪುತ್ಥಳಿ, ಪಾರ್ಲಿಮೆಂಟ್ ಮತ್ತು ಸಂವಿಧಾನ ಗ್ರಂಥದ ಮಾದರಿಯೊಂದಿಗೆ ವೃತ್ತವು ವಿನೂತನವಾಗಿ ನಿರ್ಮಾಣವಾಗಲಿದೆ. ವೃತ್ತದಲ್ಲಿ ಗ್ರೀನ್ ಪಾರ್ಕ್, ರಕ್ಷಣೆಗಾಗಿ ಬ್ಯಾರಿಕೇಡ್ ವಾಲ್ ಸೇರಿದಂತೆ ವಿನೂತನ ರೀತಿಯಲ್ಲಿ ಸಿದ್ಧವಾಗುವ ವೃತ್ತದ ಮಾದರಿ ನಕ್ಷೆಯನ್ನು ಪ್ರದರ್ಶಿಸಲಾಯಿತು. ಇದೆ ವೇಳೆ ಮಾಸ್ಟರ್ ವಿಡಿಯೋವನ್ನು ಸಹ ಪ್ರದರ್ಶಿಸಲಾಯಿತು.

ದಿನಾಚರಣೆಯ ವೇಳೆ ಮುಖಂಡರು ಮನವಿ ಮಾಡಿದಂತೆ ಜಿಲ್ಲಾಡಳಿತವು

ರಾಯಚೂರ ನಗರದಲ್ಲಿ ಡಾ.ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನರಾಮ್ ಅವರ ವೃತ್ತಗಳ ನವೀಕರಣಕ್ಕೆ ಜಿಲ್ಲಾಡಳಿತ ಮತ್ತು ಮಹಾನಗರ ಪಾಲಿಕೆಯು ಮುಂದಾಗಿರುವುದು ಅಭಿನಂದನಾರ್ಹ ಕಾರ್ಯವಾಗಿದೆ. ಇತರರಿಗೆ ಮಾದರಿಯಾಗುವ ರೀತಿಯಲ್ಲಿ ಎರಡೂ ವೃತ್ತಗಳನ್ನು ನಿರ್ಮಿಸಬೇಕು ಎಂದು ವಿವಿಧ ಸಂಘ ಸಂಸ್ಥೆಗಳ ಪ್ರಮುಖರು ಮನವಿ ಮಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಭವನ ನಿರ್ಮಿಸಿ: ಬಸ್ ನಿಲ್ದಾಣದ ಬಳಿಯಲ್ಲಿ ವಿನೂತನವಾಗಿ ಅಂಬೇಡ್ಕರ್ ಅವರ ವೃತ್ತ ನಿರ್ಮಾಣದ ಜೊತೆಗೆ ವೃತ್ತದ ಬಳಿಯಲ್ಲಿ ಖಾಲಿ ಇರುವ ಜಾಗದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭವನ ನಿರ್ಮಿಸಬೇಕು. ನೂತನ ಜಿಲ್ಲಾಡಳಿತ ಭವನದ ಆವರಣದಲ್ಲಿ ಸಹ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಯನ್ನು ನಿರ್ಮಿಸಬೇಕು ಎಂದು ಮುಖಂಡರು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದರು.

ಜಿಲ್ಲಾಡಳಿತಕ್ಕೆ ಅಭಿನಂದನೆ ತಿಳಿಸಿದ ಗಣ್ಯರು: ರಾಯಚೂರ ಬಸ್ ನಿಲ್ದಾಣಕ್ಕೆ ಹೊಂದಿಕೊಂಡ ಕೋಟೆಯ ಕಂದಕವನ್ನು ಶುಚಿಗೊಳಿಸುವ ಕಾರ್ಯವು ಇದುವರೆಗೆ ನಡೆದೇ ಇರಲಿಲ್ಲ. ಈಗ ಕಂದಕದ ಸ್ವಚ್ಛತಾ ಕಾರ್ಯ ನಡೆಯುತ್ತಿರುವುದು ಇತಿಹಾಸವಾಗಿದೆ. ಹಾಗಾಗಿ ಜಿಲ್ಲಾಡಳಿತ ಮತ್ತು ಮಹಾನಗರ ಪಾಲಿಕೆಗೆ ಅಭಿನಂದಿಸುತ್ತೇವೆ ಎಂದು ಸಭೆಯಲ್ಲಿ ವಿವಿಧ ಸಂಘ ಸಂಸ್ಥೆಗಳ ಪ್ರಮುಖರು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪುಟ್ಟಮಾದಯ್ಯ ಎಂ., ಮಹಾನಗರ ಪಾಲಿಕೆಯ ಆಯುಕ್ತ ಜುಬಿನ್ ಮೋಹಪಾತ್ರ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಎಂ ಚಿದಾನಂದ, ಸಂಘ ಸಂಸ್ಥೆಗಳ ಪರಶುರಾಮ ಅರೋಲಿ, ಎಂ ಬಸವರಾಜ ಭಂಡಾರಿ, ಮಂಚಾಲ ಭೀಮಯ್ಯ, ಎಂ ವಸಂತಕುಮಾರ, ಜಿ ಮುದ್ದುಕೃಷ್ಣ, ಎಸ್ ನರಸಿಂಹಲು, ವಿಶ್ವನಾಥ ಹಟ್ಟಿ, ಎನ್ ಜಂಬಣ್ಣ, ರಂಗ ಮುನಿದಾಸ್, ಎಂ ಈರಣ್ಣ, ಭಾಸ್ಕರ್ ರಾಜ್, ಎಸ್ ಮಲ್ಲೇಶಿ ಕೊಲಿಮಿ, ಪ್ರಭು ನಾಯಕ, ಹನುಮೇಶ ಅರೋಲಿ, ವಿರುಪಾಕ್ಷಿ, ಭವನೇಶ ಹಾಗೂ ಇನ್ನಿತರ ಮುಖಂಡರು ಇದ್ದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ನಡೆಯಿತು.

> ### ಹೋರಾಟಕ್ಕೆ ಸ್ಥಳ ಅವಕಾಶ ಕಲ್ಪಿಸಿ
>
> **ವೃತ್ತವು ಅದ್ಭುತವಾಗಿ ನಿರ್ಮಾಣವಾಗುತ್ತಿರುವುದಕ್ಕೆ ನಾವು ಅಭಿನಂದನೆ ತಿಳಿಸುತ್ತೇವೆ. ಡಾ.ಅಂಬೇಡ್ಕರ್ ಅಂದರೆ ನಮಗೆ ಹೋರಾಟದ ಸಂಕೇತವಾಗಿದೆ. ಹೀಗಾಗಿ ಡಾ.ಅಂಬೇಡ್ಕರ್ ಅವರ ಪುತ್ಥಳಿ ಎದುರಿಗೆ ಕನಿಷ್ಠ 500 ಜನರು ಕುಳಿತು ಪ್ರತಿಭಟಿಸುವುದಕ್ಕೆ ನೂತನ ವೃತ್ತದ ಬಳಿಯಲ್ಲಿ ಸ್ಥಳವಕಾಶ ಕಲ್ಪಿಸಬೇಕು ಎಂದು ಎಲ್ಲ ಮುಖಂಡರು ಸಭೆಯಲ್ಲಿ ಮನವಿ ಮಾಡಿದರು.**

ಅಲಾಯಿ ಕುಣಿಗೆ ದೇವರ ಚಿತ್ರಗಳು: ಗೊಂದಲ

ಕನಕಗಿರಿ: ಪಟ್ಟಣದ ಜುಮ್ಮಾ ಮಸೀದಿಯ ಮೊಹರಂ ಆಚರಣೆ ವೇಳೆ ಹಿಂದೂ ದೇವರು ಇರುವ ಆಹ್ವಾನ ಪತ್ರಿಕೆಗಳನ್ನು(ಮಾಸ್ಟರ್ ಪ್ರಿಂಟ್) ಬೆಂಕಿಗೆ ಎಸೆದು ಸುಡಲು ಯತ್ನಿಸಿದ ಘಟನೆ ಶುಕ್ರವಾರ ಬೆಳಗಿನ ಜಾವ ನಡೆದಿದೆ.

ಸ್ಥಳೀಯ ಶ್ರೀದೇವಿ ಪ್ರಿಂಟರ್ಸ್ ಮುದ್ರಿಸಿದ್ದ ಲಗ್ನ ಪತ್ರಿಕೆ, ಮೌನೇಶ್ವರ ಜಾತ್ರಾ, ಮಹೋತ್ಸವದ ಆಹ್ವಾನ ಪತ್ರಿಕೆ, ದುರ್ಗಾದೇವಿ ದೇವಸ್ಥಾನದ ದೇಣಿಗೆ ರಶೀದಿ ಹೊಂದಿರುವ ನಕಲು ಪ್ರತಿಗಳನ್ನು ತಂದು ಹಳೇ ಪೊಲೀಸ್ ಠಾಣೆಯ ಜುಮ್ಮಾ ಮಸೀದಿಯ ಅಲಾಯಿ ಕುಣಿಯಲ್ಲಿ ಸುಡುವುದಕ್ಕೆ ಕೆಲ ಯುವಕರು ಮುಂದಾಗಿದ್ದಾರೆ.

ಕನಕಗಿರಿಯ ಆರಾಧ್ಯ ದೈವ ಕನಕಾಚಲಪತಿ, ಭಕ್ತ ಕನಕದಾಸ, ಶಕ್ತಿ ದೇವತೆ ದುರ್ಗಾದೇವಿ, ಜಗದ್ಗುರು ಮೌನೇಶ್ವರ, ವಿಘ್ನ ನಿವಾರಕ ಗಣಪತಿ, ಸಂವಿಧಾನ ಶಿಲ್ಪಿ ಅಂಬೇಡ್ಕರ್ ಸೇರಿದಂತೆ ನಾನಾ ಹಿಂದೂ ದೇವರ ಫೋಟೋಗಳಿರುವ ಮುದ್ರಣ ಅಚ್ಚು ಪ್ರತಿಗಳನ್ನು ಅಲಾಯಿ ಕುಣಿಗೆ ಎಸೆಯುವುದು ಕಂಡು ಬಂದಿದೆ.

ಈ ಹೀಗೆ ತೂರಿದ ವಿಡಿಯೋ ಹಾಗೂ ಫೋಟೋಗಳು ವೈರಲ್ ಆಗುತ್ತಿದ್ದಂತೆ ಹಿಂದೂ ಜಾಗರಣ ವೇದಿಕೆಯವರ ಗಮನಕ್ಕೆ ಬಂದಿದೆ.

ಇದನ್ನರಿತ ವೇದಿಕೆಯ ಜಿಲ್ಲಾ ಸಂಚಾಲಕ ಅಯ್ಯನಗೌಡ ಅಳ್ಳಳ್ಳಿ ಕಾರ್ಯಕರ್ತರೊಂದಿಗೆ ಠಾಣೆಗೆ ಭೇಟಿ ನೀಡಿ ದೂರು ದಾಖಲಿಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಪಿಐ ಎಂ.ಡಿ ಫೈಜುಲ್ಲಾ ಅವರಿಗೆ ಮನವಿ ಮಾಡಿದ್ದಾರೆ. ಪ್ರಕರಣಕ್ಕೆ ಸಂಬಂಧಪಟ್ಟಂತೆ ಜುಮ್ಮಾ ಮಸೀದಿ ಕಮಿಟಿಯ ಹಿರಿಯರು ಹಾಗೂ

ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರಿಂದ ಪಿಐ ಮಾಹಿತಿ ಪಡೆದಿದ್ದು, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಪೊಲೀಸರು ಹೆಚ್ಚಿನ ತನಿಖೆ ನಡೆಸುತ್ತಿದ್ದಾರೆ.

ಕನಕಗಿರಿಯ ಜುಮ್ಮಾ ಮಸೀದಿಯ ಅಲಾಯಿ ಕುಣಿಯಲ್ಲಿ ಸುಡುವುದಕ್ಕಾಗಿ ಎಸೆದಿರುವ ಹಿಂದೂ ಆಹ್ವಾನ ಪತ್ರಿಕೆಗಳು.

> **ಅಲಾಯಿ ಕುಣಿಯಲ್ಲಿ ಹಿಂದೂ ದೇವರುಗಳಿರುವ ಆಹ್ವಾನ ಪತ್ರಿಕೆಗಳನ್ನು ತೂರಿದ್ದು, ಯಾರು ಎನ್ನುವುದು ತಿಳಿದು ಬಂದಿಲ್ಲ. ಈ ಕುರಿತು ಎರಡು ಕೋಮಿನ ಹಿರಿಯರನ್ನು ಕರೆದು ಸಮಾಲೋಚನೆ ಮಾಡಲಾಗಿದೆ. ಪ್ರಕರಣಕ್ಕೆ ಸಂಬಂಧಪಟ್ಟಂತೆ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಲಾಗುವುದು. ಮುಂಜಾಗ್ರತಾ ಕ್ರಮವಾಗಿ ಮಸೀದಿಯ ಬಳಿ ಪೊಲೀಸರನ್ನು ನಿಯೋಜಿಸಲಾಗಿದೆ.**
>
> **- ಎಂ.ಡಿ ಫೈಜುಲ್ಲಾ**, ಠಾಣಾಧಿಕಾರಿ

> **ಕನಕಾಚಲಪತಿ ದೇವಸ್ಥಾನ ಪಕ್ಕದಲ್ಲೆ ಇರುವ ಜುಮ್ಮಾ ಮಸೀದಿಯ ಅಲಾಯಿ ಕುಣಿಯಲ್ಲಿ ಹಿಂದೂ ದೇವರುಗಳು ಮುದ್ರಿಸಿದ ವಿವಿಧ ಆಹ್ವಾನ ಪತ್ರಿಕೆಗಳನ್ನು ಎಸೆದು ಸುಟ್ಟುವ ಹಾಕುವ ಪ್ರಯತ್ನ ನಡೆದಿದೆ. ಹಿಂದೂಗಳ ನಂಬಿಕೆಗೆ ಚ್ಯುತಿ ತಂದಿರುವವ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ, ರಾಜ್ಯವ್ಯಾಪಿ ಹೋರಾಟ ನಡೆಸಲಾಗುವುದು.**
>
> **- ಹನುಮೇಶ ಡಿಶ್**, ಹಿಂದೂ ಸಂಘಟನೆಯ ಮುಖಂಡ

ಕ್ಷೇತ್ರದಲ್ಲಿ ಅಭಿವೃದ್ಧಿಗಳ ಸುನಾಮಿ: ಶಾಸಕ ರಾಯರೆಡ್ಡಿ

ಕುಕನೂರ: ಯಲಬುರ್ಗಾ ವಿಧನಸಭೆ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳ ಸುನಾಮಿ ಯಾಗುತ್ತಿದೆ. ಕೇವಲ 2 ವರ್ಷದಲ್ಲಿಯೇ ಸಾಕಷ್ಟು ಕೆಲಸಗಳಾಗಿವೆ ಎಂದು ಸಿಎಂ ಆರ್ಥಿಕ ಸಲಹೆಗಾರ ಶಾಸಕ ಬಸವರಾಜ ರಾಯರೆಡ್ಡಿ ಹೇಳಿದರು.

ತಾಲೂಕಿನ ನೆಲಜೇರಿ ಗ್ರಾಮದ ಬುದ್ಧ ಬಸವ ಅಂಬೇಡ್ಕರ್ ಭವನ ಶಂಕುಸ್ಥಾಪನೆ ಹಾಗೂ ಮಂಗಳೂರು ಗ್ರಾಮದ ಕರ್ನಾಟಕ ಪಬ್ಲಿಕ್ ಸ್ಕೂಲ್ ಹಾಗೂ ಐಟಿಐ ಕಟ್ಟಡ ಉದ್ಘಾಟನೆ, ಹಾಗೂ ರಾವಣಕಿ ಪ್ರೌಢಶಾಲೆಯ ಕಟ್ಟಡ ನಿರ್ಮಾಣಕ್ಕೆ ಚಾಲನೆ ನೀಡಿ ಮಾತನಾಡಿದರು.

ನಾನು ರಾಜಕೀಯದಲ್ಲೇ ನನ್ನ ಮುಕ್ಕಾಲು ವಯಸ್ಸು ಕಳೆದಿದ್ದೇನೆ. ರಾಜಕೀಯ ಏನು ಎತ್ತ ಎಂದು ಎಲ್ಲ ತಿಳಿದಿದೆ. ಶಾಸಕನಾಗಿ ಕ್ಷೇತ್ರಕ್ಕೆ ಕೆಲಸ ತರುವುದು ಎಷ್ಟು ಕಷ್ಟ ಎಂಬುದು ನನಗೆ ಗೊತ್ತು. ನಾನು ಮೊದಲ ಬಾರಿಗೆ ಶಾಸಕನಾದಾಗ ಕ್ಷೇತ್ರದ ಸಾಕಷ್ಟು ಹಳ್ಳಿಗೆ ರಸ್ತೆ, ವಿದ್ಯುತ್ ಹಾಗೂ ಶಾಲೆ ಇರಲಿಲ್ಲ. ಹಲವಾರು ಗ್ರಾಮಕ್ಕೆ ಬಸ್ ಹೋಗುತ್ತಿರಲಿಲ್ಲ. ಕಾಲ್ನಡಿಗೆಯಲ್ಲಿ ಹಲವಾರು ಗ್ರಾಮಕ್ಕೆ ತೆರಳಿದ್ದೇನೆ. ಈಗ ಯಲಬುರ್ಗಾ ಕ್ಷೇತ್ರದಲ್ಲಿ 63 ಪ್ರೌಢ ಶಾಲೆ, 22 ಪಿಯು ಕಾಲೇಜು, ಸರ್ಕಾರಿ ಐಟಿಐ ಕಾಲೇಜ್, ಡಿಪ್ಲೊಮಾ ಕಾಲೇಜ್, ನರ್ಸಿಂಗ್ ಕಾಲೇಜ್, ಡಿಗ್ರಿ, ಪಿಜಿ, ಇಂಜಿನಿಯರಿಂಗ್ ಕಾಲೇಜ್, ಪದವಿ ಹಾಗೂ ಪದವಿ ವಸತಿ ಕಾಲೇಜ್, ಕೌಶಲ್ಯ ಅಭಿವೃದ್ಧಿ ಕೇಂದ್ರ ಸೇರಿ ಅನೇಕ ಕೆಲಸ ತಂದಿದ್ದೇನೆ. ಈ ಭಾಗದ ಮಕ್ಕಳು ಶೈಕ್ಷಣಿಕವಾಗಿ ಹಿಂದುಳಿಯಬಾರದು ಎಂಬುದು ನನ್ನ ಆಶಯ ಎಂದರು.

ಸಿಎಂ ಸಿದ್ದರಾಮಯ್ಯ ರಾಜ್ಯದಲ್ಲಿ 500 ಕರ್ನಾಟಕ ಪಬ್ಲಿಕ್ ಸ್ಕೂಲ್ ಮಂಜೂರು ಮಾಡಿದ್ದಾರೆ. ಎಲ್‌ಕೆಜಿ-ಯುಕೆಜಿಯಿಂದ ಪಿಯುಸಿ ವರೆಗೆ ಕನ್ನಡ ಮಾಧ್ಯಮ ಹಾಗೂ ಇಂಗ್ಲೀಷ್ ಮಾಧ್ಯಮದಲ್ಲಿ ಕೂಡ ಮಕ್ಕಳು ಕಲಿಯಬಹುದು. ನಮ್ಮ ಕ್ಷೇತ್ರಕ್ಕೆ ಒಂದಿಷ್ಟು ಆ ಶಾಲೆ ಮಾಡಿಸುತ್ತೇನೆ. ಸದ್ಯದಲ್ಲೇ ಕಾರ್ಮಿಕ ಮಕ್ಕಳ ವಸತಿ ಶಾಲೆ ಪ್ರಾರಂಭಿಸಲಾಗುವುದು. ಕ್ಷೇತ್ರಕ್ಕೆ ರೈಲು, ರಾಷ್ಟ್ರೀಯ ಹೆದ್ದಾರಿ ಕೂಡ ಮಾಡಿಸಿದ್ದೇನೆ. ಇನ್ನು 20 ದಿನದಲ್ಲಿ 19 ಕೆರೆಗೆ ನೀರು ತುಂಬಿಸುತ್ತಿದ್ದೇನೆ. ಕ್ಷೇತ್ರದಲ್ಲಿ ಹೊಸದಾಗಿ ಹಲವಾರು ಕೆರೆ ಮಾಡಬೇಕಿದೆ. ರೈತರು ಭೂಮಿ ಕೊಡಲು ಮುಂದೆ ಬರುತ್ತಿಲ್ಲ. ಬಸ್ ಸ್ಟ್ಯಾಂಡ್, ಕಲ್ಯಾಣ ಮಂಟಪ, ಸಮುದಾಯ ಭವನ, ಶಾಲಾ ಕಟ್ಟಡಗಳಿಗೆ ಜಾಗ ಸಿಗುತ್ತಿಲ್ಲ. ಸ್ಥಳೀಯರು

ಭೂಮಿ ದಾನ ಮಾಡುವ ಮನೋಭಾವ ಬೆಳೆಸಿಕೊಳ್ಳಬೇಕು. ಇಲ್ಲದಿದ್ದರೆ ಸರಕಾರಿ ದರಕ್ಕೆ ಭೂಮಿ ಕೊಡಬೇಕು ಎಂದರು.

ತಾಪಂ ಇಒ ಸಂತೋಷ ಬಿರಾದಾರ್, ತಲ್ವಾರ್ ಪ್ರಾಣೇಶ, ಕ್ಷೇತ್ರ ಶಿಕ್ಷಣಾಧಿಕಾರಿ ಸೋಮನಗೌಡ ಪಾಟೀಲ್, ಜಿಪಂ ಮಾಜಿ ಸದಸ್ಯ ಹನುಮಂತ ಗೌಡ ಚಂಡೂರ, ಮುಖಂಡ ಕರಿಬಸಪ್ಪ ನಿಡಗುಂದಿ, ಅಶೋಕ ತೋಟದ, ವೀರಣ್ಣ ಹಳ್ಳಿಕೇರಿ, ದೇವಪ್ಪ ಅರಿಕೇರಿ ಸೇರಿ ಇತರರು ಇದ್ದರು.

ಕುಕನೂರು ತಾಲೂಕು ನೆಲಜೇರಿ ಗ್ರಾಮದಲ್ಲಿ ನಾನಾ ಕಾಮಗಾರಿಗೆ ಶಾಸಕ ಬಸವರಾಜ ರಾಯರೆಡ್ಡಿ ಶನಿವಾರ ಚಾಲನೆ ನೀಡಿದರು.

ಸಮಾಚಾರ ಸಣ್ಣದಲ್ಲ

ಡುರಾಂಡ್ ಕಪ್: 24 ತಂಡಗಳ ಸ್ಪರ್ಧೆ

ದೆಹಲಿ: ಇದೇ 23ರಂದು ಆರಂಭವಾಗಲಿರುವ ಡುರಾಂಡ್ ಕಪ್ ಫುಟ್ಬಾಲ್ ಟೂರ್ನಿಯ 134ನೇ ಆವೃತ್ತಿಯಲ್ಲಿ 24 ತಂಡಗಳು ಪ್ರಶಸ್ತಿಗಾಗಿ ಸೆಣಸಲಿವೆ. ಈ ಟೂರ್ನಿಯು ಏಷ್ಯಾದ ಅತ್ಯಂತ ಹಳೆಯ ಫುಟ್ಬಾಲ್ ಟೂರ್ನಿ ಎಂಬ ಹಿರಿಮೆ ಹೊಂದಿದೆ. 24 ತಂಡಗಳನ್ನು 6 ಗುಂಪುಗಳಾಗಿ ವಿಂಗಡಿಸಲಾಗಿದ್ದು, ಪಶ್ಚಿಮ ಬಂಗಾಳ, ಜಾರ್ಖಂಡ್, ಮಣಿಪುರ, ಮೇಘಾಲಯ ಹಾಗೂ ಅಸ್ಸಾಂನಲ್ಲಿ ಪಂದ್ಯಗಳು ನಡೆಯಲಿವೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಷ್ಟ್ರಪತಿ ಭವನದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಟ್ರೋಫಿ ಅನಾವರಣ ಮಾಡಿದರು, ಭಾರತೀಯ ಸೇನೆಯು ಈ ಟೂರ್ನಿಯನ್ನು ಆಯೋಜಿಸುತ್ತಿದೆ.

ಶ್ರೀಯಾಂಶಿ ವಲ್ಲಿಶೆಟ್ಟಿಗೆ ಸೋಲು

ಕ್ಯಾಲ್ಗರಿ: ಕೆನಡಾ ಓಪನ್ ಸೂಪರ್-300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಶ್ರೀಯಾಂಶಿ ವಲಿಶೆಟ್ಟಿ ಅವರ ಗೆಲುವಿನ ಓಟ ಅಂತ್ಯಗೊಂಡಿತು. ಮಹಿಳೆಯರ ಸಿಂಗಲ್ಸ್ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಅವರು ಡೆನ್ಮಾರ್ಕ್‌ನ ಅಮೇಲಿ ಶುಲ್ಜ್ ಅವರಿಗೆ ಮಣಿದರು.

ವಿಶ್ವ ಕ್ರಮಾಂಕದಲ್ಲಿ 75ನೇ ಸ್ಥಾನದಲ್ಲಿರುವ ಶ್ರೀಯಾಂಶಿ 21-12, 19-21, 19-21ರಲ್ಲಿ 69ನೇ ಕ್ರಮಾಂಕದ ಅಮೇಲಿ ಅವರಿಗೆ ಮಣಿದರು. ಅದಕ್ಕೂ ಮೊದಲಿನ ಪಂದ್ಯದಲ್ಲಿ 45ನೇ ಕ್ರಮಾಂಕದ ಲೆಟ್ಶಾನಾ ಕರುಪಥವನ್ ಅವರನ್ನು ಶ್ರೀಯಾಂಶಿ ವಲ್ಲಿಶೆಟ್ಟಿ ಬರೀ 35 ನಿಮಿಷಗಳಲ್ಲಿ 21-15, 21-14ರಿಂದ ಸೋಲಿಸಿ ಎಂಟರ ಘಟ್ಟವನ್ನು ತಲುಪಿದ್ದರು. ಪುರುಷರ ಸಿಂಗಲ್ಸ್‌ನಲ್ಲಿ ಎಸ್. ಶಂಕರ್ ಮುತ್ತುಸ್ವಾಮಿ 21-19, 21-14ರಿಂದ ತೈಪೆಯ ಹುವಾಂಗ್ ಯು ಕೈ ಅವರನ್ನು ಸೋಲಿಸಿ ಎಂಟರ ಘಟ್ಟ ತಲುಪಿದ್ದರು.

ವಿರಾಮ
ಪ್ರತಿ ಭಾನುವಾರ

2ನೇ ಇನ್ನಿಂಗ್ಸ್‌ನಲ್ಲೂ ಶತಕ ಸಿಡಿಸಿದ ಗಿಲ್ | ಇಂಗ್ಲೆಂಡ್‌ಗೆ 608 ರನ್‌ಗಳ ಜಯದ ಗುರಿ

ಭಾರತಕ್ಕೆ ಗೆಲುವಿನ ಅವಕಾಶ

ಎಜ್‌ಬಾಸ್ಟನ್: ಭಾರತ ಹಾಗೂ ಇಂಗ್ಲೆಂಡ್ ನಡುವಿನ 2ನೇ ಟೆಸ್ಟ್ ಪಂದ್ಯದಲ್ಲಿ ಟೀಮ್ ಇಂಡಿಯಾ ಸಂಪೂರ್ಣ ಪ್ರಾಬಲ್ಯ ಸಾಧಿಸಿದೆ. ಭಾರತ ತಂಡ ನಾಯಕ ಶುಭ್‌ಮನ್ ಗಿಲ್ ಶತಕ ಹಾಗೂ ರವೀಂದ್ರ ಜಡೇಜಾ, ರಿಷಭ್ ಪಂತ್ ಹಾಗೂ ಕೆ.ಎಲ್ ರಾಹುಲ್ ಅವರ ಅರ್ಧಶತಕಗಳ ನೆರವಿನಿಂದ 2ನೇ ಇನ್ನಿಂಗ್ಸ್‌ನಲ್ಲಿ 427 ರನ್ ಗಳಿಸಿ ಡಿಕ್ಲೇರ್ ಘೋಷಿಸಿಕೊಂಡಿದೆ. ಮೊದಲ ಇನ್ನಿಂಗ್ಸ್‌ನ 180 ರನ್‌ಗಳ ಮುನ್ನಡೆ ಸೇರಿ ಇಂಗ್ಲೆಂಡ್‌ಗೆ ಗೆಲ್ಲಲು 608 ರನ್‌ಗಳ ಬೃಹತ್ ಮೊತ್ತದ ಗುರಿ ನೀಡಿದೆ.

ಪತ್ರಿಕೆಯು ಮುದ್ರಣಕ್ಕೆ ಹೋಗುವ ವೇಳೆ ಇಂಗ್ಲೆಂಡ್ ತಂಡವು ಎರಡು ಕಳೆದುಕೊಂಡು 48 ರನ್ ಗಳಿಸಿದೆ.

ಬೆನ್ ಡಕೆಟ್ 25 ರನ್ ಗಳಿಸಿ ಔಟಾದರೆ, ಜಾಕ್ ಕ್ರಾಲಿ ಯಾವುದೇ ರನ್ ಗಳಿಸದೆ ಸಿರಾಜ್‌ಗೆ ವಿಕೆಟ್ ಒಪ್ಪಿಸಿದರು. ಜೋ ರೂಟ್ 6 ರನ್ ಗಳಿಸಿ ಮತ್ತು ಓಲಿ ಪೋಪ್ 17 ರನ್ ಗಳಿಸಿ ಕ್ರೀಸ್‌ನಲ್ಲಿದ್ದಾರೆ.

ಮೂರನೇ ದಿನದ 1 ವಿಕೆಟ್‌ಗೆ 64 ಸ್ಕೋರ್ ನೊಂದಿಗೆ ನಾಲ್ಕನೇ ದಿನ ಆರಂಭಿಸಿದ ಟೀಮ್ ಇಂಡಿಯಾ 96 ರನ್‌ಗಳಾಗುವಷ್ಟರಲ್ಲಿ ಕರುಣ್ ನಾಯರ್ (26) ವಿಕೆಟ್ ಕಳೆದುಕೊಂಡಿತು. ಕೆ.ಎಲ್ ರಾಹುಲ್ 84 ಎಸೆತಗಳಲ್ಲಿ 55 ರನ್ ಸಿಡಿಸಿ ಔಟಾದರು. ನಂತರ ಬಂದ ರಿಷಭ್ ಪಂತ್ ಬಿರುಸಿನ ಶೈಲಿಯ ಬ್ಯಾಟಿಂಗ್ ಮಾಡಿ ಕೇವಲ 58 ಎಸೆಗಳಲ್ಲಿ 8 ಬೌಂಡರಿ, 3 ಸಿಕ್ಸರ್‌ಗಳೊಂದಿಗೆ 65 ರನ್ ಸಿಡಿಸಿ ಬಷೀರ್‌ಗೆ ವಿಕೆಟ್ ಒಪ್ಪಿಸಿದರು.

ನಂತರ ಒಂದಾದ ರವೀಂದ್ರ ಜಡೇಜಾ ಮತ್ತು ಶುಭ್‌ಮನ್ ಗಿಲ್ 5ನೇ ವಿಕೆಟ್ ಜೊತೆಯಾಟದಲ್ಲಿ 175 ರನ್‌ಗಳ ಜತೆಯಾಟ ಪ್ರದರ್ಶಿಸಿದರು. ಶುಭ್‌ಮನ್ ಗಿಲ್ 2ನೇ ಇನ್ನಿಂಗ್ಸ್‌ನಲ್ಲೂ ಶತಕ ಸಿಡಿಸಿದರು. 162 ಎಸೆತಗಳನ್ನು ಎದುರಿಸಿದ ಗಿಲ್ 13 ಬೌಂಡರಿ, 8 ಸಿಕ್ಸರ್‌ಗಳ ಸಹಿತ 161 ರನ್ ಗಳಿಸಿದರು. ಭಾರತ ತಂಡ ತನ್ನ ಎರಡನೇ ಇನ್ನಿಂಗ್‌ನಲ್ಲಿ 6 ವಿಕೆಟ್ ಕಳೆದುಕೊಂಡು 427 ರನ್ ಗಳಿಸಿ ಡಿಕ್ಲೇರ್ ಘೋಷಿಸಿಕೊಂಡಿತು, ಆ ಮೂಲಕ ಇಂಗ್ಲೆಂಡ್‌ಗೆ 608 ರನ್‌ಗಳ ಗುರಿ ನೀಡಿತು.

ದಾಖಲೆಗಳ ಸರದಾರ

ಟೀಮ್ ಇಂಡಿಯಾ ನಾಯಕ ಶುಭಮನ್ ಗಿಲ್ ಪ್ರಸ್ತುತ ತಮ್ಮ ವೃತ್ತಿಜೀವನದ ಅತ್ಯುತ್ತಮ ಫಾರ್ಮ್‌ನಲ್ಲಿದ್ದಾರೆ. ಇಂಗ್ಲೆಂಡ್ ಪ್ರವಾಸದ ಮೊದಲನೇ ಟೆಸ್ಟ್ ಪಂದ್ಯದಲ್ಲಿ ಶತಕ ಗಳಿಸಿದ ನಂತರ, ಪ್ರಸ್ತುತ ನಡೆಯುತ್ತಿರುವ ಎರಡನೇ ಟೆಸ್ಟ್ ಪಂದ್ಯದ ಪ್ರಥಮ ಇನಿಂಗ್ಸ್‌ನಲ್ಲಿಯೂ ದ್ವಿಶತಕ ಬಾರಿಸಿದ್ದರು. ಇದರ ನಂತರ ದ್ವಿತೀಯ ಇನಿಂಗ್ಸ್‌ನಲ್ಲಿಯೂ ಅವರು ಶನಿವಾರ ಭರ್ಜರಿ ಶತಕವನ್ನು ಗಳಿಸಿದ್ದಾರೆ. ಇದರೊಂದಿಗೆ ಪ್ರಸ್ತುತ ಸರಣಿಯಲ್ಲಿ ಶುಭಮನ್ ಗಿಲ್ ಕೇವಲ ಎರಡು ಟೆಸ್ಟ್ ಪಂದ್ಯಗಳಲ್ಲಿ 500ಕ್ಕೂ ಹೆಚ್ಚು ರನ್‌ಗಳನ್ನು ದಾಖಲಿಸಿದ್ದಾರೆ, ಈ ಮೂಲಕ ತಮ್ಮ ಟೆಸ್ಟ್ ಕ್ರಿಕೆಟ್‌ನಲ್ಲಿ ನೂತನ ಮೈಲುಗಲ್ಲು ತಲುಪಿದ್ದಾರೆ.

ಎಲೈಟ್ ಲಿಸ್ಟ್ ಸೇರಿದ ಮೊಹಮ್ಮದ್ ಸಿರಾಜ್

ಎಜ್‌ಬಾಸ್ಟನ್: ಭಾರತ ತಂಡದ ವೇಗಿ ಮೊಹಮ್ಮದ್ ಸಿರಾಜ್ ಇಲ್ಲಿ ನಡೆಯುತ್ತಿರುವ ಎರಡನೇ ಟೆಸ್ಟ್ ಪಂದ್ಯದಲ್ಲಿ ಶುಕ್ರವಾರದಂದು ಇಂಗ್ಲೆಂಡ್ ವಿರುದ್ಧ ಮೊದಲ ಇನ್ನಿಂಗ್ಸ್‌ನಲ್ಲಿ ಮಾರಕ ಬೌಲಿಂಗ್ ದಾಳಿ ನಡೆಸಿ 6 ವಿಕೆಟ್ ಪಡೆದು ಭಾರತ ತಂಡದ ಪರ ಹೊಸ ಇತಿಹಾಸ ಸೃಷ್ಟಿಸಿದ್ದಾರೆ. ಆ ಮೂಲಕ ಕಪಿಲ್ ದೇವ್, ಚೇತನ್ ಶರ್ಮಾ, ಇಶಾಂತ್ ಶರ್ಮಾ ಇರುವ ಎಲೈಟ್ ಲಿಸ್ಟ್‌ಗೆ ಸೇರ್ಪಡೆಯಾಗಿದ್ದಾರೆ.

1986ರಲ್ಲಿ ಭಾರತ ತಂಡದ ಮಾಜಿ ವೇಗಿ ಚೇತನ್ ಶರ್ಮಾ, ಎಜ್‌ಬಾಸ್ಟನ್‌ನಲ್ಲಿ ನಡೆದಿದ್ದ ಪಂದ್ಯದಲ್ಲಿ 58ಕ್ಕೆ 6 ವಿಕೆಟ್ ಸಾಧನೆ ಮಾಡಿದ್ದರು. ನಂತರ ಈ ದಾಖಲೆ ಬರೆದ ಭಾರತದ ಎರಡನೇ ಹಾಗೂ 1993 ರ ನಂತರ ಈ ಕ್ರೀಡಾಂಗಣದಲ್ಲಿ 6 ವಿಕೆಟ್ ಸಾಧನೆ ಮಾಡಿದ ಮೊದಲ ಬೌಲರ್ ಆಗಿ ಸಿರಾಜ್ ಹೊರಹೊಮ್ಮಿದ್ದಾರೆ.

ಇಂಗ್ಲೆಂಡ್‌ನ ಪ್ರಥಮ ಇನಿಂಗ್ಸ್‌ನಲ್ಲಿ ಉತ್ತಮ ಬೌಲಿಂಗ್ ಪ್ರದರ್ಶನ ತೋರಿದ ಮೊಹಮ್ಮದ್ ಸಿರಾಜ್ ಎದುರಾಳಿ ತಂಡವು 84 ರನ್ ಗಳಿಗೆ 5 ವಿಕೆಟ್ ಕಳೆದುಕೊಳ್ಳುವಂತೆ ಮಾಡಿ, ಭಾರತ ತಂಡಕ್ಕೆ ಮೇಲುಗೈ ಸಾಧಿಸಲು ನೆರವು ನೀಡಿದ್ದರು.

ಭಾರತದ ಮಹಿಳೆಯರಿಗೆ ಐದು ರನ್ ಸೋಲು

ಲಂಡನ್: ಸತತ ಎರಡು ಪಂದ್ಯಗಳಲ್ಲಿ ಗೆಲುವು ಪಡೆದಿದ್ದ ಭಾರತ ಮಹಿಳಾ ಕ್ರಿಕೆಟ್ ತಂಡವು ಕೆನ್ನಿಂಗ್ಟನ್‌ನ ಓವಲ್ ಕ್ರೀಡಾಂಗಣದಲ್ಲಿ ನಡೆದಿದ್ದ ಮೂರನೇ ಟಿ20 ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ ಕೇವಲ 5 ರನ್‌ಗಳಿಂದ ಸೋಲು ಅನುಭವಿಸಿದೆ. ಇನ್ನುಳಿದ ಎರಡು ಪಂದ್ಯಗಳಲ್ಲಿ ಒಂದರಲ್ಲಿ ಗೆಲುವು ಪಡೆದರೆ, ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ತಂಡ ಈ ಸರಣಿಯನ್ನು ಗೆಲ್ಲಲಿದೆ.

ಸ್ಮೃತಿ ಮಂಧಾನಾ- ಶಫಾಲಿ ವರ್ಮಾ ಜತೆಯಾಟ ವಿಫಲ

ಇಂಗ್ಲೆಂಡ್ ನೀಡಿದ್ದ 172 ರನ್‌ಗಳ ಗುರಿಯನ್ನು ಹಿಂಬಾಲಿಸಿದ ಭಾರತ ಮಹಿಳಾ ತಂಡ, ಸ್ಮೃತಿ ಮಂಧಾನಾ ಹಾಗೂ ಶಫಾಲಿ ವರ್ಮಾ ಅವರ ಉತ್ತಮ ಬ್ಯಾಟಿಂಗ್‌ನ ಹೊರತಾಗಿಯೂ 20 ಓವರ್‌ಗಳಲ್ಲಿ 5 ವಿಕೆಟ್‌ಗಳ ನಷ್ಟಕ್ಕೆ 166 ರನ್‌ಗಳಿಗೆ ಸೀಮಿತವಾಯಿತು. ಮಂಧಾನಾ 56 ರನ್ ಗಳಿಸಿದರೆ, ಶಫಾಲಿ ವರ್ಮಾ 47 ರನ್ ಗಳಿಸಿದರು. ಜೆಮಿಮಾ ರೊಡ್ರಿಗಸ್ ಹಾಗೂ ಹರ್ಮನ್‌ಪ್ರೀತ್ ಕೌರ್ ಕ್ರಮವಾಗಿ 20 ಮತ್ತು 23 ರನ್ ಗಳಿಸಿದರು. ಇನಿಂಗ್ಸ್ ಆರಂಭಿಸಿದ ಸ್ಮೃತಿ ಮಂಧಾನಾ ಹಾಗೂ ಶಫಾಲಿ ವರ್ಮಾ ಮುರಿಯದ ಮೊದಲನೇ ವಿಕೆಟ್‌ಗೆ 85 ರನ್‌ಗಳನ್ನು ಕಲೆ ಹಾಕಿ, ಭಾರತಕ್ಕೆ ಭರ್ಜರಿ ಆರಂಭವನ್ನು ತಂದುಕೊಟ್ಟಿದ್ದರು. ಕೇವಲ 25 ಎಸೆತಗಳಲ್ಲಿ 47 ರನ್ ಸಿಡಿಸಿದ್ದ ಶಫಾಲಿ ವರ್ಮಾ ಅರ್ಧ ಶತಕದಂಚಿನಲ್ಲಿ ವಿಕೆಟ್ ಒಪ್ಪಿಸಿದರು. ಕೊನೆಯವರೆಗೂ ಹೋರಾಟ ನಡಸಿದ ನಾಯಕಿ ಹರ್ಮನ್‌ಪ್ರೀತ್ ಕೌರ್ 17 ಎಸೆತಗಳಲ್ಲಿ 23 ರನ್ ಗಳಿಸಿದರೂ ಭಾರತ ತಂಡವನ್ನು ಗೆಲ್ಲಿಸಲು ಸಾಧ್ಯವಾಗಲಿಲ್ಲ.

ಅದಕ್ಕೂ ಮುನ್ನ ಮೊದಲು ಬ್ಯಾಟ್ ಮಾಡಿದ್ದ ಇಂಗ್ಲೆಂಡ್ ತಂಡ, ತನ್ನ ಪಾಲಿನ 20 ಓವರ್‌ಗಳಿಗೆ 9 ವಿಕೆಟ್‌ಗಳ ನಷ್ಟಕ್ಕೆ 171 ರನ್‌ಗಳನ್ನು ಕಲೆ ಹಾಕಿತ್ತು. ಇಂಗ್ಲೆಂಡ್ ಪರ ಇನಿಂಗ್ಸ್ ಆರಂಭಿಸಿದ್ದ ಸೋಫಿಯಾ ಡಂಕ್ಲಿ ಹಾಗೂ ವೇ ಹಾಡ್ಜ್ ಮುರಿಯದ ಮೊದಲನೇ ವಿಕೆಟ್‌ಗೆ ಸ್ಫೋಟಕ ಬ್ಯಾಟ್ ಮಾಡಿ 137 ರನ್‌ಗಳನ್ನು ಕಲೆ ಹಾಕಿದ್ದರು. ಸ್ಫೋಟಕ ಬ್ಯಾಟ್ ಮಾಡಿದ ಸೋಫಿಯಾ ಡಂಕ್ಲಿ ಅವರು ಕೇವಲ 53 ಎಸೆತಗಳಲ್ಲಿ ಒಂದು ಸಿಕ್ಸರ್ ಹಾಗೂ 7 ಬೌಂಡರಿಗಳೊಂದಿಗೆ 75 ರನ್‌ಗಳನ್ನು ಸಿಡಿಸಿ, ದೀಪ್ತಿ ಶರ್ಮಾಗೆ ವಿಕೆಟ್ ಒಪ್ಪಿಸಿದರು. ಅವರ ಜೊತೆ ಮೊದಲನೇ ವಿಕೆಟ್ ಜತೆಯಾಟವನ್ನು ಆಡಿದ ವ್ಯಾಟ್ ಹಾಡ್ಜ್ 42 ಎಸೆತಗಳಲ್ಲಿ ಮೂರು ಸಿಕ್ಸರ್ ಹಾಗೂ 7 ಬೌಂಡರಿಗಳೊಂದಿಗೆ 66 ರನ್ ಗಳಿಸಿ, ಇಂಗ್ಲೆಂಡ್ ತಂಡ ದೊಡ್ಡ ಮೊತ್ತವನ್ನು ಕಲೆ ಹಾಕಲು ನೆರವು ನೀಡಿದ್ದರು. ಭಾರತ ಪರ ಅರುಂಧತಿ ರೆಡ್ಡಿ ಹಾಗೂ ದೀಪ್ತಿ ಶರ್ಮಾ ತಲಾ ಮೂರು ವಿಕೆಟ್‌ಗಳನ್ನು ಕಬಳಿಸಿದರು.

ವಿಂಬಲ್ಡನ್: ಮ್ಯಾಡಿಸನ್ ಕೀಸ್ ಹೊರಕ್ಕೆ

ಲಂಡನ್: ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಅವರು ವಿಂಬಲ್ಡನ್ ಟೆನ್ನಿಸ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ನಾಲ್ಕನೇ ಸುತ್ತಿಗೆ ಲಗ್ಗೆ ಹಾಕಿದರು. ಮಹಿಳೆಯರ ಸಿಂಗಲ್ಸ್‌ನಲ್ಲಿ 6ನೇ ಶ್ರೇಯಾಂಕದ ಮ್ಯಾಡಿಸನ್ ಕೀಸ್ ಟೂರ್ನಿಯಿಂದ ಹೊರಬಿದ್ದರು. ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಹ್ಯಾಟ್ರಿಕ್ ಪ್ರಶಸ್ತಿಯ ಛಲದಲ್ಲಿರುವ ಸ್ಪೇನ್‌ನ ಅಲ್ಕರಾಜ್ 6-1, 3-6, 6-3, 6-4ರಿಂದ ಜರ್ಮನಿಯ ಜಾನ್-ಲೆನ್ನಾರ್ಡ್ ಸ್ಟ್ರಫ್ ವಿರುದ್ಧ ಗೆಲುವು ಸಾಧಿಸಿದರು. 2ನೇ ಶ್ರೇಯಾಂಕದ ಅಲ್ಕರಾಜ್ ಇಲ್ಲಿ 2022ರಲ್ಲಿ 4ನೇ ಸುತ್ತಿನಲ್ಲಿ ಯಾನಿಕ್ ಸಿನ್ನರ್ ವಿರುದ್ಧ ಕೊನೆಯ ಬಾರಿ ಸೋತಿದ್ದರು. ಕಳೆದ 2 ವಿಂಬಲ್ಡನ್ ಫೈನಲ್‌ಗಳಲ್ಲಿ ನೊವಾಕ್ ಜೊಕೊವಿಕ್ ಅವರನ್ನು ಸೋಲಿಸಿ ಪ್ರಶಸ್ತಿ ಗೆದ್ದಿದ್ದರು.

ಮ್ಯಾಡಿಸನ್ ಕೀಸ್‌ಗೆ ಆಘಾತ: ಜರ್ಮನಿಯ ಲಾರಾ ಸಿಗ್ಮಂಡ್ 6-3, 6-3ರ ಸೆಟ್‌ಗಳಿಂದ ಆಸ್ಟ್ರೇಲಿಯಾ ಓಪನ್ ಚಾಂಪಿಯನ್ ಮ್ಯಾಡಿಸನ್ (ಅಮೆರಿಕ) ಅವರಿಗೆ ಆಘಾತ ನೀಡಿದರು. ಡಬಲ್‌ನಲ್ಲಿ ಮೂರು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದಿರುವ ಲಾರಾ, ಇಲ್ಲಿ ಇದೇ ಮೊದಲ ಬಾರಿ ಸಿಂಗಲ್ಸ್‌ನಲ್ಲಿ ನಾಲ್ಕನೇ ಸುತ್ತು ತಲುಪಿದ್ದಾರೆ.

ಸಿನ್ನರ್‌ಗೆ ಗೆಲುವು: ವಿಶ್ವದ ಅಗ್ರಮಾನ್ಯ ಆಟಗಾರ ಯಾನಿಕ್ ಸಿನ್ನರ್ ಅವರು ನಿರಾಯಾಸವಾಗಿ ಮೂರನೇ ಸುತ್ತನ್ನು ಪ್ರವೇಶಿಸಿದರು. ಇಟಲಿಯ 23 ವರ್ಷ ವಯಸ್ಸಿನ ಸಿನ್ನರ್ 6-1, 6-1, 6-3ರ ನೇರ ಸೆಟ್‌ಗಳಿಂದ ಆಸ್ಟ್ರೇಲಿಯಾದ ಅಲೆಕ್ಸಾಂಡರ್ ವುಕಿಕ್ ಅವರನ್ನು ಹಿಮ್ಮೆಟ್ಟಿಸಿದರು.

ರಾಪಿಡ್ ಬ್ಲಿಟ್ಜ್ ಚೆಸ್ ಪ್ರಶಸ್ತಿ ಗೆದ್ದ ಡಿ. ಗುಕೇಶ್

ಜಾಗ್ರೆಬ್(ಕ್ರೊಯೇಷಿಯಾ): ಹಾಲಿ ವಿಶ್ವ ಚಾಂಪಿಯನ್ ಡಿ. ಗುಕೇಶ್ ಶುಕ್ರವಾರ ನಡೆದ ಸೂಪರ್ ಯುನೈಟೆಡ್ ರಾಪಿಡ್ ಬ್ಲಿಟ್ಜ್ ಚೆಸ್ ಟೂರ್ನಿಯ ರಾಪಿಡ್ ಪ್ರಶಸ್ತಿಯನ್ನು ಗೆಲ್ಲುವ ಮೂಲಕ ಮತ್ತೊಂದು ಕಿರೀಟವನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ.

ಈ ಸ್ಪರ್ಧೆಯು 2025ರ ಗ್ರ್ಯಾಂಡ್ ಚೆಸ್ ಟೂರ್ನಿಯ ಭಾಗವಾಗಿದ್ದು, 19 ವರ್ಷದ ಭಾರತೀಯ ಆಟಗಾರ ನಿಖರತೆ, ಸಂಯಮ ಮತ್ತು ಅದ್ಭುತ ಫಾರ್ಮ್ ಪ್ರದರ್ಶಿಸಿ ಸಂಭಾವ್ಯ 18 ಅಂಕಗಳಲ್ಲಿ 14 ಅಂಕಗಳೊಂದಿಗೆ ಟೂರ್ನಮೆಂಟ್‌ನಲ್ಲಿ ಅಗ್ರಸ್ಥಾನ ಪಡೆದರು.

ಗುಕೇಶ್ ಟೂರ್ನಮೆಂಟ್‌ನಲ್ಲಿ ಉತ್ತಮ ಆರಂಭ ಪಡೆದಿರಲಿಲ್ಲ. ಮೊದಲ ಸುತ್ತಿನಲ್ಲಿ ಜಾನ್-ಕ್ರಿಜ್ಟೋಫ್ ಡುಡಾ ವಿರುದ್ಧ ಸೋತಿದ್ದರು. ಆದಾಗ್ಯೂ, ಬಳಿಕ ಅವರು ಸತತ ಐದು ಜಯಗಳೊಂದಿಗೆ, ಟೂರ್ನಿಯಲ್ಲಿ ತನ್ನ ಹಾದಿಯನ್ನೇ ಬದಲಿಸಿಕೊಂಡರು. ಇದರಲ್ಲಿ 4ನೇ ಸುತ್ತಿನಲ್ಲಿ ವಿಶ್ವದ ನಂ. 1 ಮ್ಯಾಗ್ನಸ್ ಕಾರ್ಲ್‌ಸೆನ್ ವಿರುದ್ಧ ಅದ್ಭುತ ಗೆಲುವು ಸೇರಿದ ಫಲಿತಾಂಶವು ಅವರನ್ನು ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಭದ್ರವಾಗಿ ಇರಿಸಿತು.

ಅಂತಿಮ ಸುತ್ತಿನಲ್ಲಿ ಅಮೆರಿಕದ ವೆಸ್ಲಿ ಸೋ ವಿರುದ್ಧ ಜಯ ಗಳಿಸುವ ಮೂಲಕ ಅವರು ರಾಪಿಡ್ ವಿಭಾಗದಲ್ಲಿ ಅಭಿಯಾನವನ್ನು ಕೊನೆಗೊಳಿಸಿದರು. ಗುಕೇಶ್ 36-ನಡೆಗಳ ಸಮನ್ವಯದ ಪ್ರದರ್ಶನ ತೋರಿದರು, ಆ ಮೂಲಕ ಎರಡು ಪೂರ್ಣ ಅಂಕಗಳು ಲಭಿಸಿದವು. ಟೂರ್ನಿಯಲ್ಲಿ ಅವರು ಆರು ಗೆಲುವುಗಳು, ಎರಡು ಡ್ರಾ ಮತ್ತು ಒಂದು ಸೋಲು ಕಂಡರು.

ಅಂತಿಮ ದಿನ ಗುಕೇಶ್‌ಗೆ ರಾಪಿಡ್ ಪ್ರಶಸ್ತಿ: 3ನೇ ದಿನದಂದು ಗುಕೇಶ್ ಅವರ ಅಭಿಯಾನವು ಡಚ್ ಗ್ರ್ಯಾಂಡ್ ಮಾಸ್ಟರ್ ಅನೀಶ್ ಗಿರಿ ವಿರುದ್ಧ ಡ್ರಾದೊಂದಿಗೆ ಪ್ರಾರಂಭವಾಯಿತು. ಆಟದ ಮಧ್ಯಮ ಭಾಗವನ್ನು ತಲುಪಿದಾಗ, ಇಬ್ಬರೂ ಎದುರಾಳಿಗಳು ಕೈಕುಲುಕಿದರು. ದಿನದ ಎರಡನೇ ಪಂದ್ಯದಲ್ಲಿ, ಕ್ರೊಯೇಷಿಯಾದ ಇವಾನ್ ಅರಿಕ್ ವಿರುದ್ಧ 87 ನಡೆಗಳ ಮುಖಾಮುಖಿಯಲ್ಲಿ ಗುಕೇಶ್ ಮಾರ್ಷಲ್ ಗ್ಯಾಂಬಿಟ್ ಅನ್ನು ಬಳಸಿಕೊಂಡಿದ್ದರು.

ಆಗಸ್ಟ್‌ನಲ್ಲಿ ಮುತ್ತಣ್ಣನ ದರ್ಶನ

ಹಿರಿಯ ನಟ ದೇವರಾಜ್ ಪುತ್ರ ಪ್ರಣಮ್ ದೇವರಾಜ್, ಮುತ್ತಣ್ಣನಾಗಿ ತೆರೆಗೆ ಬರಲು ಸಿದ್ಧವಾಗಿದ್ದಾರೆ. ಪ್ರಣಮ್, ಸನ್ ಆಫ್ ಮುತ್ತಣ್ಣ ಚಿತ್ರದಲ್ಲಿ ನಟಿಸಿದ್ದು, ಚಿತ್ರೀಕರಣ ಮುಗಿಸಿರುವ ಈ ಚಿತ್ರ ತೆರೆಗೆ ಸಿದ್ಧವಾಗಿದೆ. ಈಗಾಗಲೇ ಹಾಡು ಹಾಗೂ ಟೀಸರ್‌ನಲ್ಲಿ ಮನಗೆದ್ದಿರುವ ಸನ್ ಆಫ್ ಮುತ್ತಣ್ಣ ಆಗಸ್ಟ್‌ನಲ್ಲಿ ತೆರೆಗೆ ಬರಲಿದೆ. ಅಪ್ಪ, ಮಗನ ಬಾಂಧವ್ಯದ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ರಂಗಾಯಣ ರಘು ಪ್ರಣಂ ದೇವರಾಜ್ ತಂದೆಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ದಿಯಾ ಖುಷಿ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಸುಚೇಂದ್ರ ಪ್ರಸಾದ್, ಗಿರೀಶ್ ಶಿವಣ್ಣ, ತಬಲ ನಾಣಿ, ಶ್ರೀನಿವಾಸ್ ಪ್ರಭು, ಸುಧಾ ಬೆಳವಾಡಿ, ಅರುಣ್ ಚಕ್ರವರ್ತಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಪುರಾತನ ಫಿಲಂಸ್‌ನಲ್ಲಿ ನಿರ್ಮಾಣವಾಗಿರುವ ಈ ಚಿತ್ರವನ್ನು ಶ್ರೀಕಾಂತ್ ಹುಣಸೂರು ನಿರ್ದೇಶನ ಮಾಡಿದ್ದಾರೆ. ಸನ್ ಆಫ್ ಮುತ್ತಣ್ಣ ಆಗಸ್ಟ್ 22 ರಂದು ರಾಜ್ಯಾದ್ಯಂತ ಅದ್ದೂರಿಯಾಗಿ ಬಿಡುಗಡೆಯಾಗಲಿದೆ. ಸಚಿನ್ ಬಸ್ರೂರು ಸಂಗೀತವಿರುವ ಸನ್ ಆಫ್ ಮುತ್ತಣ್ಣ ಸಿನಿಮಾದ ಹಾಡುಗಳಿಗೆ ಯೋಗರಾಜ್ ಭಟ್, ಜಯಂತ್ ಕಾಯ್ಕಿಣಿ, ಪ್ರಮೋದ್ ಮರವಂತೆ ಸಾಹಿತ್ಯ ರಚಿಸಿದ್ದಾರೆ. ಕೃಷ್ಣ ಛಾಯಾಗ್ರಹಣ, ಹರೀಶ್ ಕೊಮ್ಮೆ ಸಂಕಲನ ಈ ಚಿತ್ರಕ್ಕಿದೆ.

ಸೆಟ್ಟೇರಿತು ಕಿಚ್ಚನ ಹೊಸ ಚಿತ್ರ

ಕಳೆದ ವರ್ಷ ತೆರೆಗೆ ಬಂದ ಕಿಚ್ಚ ಸುದೀಪ್ ಅಭಿನಯದ ಮ್ಯಾಕ್ಸ್ ಭರ್ಜರಿ ಯಶಸ್ಸು ಪಡೆಯಿತು. ಹೊಸ ಅವತಾರದಲ್ಲಿ ಕಿಚ್ಚನನ್ನು ಕಣ್ತುಂಬಿಕೊಂಡ ಸಿನಿಪ್ರಿಯರು ಸುದೀಪ್ ಅಭಿನಯಕ್ಕೆ ಬಹಪರಾಕ್ ಎಂದರು. ಮ್ಯಾಕ್ಸ್ ಯಶಸ್ಸಿನ ಖುಷಿಯಲ್ಲಿ ಮುಂದೆ ಮ್ಯಾಕ್ಸ್ 2 ಕೂಡ ಮೂಡಿಬರಬಹುದು ಎಂಬ ನಿರೀಕ್ಷೆ ಎಲ್ಲರಲ್ಲಿಯೂ ಇತ್ತು. ಅದಕ್ಕೆ ಮ್ಯಾಕ್ಸ್ ತಂಡ ಕೂಡ ತಯಾರಿ ನಡೆಸಿತ್ತು. ಅಂತೆಯೇ ಈಗ ಹೊಸ ಸಿನಿಮಾ ಘೋಷಣೆಯಾಗಿದೆ. ಮ್ಯಾಕ್ಸ್ ಚಿತ್ರವನ್ನು ನಿರ್ದೇಶಿಸಿದ್ದ ವಿಜಯ ಕಾರ್ತಿಕೇಯನ್ ಅವರೇ ಈ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ ಕೆ47 ಶೀರ್ಷಿಕೆಯಲ್ಲಿ ಸಿನಿಮಾ ಸೆಟ್ಟೇರಿದ್ದು, ಸೋಮವಾರದಿಂದ ಚಿತ್ರೀಕರಣ ಆರಂಭವಾಗಲಿದೆ. ಹಾಗಂತ ಇದು ಮ್ಯಾಕ್ಸ್ 2 ಅಲ್ಲ, ಇದು ಬೇರೆಯದೆ ರೀತಿಯ ಕಥೆಯನ್ನು ಒಳಗೊಂಡಿದೆ ಎಂದು ಕಿಚ್ಚ ಸುದೀಪ್ ಸ್ಪಷ್ಟಪಡಿಸಿದ್ದಾರೆ. ಹಸೊ ಚಿತ್ರದ ಟೀಸರ್ ರಿಲೀಸ್ ಆಗಿದ್ದು ಕಿಚ್ಚ ಮಾಸ್ ಅವತಾರದಲ್ಲಿ ಮಿಂಚಿದ್ದಾರೆ

ಡಿಸೆಂಬರ್‌ನಲ್ಲಿ ತೆರೆಗೆ: ಮ್ಯಾಕ್ಸ್ ಸಕ್ಸಸ್ ಬಳಿಕ ಕಿಚ್ಚ ಸುದೀಪ್ ಹಾಗೂ ವಿಜಯ್ ಕಾರ್ತಿಕೇಯ ಒಂದಾಗಿದ್ದು, ಮತ್ತೊಂದು ಹೈವೋಲ್ಟೇಜ್ ಸಿನಿಮಾ ಮೂಡಿಬರಲಿದೆ. ತಮಿಳುನಾಡಿನಲ್ಲಿ ಚಿತ್ರದ ಚಿತ್ರೀಕರಣ ನಡೆಯಲಿದೆ. ಅಲ್ಲಿ ಅದ್ದೂರಿ ಸೆಟ್ ಹಾಕಿ ಚಿತ್ರೀಕರಣ ನಡೆಸಲು ಪ್ಲಾನ್ ಮಾಡಲಾಗಿದೆ. ಆರು ತಿಂಗಳಲ್ಲಿ ಚಿತ್ರೀಕರಣ ಮುಗಿಸಿ, ಕ್ರಿಸ್‌ಮಸ್ ಹಬ್ಬದಂದೇ ಚಿತ್ರವನ್ನು ತೆರೆಗೆ ತರಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ. ಹಾಗಾಗಿ ಕಿಚ್ಚ ಈ ವರ್ಷವೂ ಸೂಪರ್ ಹಿಟ್ ಸಿನಿಮಾ ನೋಡುವುದು ಖಚಿತವಾಗಿದೆ. ಸತ್ಯಜ್ಯೋತಿ ಫಿಲಂಸ್‌ನಲ್ಲಿ ಈ ಚಿತ್ರ ನಿರ್ಮಾಣವಾಗುತ್ತಿದೆ.

ಮ್ಯಾಕ್ಸ್ 2 ತರಬೇಕು ಎಂದು ಚರ್ಚಿಸಿದ್ದು, ಆದರೆ ಈಗ ಸೆಟ್ಟೇರಿರುವ ಚಿತ್ರಕ್ಕೂ ಮ್ಯಾಕ್ಸ್ ಕಥೆಗೂ ಸಂಬಂಧವಿಲ್ಲ, ಇಲ್ಲಿ ಬೇರೆಯದೇ ಕಥೆಯಿದೆ. ಡಿಸೆಂಬರ್‌ನಲ್ಲಿ ಚಿತ್ರವನ್ನು ತೆರೆಗೆ ತರಬೇಕು ಎಂಬ ಯೋಜನೆ ನಮಗಿದೆ, ಅದಕ್ಕೆ ತಕ್ಕಂತೆ ನಮ್ಮ ಚಿತ್ರತಂಡವೂ ಕಾರ್ಯನಿರ್ವಹಿಸುತ್ತಿದೆ. ಆಷಾಢ ಎಲ್ಲ ನನಗೆ ತಿಳಿದಿಲ್ಲ, ಕೆಲಸವಷ್ಟೇ ನನಗೆ ಗೊತ್ತಿದೆ.

– ಕಿಚ್ಚ ಸುದೀಪ್

ಹೊಸ ಪ್ರಪಂಚ

ಮ್ಯಾಕ್ಸ್ ಬಳಿಕ ಸುದೀಪ್ ಬಿಲ್ಲರಂಗ ಭಾಷಾ ಚಿತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಈ ಚಿತ್ರದ ಚಿತ್ರೀಕರಣ ಆರಂಭವಾಗಿದ್ದು, ಭರದಿಂದ ಸಾಗುತ್ತಿದೆ. ಇದು ಅದ್ದೂರಿ ಬಜೆಟ್‌ನ ಸಿನಿಮಾವಾಗಿದ್ದು, ಎಂಟು ಎಕರೆಯಲ್ಲಿ ಬೃಹತ್ ಸೆಟ್ ನಿರ್ಮಿಸಿ ಅಲ್ಲಿಯೇ ಶೂಟಿಂಗ್ ನಡೆಸಲಾಗುತ್ತಿದೆ. ಬಿಲ್ಲರಂಗ ಭಾಷಾ ಚಿತ್ರಕ್ಕಾಗಿ ದೊಡ್ಡ ಸೆಟ್ ಹಾಕಲಾಗಿದೆ ಅಲ್ಲೊಂದು ಹೊಸ ಪ್ರಪಂಚವೇ ನಿರ್ಮಾಣವಾಗಿದೆ. ಬಿಲ್ಲರಂಗ ಭಾಷಾದ ಚಿತ್ರೀಕರಣಕ್ಕಾಗಿ ಇನ್ನೂ ಹಲವು ದಿನಗಳು ಬೇಕಾಗಬಹುದು. ಹಾಗಾಗಿ ಆ ನಡುವೆ ಮತ್ತೊಂದು ಚಿತ್ರವನ್ನು ತೆರೆಗೆ ತರಬೇಕು ಎಂಬ ನಿಟ್ಟಿನಲ್ಲಿ ಈ ಚಿತ್ರವನ್ನು ಆರಂಭಿಸಿದ್ದೇವೆ ಎಂದು ಸುದೀಪ್ ತಿಳಿಸಿದ್ದಾರೆ.

ಟಾಲಿವುಡ್ ಸ್ಟಾರ್ ನಟ ಪವನ್ ಕಲ್ಯಾಣ್ ನಟನೆಯ ಬಹುನಿರೀಕ್ಷಿತ ಸಿನಿಮಾ ಹರಿಹರ ವೀರಮಲ್ಲು ಬಿಡುಗಡೆಗೆ ಸಜ್ಜಾಗಿದೆ. ಸದ್ಯ ಈ ಚಿತ್ರದ ಟ್ರೇಲರ್ ರಿಲೀಸ್ ಆಗಿದ್ದು ಗಮನಸೆಳೆಯುತ್ತಿದೆ. ಐತಿಹಾಸಿಕ ಕಥೆಯ ಈ ಚಿತ್ರದಲ್ಲಿ ಪವನ್ ಕಲ್ಯಾಣ್ ವೀರಯೋಧನಾಗಿ ಅಬ್ಬರಿಸಿದ್ದಾರೆ. ಪವನ್ ಎದುರು ಬಾಬಿ ಡಿಯೋಲ್ ಖಳನಾಗಿ ಖದರ್ ತೋರಿಸಿದ್ದಾರೆ. ರೋಮಾಂಚಕ ಸಾಹಸ ದೃಶ್ಯಗಳು ಗಮನಸೆಳೆಯುತ್ತಿದ್ದು, ರೋಚಕ ಯುದ್ಧದ ಸನ್ನಿವೇಶಗಳು ಚಿತ್ರದಲ್ಲಿದೆ. ಹರಿಹರ ವೀರಮಲ್ಲು ಟ್ರೇಲರ್ ಕನ್ನಡ, ತಮಿಳು, ತೆಲುಗು, ಮಲಯಾಳಂ ಸೇರಿದಂತೆ ಹಿಂದಿ ಭಾಷೆಯಲ್ಲಿ ರಿಲೀಸ್ ಆಗಿದೆ.

ಹದಿನೇಳನೇ ಶತಮಾನದಲ್ಲಿ ಮೊಘಲ್ ಸಾಮ್ರಾಜ್ಯದ ವಿರುದ್ಧ ಹೋರಾಡಿದ ನಾಯಕನಾಗಿ ಪವನ್ ಕಲ್ಯಾಣ್ ಮಿಂಚಿದ್ದಾರೆ. ಮುನ್ನೂರು ವರ್ಷಗಳ ಹಿಂದಿನ ಕಾಲಘಟ್ಟದಲ್ಲಿ ಸಾಗುವ ಸ್ಟೋರಿ ಇಲ್ಲಿದ್ದು, ಚಿತ್ರ ಅದ್ದೂರಿಯಾಗಿ ಮೂಡಿಬಂದಿದೆ. ವೀರಮಲ್ಲು ಆಗಿ ಪವನ್ ಕಲ್ಯಾಣ್ ಲುಕ್, ಗೆಟಪ್ ಭರವಸೆ ಮೂಡಿಸಿದೆ. ನಿಧಿ ಅಗರ್‌ವಾಲ್ ನಾಯಕಿಯಾಗಿ ಮಿಂಚಿದ್ದಾರೆ. ನರ್ಗೀಸ್ ಫಕ್ರಿ, ಆದಿತ್ಯಾ ಮೆನನ್, ಶುಭಲೇಖ ಸುಧಾಕರ್ ಮುಂತಾದವರು ತಾರಾಗಣದಲ್ಲಿದ್ದಾರೆ. ಜ್ಯೋತಿ ಕೃಷ್ಣ ಮತ್ತು ಕ್ರಿಶ್ ಜಗರ್ಲಮುಡಿ ನಿರ್ದೇಶನದಲ್ಲಿ ಸಿದ್ಧವಾಗಿರುವ ಹರಿಹರ ವೀರಮಲ್ಲು ಪ್ಯಾನ್ ಇಂಡಿಯಾ ಮಟ್ಟದಲ್ಲಿ ನಿರ್ಮಾಣವಾಗಿದೆ.

ಮೆಗಾ ಸೂರ್ಯ ಪ್ರೊಡಕ್ಷನ್ಸ್ ಬ್ಯಾನರ್‌ನಲ್ಲಿ ಎ.ದಯಾಕರ್ ರಾವ್ ಈ ಚಿತ್ರವನ್ನು ನಿರ್ಮಿಸಿದ್ದು, ಆಸ್ಕರ್ ಪ್ರಶಸ್ತಿ ವಿಜೇತ ಎಂ.ಎಂ.ಕೀರವಾಣಿ ಸಂಗೀತ ನಿರ್ದೇಶನ, ಮನೋಜ್ ಪರಮಹಂಸ ಛಾಯಾಗ್ರಹಣ ಚಿತ್ರಕ್ಕಿದೆ. ಹರಿ ಹರ ವೀರ ಮಲ್ಲು ಜುಲೈ 24ರಂದು ಅದ್ದೂರಿಯಾಗಿ ತೆರೆಗೆ ಬರಲಿದೆ.

ತೆರೆಗೆ ಸಿದ್ಧವಾದ ಸ್ವಪ್ನಮಂಟಪ

ಖ್ಯಾತ ನಿರ್ದೇಶಕ ಬರಗೂರು ರಾಮಚಂದ್ರಪ್ಪ ನಿರ್ದೇಶನದ ಸ್ವಪ್ನಮಂಟಪ ಚಿತ್ರ ಇದೇ 25 ರಂದು ತೆರೆಗೆ ಬರಲಿದೆ. ಸ್ವಪ್ನ ಮಂಟಪವು ಬರಗೂರು ರಾಮಚಂದ್ರಪ್ಪ ಅವರ ಸ್ವಪ್ನ ಮಂಟಪ ಕಾಂದಬರಿಯನ್ನು ಆಧರಿಸಿ ಸಿದ್ಧವಾಗಿದೆ. ಇದು ಪಾರಂಪರಿಕ ಸ್ಥಳಗಳ ಸಂರಕ್ಷಣೆಯನ್ನು ಪ್ರತಿಪಾದಿಸುವ ಚಿತ್ರವಾಗಿದ್ದು, ಒಂದು ಹಳ್ಳಿಯಲ್ಲಿ ರಾಜನೊಬ್ಬ ನಿರ್ಮಿಸಿದ ಸ್ವಪ್ನಮಂಟಪವನ್ನು ಕೆಡವಿ ಅನ್ಯ ಕಾರ್ಯಗಳಿಗೆ ಬಳಸಲು ಯತ್ನಿಸಿದಾಗ ನಾಯಕ ಮತ್ತು ನಾಯಕಿ, ಜನರಲ್ಲಿ ಜಾಗೃತಿ ಮೂಡಿಸಿ ಆ ಪಾರಂಪರಿಕ ಸ್ಥಳವನ್ನು ಉಳಿಸುವ ಕಥೆ ಇಲ್ಲಿದೆ. ಅದರ ಜತೆಗೆ ಅನೇಕ ತಿರುವುಗಳನ್ನು ಒಳಗೊಂಡಿರುವ ಕಥಾವಸ್ತು ಈ ಚಿತ್ರದಲ್ಲಿದೆ. ಸ್ವಪ್ನ ಮಂಟಪ ಈಗಾಗಲೇ ಅನೇಕ ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡು ಮೆಚ್ಚುಗೆ ಪಡೆದಿದೆ.

ವಿಜಯ ರಾಘವೇಂದ್ರ ನಾಯಕನಾಗಿ ನಟಿಸಿದ್ದು, ರಂಜಿನಿ ರಾಘವನ್ ನಾಯಕಿಯಾಗಿ ಅಭಿನಯಿಸಿದ್ದಾರೆ. ಇವರಿಬ್ಬರೂ ದ್ವಿಪಾತ್ರದಲ್ಲಿ ಮಿಂಚಿದ್ದಾರೆ. ಉಳಿದಂತೆ ಸುಂದರರಾಜ್, ಶೋಭಾ ರಾಘವೇಂದ್ರ, ರಜನಿ, ಅಂಬರೀಶ್ ಸಾರಂಗಿ, ರಾಜಪ್ಪ ದಳವಾಯಿ, ವೆಂಕಟರಾಜು, ಉಮ್ಮತ್ತೂರು ಬಸವರಾಜು, ಶಿವಲಿಂಗ ಪ್ರಸಾದ್, ಮೈಸೂರು ಮಂಜುಳಾ ಮುಂತಾದವರು ತಾರಾಗಣದಲ್ಲಿದ್ದಾರೆ. ಮಲೈ ಮಹಾದೇಶ್ವರ ಎಂಟರ್‌ಪ್ರೈಸಸ್ ಬ್ಯಾನರ್‌ನಲ್ಲಿ ಬಾಬುನಾಯಕ್ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಸುರೇಶ್ ಅರಸು ಸಂಕಲನ, ನಾಗರಾಜ ಆದವಾನಿ ಛಾಯಾಗ್ರಹಣ, ಶಮಿತಾ ಮಲ್ನಾಡ್ ಸಂಗೀತ ನಿರ್ದೇಶನ, ತ್ರಿಭುವನ್ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ.

ವಿರಾಮ
ಓದುವ ಲೋಕಕ್ಕೆ ಒದುವ ನಿಲ್ದಾಣ
ವಿಶ್ವವಾಣಿ
06.07.2025
ಭಾನುವಾರ

ನನಸಾಗುತ್ತಿದೆ ಆರು ದಶಕಗಳ ಕನಸು

ಸೇತುವೆ ನಮ್ಮ ಹಕ್ಕು ನಾವು ಕೇಳುವ ಭಿಕ್ಷೆ ಅಲ್ಲ!

ಲಿಂಗನಮಕ್ಕಿ ಅಣೆಕಟ್ಟಿನ ನಿರ್ಮಾಣದಿಂದಾಗಿ, 124 ಹಳ್ಳಿಗಳು ಮುಳುಗಿದವು. ಮುಳುಗದೇ ಉಳಿದುಕೊಂಡ ಹಳ್ಳಿಗಳು ಹಿನ್ನೀರಿನ ವ್ಯಾಪ್ತಿಯಲ್ಲಿ ಸಿಕ್ಕಿಬಿದ್ದು ಅಕ್ಷರಶಃ ದ್ವೀಪಗಳಾದವು. ನಾಡಿಗೆ ವಿದ್ಯುತ್ ನೀಡುವ ಭರದಲ್ಲಿ, ಆ ಹಳ್ಳಿಗಳಿಗೆ ಸಮರ್ಪಕ ರಸ್ತೆಯನ್ನು, ಸೇತುವೆಯನ್ನು ಮಾಡಲು ಸರಕಾರ ಹಿಂಜರಿಯಿತು. ಸ್ಥಳೀಯರು ಹಲವು ದಶಕಗಳ ಕಾಲ ಹೋರಾಟ ಮಾಡಿದ ನಂತರ, ಈಗ 2.14 ಕಿ.ಮೀ. ಉದ್ದದ ಸೇತುವೆ ನಿರ್ಮಾಣಗೊಂಡಿದ್ದು, ಜುಲೈ ತಿಂಗಳಲ್ಲಿ ಲೋಕಾರ್ಪಣೆಗೊಳ್ಳುವ ನಿರೀಕ್ಷೆಯಲ್ಲಿದೆ. ಕೊನೆಗೂ, ಹಿನ್ನೀರಿನ ದ್ವೀಪದಲ್ಲಿ ಸಿಕ್ಕಿಬಿದ್ದ ಹಳ್ಳಿಯ ಜನರ ಕನಸು ನನಸಾಗಿದೆ!



ಹೊಸ ಸೇತುವೆಯ ಹೆಗ್ಗಳಿಕೆ

ಹೊಸ ಸೇತುವೆಯ ಉದ್ದ 2.14 ಕಿಲೋ ಮೀಟರುಗಳು ಮತ್ತು ಇದು ರಾಷ್ಟ್ರದಲ್ಲಿ ಕೇಬಲ್ ಸ್ಟೇಡ್ ಟೆಕ್ನಾಲಜಿ ಬಳಸಿ ನಿರ್ಮಾಣ ಗೊಂಡ ಮೂರನೇ ಸೇತುವೆ. ಕರ್ನಾಟಕದ ಅತ್ಯಂತ ಉದ್ದದ ಒಳನಾಡು ಕೇಬಲ್ ಸೇತುವೆ. ಇದು ಆವಿನಹಳ್ಳಿ ಮರಕುಟಿಗ ನಡುವಿನ ಸೆಕೆಂಡರಿ ರಸ್ತೆಯಲ್ಲಿದೆ. ಸೇತುವೆ ಮತ್ತು ಸಂಪರ್ಕ ರಸ್ತೆಗಳ ಒಟ್ಟು ವೆಚ್ಚ 450 ಕೋಟಿ ರುಪಾಯಿ ಎನ್ನಲಾಗಿದೆ. ಸೇತುವೆಯ ಅಗಲವು ಎರಡು ಲೇನ್ ವಾಹನ ಮಾರ್ಗ ಮತ್ತು ಎರಡೂ ಬದಿಗೆ ಪಾದಾಚಾರಿ ಮಾರ್ಗಗಳನ್ನು ಹೊಂದಿದ್ದು, ರಾಷ್ಟ್ರೀಯ ಹೆದ್ದಾರಿಗಳ ಗುಣಮಟ್ಟಕ್ಕೆ ಅನುಗುಣವಾಗಿ ನಿರ್ಮಿಸಲಾಗಿದೆ.

ಪುಟ್ಟ ನದಿ; ದೊಡ್ಡ ಕೊಡುಗೆ

ಶರಾವತಿ ಕೇವಲ ತೊಂಬತ್ತು ಮೈಲು ಉದ್ದದ ಪುಟ್ಟ ನದಿ. ಆದರೆ ಈ ಪುಟ್ಟ ನದಿ ಇಡೀ ದೇಶದಲ್ಲೇ ಯಾವ ನದಿಯೂ ಉತ್ಪಾದನೆ ಮಾಡದಷ್ಟು ದೊಡ್ಡ ಪ್ರಮಾಣದ ವಿದ್ಯುತ್ ನೀಡಿದೆ! ಈ ನದಿ ನೀರಿಗೆ ಒಟ್ಟು ಆರು ಆಣೆಕಟ್ಟೆಗಳನ್ನು ಕಟ್ಟಲಾಗಿದೆ. ಐದು ಸುರಂಗಗಳನ್ನು ತೋಡ ಲಾಗಿದೆ. ನದಿಯ ಕಣಿವೆಯಲ್ಲಿ ಒಟ್ಟು ಐದು ವಿದ್ಯುದಾಗಾರ ಸ್ಥಾಪಿಸಲಾಗಿದೆ. ಮಹಾತ್ಮಾಗಾಂಧಿ (139.2) ಶರಾವತಿ (1035) ಗೇರುಸೊಪ್ಪ(240) ಲಿಂಗನಮಕ್ಕಿ (55) ಅಂಬುತೀರ್ಥ (22) ಹೀಗೆ ಒಟ್ಟು 1491.2 ಮೆಗಾ ವಾಟ್. 1948 ರಿಂದ ಇದುವರೆಗೆ ಈ ನದಿ ಮೂರೂವರೆ ಸಾವಿರ ಕೋಟಿ ಯೂನಿಟ್ಟಿಗೂ ಅಧಿಕ ವಿದ್ಯುತ್ತನ್ನು ಉತ್ಪಾದಿಸಿದೆ. ಈ ಕಣಿವೆಯಲ್ಲಿ ಈವರೆಗೆ ನಡೆದ ಒಟ್ಟೂ ಮುಳುಗಡೆ, 404.7 ಚದರ ಕಿಲೋಮೀಟರ್. ಅಂದರೆ ಒಟ್ಟು ಬೆಂಗಳೂರು ಮಹಾ ನಗರದ ಶೇ.57 ಭಾಗ. ಇಷ್ಟೂ ಸಾಲದೆಂಬಂತೆ ಈಗ ಪಂಪಡ್ ಸ್ಟೋರೇಜ್ ಸ್ಕೀಮಿನ ತೂಗುಕತ್ತಿ ನೆತ್ತಿಯ ಮೇಲೆ ತೂಗಾಡುತ್ತಿದೆ.

» ಡಾ ಗಜಾನನ ಶರ್ಮ ಹುಕ್ಕಲು



ಅರವತ್ತು ವರ್ಷಗಳ ಹಿಂದೆ, 1960ರ ದಶಕದಲ್ಲಿ ನಿರ್ಮಾಣಗೊಂಡ ಬೃಹತ್ ಲಿಂಗನಮಕ್ಕಿ ಅಣೆಕಟ್ಟೆಯ ಹಿನ್ನೀರಿನಲ್ಲಿ ಸಾಗರ ಹೊಸನಗರ ತಾಲ್ಲೂಕುಗಳ ಕರೂರು, ಭಾರಂಗಿ ಸೌಳನಾಡು, ಹನ್ನಾರ ಮತ್ತು ನಿಟ್ಟೂರು ಹೋಬಳಿಗಳ ಒಟ್ಟು 124 ಹಳ್ಳಿಗಳು ಮುಳುಗಡೆ ಎಂಬ ಮಹಾ ವಿಪತ್ತಿಗೆ ಸಿಲುಕಿದವು. ಮುಳುಗಡೆಗೆ ತುತ್ತಾದ ಒಟ್ಟು ಎರಡೂವರೆ ಸಾವಿರ ಕುಟುಂಬಗಳು ತಮ್ಮ ಮನೆದೇವರು, ಪಾತ್ರಪಡಗ, ಮಕ್ಕಳುಮರಿ ಜತೆ ಊರು ತೊರೆಯಲು ಸರ್ಕಾರ ಕೊಟ್ಟಿದ್ದ ಲಾರಿಗೆ ಹೇರಿಕೊಂಡು, ತಲೆಮಾರುಗಳಿಂದ ತಾವು ನೆಲೆಸಿದ್ದ ಊರಿನ ಬೇರು ಕಡಿದುಕೊಂಡು ಕಣ್ಣೀರಿಡುತ್ತ ಆಸರೆ ಅರಸಿ ಹೊರಟಾಗ ಮುಳುಗಡೆಯಾಗದೆ ಹಿನ್ನೀರಿನ ಅಂಚುಗಳಲ್ಲಿ ಉಳಿದ ಜನ ತಾವೇ ಭಾಗ್ಯವಂತರೆಂದು ಭಾವಿಸಿದ್ದು ಸುಳ್ಳಲ್ಲ.

ಯಾವಾಗ ಹಿನ್ನೀರಿನ ಮಟ್ಟ ಏರತೊಡಗಿ, ಮುನ್ನೂರು ಚದರ ಕಿಲೋಮೀಟರಿಗೂ ಹೆಚ್ಚು ವಿಸ್ತೀರ್ಣದ ನೆಲವನ್ನು ಹಿನ್ನೀರು ವ್ಯಾಪಿಸಿಕೊಂಡಿತೋ ಆಗ, ಮುಳಗದೇ ಉಳಿದವರಿಗೆ ತಮ್ಮ ಸಂಕಷ್ಟಗಳು ಅರಿವಿಗೆ ಬರತೊಡಗಿದವು. ಸ್ವಂತ ಊರಿನಲ್ಲೇ ಅವರು ಅನಾಥರಾಗಿದ್ದರು. ರಾತ್ರಿ ಬೆಳಗಾಗುವಷ್ಟರಲ್ಲಿ ಪೇಟೆ ಪಟ್ಟಣ, ಶಾಲೆ ಕಾಲೇಜು, ಆಸ್ಪತ್ರೆ ಕಛೇರಿಗಳು ದೂರವಾಗಿದ್ದವು. ಹಿಂದೆ ಕೇವಲ ಮೂವತ್ತೈದು ಕಿಲೋಮೀಟರ್ ದೂರದಲ್ಲಿದ್ದ ತಾಲ್ಲೂಕು ಕೇಂದ್ರಕ್ಕೂ ತೊಂಬತ್ತು ಕಿಲೋಮೀಟರ್ ಸಂಚರಿಸಬೇಕಾದ ದುಃಸ್ಥಿತಿ ತಲೆದೋರಿತ್ತು. ನೆಂಟರಿಷ್ಟರು ಊರಿಗೆ ಬರಲು ಹಿಂಜರಿಯತೊಡಗಿದರು. ಸಾರಿಗೆ ಸೌಲಭ್ಯಗಳಿರದ ಆ ದಿನಗಳಲ್ಲಿ ಜನ ಸಂಚರಿಸುವುದಾದರೂ ಹೇಗೆ? ಭತ್ತ, ಬೆಲ್ಲ, ಮೆಣಸು, ಅಡಿಕೆ, ಪೇಟೆಗೆ ಒಯ್ಯುವುದು ಹೇಗೆ? ರೋಗಿಗಳನ್ನು ಆಸ್ಪತ್ರೆಗೆ ಕರೆದೊಯ್ಯುವುದೆಂತು? ಶರಾವತಿ ಎಡದಂಡೆಯಲ್ಲಿ ನೆಮ್ಮದಿಯಾಗಿ ಬದುಕಿದ್ದವರ ಬದುಕು ಇದ್ದಲ್ಲೇ ನರಕವಾಗಿತ್ತು.

ಹಿಂದೆ, ಹಿರೇಭಾಸ್ಕರ ಜಲಾಶಯ ನಿರ್ಮಾಣವಾದ ಕಾಲದಲ್ಲಿ ಅಂದಿನ ಪ್ರಭುತ್ವ ಆಣೆಕಟ್ಟೆಯ ಮೇಲೆ ಜನ, ವಾಹನ ಸಂಚಾರ, ಸಾಗಾಟಕ್ಕೆ ಅವಕಾಶ ಮಾಡಿಕೊಟ್ಟಿತ್ತು. ಆದರೆ ಈಗ ಹಾಗಿರಲಿಲ್ಲ. ತುಮರಿಯಿಂದ ಲಿಂಗನಮಕ್ಕಿಯೇ ದೂರ. ಅದಕ್ಕೂ ಸುರಕ್ಷತೆಯ ನೆಪದಲ್ಲಿ ಬಿಗಿ ಭದ್ರತೆ. ಸ್ಥಳೀಯರು ಸಮೀಪ ಕೂಡ ಸುಳಿಯುವಂತಿಲ್ಲ. ಇನ್ನು ಅದರ ಮೇಲೆ ಹೋಗಲುಂಟೇ? ಸಂತ್ರಸ್ಥರ ಸಂಕಷ್ಟಗಳನ್ನು ಕೇಳುವವರಾರು? ಹೆಸರಿಗೆ ಸ್ವತಂತ್ರ ಸರ್ಕಾರ. ಆದರೆ ಜನಸಾಮಾನ್ಯರ ಕೂಗನ್ನು ಮಾತ್ರ ಯಾರೂ ಕೇಳುವವರಿಲ್ಲ.

ಜನ ಕಂಗೆಟ್ಟರು. ದೀಪದ ಬುಡದಲ್ಲಿ ಕತ್ತಲೆ ಎಂಬಂತೆ ಬಹಳ ಹಳ್ಳಿಗಳಲ್ಲಿ ವಿದ್ಯುತ್ತೇ ಇರಲಿಲ್ಲ. ಇದ್ದರೂ ವಾರಗಟ್ಟಲೆ ಕರೆಂಟಿಲ್ಲ. ಆಸ್ಪತ್ರೆಗೆ ಹೋಗಲೂ ಕಾರ್ಗಲ್ ಸುತ್ತಿ ಸಾಗರಕ್ಕೆ ಹೋಗಬೇಕು.

ತ್ಯಾಗ ಜೀವಿಗಳು ನೀವು!

ನಂಬಿದ ನದಿಯ ನೀರೇ ನೆಮ್ಮದಿಯನ್ನು ನುಂಗಿತೇ? ಇಲ್ಲ, ನುಂಗಿದ್ದು ನದಿಯೂ ಅಲ್ಲ, ನೀರೂ ಅಲ್ಲ; ಕಿವಿ, ಕಣ್ಣು ಹೃದಯವಿಲ್ಲದ 'ಅಧಿಕಾರಶಾಹಿ' ಎಂಬ ವಿರಾಟ್ ವ್ಯವಸ್ಥೆ! ಜಲಾಶಯದ ನಿರ್ಮಾಣ ಕಾಲದಲ್ಲಿ ಜನರೆದುರು ಈ ನೇತಾರರು ಉದುರಿಸಿದ್ದಾದರೂ ಅದೆಂತಹ ಅಣಿಮುತ್ತುಗಳನ್ನು? 'ನೀವು ಪುಣ್ಯಾತ್ಮರು. ನವಭಾರತದ ನಿರ್ಮಾಣಕ್ಕಾಗಿ ತ್ಯಾಗ ಮಾಡುತ್ತಿರುವ ಪುಣ್ಯಜೀವಿಗಳು. ಇಲ್ಲಿ ಉತ್ಪತ್ತಿಯಾಗುವ ವಿದ್ಯುತ್ ಇಡೀ ನಾಡನ್ನೇ ಬೆಳಗಲಿದೆ. ನೀವೇನೂ ಅಳುಕಬೇಕಿಲ್ಲ. ಜಮೀನು ಕಳೆದುಕೊಂಡವರಿಗೆ ಜಮೀನು, ಮನೆ ಕಳೆದುಕೊಂಡವರಿಗೆ ಮನೆ, ಜೊತೆಗೆ ನಗದು ಪರಿಹಾರ. ಬಡ ಗೇಣಿದಾರರೂ ಪಾಣಿ ತೋರಿಸಿ ಪರಿಹಾರ ಹಣ ಪಡೆಯಬಹುದು. ಮುಳುಗಡೆಯಾಗದೆ ಅಂಚಿನಲ್ಲಿ ಉಳಿಯುವವರಿಗೂ ನಾವು ವಂಚನೆ ಮಾಡುವುದಿಲ್ಲ. ಶಿಕ್ಷಣ, ವೈದ್ಯಕೀಯ, ಸಾರಿಗೆ ಸಂಪರ್ಕ ಮುಂತಾದ ಅಗತ್ಯಗಳನ್ನೆಲ್ಲ ಕಲ್ಪಿಸುವ ಹೊಣೆ ನಮ್ಮದು' ಎಂದೆಲ್ಲ ಭಾಷಣಗಳು ಹರಿದಾಡಿದ್ದವು. ಆದರೆ ಆದುದೇನು?

ಹಿನ್ನೀರಿನ ಹಳ್ಳಿಗಳಲ್ಲಿ ಜನಸಂಖ್ಯೆಯೇ ವಿರಳ. ಓಟುಗಳೂ ಕಡಿಮೆ. ಇಲ್ಲಿರುವ ಮೂರು ಮತ್ತೊಂದು ಓಟಿಗಾಗಿ ಈ ಮೂಲೆಗೆ ಬರಲು ರಾಜಕಾರಣಿಗಳೇನು ದಡ್ಡರೇ? ಸಂತ್ರಸ್ಥರ ನೆರವಿಗೆ ಯಾರೂ ಬರಲಿಲ್ಲ. ಜನರಿಗೆ 'ಹಿಡಿದ ರೆಂಬೆಯೂ ಇಲ್ಲ. ಮೆಟ್ಟಿದ ಕೊಂಬೆಯೂ ಇಲ್ಲ' ಎಂಬಂತಾಯಿತು.

ಸೇತುವೆ ಬದಲಿಗೆ ಲಾಂಚ್!

ಅಂತೂ ಕೊನೆಗೆ ಯಾರ ಕೃಪೆಯೋ, ಸಂಚಾರ ಸಮಸ್ಯೆಯ ತಾತ್ಕಾಲಿಕ ಉಪಶಮನಕ್ಕೆ ಸೇತುವೆಯ ಬದಲಿಗೆ ಒಳನಾಡ ಜಲ ಸಾರಿಗೆ ಇಲಾಖೆಯ ಅಡಿಯಲ್ಲೊಂದು ಲಾಂಚು ಬಂದಿತ್ತು! ಜನ ಅದನ್ನು ಕಂಡು ನಮ್ಮ ಸಂಕಷ್ಟ ಇನ್ನು ತೀರಿತೆಂದು ಹೆಮ್ಮೆಯಿಂದ ಬೀಗಿದರು. ಆದರೆ ಅದು ಎಡದಂಡೆಯಿಂದ ಬಲದಂಡೆಗೆ ಹೋದರೆ ಅದು ಮರಳಿ ಬರುವವರೆಗೂ ಕಾದು ಕುಳಿತು ಜನ ಓಡಾಡಬೇಕಿತ್ತು; ಅನಿವಾರ್ಯ ಓಡಾಡಿದರು. ಆದರೆ, ಸಂಜೆಯಾಗುತ್ತಿದ್ದಂತೆ ಲಾಂಚು ಓಡದು; ನೀರು ಕಡಿಮೆಯಾದರೆ ಓಡದು; ರಾತ್ರಿ ಯಾರಿಗಾದರೂ ತುರ್ತು ಚಿಕಿತ್ಸೆ ಬೇಕೆಂದರೆ ಡ್ಯಾಮು ಕಟ್ಟುವ ಪೂರ್ವದಲ್ಲಿ ಅರ್ಧ ರಾತ್ರಿ ಬೆಳಗಿನ ಝಾವ ಬೇಕಾದರೂ ಹೊಳೆ ದಾಟಿಸುತ್ತಿದ್ದ ದೋಣಿ ಗಣಪನಾಗಲೀ, ತಿಮ್ಮಗೌಡನಾಗಲೀ ಈಗಿಲ್ಲವಲ್ಲ. ಜನ ಮತ್ತೆ ಕಂಗೆಟ್ಟರು. ಮತ್ತೊಮ್ಮೆ ಗಾಯಕ್ಕೆ ಮುಲಾಮು ಲೇಪಿಸಲಾಯಿತು. ಒಂದಲ್ಲ, ಎರಡು ಲಾಂಚು ಬಂದವು. ಆದರೂ ಸಂಜೆಯ ನಂತರ ಎಡದಂಡೆಯ ಜನರು ಅನಾಥರಾಗಿಯೇ ಮುಂದುವರೆದರು.

ಸೇತುವೆಗೆ ಬೇಡಿಕೆ

ಮುಳುಗಡೆಯ ಆರಂಭದಿಂದಲೂ ಸಂತ್ರಸ್ಥರು ಅಂಬಾರಗೊಡ್ಲು- ಕಳಸವಳ್ಳಿ ನಡುವೆ ಸೇತುವೆ ನಿರ್ಮಿಸಿ ಕೊಡಲು ಸರ್ಕಾರವನ್ನು ಕೇಳುತ್ತಲೇ ಬಂದಿದ್ದರು. ಅದಕ್ಕೆ ಪರ್ಯಾಯವಾಗಿ ದೊರಕಿದ್ದೇ ಲಾಂಚ್ ಸೇವೆ . ಆದರೀಗ ಅದಕ್ಕೂ ತತ್ವಾರವಾದಾಗ ಸೇತುವೆಗೆ ಮತ್ತೆ ಬೇಡಿಕೆ ಹೆಚ್ಚಿತು. ಸ್ಥಳೀಯ ಸಂತ್ರಸ್ಥರು, ಜನನಾಯಕರು ಮತ್ತು ಜನಪ್ರತಿನಿಧಿಗಳ ಬೆನ್ನುಬಿದ್ದರು. ಅಧಿಕಾರಿಗಳ ಮನವೊಲಿಸಲು ಕಛೇರಿಗಳಿಗೆ ಅಲೆದರು. ಮಾಧ್ಯಮಗಳ ನೆರವು ಪಡೆದು ಧ್ವನಿ ಎತ್ತರಿಸಿದರು. ಆದರೆ ಆರ್ಥಿಕ ಕಾರಣ ಮುಂದಿಟ್ಟು ಸರ್ಕಾರಿಯಂತ್ರ, ಸೇತುವೆಯ ಬೇಡಿಕೆಯನ್ನು ನಿರಾಕರಿಸಿದಾಗ ಹಕ್ಕೊತ್ತಾಯ ಮಂಡಿಸುವುದು ಅನಿವಾರ್ಯವಾಯಿತು. ಸ್ಥಳೀಯರು ಹೋರಾಟಕ್ಕೆ ಅಣಿಯಾದರು.

ಸೇತುವೆಗಾಗಿ ಹೋರಾಟವನ್ನು ಹಲವು ವರ್ಷಗಳ ಕಾಲ ಚಾಲ್ತಿಯಲ್ಲಿಟ್ಟಿದ್ದ ಪ್ರಸನ್ನ ಕೆರೆಕೈ

ನಿರ್ಲಕ್ಷ್ಯದ ಪರಮಾವಧಿ!

ಅಣೆಕಟ್ಟಿನಿಂದ ವರ್ಷಕ್ಕೆ ಕನಿಷ್ಟ ಎರಡು ಸಾವಿರ ಕೋಟಿಗೂ ಅಧಿಕ ರೂಪಾಯಿಗಳ ಆದಾಯ ಪಡೆಯುವ ಕೆ.ಪಿ ಸಿ. ಎಲ್. ಮತ್ತು ರಾಜ್ಯಸರ್ಕಾರಗಳಿಗೆ ಸೇತುವೆ ನಿರ್ಮಿಸುವುದು ಮೊದಲ ಆದ್ಯತೆಯಾಗಬೇಕಿತ್ತು. ಶರಾವತಿಯಿಂದ ದಕ್ಕುವ ಲಾಭದ ಕನಿಷ್ಟ ಶೇಕಡಾ ಒಂದಂಶ ವೆಚ್ಚಮಾಡಿದರೂ ಸಂತ್ರಸ್ಥರಿಗೆ ಸೌಲಭ್ಯ ಒದಗಿಸಲು ಸಾಧ್ಯವಿತ್ತು. ದುರದೃಷ್ಟವಶಾತ್ ಇದಾವುದನ್ನೂ ಪರಿಗಣಿಸದೆ, ಸೇತುವೆ ನಿರ್ಮಿಸುವುದು ರಾಜ್ಯ ಸರ್ಕಾರಕ್ಕೆ 'ಆರ್ಥಿಕ ಹೊರೆ' ಎಂಬ ಅಧಿಕಾರಿಗಳ ಟಿಪ್ಪಣಿಗೆ ಸರ್ಕಾರ ಸಮ್ಮತಿಯ ಮುದ್ರೆಯೊತ್ತಿದ್ದು ಅತ್ಯಂತ ನಾಚಿಕೆಗೇಡಿನ ಕೆಲಸ. ಈ ಸಂದರ್ಭದಲ್ಲಿ ಜನಪರ ಹೋರಾಟ ಮತ್ತು ಎಡೆಬಿಡದ ಪ್ರಯತ್ನಗಳಷ್ಟೇ ಸ್ಥಳೀಯ ಸಂತ್ರಸ್ಥರಿಗೆ ಉಳಿದಿದ್ದ ಹಾದಿಯಾಗಿತ್ತು.

ಹೊಳೆಬಾಗಿಲಲ್ಲಿ ಹೊಡೆದಾಟ

ಈ ನಡುವೆ ಹಿನ್ನೀರ ದಂಡೆಯ ಸಿಗಂದೂರು ದೇಗುಲ ಪ್ರಖ್ಯಾತಿ ಗಳಿಸತೊಡಗಿತು. ಆರಂಭದಲ್ಲಿ ಸ್ಥಳೀಯರು ಖುಷಿ ಪಟ್ಟರು. ಜೀಪು ಕಾರು ಬಸ್ಸುಗಳ ಸಂಖ್ಯೆ ಹೆಚ್ಚಿ ಸಾರಿಗೆ ಸೌಲಭ್ಯ ಸುಧಾರಿಸಿತು. ಅಲ್ಲಲ್ಲಿ ಅಂಗಡಿ ಹೋಟೆಲ್‌ಗಳು ಆರಂಭವಾದವು. ಹಲವರ ಆರ್ಥಿಕ ಪರಿಸ್ಥಿತಿ ಸಾಕಷ್ಟು ಸುಧಾರಿಸಿತು. ಹೊಳೆಬಾಗಿಲಿನಲ್ಲಿ ಪ್ರವಾಸಿಗರ ಕಾರು, ಜೀಪು, ಬಸ್ಸುಗಳು ಸಾಲುಗಟ್ಟಿ ನಿಲ್ಲತೊಡಗಿದವು. ಲಾಂಚ್ ಪ್ರಯಾಣದ ಉನ್ಮಾದಕ್ಕೆ ಪ್ರವಾಸಿಗರು ಮುಗಿಬಿದ್ದರು.

ಸ್ಥಳೀಯರಿಗೆ ಸ್ಥಳವಿರಲಿ ಇಲ್ಲದಿರಲಿ ಪ್ರವಾಸಿಗರ ವಾಹನಗಳು ಲಾಂಚ್ ಏರತೊಡಗಿದವು. ಲಾಂಚುಗಳ ಸಂಖ್ಯೆ ಹೆಚ್ಚಿತು; ಪ್ರವಾಸಿಗರ ಸಂಖ್ಯೆ ಮತ್ತಷ್ಟು ಹೆಚ್ಚಿತು. ಆದರೆ ಸ್ಥಳೀಯರಿಗೆ ಆದ್ಯತೆ ಕೊಟ್ಟರೆ ಅವರಿಗೆ ಅಸಹನೆ! ವಾಸ್ತವ ವಿಷಯ ತಿಳಿಸಿದರೂ ಕೇಳುವ ವಿನಯವಿಲ್ಲ, ವ್ಯವಧಾನವಿಲ್ಲ. ಹಾಗಾಗಿ ಪ್ರತಿನಿತ್ಯ ಎನ್ನುವಂತೆ ಹೊಳೆಬಾಗಿಲಲ್ಲಿ ಘರ್ಷಣೆ ಗಲಾಟೆ, ಹೊಡೆದಾಟ, ರಂಪ. ದಿನಕ್ಕೊಂದು ಪ್ರಕರಣ. ಪ್ರವಾಸಿಗರು ಅಪರೂಪಕ್ಕೆ ಬರುವವರು. ಆದರೆ ಸ್ಥಳೀಯರಿಗೆ ಅದು ಬದುಕಿನ ಅನಿವಾರ್ಯ. ಅಸ್ವಸ್ಥರು, ವಯೋವೃದ್ಧರು, ವಿದ್ಯಾರ್ಥಿಗಳು, ಬಸುರಿ ಬಾಣಂತಿಯರಿಗೆ ಆದ್ಯತೆ ಕೊಟ್ಟರೂ ಸಹಿಸದಿದ್ದರೆ... ಸಹಿಸುವುದಾದರೂ ಹೇಗೆ?

ಕೋಟಿ ಕೋಟಿ ಲಾಭ!

ಈಗ ಜನ ಬುದ್ಧಿವಂತರಾಗಿದ್ದರು. ಅವರು ಅಧಿಕಾರಿಗಳು ನೀಡಿದ ನೆಪಕ್ಕೆ ಪ್ರತಿಯಾಗಿ ಲಿಂಗನಮಕ್ಕಿಯಿಂದ ಸರ್ಕಾರಕ್ಕೆಷ್ಟು ಲಾಭ ಎಂಬ ಲೆಕ್ಕಾಚಾರ ಮಂಡಿಸತೊಡಗಿದರು. ಲಿಂಗನಮಕ್ಕಿ ಜಲಾಶಯ ಪೂರ್ಣ ತುಂಬಿದರೆ, ಅಂದರೆ ನೀರಿನ ಮಟ್ಟ 1819 ಅಡಿ ತಲುಪಿದರೆ ಅದರಿಂದ ಶರಾವತಿ ಯೋಜನೆಯಲ್ಲಿ ಉತ್ಪತ್ತಿಯಾಗುವ ವಾರ್ಷಿಕ ವಿದ್ಯಚ್ಛಕ್ತಿಯ ಪ್ರಮಾಣ ಒಟ್ಟು 4592 ಮಿಲಿಯನ್ ಯೂನಿಟ್ಟುಗಳು. ಮಳೆಗಾಲದ ನಾಲ್ಕು ತಿಂಗಳಲ್ಲಿ ಹರಿಯುವ ಉಚಿತ ನೀರಿನಿಂದ ಉತ್ಪತ್ತಿಯಾಗುವ ವಿದ್ಯುಚ್ಛಕ್ತಿಯ ಪ್ರಮಾಣ: ಅಂದಾಜು 500 ಮಿಲಿಯನ್ ಯೂನಿಟ್ಟುಗಳು. ಅಂದರೆ ಲಿಂಗನಮಕ್ಕಿ ನೀರಿನಿಂದ ವಾರ್ಷಿಕವಾಗಿ ಕಡಿಮೆಯೆಂದರೂ 5,000 ಮಿಲಿಯನ್ ಯೂನಿಟ್ ಅರ್ಥಾತ್ ಐನೂರು ಕೋಟಿ ಯೂನಿಟ್ ವಿದ್ಯುತ್ ಉತ್ಪತ್ತಿಯಾಗುತ್ತದೆ. ಯೂನಿಟ್ಟಿಗೆ ಕನಿಷ್ಠ ಸರಾಸರಿ ನಾಲ್ಕು ರೂಪಾಯಿ ಎಂದು ಲೆಕ್ಕ ಹಾಕಿದರೂ ವಾರ್ಷಿಕವಾಗಿ 2,000 ಕೋಟಿ ರೂಪಾಯಿಗಳು ವಿದ್ಯುತ್ ಮಾರಾಟದಿಂದ ದೊರೆಯುತ್ತದೆ.

1965ರಿಂದ 2005 ರವರೆಗಿನ ನಲವತ್ತು ವರ್ಷಗಳ ವಾರ್ಷಿಕ ಉತ್ಪತ್ತಿಯನ್ನು ಲೆಕ್ಕಹಾಕಿದರೆ ಸರ್ಕಾರಕ್ಕೆ ಸುಮಾರು 80,000 ಕೋಟಿ (ಎಂಬತ್ತು ಸಾವಿರ ಕೋಟಿ)ರೂಪಾಯಿ ಆದಾಯ ದೊರಕಿದೆ! ಅದರಲ್ಲಿ ಶೇಕಡ 0.5ರಷ್ಟು ವೆಚ್ಚ ಮಾಡಿದರೂ 400 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸೇತುವೆ ನಿರ್ಮಿಸಿಕೊಡಬಹುದು.

ಇದು 2005 ರಿಂದ ಸ್ಥಳೀಯರು ಸರ್ಕಾರದೆದುರು ಮಂಡಿಸುತ್ತ ಬಂದ ಲೆಕ್ಕಾಚಾರ. ಸರ್ಕಾರದ ಲೆಕ್ಕದಲ್ಲಿ ಶರಾವತಿ ವಿದ್ಯುತ್ತಿಗೆ ಯೂನಿಟ್ಟಿಗೆ ಅರ್ಧ ರೂಪಾಯಿ ಹೌದಾದರೂ ಇಲಾಖೆ ಮಾರುವ ಸರಾಸರಿ ವಿದ್ಯುತ್ ದರವನ್ನು ಪರಿಗಣಿಸಿ ಲೆಕ್ಕಹಾಕಬೇಕು ತಾನೆ. ಲಿಂಗನಮಕ್ಕಿ ತುಂಬದಿದ್ದಾಗ ನೀವು ಯೂನಿಟ್ಟಿಗೆ ಆರರಿಂದ ಎಂಟು, ಹತ್ತು ರೂಪಾಯಿ ಕೊಟ್ಟು ವಿದ್ಯುತ್ ಖರೀದಿಸಿಲ್ಲವೇ? ಸತ್ಯ ಹೇಳಿ ಅಧಿಕಾರಿಗಳೇ...ಇದು ಜನ ಕೇಳುವ ಪ್ರಶ್ನೆ.

ಹೆಚ್ಚು ನೀರು ಸಂಗ್ರಹಿಸುವ ಜಲಾಶಯ

ಲಿಂಗನಮಕ್ಕಿಯಿಂದ ನಾವು ಕಳೆದುಕೊಂಡಿದ್ದೆಷ್ಟು, ಗೊತ್ತೇನು? ಇಂದಿಗೂ ಕರ್ನಾಟಕದಲ್ಲಿ ಅತ್ಯಂತ ಹೆಚ್ಚು ನೀರು ಸಂಗ್ರಹಿಸುವ ಜಲಾಶಯವೆಂದರೆ ಅದು ಲಿಂಗನಮಕ್ಕಿ. ಸಂಗ್ರಹವಾಗುವ ನೀರಿನ ಪ್ರಮಾಣ 156 ಟಿ ಎಂ ಸಿ. ಲಿಂಗನಮಕ್ಕಿಯ ಹಿನ್ನೀರು ಒಟ್ಟು 326.339 ಚದರ ಕಿಲೋಮೀಟರ್ ವಿಸ್ತೀರ್ಣವನ್ನು ವ್ಯಾಪಿಸಿದೆ. ಇದರಿಂದ 124 ಹಳ್ಳಿಗಳ ಎರಡೂವರೆ ಸಾವಿರ ಕುಟುಂಬಗಳ 12,000 ಮಂದಿ ಮುಳುಗಡೆಗೆ ತುತ್ತಾಗಿದ್ದಾರೆ.

⇒ 3ನೇ ಪುಟಕ್ಕೆ

ಕಾಶ್ಮೀರದ ಕಣಿವೆಗಳ ಸೌಂದರ್ಯವನ್ನು ನೋಡಲು ಬಂದಿದ್ದ 26ಕ್ಕೂ ಅಧಿಕ ಪುರುಷ ಪ್ರವಾಸಿಗರನ್ನು ಭಯೋತ್ಪಾದಕರು ಗುಂಡಿಟ್ಟು ಕೊಂದ ನಂತರ, ಆ ರಾಜ್ಯದ ಪ್ರವಾಸೋದ್ಯಮದ ನಕ್ಷೆಯೇ ಬದಲಾಗಿ ಹೋಗಿತ್ತು. ಭಯೋತ್ಪಾದಕರನ್ನು ಮತ್ತು ಭಯೋತ್ಪಾದಕರಿಗೆ ತರಬೇತಿ ನೀಡುತ್ತಿದ್ದ ಶಿಬಿರಗಳನ್ನು ನಾಶಪಡಿಸಲು ನಮ್ಮ ದೇಶವು 'ಆಪರೇಷನ್ ಸಿಂದೂರ' ಹೆಸರಿನ ಸೈನಿಕ ಕಾರ್ಯಾಚರಣೆ ನಡೆಸಿದ ನಂತರ, ಪರಿಸ್ಥಿತಿ ಇನ್ನಷ್ಟು ತೀವ್ರವಾಗಿತ್ತು. ಆಪರೇಷನ್ ಸಿಂದೂರದ ಸಮಯದಲ್ಲಿ ಕಾಶ್ಮೀರದ ಸ್ಥಿತಿ ಅಯೋಮಯ; ಇಂತಹ ದಿನಗಳಲ್ಲಿ ಪ್ರತ್ಯಕ್ಷ ವರದಿ ಮಾಡಲು ಕಾಶ್ಮೀರಕ್ಕೆ, ಪೆಹಲ್ ಗಾಂವ್‌ಗೆ ಹೋಗಿದ್ದ ವರದಿಗಾರರ ಅನುಭವವು ಇದೀಗ ಪುಸ್ತಕ ರೂಪದಲ್ಲಿ ಹೊರಬಂದಿದ್ದು, ಅದರ ಆಯ್ದ ಭಾಗಗಳು ಇಲ್ಲಿವೆ.

ಸಿಂದೂರ: ನಾ ಕಂಡ ಕಾಶ್ಮೀರ!

» ಅಭಿಷೇಕ್ ಬಿ.ವಿ.

ಮೇ 4, 2025 – ಭಾನುವಾರ ಕಾಶ್ಮೀರದಲ್ಲಿ ನಮ್ಮ ಕೆಲಸ ಆರಂಭಿಸಿ ಇಂದಿಗೆ 4 ದಿನಗಳಾಗಿತ್ತು. ಬಂದಾಗಿಂದ ಇಲ್ಲಿಯವರೆಗೂ ಕನಿಷ್ಟ ಅಂದ್ರೂ ಪ್ರತಿನಿತ್ಯ 250 ಕಿಲೋಮೀಟರ್‌ಗಳಷ್ಟು ಓಡಾಟ ನಮ್ಮ ದಿನಚರಿಯ ಭಾಗವೇ ಆಗೋಗಿತ್ತು. ಅದಕ್ಕಿಂತ ಕಡಿಮೆ ಓಡಾಡಿದ್ರೆ, ನಾವೇನೋ ತಪ್ಪು ಮಾಡ್ತಿದ್ದೀವಿ ಅನ್ನೋ ವಿಚಿತ್ರ ವೇದನೆ ಕೂಡ ನಮ್ಮನ್ನು ಕಾಡಲಾರಂಭಿಸಿತ್ತು. ಅಷ್ಟರ ಮಟ್ಟಿಗೆ ಓಡಾಟ ಹಾಗು ಒತ್ತಡ ನಮ್ಮ ಜೀವನದ ಭಾಗವಾಗೋಗಿತ್ತು. ಇಂದೂ ಕೂಡ ಮತ್ತೊಂದು ಪ್ರಮುಖ ಸ್ಥಳಕ್ಕೆ ಹೋಗೋದು ಅಂತ ನಿರ್ಧರಿಸಿದ್ದೆವು. ಶ್ರೀನಗರದಿಂದ 140 ಕಿಲೋಮೀಟರ್ ದೂರದಲ್ಲಿರೋ ಕುಪ್ವಾರ ಎಂಬ ಪ್ರದೇಶಕ್ಕೆ ಹೋಗೋಣ. ಸೂಕ್ಷ್ಮ ಪ್ರದೇಶವಾಗಿರೋ ಈ ಸ್ಥಳದಿಂದ ರಿಪೋರ್ಟಿಂಗ್ ಮಾಡಿಯೇ ಜಯಿಸೋದು ಅಂತ ಪ್ಲಾನ್ ಮಾಡಿಕೊಂಡಿದ್ವಿ. ಪ್ಲಾನ್ ಪ್ರಕಾರ ಬೆಳಿಗೆದ್ದು ಪೂರಿ ಭಾಜಿ ತಿಂದು ಕುಪ್ವಾರದ ಕಡೆ ಕ್ಯಾಮೆರಾಮೆನ್ ಮಂಜಣ್ಣ ಹಾಗು ನಾನು ನಿರ್ಗಮಿಸಿದ್ದೆವು.

ಕಾಶ್ಮೀರ ನಮ್ಮನ್ನು ಹಾಗು ನಮ್ಮ ಮನಸ್ಥಿತಿಯನ್ನು ಬದಲಾಯಿಸಿಬಿಟ್ಟಿತ್ತು. ಕೇವಲ 4 ದಿನಗಳ ಕಾಶ್ಮೀರದ ಅನುಭವ, ಪ್ರವಾಸಿಗರಂತೆ ಇದ್ದ ನಮ್ಮನ್ನು ಸ್ಥಳೀಯರನ್ನಾಗಿ

ಮಾರ್ಪಾಟು ಮಾಡಿತ್ತು. ತಿಂಡಿಗೆ ಇಡ್ಲಿ, ವಡೆ, ದೋಸೆ, ರೈಸ್‌ಬಾತ್, ಪಡ್ಡು, ಅವಲಕ್ಕಿ, ಪುಳಿಯೋಗರೆ, ಬಿಸಿಬೇಳೆಬಾತ್, ಚಿತ್ರಾನ್ನ, ಪೊಂಗಲ್, ಅಕ್ಕಿರೊಟ್ಟಿ – ರಾಗಿರೊಟ್ಟಿ, ಚಪಾತಿ ಅಂತಹ ತರಹೇವಾರಿ ಐಟಂಗಳನ್ನು ತಿನ್ನುತ್ತಿದ್ದ ನಾನು ಅಲ್ಲಿನ ಕಾಶ್ಮೀರಿ ರೋಟಿ ಹಾಗು ಚಾಯ್ ಯನ್ನೇ ನನ್ನ ತಿಂಡಿ ಅಂತ ಮನಸಾರೆ ಸ್ವೀಕರಿಸಿಬಿಟ್ಟಿದ್ದೆ. ಯಾಕಂದ್ರೆ, ಕಾಶ್ಮೀರವನ್ನು ನಾನು ನೋಡುವ ದೃಷ್ಟಿಕೋನವೇ ಬದಲಾಗಿ ಹೋಗಿತ್ತು. ನಾನೂ ಕೂಡ ಸಾವಿರಾರು ಕಾಶ್ಮೀರೀಗಳ ಪೈಕಿ ಒಬ್ಬ ಅಂತ ನನಗೆ ನಾನೇ ಭಾವಿಸಲು ಆರಂಭಿಸಿದ್ದೆ. ಪ್ರವಾಸಿಗನಂತೆ ಮಾತನಾಡೋದು ಬಿಟ್ಟು ನಾನೂ ಕೂಡ ಕಾಶ್ಮೀರಿಯೇ ಎಂಬ ಧಾಟಿಯಲ್ಲಿ ಸ್ಥಳೀಯರೊಡನೆ ಮಾತನಾಡಲು ಆರಂಭಿಸಿದ್ದೆ. ಪ್ರವಾಸಿಗರೇ ಇಲ್ಲದೇ ಇಲ್ಲಿನ ಜೀವನ ಹೇಗೆ ನಡೆಸೋದಪ್ಪಾ ಅಂತ ಹೊರಗಿನವನಾದ ನಾನೇ ಸ್ಥಳೀಯನಂತೆ ಲೆಕ್ಕಾಚಾರ ಹಾಕಲು ಆರಂಭಿಸಿದ್ದೆ.

ಕಾಶ್ಮೀರದ ಜನರ ಕಷ್ಟವನ್ನು ಕಣ್ಣಾರೆ ಕಂಡು, ನಾನೂ ಅನುಭವಿಸಿ, ಅವರ ವಾಸ್ತವ ಸ್ಥಿತಿಯನ್ನು ವರದಿ ಮಾಡಲು ಆರಂಭ ಮಾಡಿದ್ದೆ. ಇಂದೂ ಕೂಡ ಅದೇ ರೀತಿ ವರದಿ ಮಾಡಲು ಮನಸ್ಸು ಮಾಡಿದ್ದೆ. ಪೆಹಲ್ಗಾಂ ನರಮೇಧದಿಂದ ಕಾಶ್ಮೀರದ ಜನರಿಗಾಗಿರೋ ಅನಾನುಕೂಲ ಏನು? ಪ್ರವಾಸೋದ್ಯಮವನ್ನೇ ನಂಬಿ ಬದುಕಿರೋ ಇಲ್ಲಿನ ಜನರ ವ್ಯಾಪಾರ ಎಷ್ಟು ಕುಸಿದಿದೆ? ಜೀವನ ನಡೆಸಲು ಈ ಸದ್ಯ ಏನು ಮಾಡ್ತಿದ್ದಾರೆ? ಇಂತಹ ಹತ್ತು ಹಲವು ಆಯಾಮಗಳಲ್ಲಿ ವರದಿ ಮಾಡೋ ಕಾತುರದಲ್ಲಿದ್ದೆ. ಕುಪ್ವಾರ ತಲುಪಲು ಕೇವಲ 30 ಕಿಲೋಮೀಟರ್ ಮಾತ್ರ ಬಾಕಿಯಿತ್ತು. ಲೈವ್ ನೀಡೋದಕ್ಕೆ ಅಂತ ಗಾಡಿ ಸೈಡ್‌ಗೆ ಹಾಕಿ ನಿಂತಿದ್ದೆ. ಲೈವ್ ಕೊಡುತ್ತಿದ್ದಾಗಲೇ 8ರಿಂದ 10 ಜನ ನಮ್ಮ ಸುತ್ತಲೂ ಬಂದು ನಿಂತಿದ್ರು. ಲೈವ್ ಕೊಡ್ತಿರೋವಾಗ ಜನ ಸುತ್ತುವರಿಯೋದು, ನಮ್ಮ ಕಡೆ ನೋಡೋದು, ಕೆಲವರು ಮುಗುಳ್ನಕ್ಕರೇ, ಕೆಲವರು ಗುರಾಯಿಸೋದು. ಇದೆಲ್ಲಾ ನಮಗೆ ಮಾಮೂಲಿ ಆಗಿತ್ತು. ಈ ಗುಂಪು ಕೂಡ ಅದೇ ರೀತಿ ಅನ್ನೋ ಭಾವನೆಯಲ್ಲೇ ಲೈವ್ ಮುಗಿಸಿ ಗಾಡಿ ಕಡೆ ಹೆಜ್ಜೆ ಹಾಕಿದ್ವಿ. ನೋಡನೋಡ್ತಲೇ 30ರ ಅಸುಪಾಸಿನಲ್ಲಿರೋ ಒಬ್ಬ ಕಟ್ಟುಮಸ್ತಾದ ವ್ಯಕ್ತಿ ಅಡ್ಡ ಹಾಕಿದ. ನಮಗೆ ಕಿಂಚಿತ್ತೂ ಅರ್ಥವಾಗದ ಭಾಷೆಯಲ್ಲಿ ಬೈಗುಳದ ಸುರಿಮಳೆ ಸುರಿಸಿದ್ದ. ಏನಾಗ್ತಿದೆ ಅಂತ ಗೊತ್ತಾಗೋವಷ್ಟರಲ್ಲೇ ಅಷ್ಟೂ ಜನ ನಮ್ಮನ್ನು ಸುತ್ತುವರೆದುಬಿಟ್ಟಿದ್ರು. ''ಯಾವ ನನ್ನ ಮಗ, ಮಾಧ್ಯಮದವರನ್ನು ಇಲ್ಲಿಗೆ ಕರೆದಿದ್ದು? ನಮ್ಮ ಊರಿನಲ್ಲಿ ಕಾಲಿಡಲು ನಿಮಗೆ ಅನುಮತಿ ನೀಡಿದ್ದು ಯಾರು? ಯಾವ ಪುರುಷಾರ್ಥಕ್ಕೆ ಇನ್ನೂ ಇಲ್ಲೇ ನಿಂತಿದ್ದೀರೀ? ನೀವು ಇಲ್ಲಿಗೆ ಬಂದಿರೋದೇ ದೊಡ್ಡ ಅಪರಾಧ. ಇಲ್ಲದಿರೋ ಸುಳ್ಳನ್ನೆಲ್ಲಾ ನೀವು ಟಿವಿಗಳಲ್ಲಿ ತೋರಿಸುತ್ತಿರೋದ್ರಿಂದಲೇ ಪ್ರವಾಸಿಗರು ಇಲ್ಲಿಗೆ ಬರ್ತಿಲ್ಲ. ನಿಮ್ಮಿಂದ ನಮ್ಮ ವೃತ್ತಿ, ನಮ್ಮ ಕಸುಬು ಮತ್ತು ಇಡೀ ಊರಿನ ಜೀವನವೇ ಹಾಳಾಗಿ ಹೋಗಿದೆ. ನೆಮ್ಮದಿಯಾಗಿ ಬದುಕ್ತಿದ್ದ ನಮ್ಮನ್ನು, ನಿಮ್ಮ ಮಾಧ್ಯಮಗಳು ಹಾಗು ನಿಮ್ಮಂತ ವರದಿಗಾರು ಬೀದಿಗೆ ಬರುವಂತೆ ಮಾಡಿದ್ದೀರಾ'' ಎಂದು ಚಾರ್ಜ್ ಮಾಡಿದ್ರು. ಅವರ ಬೈಗುಳಗಳಿಗೆ ಪ್ರತಿಕ್ರಿಯೆ ನೀಡೋ ಧೈರ್ಯವಾಗಲಿ, ತಾಳ್ಮೆಯಾಗಲಿ ಎರಡೂ ನನ್ನ ಬಳಿ ಇರಲೇ ಇಲ್ಲ.

⇒ 3ನೇ ಪುಟಕ್ಕೆ

ಪುಸ್ತಕ ವಿಮಾನ

ಎರಡನೆಯ ಮಹಾಯುದ್ಧ ಮುಗಿಯುವ ಸಮಯದಲ್ಲಿ, ಸೋಲುತ್ತಿರುವ ಜರ್ಮನ್ ದೇಶದಲ್ಲಿ ಸಿಕ್ಕಿಬಿದ್ದ ಕನ್ನಡಿಗ ಪ್ರೊಫೆಸರ್ ಒಬ್ಬರ ಬದುಕಿನ ವಿಶ್ಲೇಷಣೆಯನ್ನೂ ಮಾಡುವ ಈ ಕಾದಂಬರಿಯು, ತಾನು ಬಳಸಿದ ತಂತ್ರದಿಂದಾಗಿ ಹೊಸತನದ ಓದನ್ನು ನೀಡುತ್ತದೆ.

ಅನನ್ಯ ಕಥಾವಸ್ತು ವಿಶಿಷ್ಟ ತಂತ್ರ

» ಪ್ರೊ. ಜಿ. ಎನ್. ಉಪಾಧ್ಯ

ಡಾ. ಜನಾರ್ದನ ಭಟ್ ಅವರ ಮೊದಲ ಒಲವು ಕಾದಂಬರಿ ಪ್ರಕಾರವೇ ಆಗಿದೆ. ಅದುವೇ ಅವರ ಅಭಿವ್ಯಕ್ತಿಯ ಸಶಕ್ತ ಮಾಧ್ಯಮವೂ ಹೌದು. ತಾವು ನಂಬಿದ ಸಿದ್ಧಾಂತಗಳಲ್ಲಿ ಅಚಲವಾದ ಶ್ರದ್ಧೆಯನ್ನಿಟ್ಟುಕೊಂಡು ಬರೆಯುತ್ತಿರುವ ವಿರಳ ಲೇಖಕರ ಪಾಲಿಗೆ ಡಾ. ಭಟ್ ಅವರು ಸೇರುತ್ತಾರೆ. ತಮ್ಮ ಅನುಭವ, ಅನಿಸಿಕೆಗಳನ್ನು ಅಭಿವ್ಯಕ್ತ ಪಡಿಸಲು ಕಾದಂಬರಿಯೇ ಸರಿಯಾದ ಮಾರ್ಗ ಎಂಬುದನ್ನು ಕಂಡುಕೊಂಡ ಅವರು ಇಲ್ಲಿಯತನಕ ಎಂಟು ಕಾದಂಬರಿಗಳನ್ನು ಬರೆದು ಪ್ರಕಟಿಸಿ, ಸಾರಸ್ವತ ವಲಯದಲ್ಲಿ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಕಳೆದ ಹದಿನೈದು ಇಪ್ಪತ್ತು ವರ್ಷಗಳಿಂದ ಕಾದಂಬರಿ ಕ್ಷೇತ್ರ ಸಮೃದ್ಧವಾಗಿದೆ. ಹೆಚ್ಚು ಹೆಚ್ಚು ಮಹತ್ವದ ಕೃತಿಗಳು ಸಲ್ಲುತ್ತಿದೆ. ಈ ಕ್ಷೇತ್ರ ಈಗ ಹೊಸ ದಿಕ್ಕಿನಲ್ಲಿ ಹೊಸ ವಿಚಾರಗಳೊಂದಿಗೆ ವಿಭಿನ್ನ ಮತ್ತು ವಿಶಿಷ್ಟ ಆಯಾಮಗಳೊಂದಿಗೆ ಬೆಳೆಯುತ್ತಿದೆ. ಬಹುತೇಕ ಗಣ್ಯ ಕಾದಂಬರಿಕಾರರು ವರ್ತಮಾನದಲ್ಲಿ ನಿಂತು ಕೊರಳು ತಿರುಗಿಸಿ ನೋಡುತ್ತಿರುವುದು, ಅವುಗಳತ್ತ ಹೊಸ ಜನಾಂಗಕ್ಕೆ ಆಸಕ್ತಿ ಹುಟ್ಟಿಸುವಂತೆ ಮಾಡುತ್ತಿರುವುದು ಗಮನಾರ್ಹ ಸಾಧನೆ.

ಡಾ. ಜನಾರ್ದನ ಭಟ್ ಅವರ ಹೊಸ ಕಾದಂಬರಿ 'ಮನೆಯೊಳಗೆ ಮನೆಯೊಡೆಯ ಇದ್ದಾನೋ ಇಲ್ಲವೋ?' ವ್ಯಕ್ತಿ ಪ್ರಧಾನವಾದ ಕಥೆಯನ್ನು ಹೊಂದಿದೆ. ಸಮಾಜದ ಚಿತ್ರಣವನ್ನು ಬಿಟ್ಟು ಮುಖ್ಯ ಪಾತ್ರಗಳ ಬದುಕನ್ನು ಮತ್ತು ಅವರ ಅಂತರಂಗವನ್ನು ಶೋಧಿಸುವ ಬಗೆಯ ಬರವಣಿಗೆ ಇದಾಗಿದೆ. ಇದೊಂದು ಪ್ರಯೋಗಶೀಲ ಕೃತಿಯೂ ಹೌದು. ಒಂದು ಕಾಲದ ಪ್ರಾದೇಶಿಕ, ರಾಷ್ಟ್ರೀಯ ಮತ್ತು ಜಾಗತಿಕ ವಿದ್ಯಮಾನಗಳನ್ನೂ ಇದು ಆನುಷಂಗಿಕವಾಗಿ ದಾಖಲಿಸುತ್ತದೆ.

ಡಾ. ಭಟ್ ಅವರ ಕೃತಿಗಳು 'ಕರಾವಳಿ ಕರ್ನಾಟಕದ ಬದುಕಿಗೆ ಕನ್ನಡಿ ಹಿಡಿದ ಮಹತ್ವದ ಕಾದಂಬರಿಗಳು' ಎಂಬ ಕೊಂಡಾಟಕ್ಕೂ ಪಾತ್ರವಾಗಿವೆ. ಕರಾವಳಿಯ ಸಾಂಸ್ಕೃತಿಕ ಪರಿಸರ, ತುಳುನಾಡಿನ ಜನಜೀವನದ ಅನೇಕ ಮುಖಗಳನ್ನು ಆಳವಾಗಿ ಅಭ್ಯಾಸಮಾಡಿ ಆ ಅನುಭವವನ್ನು ಕಲಾಕೃತಿಯ ರೂಪದಲ್ಲಿ ಹಿಡಿದಿಟ್ಟ ಹಿರಿಮೆ ಡಾ. ಭಟ್ ಅವರಿಗೆ ಸಲ್ಲುತ್ತದೆ. ಭಟ್ ಅವರ ಕಾದಂಬರಿಗಳಿಗೆ ಬಹು ಆಯಾಮಗಳಿರುವುದು ಸಹೃದಯರಿಗೆ ಗೊತ್ತಿರುವ ಸಂಗತಿ. 'ಚಾರಿತ್ರಿಕ, ಸಾಮಾಜಿಕ, ಸಾಸ್ಕೃತಿಕ, ಭಾಷಿಕ ಆಯಾಮಗಳು ಪಾತ್ರಗಳ ಬದುಕಿನ ವಾಸ್ತವಗಳನ್ನು ಗಟ್ಟಿಗೊಳಿಸಿವೆ' (ಸುಮತೀಂದ್ರ ನಾಡಿಗ) ಎಂಬ ಮಾತು ನಿಜವೇ ಆಗಿದೆ. ಡಾ. ಭಟ್ ಅವರ ಸಾಹಿತ್ಯ ಶಕ್ತಿ ಅತ್ಯಂತ ಸಾರ್ಥಕವಾಗಿ ಸೃಜನಶೀಲ ನೆಲೆಯಲ್ಲಿ ಕ್ರಿಯಾಶೀಲವಾಗಿರುವುದು ಅವರ ಕಾದಂಬರಿಗಳಲ್ಲೇ. ಅಪ್ಪಟ ಪ್ರಾದೇಶಿಕ ವಸ್ತು, ಪಾತ್ರಗಳಿಗೆ ಒತ್ತು ಕೊಟ್ಟು ಕತೆ, ಕಾದಂಬರಿಗಳನ್ನು ಬರೆಯುತ್ತಾ ಬಂದಿರುವ ಅವರು ತಮ್ಮ ಸೃಜನಶೀಲ ಕೃತಿಗಳಲ್ಲಿ ಗ್ರಾಮೀಣ ಜೀವನ ದರ್ಶನವನ್ನು ಭಿನ್ನ ಪರಿಯಲ್ಲಿ ಸಶಕ್ತವಾಗಿ ಕಲಾತ್ಮಕವಾಗಿ ದಾಖಲಿಸಿದ್ದಾರೆ. ಸಾಂದ್ರ ಜೀವನಾನುಭವ, ವಿಶೇಷ ಓದು, ಅಧ್ಯಯನವನ್ನು ಮೈಗೂಡಿಸಿಕೊಂಡು ಲೋಕಜೀವನದ ಭಾವಾಲಾಪಗಳನ್ನು ಒಂದು ಶಿಸ್ತಿಗೆ ಒಳಪಡಿಸಿ ಅವುಗಳನ್ನು ಜೀವನಾನುಭವಾಗಿ ಪರಿವರ್ತಿಸಿ ನೋಡುವ ಅನ್ವೇಷಕ ದೃಷ್ಟಿ ಅವರದು. ಬದುಕನ್ನು, ಸಮಾಜವನ್ನು ತಿಳಿದುಕೊಳ್ಳಲು ಅವರ ಕಾದಂಬರಿಗಳು ನಮ್ಮ ನೆರವಿಗೆ ಬರುತ್ತವೆ. ನಮ್ಮ ಸಮಾಜದ ನಿನ್ನೆ ಮೊನ್ನೆಗಳ ಬಗೆಗೆ ಅರಿಯಲು ಧಾರಾಳ ವಿವರಣೆ ಒಳನೋಟಗಳು ಅವರ ಕೃತಿಗಳಲ್ಲಿ ಸಿಗುತ್ತವೆ.



ಮನೆಯೊಳಗೆ ಮನೆಯೊಡೆಯ ಇದ್ದಾನೋ ಇಲ್ಲವೋ?
ಲೇ: ಬಿ. ಜನಾರ್ದನ ಭಟ್
ಪ್ರ: ಅಂಕಿತ ಪುಸ್ತಕ ಬೆಂಗಳೂರು
ಬೆಲೆ ರು. 175/-

'ಮನೆಯೊಳಗೆ ಮನೆಯೊಡೆಯ ಇದ್ದಾನೋ ಇಲ್ಲವೋ?' ಇದು ಜನಾರ್ದನ ಭಟ್ ಅವರ ವಿನೂತನ ಪ್ರತಿಮಾತ್ಮಕ ಕಾದಂಬರಿ. ಮೇಧಾವಿ ವಿದ್ವಾಂಸನೊಬ್ಬನ ವಿಶಿಷ್ಟ ಜೀವನ ದರ್ಶನ ಮತ್ತು ಸಾಧನೆಯ ಅನಾವರಣದ ಜತೆ ಜತೆಗೆ ಅಂದಿನ ಐತಿಹಾಸಿಕ ಸಾಂಸ್ಕೃತಿಕ ಪರಿಪ್ರೇಕ್ಷ್ಯ ಈ ಕಾದಂಬರಿಯಲ್ಲಿ ರೋಚಕವಾಗಿ ಮೂಡಿಬಂದಿದೆ. ಇದು ವಿಸ್ತಾರದಲ್ಲಿ ಚಿಕ್ಕ ಕಾದಂಬರಿ. ಇಲ್ಲಿನ ಕಥಾನಿರೂಪಣೆ, ಅದರ ವೇಗ ವಸ್ತುಕ ಮಾದರಿಯಂತೆ ಇದೆ. ಇದು ನವಚಾರಿತ್ರಿಕ ಕಥನ ಸಾಹಿತ್ಯದ ವಿಧಾನವೂ ಹೌದು. ''ಒಬ್ಬರು ಮಹಾಸಾಧಕರ ಬದುಕಿನ ನಡೆಯನ್ನು ಮತ್ತು ಸಾಧನೆಯನ್ನು, ವಿಧಿ ಅವರನ್ನು ಅಲೆಸಿದ ಬಗೆಯನ್ನು ಮತ್ತು ನಮ್ಮ ಸ್ವಾತಂತ್ರ್ಯೋತ್ತರ ಸಮಾಜಕ್ಕೆ ಅವರ ಯೋಗ್ಯತೆಯ ಅರಿವೇ ಇಲ್ಲದಿ ದ್ದುದನ್ನು ಕೇಂದ್ರವಾಗಿ ಇರಿಸಿಕೊಂಡಿರುವೆ. ಕೆಲವು ಪಾರಂಪರಿಕ ನಂಬಿಕೆಗಳು ಮತ್ತು ಆಧ್ಯಾತ್ಮಿಕ ಸಾಧನೆಗಳ ಉಲ್ಲೇಖವಿದೆ. ಅದನ್ನು ಒಂದು ತಂತ್ರವಾಗಿ ಬಳಸಿಕೊಂಡಿದ್ದೇನೆ. ಒಟ್ಟು ಕಾದಂಬರಿಯ ಸಮಸ್ಯೆ ವ್ಯಕ್ತಿ ಚೈತನ್ಯ ಮತ್ತು ಸಮಾಜದ ಕೌಟುಂಬಿಕ, ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಪೇಕ್ಷೆಗಳ ನಡುವಿನ ತಾಕಲಾಟದಲ್ಲಿದೆ. ಹಾಗಾಗಿ ಈ ಆಧ್ಯಾತ್ಮಿಕತೆ ಮತ್ತು ನಂಬಿಕೆಗಳನ್ನು ಉದ್ದಕ್ಕೂ ಬಳಸಿಕೊಂಡಿದ್ದೇನೆ ಎಂಬುದಾಗಿ'' ಲೇಖಕರೇ ಈ ಕೃತಿಯ ಆಶಯವನ್ನು ಮುಮ್ಮಾತಿನಲ್ಲಿ ಸ್ಪಷ್ಟಪಡಿಸಿದ್ದಾರೆ. ಹೀಗಾಗಿ ಈ ಕಾದಂಬರಿಗೆ ಸಹಜವಾಗಿ ಬಹು ಆಯಾಮ ಪ್ರಾಪ್ತವಾಗಿದೆ.

ವಸಾಹತುಶಾಹಿ ಸಂದರ್ಭದಲ್ಲಿನ ನಮ್ಮ ಸ್ಥಿತಿಗತಿ, ಶಿಕ್ಷಣ ವ್ಯವಸ್ಥೆ, ಮತಾಂತರ, ಅದರಿಂದ ಸಮಾಜದಲ್ಲಿ ಹೊಸ ವಿನ್ಯಾಸ ರೂಪುಗೊಂಡ ರೀತಿ, ವ್ಯಕ್ತಿ ವಿಕಾಸದ ಹಾದಿ, ಅಲ್ಲಿನ ಅಡೆತಡೆ, ಮಹತ್ವಾಕಾಂಕ್ಷೆ, ಪ್ರತಿಭಾ ಪಲಾಯನ, ಅನಾಥ ಪ್ರಜ್ಞೆ, ಜಾಗತಿಕ ರಾಜಕಾರಣ, ಮಹಾಯುದ್ಧ, ದೇಶದ ಸ್ವಾತಂತ್ರ್ಯ ಹೋರಾಟದ ವಿವಿಧ ಘಟ್ಟಗಳು, ವರ್ತಮಾನದ ತವಕ ತಲ್ಲಣಗಳ ಚಿತ್ರಣಗಳೆಲ್ಲ ಈ ಕಾದಂಬರಿಯಲ್ಲಿ ಹಾಸುಹೊಕ್ಕಾಗಿರು ವುದರಿಂದ ಇದು ಒಂದು ರೀತಿಯಲ್ಲಿ ಸಂಕೀರ್ಣವಾದ ಕಲಾಕೃತಿಯೂ ಆಗಿದೆ. ವಾಸ್ತವ-ಆದರ್ಶ, ವ್ಯಕ್ತಿ- ಸಮಾಜ, ಪರಂಪರೆ- ಆಧುನಿಕತೆ, ದೇಹ-ಮನಸ್ಸು, ಅಂತರಂಗ ಬಹಿರಂಗ ಹೀಗೆ ಹಲವು ದ್ವಂದ್ವ ಸಂಘರ್ಷಗಳ ಮುಖಾಮುಖಿ ಇಲ್ಲಿ ಕಾಣುತ್ತದೆ.

ಒಂದು ಕಾಲದ ಸಾಧಕರ ಬದುಕಿನ ಕ್ರಮ, ಅವರ ಉದಾತ್ತತೆ, ದೌರ್ಬಲ್ಯ, ಸಾಮಾಜಿಕ ನಡಾವಳಿ ಮೊದಲಾದ ಅಂಶಗಳ ವಿಶ್ಲೇಷಣೆಯೂ ಇಲ್ಲಿದೆ. ಮೇಲುನೋಟಕ್ಕೆ ಇಲ್ಲಿ ಸಾಧಕನೊಬ್ಬನ ಜೀವನ ಚರಿತ್ರೆಯನ್ನು ಕಾದಂಬರಿ ರೂಪದಲ್ಲಿ ಹೇಳುವ ಪ್ರಯತ್ನ ಇದ್ದರೂ ಪ್ರಸ್ತುತ ಕೃತಿ ಅಷ್ಟಕ್ಕೇ ಸೀಮಿತವಾಗಿಲ್ಲ. ಇದರಲ್ಲಿರುವ ಕಥಾನಕ ಇತಿಹಾಸದ ನೈಜ ಘಟನೆಗಳ ವಿವಿಧ ಬಗೆಯ ನಿರೂಪಣೆಗಳನ್ನು ಆಧರಿಸಿರುವುದು ವಿಶೇಷ. ಕಥಾನಾಯಕ ಪ್ರತಿಭಾಶಾಲಿ ಅನಂತರಾಮ ಉಡುಪ ಜರ್ಮನಿಗೆ ತೆರಳಿ ಉನ್ನತ ವ್ಯಾಸಂಗ ಮುಗಿಸಿ ಅಲ್ಲೇ ನೌಕರಿ ಪಡೆದು ನಾಮಾಂಕಿತ ಲೇಖಕನಾಗಿ ಮಿಂಚಿದ್ದು, ನೇತಾಜಿ ಅವರ ಜರ್ಮನ್ ಭೇಟಿ, ಅಲ್ಲಿ ಉಡುಪರು ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಸಂಪರ್ಕಕ್ಕೆ ಬಂದದ್ದು, ಹೊರರಾಷ್ಟ್ರದಲ್ಲಿ ನಡೆದ ಸಂಘಟನೆ ಕಾಯಕ, ಎರಡನೆಯ ಮಹಾಯುದ್ಧದ ಸಂದರ್ಭದಲ್ಲಿ ಜೀವ ಉಳಿಸಿಕೊಳ್ಳಲು ಉಡುಪರು ಅಲ್ಲಿಂದ ಪಲಾಯನ ಮಾಡಬೇಕಾದ ಸಂದರ್ಭಗಳನ್ನು ಖಚಿತವಾಗಿ ಚಿತ್ರಿಸಿರುವುದು ಈ ಕಾದಂಬರಿಯ ಹಿರಿಮೆ.

'1945ರ ಏಪ್ರಿಲ್ ತಿಂಗಳ ನಡುಭಾಗದಿಂದಲೇ ಬರ್ಲಿನ್ ನಗರದ ಪತನ ನಿಶ್ಚಯವಾಗಿ ಹೋಗಿತ್ತು. ಮುಳುಗುವ ಹಡಗಿನಿಂದ ಇಲಿಗಳು ಹೊರಬೀಳುವಂತೆ ನೂರಾರು ಮಂದಿ ಬರ್ಲಿನ್ ನಗರದಿಂದ ಹೇಗೆಹೇಗೋ ತಪ್ಪಿಸಿಕೊಳ್ಳಲಾರಂಭಿಸಿದ್ದರು. ರಷ್ಯದ ರೆಡ್ ಆರ್ಮಿ ಎರಡು ಕವಲುಗಳಾಗಿ ಬರ್ಲಿನ್ ನಗರವನ್ನು ವಶಪಡಿಸಿಕೊಳ್ಳಲು ಧಾವಿಸಿ ಬರುತ್ತಿತ್ತು. ಜರ್ಮನಿಯ ಸೋಲು ಖಾತ್ರಿಯಾಗುತ್ತಿದ್ದಂತೆ ಏಪ್ರಿಲ್ 30 ರಂದು ಹಿಟ್ಲರ್ ಆತ್ಮಹತ್ಯೆ ಮಾಡಿಕೊಂಡ. ಅಧಿಕೃತವಾಗಿ ಮೇ 7 ರಂದು ಜರ್ಮನಿಯು ಮಿತ್ರರಾಷ್ಟ್ರಗಳಿಗೆ ಶರಣಾಯಿತು. ಪ್ರೊಫೆಸರ್ ಬೆಳಂಜಾಲ್ ಅನಂತರಾಮ ಉಡುಪರು ಸುಭಾಶ್ಚಂದ್ರ ಬೋಸರ ಅನುಯಾಯಿಯಾಗಿ ಕೊನೆಯವರೆಗೂ ಬ್ರಿಟಿಷರನ್ನು ಶತ್ರುಗಳಾಗಿ ಮತ್ತು ಜರ್ಮನರನ್ನು ಮಿತ್ರರಾಗಿ ಪರಿಗಣಿಸಿದ್ದರು. ಮಾತೃಭೂಮಿಯಾದ ಭಾರತ ದೇಶಕ್ಕೆ ತಮ್ಮ ನಿಷ್ಠೆಯನ್ನು ಬಿಟ್ಟುಕೊಡಲಿಲ್ಲ. ತಮ್ಮ ಪತ್ರಿಕೆಯಲ್ಲಿ ರಷ್ಯಾ, ಅಮೇರಿಕ, ಇಂಗ್ಲೆಂಡ್ ಮತ್ತು ಚೀನಾ ಈ ನಾಲ್ಕು ದೊಡ್ಡ ದೇಶಗಳ ನಾಯಕತ್ವದ ಮಿತ್ರ ರಾಷ್ಟ್ರಗಳ ಕೂಟವನ್ನು ಖಂಡಿಸಿ ಬರೆಯುತ್ತಲೇ ಇದ್ದರು. ಆದರೆ ಏಪ್ರಿಲ್ ತಿಂಗಳಲ್ಲಿ ಜರ್ಮನಿಯ ಸೋಲು ಖಚಿತ ಎಂದು ಎಲ್ಲರಿಗೂ ಗೊತ್ತಾಗಿಹೋಗಿತ್ತು. ಜರ್ಮನರೇ ತಮ್ಮ ಸಮುದಾಯದವರನ್ನು ಬರ್ಲಿನ್ ನಗರದಿಂದ ಸುರಕ್ಷಿತ ಸ್ಥಳಗಳಿಗೆ ಕಳುಹಿಸತೊಡಗಿದ್ದರು. ರಷ್ಯಾದ ರೆಡ್ ಆರ್ಮಿಯ ಸೈನಿಕರು ಬರ್ಲಿನ್ ಪ್ರವೇಶಿಸಿ ತಮ್ಮನ್ನು ಸಾಯಿಸುತ್ತಾರೆ, ತಮ್ಮ ಹೆಣ್ಣು ಮಕ್ಕಳನ್ನು ತಮ್ಮ ಕಾಮತೃಷೆಗೆ ಬಳಸಿಕೊಳ್ಳುತ್ತಾರೆ ಎಂಬ ಭಯದಿಂದ ಅನೇಕ ಕುಟುಂಬಗಳು ಬರ್ಲಿನ್ ನಗರದಿಂದ ತಪ್ಪಿಸಿಕೊಂಡು ಹೋಗತೊಡಗಿದ್ದರು. ನಗರದ ಹೊರಗೆ ರಷ್ಯದ ಸೈನ್ಯಗಳು ಬೀಡು ಬಿಟ್ಟಿವೆ ಎಂಬ ಸುದ್ದಿ ಬರುವವರೆಗೂ ಪ್ರೊಫೆಸರ್ ಉಡುಪರು ತಮ್ಮ ಸಂಪಾದಕೀಯ ಕಚೇರಿಯಲ್ಲಿ ಕುಳಿತು ಭಾರತದ ಪರವಾಗಿ ಮತ್ತು ಐ.ಎನ್.ಎ.ಯ ಪರವಾಗಿ ಧೈರ್ಯದ ಮಾತುಗಳನ್ನೂ ಮತ್ತು ಬ್ರಿಟಿಷರು ಹಿನ್ನಡೆಯುತ್ತಿರುವ ಹಾಗೂ ಐ.ಎನ್.ಎ.ಯ ಮುನ್ನಡೆಯ ಸುದ್ದಿಗಳನ್ನೂ ಬರೆದುಕೊಂಡು ಕುಳಿತಿದ್ದರು.'

ಇಲ್ಲಿ ಜಾಗತಿಕ ರಾಜಕಾರಣದ ಜತೆಗೆ ಉಡುಪಿಯ ಒಬ್ಬ ವಿದ್ವಾಂಸನ ಬದುಕು ಮುಖಾಮುಖಿಯಾಗುವುದನ್ನು ಕಾಣಬಹುದು. ಈ ಕಾದಂಬರಿ ಆಪ್ತವೂ ವ್ಯಾಪ್ತವೂ ವಾಚನೀಯವೂ ಆಗಿದೆ. ಧಾರ್ಮಿಕ ನಂಬಿಕೆ, ಅತೀಂದ್ರಿಯ ಸಾಧನೆ, ದೇಹಾತೀತ ಪ್ರಯಾಣ ಮೊದಲಾದ ವಿಚಾರಗಳು ಅವಾಸ್ತವತೆಯಂತೆ ಕಂಡು ಬಂದರೂ ಅವನ್ನು ಕಾದಂಬರಿಯ ಬೆಳವಣಿಗೆಗೆ ತಂತ್ರವಾಗಿ ಬಳಸಿಕೊಂಡಿರುವುದು ಅವಲೋಕನೀಯವಾಗಿದೆ. ಮಾಂತ್ರಿಕ ವಾಸ್ತವ ಕ್ರಮದ ಬರವಣಿಗೆಯಲ್ಲಿ ಇಂತಹ ತಂತ್ರಗಳು ಜಾಗತಿಕವಾಗಿ ಗಮನ ಸೆಳೆದಿವೆ. ಭಟ್ ಅವರು ತಮ್ಮ ಪ್ರಾದೇಶಿಕ ಸಂಸ್ಕೃತಿಯಲ್ಲಿ ಸಹಜವಾಗಿ ಸ್ವೀಕೃತವಾಗಿರುವ ನಂಬಿಕೆಗಳನ್ನೇ ಇಲ್ಲಿ ಬಳಸಿಕೊಂಡಿದ್ದಾರೆ. ಈ ತಂತ್ರವು ಈ ಸಮಾಜದ ಒಳಗಿನ ಓದುಗರಿಗೆ ಒಪ್ಪಿತ ನಂಬಿಕೆಗಳಷ್ಟೇ ಆಗಿರುವುದನ್ನೂ ಗಮನಿಸಬಹುದು. ಎರಡನೆಯದಾಗಿ ಈ ಕಾದಂಬರಿಯನ್ನು ಈ ತಂತ್ರದ ಬಳಕೆಯಿಲ್ಲದೆಯೂ ಬರೆಯಬಹುದಿತ್ತು. ಅಂದರೆ ಇಲ್ಲಿ ನಿರೂಪಿಸಿರುವ ಎಲ್ಲಾ ಸಂಗತಿಗಳನ್ನು ಸರ್ವಸಾಕ್ಷಿ ಪ್ರಜ್ಞೆಯಿಂದಲೂ ನಿರೂಪಿಸಬಹುದಿತ್ತು. ಕಥಾನಾಯಕ ಅದೃಶ್ಯರೂಪಿಯಾಗಿ ಕೆಲವು ಸನ್ನಿವೇಶಗಳಲ್ಲಿದ್ದು ಅವನ ಪ್ರಜ್ಞೆಯ ಮೂಲಕ ಅದಕ್ಕೆ ವಿಶೇಷ ಹೊಳಪನ್ನು ನೀಡುವ ಈ ತಂತ್ರದ ಹೊಸತನ ಕಥಾನಕಕ್ಕೆ ವಿಶೇಷ ಆಯಾಮವನ್ನು ಕೂಡಿಸಿದೆ.

ಒಟ್ಟಿನಲ್ಲಿ ಇಲ್ಲಿ ಲೇಖಕರು ಕಟ್ಟಿಕೊಟ್ಟಿರುವ ಅನುಭವಲೋಕ ಕನ್ನಡಕ್ಕೆ ತುಸು ಹೊಸತೇ ಆಗಿದೆ.

ಗ್ರಾಮೀಣ ಬದುಕಿನ ಕಥೆಗಳು

» ಆರ್. ಎಸ್.ಹಬ್ಬು

ತಮ್ಮ 68 ನೆ ವರ್ಷದಲ್ಲಿ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡ ಕೃಷಿಕ ಜಯಪ್ರಕಾಶ ಹಬ್ಬುರವರ ಮೂರನೆ ಕೃತಿ 'ಕಪ್ಪು ಕಾವಳದಲ್ಲಿ ಬೆಳಕಿನ ಕಿಂಡಿ', ಅರ್ಥವತ್ತಾದ ಶೀರ್ಷಿಕೆ ಮತ್ತು ಗಾಢ ಕತ್ತಲಲ್ಲಿ ಒಂದು ಉರಿಯುತ್ತಿರುವ ಲಾಂಟೀನನ್ನು ಹಿಡಿದು ಸಾಗುತಿರುವ ಓರ್ವ ಅನಾಮಿಕನ ಚಿತ್ರವಿರುವ ಮುಖ ಪುಟ ಓದುಗನ ಗಮನ ಸೆಳೆಯುತ್ತವೆ. ಅವು ಲೇಖಕನ ಆಶಯವನ್ನೂ ಬಿಂಬಿಸುತ್ತವೆ ಎನ್ನುವುದರಲ್ಲಿ ಸಂದೇಹವಿಲ್ಲ.



ಕಪ್ಪು ಕಾವಳದಲ್ಲಿ ಬೆಳಕಿನ ಕಿಂಡಿ
ಲೇ : ಜಯಪ್ರಕಾಶ ಎಸ್. ಹಬ್ಬು
ಪ್ರ: ಕಾರ್ತಿಕ ಎಂಟರ್ಪ್ರೈಸರ್ಸ್, ಮೈಸೂರು

ಈ ಪುಸ್ತಕದಲ್ಲಿ 20 ಕಥೆಗಳು ಪ್ರಬಂಧದ ಅಂಶಗಳನ್ನೂ ಒಳಗೊಂಡಿವೆ ಎನ್ನುವುದು ಸ್ಪಷ್ಟ. ಹಾಗಾಗಿ ಕಥನ ಕ್ರಿಯೆಯಲ್ಲಿ ಇದೊಂದು ಭಿನ್ನ ಪ್ರಯೋಗವೆನಿಸುತ್ತದೆ. ಇಲ್ಲಿ ಲೇಖಕ ಸಾಂಪ್ರದಾಯಿಕ ಶೈಲಿಯಲ್ಲಿ ಕಥೆಯನ್ನು ಹೇಳದೇ, ತಮ್ಮ ದಟ್ಟ ಅನುಭವದ ಹಿನ್ನೆಲೆಯಲ್ಲಿ, ಗ್ರಾಮೀಣ ಜೀವನದ ಕಥೆಗಳನ್ನು ಕಟ್ಟಿಕೊಡುತ್ತಾರೆ. ಗ್ರಾಮಸ್ಥರ ಸಂಪ್ರದಾಯ, ಆಚಾರ ವಿಚಾರಗಳ ಮೇಲಿನ ಅವರ ನಿಷ್ಠೆ, ಅವುಗಳ ಕುರಿತಾದ ಮಿಥ್ಯೆಗಳು, ಆ ಸಂಪ್ರದಾಯದಿಂದಾಗಿ ಉದ್ಭವಿಸುವ ಸಮಸ್ಯೆಗಳು, ಗ್ರಾಮವಾಸಿಗಳ ಮಾನವೀಯ ಕಾಳಜಿ, ಜಾಗತೀಕರಣದ ಕಬಂಧ ಬಾಹುವಿನಲ್ಲಿ ಸಿಲುಕಿದ ಕುಟುಂಬಗಳಲ್ಲಿ ಉಂಟಾಗುತ್ತಿರುವ ಬಿರುಕು ಮತ್ತು ಸಂಘರ್ಷಗಳು, ಮನೆಯ ನಾಲ್ಕು ಗೋಡೆಗಳ ಮಧ್ಯೆ ಬಂಧಿಯಾದ ಮಹಿಳೆಯರ ಗೋಳು, ತಮ್ಮ ಪ್ರಾಬಲ್ಯವನ್ನು ಮೆರೆಸುವ ಹಂಬಲದ ಪುರುಷರ ಅಹಂಕಾರ ಇತ್ಯಾದಿ ವಿವಿದ ಸಾಮಾಜಿಕ ಸಮಸ್ಯೆಗಳ ಮಗ್ಗಲುಗಳನ್ನು ವಿಶ್ಲೇಷಿಸುತ್ತ, ಅಲ್ಲಲ್ಲಿ ಈ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸುತ್ತ, ಲೇಖಕರು ಕಥನ ಕ್ರಮಕ್ಕೆ ತಮ್ಮದೇ ಆದ ಆಯಾಮವನ್ನು ಸೃಷ್ಟಿಸಿದ್ದಾರೆ. ಘಟನಾ ಪ್ರಧಾನವಾದ ಇಲ್ಲಿನ ಕಥೆಗಳು ಲೇಖಕನ ಕಲ್ಪನೆಯ ಕೂಸಾಗದೇ, ವಾಸ್ತವಿಕ ಬದುಕಿನ ಪ್ರತಿಬಿಂಬವೆನಿಸುತ್ತವೆ. ಇಲ್ಲಿ ಅನೇಕ ಸಂದರ್ಭಗಳಲ್ಲಿ ಲೇಖಕ ಅನುಭಾವಿಯಾಗಿ, ತತ್ವಜ್ಞನಾಗಿ ಗೋಚರಿಸುವುದು ಒಂದು ವಿಶೇಷ. ಜಯಪ್ರಕಾಶ ಹಬ್ಬುರವರು ಭಾಷೆಯನ್ನು ಪರಿಣಾಮಕಾರಿಯಾಗಿ ದುಡಿಸಿಕೊಳ್ಳುತ್ತಾರೆ. ಹಾಗಾಗಿ ಅವರ ಎಲ್ಲ ಕಥೆಗಳು ಸುಲಭದಲ್ಲಿ ಓದಿಸಿಕೊಂಡು ಹೋಗುತ್ತವೆ. ಅವರು ಮೂಲತಃ ಓರ್ವ ಭಾವ ಜೀವಿ ಮತ್ತು ಸುಂದರ ಸಮಾಜದ ಸ್ಥಾಪನೆಯಾಗಬೇಕು ಎಂದು ಬಯಸುವ ಕನಸುಗಾರ. ಇವನ್ನು ನಾವು ಅವರ ಕಥೆಗಳಲ್ಲೂ ಕಾಣಬಹುದು.

15 ಪುಸ್ತಕಗಳ ಬಿಡುಗಡೆ!

ಪುಸ್ತಕ ಬಿಡುಗಡೆ ಸಮಾರಂಭ ಎಂದರೆ ಏನೋ ಖುಷಿ; ಏನೋ ಉತ್ಸಾಹ. ಅವೆಷ್ಟೋ ಓದುಗರು, ಹೊಸ ಪುಸ್ತಕಗಳ ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸಿ, ಗರಿ ಗರಿ ಹೊಸ ಪುಸ್ತಕವನ್ನು ಅಲ್ಲೇ ಖರೀದಿಸಿ, ಅದರ ಮೊದಲ ಪುಟದ ಮೇಲೆ ಲೇಖಕರ ಹಸ್ತಾಕ್ಷರವನ್ನು ಹಾಕಿಸಿಕೊಳ್ಳಲು ತಹತಹಿಸುತ್ತಿರುತ್ತಾರೆ! ಜತೆಗೆ, ಇಷ್ಟದ ಲೇಖಕರ ಜತೆ ಸೆಲ್ಫಿ ತೆಗೆದುಕೊಳ್ಳುವುದು ಸಹ ಒಂದು ಅಪರೂಪದ ಸಂಭ್ರಮವೇ!

ಇಂತಹ ಸಂಭ್ರಮಾಚರಣೆಗೆ ಬೆಂಗಳೂರಿನ 'ಸಪ್ನ ಬುಕ್ ಹೌಸ್' ಮತ್ತೊಮ್ಮೆ ಅವಕಾಶ ಮಾಡಿಕೊಡುತ್ತಿದೆ. ಇದೇ ಶನಿವಾರ, ಜುಲೈ 12 ರಂದು, ಒಟ್ಟಿಗೆ 15 ಪುಸ್ತಕಗಳ ಬಿಡುಗಡೆಯ ಸಮಾರಂಭವನ್ನು ಸಪ್ನ ಬುಕ್ ಹೌಸ್ ಏರ್ಪಡಿಸಿದೆ! ಪುಸ್ತಕಗಳನ್ನು ಬಿಡುಗಡೆ ಮಾಡುವವರು, ಪ್ರಶಸ್ತಿ ವಿಜೇತ ಚಿತ್ರನಿರ್ದೇಶಕರಾದ ಗಿರೀಶ್ ಕಾಸರವಳ್ಳಿ. ಮುಖ್ಯ ಅತಿಥಿ ಜೋಗಿ; ಜತೆಗೆ, ಪುಸ್ತಕದ ಲೇಖಕರಾದ ಡಿ.ವಿ.ಗುರುಪ್ರಸಾದ್, ಡುಂಡಿರಾಜ್, ಜಯಪ್ರಕಾಶ್ ನಾಗತಿಹಳ್ಳೀ ಮತ್ತು ಎಂಕೆ ಇಂದಿರಾ ಪರವಾಗಿ ಎಂ.ಕೆ. ಮಂಜುನಾಥ್ ಭಾಗವಹಿಸುತ್ತಿದ್ದಾರೆ. ಡಿ.ವಿ.ಗುರುಪ್ರಸಾದ್ ಅವರ ಐದು ಪುಸ್ತಕಗಳು ಮತ್ತು ಎಂ.ಕೆ. ಇಂದಿರಾ ಅವರ ಆರು ಕಾದಂಬರಿಗಳು ಈ ಸಂದರ್ಭದಲ್ಲಿ ಬಿಡುಗಡೆಯಾಗುತ್ತಿರುವುದು ವಿಶೇಷ.

15 ಪುಸ್ತಕಗಳ ಬಿಡುಗಡೆ
ದಿನಾಂಕ : 12.7.2025 ಸಂಜೆ 5.00 ಗಂಟೆಗೆ
ಸ್ಥಳ : ಸಪ್ನ ಬುಕ್ ಹೌಸ್, ಗಾಂಧಿ ನಗರ, ಬೆಂಗಳೂರು

ಪ್ರಭುತ್ವ ಮತ್ತು ವಿವೇಕ

» ಶ.ಹಾ.

ಈ ಪುಸ್ತಕದ ಅರಿಕೆಯಲ್ಲಿ ಲೇಖಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಪುಸ್ತಕವೇಕೆ ಹೊರಬಂತು ಎಂಬುದಕ್ಕೆ ಪುಟ್ಟ ಟಿಪ್ಪಣಿ ನೀಡಿದ್ದಾರೆ : ''ಮಾತು ಸೋತ ಭಾರತ, ಮಾತನಾಡದ ಭಾರತ ಇವು ನಮ್ಮ ಕಾಲದ ಸಾಮಾಜಿಕ ಬದುಕಿನ ದುರಂತದ ರೂಪಕಗಳು. ದನಿಯನ್ನು ಹತ್ತಿಕ್ಕುವ ಪ್ರಯತ್ನವನ್ನು ಪ್ರಭುತ್ವ ಎಗ್ಗಿಲ್ಲದೆ ಮಾಡುತ್ತಿದೆ. ಪ್ರಜಾಪ್ರಭುತ್ವದಲ್ಲಿ ಪ್ರಜೆಯ ದನಿಯನ್ನು ಉಡುಗಿಸಿ ಪ್ರಭುತ್ವ ಸರ್ವಾಧಿಕಾರಿಯ ರೂಪ ತಳೆಯುತ್ತಿದೆ. ಪ್ರತಿಭಟನೆಯ ದನಿ ಎತ್ತಿದವರನ್ನು ಪಶುಬಲದೊಡನೆ ಹಣಿಯುತ್ತಿದೆ. ಸಂವಾದ ಸಾಧ್ಯವಾಗದ ಸ್ಥಿತಿಯೊಂದು ನಿರ್ಮಾಣವಾಗಿದೆ. ನಾಲಿಗೆಯನ್ನು ಕತ್ತಿಯಂತೆ ಝಳಪಿಸುತ್ತಾ ನಾವು ಮಾತನಾಡುತ್ತಿದ್ದೇವೆ. ಅಷ್ಟೇಕೆ ನಾಲಿಗೆಯ ಬದಲು ಕತ್ತಿಯೇ ಮಾತನಾಡತೊಡಗಿದೆ. ಮಾತುಸೋತ ಇಂತಹ ಸ್ಥಿತಿಯಲ್ಲಿ ಸಂವೇದನಾಶೀಲ ಮನಸ್ಸುಗಳು ದನಿಯೆತ್ತಿ ಮಾತನಾಡಲೇಬೇಕಾದ ಅನಿವಾರ್ಯ ಸ್ಥಿತಿಯಲ್ಲಿ ನಾವಿದ್ದೇವೆ. ಸ್ವಾಯತ್ತಪ್ರಜ್ಞೆಯ ಸಂವೇದನಾಶೀಲ ಮನಸ್ಸುಗಳು ಮಾತು ಸೋತ ಭಾರತದಲ್ಲಿ ಮತ್ತೆ ಮಾತಿಗೆ ಶಕ್ತಿ ತಂದುಕೊಡಬೇಕಾಗಿದೆ. ಕನ್ನಡ ಪರಂಪರೆಯಲ್ಲಿ ಇಂತಹ ಅನೇಕ ಘಟ್ಟಗಳನ್ನು ನಾವು ನೋಡಿದ್ದೇವೆ. ಪ್ರಭುತ್ವದ ಪಾಶವಿಶಕ್ತಿಗೆ ಎದುರಾಗಿ ನಿಂತು ಜನಸಾಮಾನ್ಯರ ಬದುಕಿಗೆ ಘನತೆಯನ್ನು ತಂದುಕೊಟ್ಟ ಕನ್ನಡದ ವಿವೇಕ ಪರಂಪರೆಯನ್ನು ಪುನರ್ ಮನನ ಮಾಡುವುದರ ಮೂಲಕ ಪಶುಬಲಕ್ಕೆ ಪ್ರತಿಭಟನೆಯ ದನಿಯಾಗುವ ಹಂಬಲ ಈ ಹೊತ್ತಗೆ.'' (ಅರಿಕೆಯಲ್ಲಿ)



ಕನ್ನಡ ವಿವೇಕ ಪರಂಪರೆ ಮತ್ತು ಪ್ರಭುತ್ವ
ಲೇ: ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ
ಪ್ರ: ಅಭಿನವ ಬೆಂಗಳೂರು
9448804905
ಬೆಲೆ ರು.50/-

ಇದಕ್ಕೆ ಪೂರಕವಾದ ನೇರ ನುಡಿಗಳನ್ನು ನಾವು ಕಾಣುವುದು ಇದೇ ಪುಸ್ತಕದ 29ನೆಯ ಪುಟದಲ್ಲಿ. ''ನಮ್ಮಲ್ಲಿ ಇಂದು ಬೌದ್ಧಿಕ ಸಂವಾದಕ್ಕೆ ಬೇಕಾಗಿರುವ ಒಂದು ವಾತಾವರಣವೇ ಇಲ್ಲವಾಗಿಬಿಟ್ಟಿದೆ. ಉನ್ನತ ಮಟ್ಟದ ಬೌದ್ಧಿಕ ಅಧ್ಯಯನ ಕೇಂದ್ರಗಳಾದ ನಮ್ಮ ವಿಶ್ವವಿದ್ಯಾಲಯಗಳಲ್ಲೂ ಅಂತಹ ವಾತಾವರಣವಿಲ್ಲ. ಇನ್ನು ಸಾರ್ವಜನಿಕ ಬದುಕಿನಲ್ಲಿ ನಾವು ಅದನ್ನು ಅಪೇಕ್ಷಿಸುವುದಾದರೂ ಹೇಗೆ? ಭಿನ್ನಾಭಿಪ್ರಾಯಗಳು ಬೀದಿ ಜಗಳವಾಗುತ್ತಿದೆ. ನಮ್ಮ ಸಾರ್ವಜನಿಕ ಬದುಕಿನಲ್ಲಿ ಯಾರೇ ಮಾತನಾಡಿದರೂ ಒಂದೇ ಬೈಗುಳದ ಹಾಗೆ ಕೇಳಿಸುತ್ತದೆ. ಇಲ್ಲವೇ ಹೊಗಳಿಕೆಯ ದನಿ ಇರುತ್ತದೆ. ..'' ಜನಸಾಮಾನ್ಯರ (ಲೇಮ್ಯಾನ್) ಭಾಷೆಯಲ್ಲಿ ಹೇಳುವುದಾದರೆ, 'ನಮ್ಮ ಮಿದುಳಿಗೇ ಕೈ ಹಾಕುವಂತಹ ಲೇಖನಗಳು, ಚಿಂತನೆಗಳು, ಪ್ರತಿಪಾದನೆಗಳು ಈ ಪುಟ್ಟ ಪುಸ್ತಕದಲ್ಲಿದೆ. ನಾಡಿನ ಪ್ರಾಜ್ಞರೆಲ್ಲರೂ ಓದಿ, ಚರ್ಚೆಗೆ ಒಳಪಡಿಸಬೇಕಾದ ಪುಸ್ತಕವಿದು.

ನೋಟ್‌ಬುಕ್ - ಮಕ್ಕಳ ಕಥೆಗಳು
ಲೇ: ಡಾ. ಕೆ. ಶಿವಲಿಂಗಪ್ಪ ಹಂದಿಹಾಳು
ಪ್ರ: ಕವನ ಪ್ರಕಾಶನ, ಬಳ್ಳಾರಿ.
ಬೆಲೆ ರು.300/-

ಓದು ನೋಡು ಕೇಳು!

ಈ ವಿಶಿಷ್ಟ ಮಕ್ಕಳ ಪುಸ್ತಕವು 2025 ರ ಕೇಂದ್ರ ಸಾಹಿತ್ಯ ಅಕಾಡೆಮಿ ಬಾಲ ಸಾಹಿತ್ಯ ಪುರಸ್ಕಾರಕ್ಕೆ ಪಾತ್ರವಾಗಿದೆ.

» ಬೇದ್ರೆ ಮಂಜುನಾಥ, ಮೈಸೂರು

ಮಕ್ಕಳಿಗೆ ಕಥೆ ಹೇಳುವ ನಿಟ್ಟಿನಲ್ಲಿ ಹೊಸ ಪ್ರಯೋಗವಾಗಿ ಹೊರಬಂದ ಡಾ. ಕೆ. ಶಿವಲಿಂಗಪ್ಪ ಹಂದಿಹಾಳು ಅವರ ನೋಟ್ ಬುಕ್ ಕೇವಲ ಬಹುವರ್ಣ ಚಿತ್ರ-ಮುದ್ರಿತ ಓದು ಪುಸ್ತಕವಾಗಿರದೆ ಕೇಳು/ನೋಡು ಪುಸ್ತಕವಾಗಿಯೂ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿ ಹೆಸರು ಮಾಡಿದ್ದು, ಇದೀಗ 2025ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಾಲ ಸಾಹಿತ್ಯ ಪುರಸ್ಕಾರಕ್ಕೆ ಪಾತ್ರವಾಗಿದೆ. 'ಓದುವ ನೋಟ್‌ಬುಕ್'ನೊಳಗೆ ಒಟ್ಟು ಎಂಟು ಕಥೆಗಳಿದ್ದು ಅವುಗಳನ್ನು ಏಳು ಜನರು ಓದಿರುವ ವೀಡಿಯೋಗಳನ್ನು ಯು-ಟ್ಯೂಬ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ ಮತ್ತು ಅವುಗಳ ಕ್ಯು-ಆರ್ ಕೋಡ್‌ಗಳನ್ನು ಪ್ರತಿಯೊಂದು ಕಥೆಯ ಮೊದಲ ಪುಟದಲ್ಲಿ ಮುದ್ರಿಸಲಾಗಿದೆ. ನಾವೂ ಓದುವುದರ ಜೊತೆಗೆ ಅದನ್ನು ಬೇರೆಯವರು ಹೇಗೆ ಓದಿದ್ದಾರೆ ಮತ್ತು ಹಾಗೆ ಓದುವಾಗ ಅವರ ಧ್ವನಿಯಲ್ಲಿ ಆಗುವ ಏರಿಳಿತ, ಕಥೆ ಹೇಳುವ ಶೈಲಿ, ಹಾವ-ಭಾವ ಎಲ್ಲವೂ ಮೊಬೈಲ್ ಅಥವಾ ಕಂಪ್ಯೂಟರ್ ಪರದೆಯ ಮೇಲೆ ಮೂಡಿ ಅಲ್ಲೊಂದು ಫ್ಯಾಂಟಸಿ ಸೃಷ್ಟಿಯಾಗುತ್ತದೆ. ಇದು ಕನ್ನಡದ ಮಕ್ಕಳ ಕಥೆಗಳಿಗೆ ಹೊಸ ಆಯಾಮ ನೀಡಿದ್ದೇ ಅಲ್ಲದೆ ತರಗತಿ ಕೋಣೆಗಳಲ್ಲಿ ಮಾದರಿ ಓದು, ಶ್ರವ್ಯ-ದೃಶ್ಯ (ಆಡಿಯೋ-ವಿಷುಅಲ್) ರೂಪದ ಉದಾಹರಣೆಯಾಗಿ ತೋರಿಸಲು, ಶಿಕ್ಷಕ ತರಬೇತಿಯಲ್ಲಿ ಮಾದರಿಯಾಗಿ ಬಳಸಲು ಸಾಧ್ಯವಾಗುವಂತೆ ರೂಪಿತವಾಗಿವೆ.

ಕೊನೆಯ ಕಥೆ, ನೋಟ್‌ಬುಕ್‌ನ ಕಥಾನಾಯಿಕೆ, ವಿದ್ಯಾರ್ಥಿನಿ ಸುಮಾ ತಾನು ಇಷ್ಟಪಟ್ಟದ್ದನ್ನು, ಕಂಡ ಕನಸನ್ನು, ತನ್ನ ಮ್ಯಾಜಿಕ್ ನೋಟ್‌ಬುಕ್‌ನಲ್ಲಿ ಬರೆದಿಡುತ್ತಿದ್ದದ್ದು, ಮುಂದೊಂದು ದಿನ ಮ್ಯಾಜಿಕ್‌ನಂತೆಯೇ ಎಲ್ಲವೂ ಈಡೇರಿದ್ದು, ರಾಷ್ಟ್ರಮಟ್ಟದಲ್ಲಿ ಮಿಂಚುವಂತೆ ಮಾಡಿ ಪ್ರಧಾನಿಗಳ ಕೈಯಿಂದ ಪ್ರಶಸ್ತಿ ಸ್ವೀಕರಿಸಿದ್ದು, ಪ್ರಧಾನಿಗಳೂ ಕೂಡ ಸುಮಾಳ ನೋಟ್‌ಬುಕ್ ಸ್ಪರ್ಷಿಸಿ ಸಂತೋಷಿಸಿದ್ದು, ಅದೇ ಖುಷಿಯಲ್ಲಿ ಆಕೆ ತನ್ನ ನೋಟ್‌ಬುಕ್ ತೆರೆದು ಹೊಸ ಕನಸು ಬರೆಯಲು ಆರಂಭಿಸಿದ್ದು ಎಲ್ಲವೂ ಸೇರಿ ಒಂದು ಫ್ಯಾಂಟಸಿ ಲೋಕವನ್ನೇ ಸೃಷ್ಟಿಸಿಕೊಡುತ್ತದೆ. ನೈಜ ಘಟನಾವಳಿಗಳನ್ನು ಬಳಸಿಕೊಂಡು ಕಾಲ್ಪನಿಕ ಕಥೆಗಳನ್ನು ಸೃಷ್ಟಿಸುವ ಈ ಪ್ರಕಾರ ಫ್ಯಾಕ್ಷನ್ (ಫ್ಯಾಕ್ಟ್+ಫಿಕ್ಷನ್) ಎಂದೇ ಖ್ಯಾತವಾಗಿದೆ. ಆ ಅರ್ಥದಲ್ಲಿ ನೋಟ್‌ಬುಕ್‌ನಲ್ಲಿರುವ ಎಲ್ಲಾ ಎಂಟು ಕಥೆಗಳೂ ಫ್ಯಾಕ್ಷನ್ ಪ್ರಕಾರಕ್ಕೆ ಸೇರುತ್ತವೆ.

ನೋಟ್‌ಬುಕ್ ಕೃತಿ ಒಂದು ಹಳ್ಳಿಗಾಡಿನ ಪ್ರದೇಶದಲ್ಲಿ ಎದುರಾಗುವ ವಾಸ್ತವಿಕ ಸಂಗತಿಗಳನ್ನು ಕನಸು, ರಮ್ಯ ಕಲ್ಪನೆ, ಸಾಹಸ, ಕುತೂಹಲ, ಅಚ್ಚರಿ ಇತ್ಯಾದಿ ಅಂಶಗಳನ್ನು ಬೆರೆಸಿ ಓದುಗನನ್ನು ಮುಖಾಮುಖಿಯಾಗಲು ಪ್ರಯತ್ನಿಸುತ್ತದೆ. ಸಂಕೀರ್ಣತೆಯೇ ಮೈವೆತ್ತ ಸಾಮಾಜಿಕ ರಚನೆಯಲ್ಲಿ ವಿಕಾಸದ ಸಾಧನೆಗೆ ಅಡ್ಡಿಯಾಗಿರುವ ಬಡತನ, ಅದರಿಂದಾಗಿಯೇ ಉಂಟಾಗುವ ವಲಸೆ, ಲಿಂಗ ತಾರತಮ್ಯ, ಶಿಕ್ಷಣದಿಂದಾಗಿ ಪಡೆಯಬಲ್ಲ ಚಲನಶೀಲತೆಯ ಅರಿವಿಲ್ಲದ ಸಮುದಾಯಗಳು, ಅಜ್ಞಾನ ಇತ್ಯಾದಿ ಅತ್ಯಂತ ನಿರುದ್ವಗ್ನವಾಗಿ ನಿರೂಪಣೆಗೊಂಡಿವೆ. ಅಲ್ಲಲ್ಲಿ ಇಣುಕುವ ಪ್ರಾದೇಶಿಕ ನುಡಿಟ್ಟು ಕಥೆಗಳ ಕಸುವನ್ನು ಹೆಚ್ಚಿಸುವಂತಿವೆ, ಎಂದು ವಿಮರ್ಶಕ ಡಾ. ಕೇಶವ ಮಳಗಿಯವರು ಬೆನ್ನುತಟ್ಟಿದ್ದಾರೆ. ನೋಟ್‌ಬುಕ್‌ನಲ್ಲಿರುವ ಕಥೆಗಳನ್ನು ಕೇಳಲು / ನೋಡಲು ಭೇಟಿಮಾಡಿ: https://www.youtube.com/@k.shivalingappahandihalnot7655

ವಿಶ್ವವಾಣಿ ಅಂಕಿತ ಟಾಪ್ ಟೆನ್



1
ಎದೆಯ ಹಣತೆ
(ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ 13 ಕಥೆಗಳ ಸಂಕಲನ ಈಗ ಬೂಕರ್ ಪ್ರಶಸ್ತಿ ಪುರಸ್ಕಾರದೊಂದಿಗೆ)
ಲೇ: ಬಾನು ಮುಷ್ತಾಕ್
ಪ್ರ: ಅಭಿರುಚಿ ಪ್ರಕಾಶನ, ಮೈಸೂರು
ಬೆಲೆ : ರೂ 250/-



2
ಭುಗಿಲು
(ತುರ್ತು ಪರಿಸ್ಥಿತಿ ಘೋಷಣೆಗೆ 50 ವರ್ಷಗಳು. ಅದರ ವಿರುದ್ಧ ಹೋರಾಟದ ಸತ್ಯಕಥೆ -ಈಗ ಪುನರ್ ಮುದ್ರಣವಾಗಿದೆ)
ಸಂ : ಹೊ.ವೆ. ಶೇಷಾದ್ರಿ
ಪ್ರ: ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು
ಬೆಲೆ : ರೂ 750/-

3
ಎಲ್ಲ ನೆನಪಾಗುತಿದೆ
(ಈಚೆಗೆ ನಿಧನರಾದ ಎಚ್ಚೆಸ್ವಿ ಅವರ ಆತ್ಮಕಥೆ. ಅವರ ಬದುಕಿನ ಚಿತ್ರಗಳು ಪ್ರಬಂಧ ರೂಪದಲ್ಲಿ ಮೂಡಿ ಬಂದಿವೆ)
ಲೇ: ಎಚ್.ಎಸ್. ವೆಂಕಟೇಶ ಮೂರ್ತಿ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 350/-



4
ಜೈನಧರ್ಮ
(ಜೈನೇತರರಿಗಾಗಿ ಜೈನಧರ್ಮದ ಇತಿಹಾಸ ಆಚಾರ -ವಿಚಾರ ಸಂಪ್ರದಾಯಗಳ ಪರಿಚಯ -63 ಒಳನೋಟಗಳು)
ಲೇ: ದೇವದತ್ತ ಪಟ್ಟನಾಯಕ
ಅನು : ಪದ್ಮರಾಜ ದಂಡಾವತಿ
ಪ್ರ: ಅರವಿಂದ್ ಇಂಡಿಯಾ, ಬೆಂಗಳೂರು
ಬೆಲೆ : ರೂ 375/-

5
ಒಂದೊಳ್ಳೆ ಮಾತು -2
(ಬೇಕಾದಷ್ಟು ಮಾತುಗಳನ್ನು ಕೇಳಿದ್ದೀರಿ. ರೂಪಾ ಅವರ ಸೊಗಸಾದ ಒಂದೊಳ್ಳೆ ಮಾತು ಕೇಳಿ, ಮನಸ್ಸು ಹಗುರಾಗುತ್ತದೆ)
ಲೇ: ರೂಪಾ ಗುರುರಾಜ್
ಪ್ರ: ವಿಶ್ವವಾಣಿ ಪುಸ್ತಕ, ಬೆಂಗಳೂರು
ಬೆಲೆ : ರೂ 250/-



6
ಜೀವರತಿ
(ನೂರೆಂಟು ಕ್ರೌರ್ಯದ ಮಧ್ಯೆ ಮನಸ್ಸಿಗೆ ಒಳ್ಳೆಯತನದ ಸಾಧ್ಯತೆಗಳು ಎಷ್ಟೊಂದಿವೆ ಎಂದು ನೋಡಿದಾಗ ಹುಟ್ಟಿದ ಕಥನ ಇದು. ತೇಜಶ್ರೀ ಅವರ ಮೊದಲ ಕಾದಂಬರಿಯೂ ಹೌದು)
ಲೇ: ಜ.ನಾ. ತೇಜಶ್ರೀ
ಪ್ರ: ಅಮೂಲ್ಯ ಪುಸ್ತಕ, ಬೆಂಗಳೂರು
ಬೆಲೆ : ರೂ 450/-



7
ದಾಂಪತ್ಯ ಸಂವಿಧಾನ
(ಪ್ರಕೃತಿ - ಪುರುಷ ಸಂಬಂಧದ ಪವಿತ್ರವಾದ ಈ ಅನುಬಂಧವನ್ನು ಕಾಪಾಡಲು 'ದಾಂಪತ್ಯ ಸಂವಿಧಾನ'ವೊಂದನ್ನು ರೂಪಿಸಲು ಲೇಖಕರು ಇಲ್ಲಿ ಪ್ರಯತ್ನಿಸಿದ್ದಾರೆ)
ಲೇ: ನರಹಳ್ಳಿ ಬಾಲಸುಬ್ರಹ್ಮಣ್ಯ
ಪ್ರ: ಅಭಿನವ, ಬೆಂಗಳೂರು
ಬೆಲೆ : ರೂ 100/-



8
ಭಾಷೆ-ಬದುಕು
(ನಾಡಿನ ಹಿರಿಯ ಪ್ರಸಿದ್ಧ ಲೇಖಕರು 'ಭಾಷೆ - ಬದುಕು' ಕುರಿತು ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಇಲ್ಲಿ ಸಂಕಲಿಸಲಾಗಿದೆ.)
ಸಂ : ಡಾ.ಸಂತೋಷ ಹಾನಗಲ್ಲ
ಪ್ರ: ವೀರಲೋಕ, ಬೆಂಗಳೂರು
ಬೆಲೆ : ರೂ 650/-



9
ವಾರೆನ್ ಬಫೆಟ್
(ಷೇರುಗಳಲ್ಲಿ ಹೂಡಿಕೆ ಮಾಡಿ ಕೋಟ್ಯಂತರ ಗಳಿಸಿದ ಬಫೆಟ್‌ನ ಹೂಡಿಕೆ ತಂತ್ರಗಳು ಇಲ್ಲಿವೆ, ಷೇರು ಹೂಡಿಕೆದಾರರು ಗಮನಿಸಲೇಬೇಕಾದ ಪುಸ್ತಕವಿದು)
ಲೇ: ಚಂದ್ರಶೇಖರ ಮದಭಾವಿ
ಪ್ರ: ಸಾವಣ್ಣ ಎಂಟರ್ ಪ್ರೈಸಸ್, ಬೆಂಗಳೂರು
ಬೆಲೆ : ರೂ 200/-



10
ದಶರೂಪಕಗಳ ದಶಾವತಾರ
(ಯಕ್ಷಗಾನ ಕಲೆಯ ಹಾಸ್ಯಗಾರರಾಗಿ ಜನಪ್ರಿಯರಾಗಿರುವ ಅಶೋಕ ಅವರು ಯಕ್ಷಗಾನದಲ್ಲಿ ದಶರೂಪಕಗಳ ವಿವಿಧ ಮುಖಗಳನ್ನು ಪರಿಚಯಿಸಿದ್ದಾರೆ.)
ಲೇ: ಅಶೋಕ ಹಾಸ್ಯಗಾರ
ಪ್ರ:ಯಾಜಿ ಪ್ರಕಾಶನ, ಹೊಸಪೇಟೆ
ಬೆಲೆ : ರೂ 320/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004.
ದೂರವಾಣಿ: 26617100/26617755
ಮೊಬೈಲ್ ನಂ: 9019190502

ಪ್ರಭಾಮಣಿ ನಾಗರಾಜ ಹಾಸನ

ಸ್ಟೈಲಿನ ಸೂಟ್‌ಕೇಸ್‌ಗಳು ವ್ಯಕ್ತಿತ್ವಕ್ಕೆ ಮೆರುಗು ನೀಡುತ್ತಿದ್ದವು. ಆದರೆ ಟ್ರಾಲಿಬ್ಯಾಗ್‌ಗಳು ಬಂದು, ಹಳೆಯ ಸೂಟ್‌ಕೇಸ್‌ಗಳನ್ನು 'ಡಬ್ಬಾ ಸೂಟ್‌ಕೇಸ್' ಮಾಡಿಬಿಟ್ಟವು! ಈಗ ಟ್ರಾಲಿ ಬ್ಯಾಗ್‌ಗೆ ಸ್ಪರ್ಧೆ ನೀಡುತ್ತಿವೆ ಬೆನ್ನಿಗೆ ಸಿಕ್ಕಿಸುವ ಬಣ್ಣ ಬಣ್ಣದ ಬ್ಯಾಗುಗಳು!

ಸೂಟ್‌ಕೇಸಿನ ಅಟಾಟೋಪ!

ಚಿಕ್ಕಂದಿನಲ್ಲಿ ನಮ್ಮ ಮನೆಯವರೆಲ್ಲಾ ಒಟ್ಟಾಗಿ ಯಾವುದಾದರೂ ಊರಿಗೆ ಹೋಗಿದ್ದ ನೆನಪೇ ಇಲ್ಲ. ಯಾವುದೇ ಸಂದರ್ಭದಲ್ಲೂ ಮನೆಗೆ ಬೀಗ ಹಾಕಿದ್ದಂತೂ ಇಲ್ಲವೇ ಇಲ್ಲ. ಅವಿಭಕ್ತ ಕುಟುಂಬವಾಗಿದ್ದ ನಮ್ಮ ಮನೆಯ ತುಂಬಾ ಜನರಿದ್ದುದರಿಂದ ಆ ಪ್ರಮೇಯವೇ ಉಂಟಾಗುತ್ತಿರಲಿಲ್ಲವೇನೊ! ಅಕಸ್ಮಾತ್ ಹೋದರೂ ಕೆಲವರಾದರೂ ಮನೆಯಲ್ಲಿ ಉಳಿದಿರುತ್ತಿದ್ದು, ಬೆಳಿಗ್ಗೆ ಹೊರಟವರೂ ರಾತ್ರಿಯೇ ವಾಪಸಾಗುತ್ತಿದ್ದುದರಿಂದ ನಮ್ಮ ಮನೆಯಲ್ಲಿ ಉಡುಪುಗಳನ್ನು ಪ್ಯಾಕ್ ಮಾಡಿಕೊಂಡು ಹೋಗುವಂಥಾ ಕಿಟ್‌ಬ್ಯಾಗ್‌ಗಳೂ ಇರಲಿಲ್ಲ. ಸೂಟ್‌ಕೇಸ್ ಎನ್ನುವ ಶಬ್ದವನ್ನಂತೂ ಕೇಳಿಯೇ ಇರಲಿಲ್ಲ. ವರ್ಷಕ್ಕೊಮ್ಮೆ ಸುಗ್ಗಿಯ ಕಾಲದಲ್ಲಿ ಕ್ವಾರ್ಣ್ಯಕ್ಕೆ ಬರುತ್ತಿದ್ದ ಅಜ್ಜಿಯೊಬ್ಬರು ಕನಿಷ್ಠ ಒಂದು ತಿಂಗಳಾದರೂ ಉಳಿಯುತ್ತಿದ್ದರೂ ಒಂದೆರಡು ಸೀರೆ-ರವಿಕೆಗಳಿರುತ್ತಿದ್ದ ಬಟ್ಟೆಯ ಗಂಟೊಂದನ್ನು ಮಾತ್ರ ತರುತ್ತಿದ್ದರು.

ನಾವು ಓದಲು ಸಮೀಪದ ಜಿಲ್ಲಾ ಕೇಂದ್ರದಲ್ಲಿ ರೂಂ ಮಾಡಿಕೊಂಡು ಹೋಗುವಾಗಲೂ ಸಾಮಾನು ತರುವ ಚೀಲಗಳಲ್ಲೇ ನಮ್ಮಲ್ಲಿದ್ದ ಮಿತ ವಸ್ತ್ರಗಳನ್ನು ತುಂಬಿಕೊಂಡು ಹೋಗುತ್ತಿದ್ದೆವು. ರಜಾ ದಿನಗಳಲ್ಲಿ ಊರಿಗೆ ಹೋದಾಗ 'ಪಾಪ ಮಕ್ಕಳು ಮನೆಗೆ ಬಂದಿವೆ, ದಿನಾ ಅದದೇ ಚಿತ್ರಾನ್ನ ಮಾಡಿಕೊಂಡು ತಿಂದು ಬಾಯಿ ಕೆಟ್ಟಿರುತ್ತೆ' ಎಂದು ನಮ್ಮ ಜಿಹ್ವಾಚಾಪಲ್ಯವನ್ನರಿತ ಹಿರಿಯರು ನಮ್ಮ ನೆಪದಲ್ಲೇ ತಮ್ಮ ಜಿಹ್ವೆಯನ್ನೂ ತಣಿಸಿಕೊಳ್ಳುವ ಕಾರ್ಯವನ್ನು ಕೈಗೊಂಡು ಕರಿದ ತಿಂಡಿಗಳನ್ನು ಮಾಡಿ ಒಂದು ಬಿದಿರು ಬುಟ್ಟಿಯಲ್ಲಿ ತುಂಬಿ ಕಳಿಸುತ್ತಿದ್ದರು. ಪ್ರತಿದಿನ ನಮ್ಮ ರೂಂ ಮುಂದೆಯೇ ಎರಡು ಕೈಗಳಲ್ಲಿಯೂ ಬುಟ್ಟಿ ಹಿಡಿದುಕೊಂಡು 'ಚಕ್ಕುಲಿ, ಕೋಡುಬಳೆ, ಸಜ್ಜಪ್ಪ, ಕಡ್ಲೆಬೀಜಾ..' ಎಂದು ಕೂಗುತ್ತಾ ಹೋಗುತ್ತಿದ್ದ ತುಂಡು ಪಂಚೆಯ ತಾತನಂತೆ ನಾವೂ ನಮ್ಮ ಸ್ವಪಾಕಪೂರಕ ಲಗೇಜಿನೊಂದಿಗೆ ಬುಟ್ಟಿಯನ್ನೂ ಹಿಡಿದುಕೊಂಡು ಸಣ್ಣಸ್ವರದಲ್ಲಿ 'ಚಕ್ಕುಲಿ, ಕೋಡುಬಳೆ' ಎಂದು ಕೂಗುತ್ತಾ ರೂಂ ಸೇರುತ್ತಿದ್ದೆವು. ಕೆಲವರು ಇಂಥಾ ಬಿದಿರು ಬುಟ್ಟಿಯನ್ನೇ ಈಗಿನ ಸೂಟ್‌ಕೇಸ್‌ನಂತೆ ಬಳಸುತ್ತಿದ್ದರು.

ಹೀಗೆ ನವನಾಗರಿಕತೆಯ ಸೋಂಕೂ ತಗುಲದಂತೆ ಬೆಳೆದಿದ್ದ ನನಗೆ ವಿವಾಹಾನಂತರವೇ ಸಾಮಾಜಿಕ ಜೀವನದ ಸವಾಲುಗಳು ಎದುರಾದದ್ದು. ಮೊದಲ ಬಾರಿಗೆ ಪತಿಯೊಂದಿಗೆ ಬೆಂಗಳೂರಿನ ಬಂಧುಗಳ ಮನೆಯ ಸಮಾರಂಭಕ್ಕೆ ಹೋಗಿದ್ದಾಗ ಅಲ್ಲಿ ಎಲ್ಲರೂ ತಮ್ಮತಮ್ಮ ಸೂಟ್‌ಕೇಸ್‌ಗಳಿಂದ ಐರನ್ ಮಾಡಿದ ಉಡುಪುಗಳನ್ನು ನಾಜೂಕಾಗಿ ತೆಗೆದು ಧರಿಸುತ್ತಿದ್ದರೆ ನಾನು ತೆಗೆದುಕೊಂಡು ಹೋಗಿದ್ದ ಕಿಟ್ ಬ್ಯಾಗ್‌ನೊಳಗೆ ತುರುಕಿದಂತಿದ್ದ ಬಟ್ಟೆಗಳನ್ನು ಹೊರತೆಗೆದಾಗ ಸುಕ್ಕುಸುಕ್ಕಾಗಿ ಅವನ್ನು ಕಂಡು ಎಲ್ಲರೂ ನನ್ನನ್ನೇ ಮಿಕಿಮಿಕಿ ನೋಡುವಂತಾಯ್ತು. ಹೊರತೆಗೆದ ಬಟ್ಟೆಗಳನ್ನು ಮತ್ತೆ ತುಂಬಲು ಹೋದಾಗ ಗಿಟ್ಟನೆ ಗಿರಿದಂತಿದ್ದ ಚೀಲ ಇನ್ನು ತನ್ನಿಂದ ಸಾಧ್ಯವಿಲ್ಲವೆಂಬಂತೆ ಜಿಪ್ಪಾಕಾಗಿದ್ದ ಬಾಯನ್ನು ಯದ್ವಾತದ್ವಾ ಶಾಶ್ವತವಾಗಿ ತೆರೆದೇಬಿಟ್ಟಿತು.

ಆಗಲೇ ಸೂಟ್‌ಕೇಸೆಂಬ ಆ ಕಾಲದ ಫ್ಯಾಶನ್ ಪೆಟ್ಟಿಗೆಯನ್ನು ಕೊಳ್ಳುವ ಪ್ರತಿಜ್ಞೆ ಮಾಡಿಬಿಟ್ಟೆ. ಕುಟುಂಬದ ಎಕಾನಮಿಗೆ ಧಕ್ಕೆ ಬಾರದಂತೆ ಆ ವರ್ಷದ ಎಸ್.ಎಸ್.ಎಲ್.ಸಿ. ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯದ ರೆಮ್ಯೂನರೇಷನ್ ಹಣದಿಂದ ಕೊಂಡ ಸೂಟ್‌ಕೇಸ್ ಮೊದಲ ಬಾರಿಗೆ ನಮ್ಮ ಮನೆಯನ್ನು ಪ್ರವೇಶಿಸಿ ಘನತೆಯ ಸ್ಥಾನವನ್ನು ಪಡೆದುಕೊಂಡಿತು. ಆದರೆ ಈ ಸೂಟ್‌ಕೇಸ್‌ನ ಇತಿಹಾಸವನ್ನು ಅವಲೋಕಿಸಿದಾಗ ನಿಜಕ್ಕೂ ನಾಗರಿಕ ಜಗತ್ತಿನಿಂದ ನಾನೆಷ್ಟು ಗಾವುದ ಹಿಂದಿದ್ದೇನೆ ಎನ್ನುವ ಅರಿವಾಯ್ತು.

ಸೂಟ್‌ಕೇಸ್ ಎಂಬ ಪದವನ್ನು ಕೇಳಿದಾಕ್ಷಣವೇ ನನ್ನ ಕಣ್ಣಮುಂದೆ ಸೂಟನ್ನು ಧರಿಸಿರುವ ಮಧ್ಯವಯಸ್ಕ ಜೆಂಟಲ್ ಅಸಾಮಿಯೊಬ್ಬರು ತಮ್ಮ ಟೈಯನ್ನು ಸರಿಪಡಿಸಿಕೊಳ್ಳುತ್ತಾ ಸೂಟ್‌ಕೇಸನ್ನು ಕೈಯಲ್ಲಿ ಹಿಡಿದು ಸ್ಟೈಲಾಗಿ ಹೋಗುತ್ತಿರುವ ಚಿತ್ರಣವೇ ಮನದಲ್ಲಿ ಮೂಡುತ್ತದೆ. ಗಂಡಸರ ಸೂಟ್‌ಗಳನ್ನು ನೀಟಾಗಿ ಐರನ್ ಮಾಡಿ ಇಡುವ ಕೇಸ್‌ಗಳೇ ಸೂಟ್‌ಕೇಸ್‌ಗಳು ಎಂಬ ವಿವರಣೆ ಹೊಳೆದಾಕ್ಷಣವೇ ಈ ಸೂಟ್‌ಕೇಸೆನ್ನುವುದು ಪುಲ್ಲಿಂಗವೇ ಎಂಬ ನಿರ್ಧಾರಕ್ಕೆ ಬರುವಂತಾಗುತ್ತದೆ. ಇದಕ್ಕೆ ಪುಷ್ಟಿ ನೀಡುವಂತೆ ಚಕ್ರದ ಸೂಟ್‌ಕೇಸ್‌ನ ಸ್ತ್ರೀಲಿಂಗ ಸ್ವಭಾವವನ್ನು 1984ರ ಇಂಗ್ಲಿಷ್ ಚಲನಚಿತ್ರವೊಂದರಲ್ಲಿ ಅಣಕಿಸಲಾಗಿದೆ. ಇದೆಲ್ಲದರ ಹಿನ್ನೆಲೆ ಏನೇ ಇರಲಿ ಹೊಟ್ಟೆ ತುಂಬಿದ ಬಲು ಭಾರವಾದ ಸೂಟ್‌ಕೇಸ್‌ಗಳನ್ನು ಮಹಿಳೆಯರಿಗೆ ಹೊರಲಾಗದ ಕಾರಣಕ್ಕೇ ಏನೋ ಚಕ್ರಗಳನ್ನು ಜೋಡಿಸಿ ತಮ್ಮ ಹೊರೆಯನ್ನು ಇಳಿಸಿಕೊಂಡ ಪುರುಷರ ಔದಾರ್ಯವನ್ನು ಮೆಚ್ಚಲೇ ಬೇಕು! ಆದರೂ ಈ ರೀತಿಯ ಎಳೆದೊಯ್ಯುವ ಚಕ್ರದ ಸೂಟ್‌ಕೇಸ್‌ಗಳನ್ನು ನೋಡುವಾಗ ನನಗೆ ಕತ್ತಿಗೆ ಚೈನ್ ಹಾಕಿ ಎಳೆದುಕೊಂಡು ಹೋಗುವ ನಾಯಿಯ ದೃಶ್ಯವೇ ಕಣ್ಣಮುಂದೆ ಬರುತ್ತದೆ!

ಸ್ಟೈಲಾದ ಸೂಟ್‌ಕೇಸ್

ನಾನು ಕೆಲಸಕ್ಕೆ ಸೇರಿದ ಹೊಸತರಲ್ಲಿ ಆ ಶಾಲೆಯಲ್ಲಿಯೇ ಇದ್ದ ಯುವಶಿಕ್ಷಕರೊಬ್ಬರು ಬಹಳ ಸ್ಟೈಲಾಗಿ ಇನ್‌ಶರ್ಟ್ ಮಾಡಿಕೊಂಡು ಸಿನಿಮಾ ಹೀರೋಗಳಂತೆ ಯಾವಾಗಲೂ ಒಂದು ಚಿಕ್ಕ ಸೂಟ್‌ಕೇಸನ್ನು ಕೈಲಿ ಹಿಡಿದುಕೊಂಡೇ ಓಡಾಡುತ್ತಿದ್ದರು. ತಾಲ್ಲೂಕು ಕೇಂದ್ರದಲ್ಲಿದ್ದ ನಮ್ಮ ಶಾಲೆಯ ಎದುರೇ ಸಂತೆ ನಡೆಯುತ್ತಿ ದ್ದುದರಿಂದ ಸಂಸಾರ ತಾಪತ್ರಯಗಳಿಂದ ಜರ್ಜರಿತರಾಗಿದ್ದ ಹಿರಿಯ ಶಿಕ್ಷಕರು ಊಟದ ವೇಳೆಯಲ್ಲಿ ಆ ರಣರಣ ಬಿಸಿಲಿನಲ್ಲಿಯೇ ಸಂತೆ ಮಾಡಿಕೊಂಡು 'ಉಸ್ಸಪ್ಪಾ' ಎನ್ನುತ್ತಾ ಎರಡೆರಡು ಚೀಲಗಳ ತುಂಬಾ ತರಕಾರಿಯನ್ನು ಹೊತ್ತು ತರುತ್ತಿದ್ದರು. ಸೂಟ್‌ಕೇಸ್ ಅಲ್ಲದೇ ಬೇರೇನನ್ನೂ ಕೈಲಿ ಹಿಡಿಯದ ಯುವಶಿಕ್ಷಕರನ್ನು 'ಇವ ತರಕಾರೀನೂ ಸೂಟ್‌ಕೇಸ್‌ನಲ್ಲೇ ತುಂಬಿಕೊಂಡು ಹೋಗ್ತಾನೇನೋ' ಎಂದು ಸಲಿಗೆಯಿಂದ ತಮಾಷೆ ಮಾಡುತ್ತಿದ್ದರು.

ಕಾಲಾನುಕ್ರಮದಲ್ಲಿ ನಾನೊಮ್ಮೆ ನಗರದಲ್ಲಿ ನಡೆದು ಹೋಗುತ್ತಿದ್ದಾಗ ಹಿಂದಿನಿಂದ 'ಮೇಡಂ' ಎನ್ನುವ ಕರೆ ಕೇಳಿ ಹಿಂತಿರುಗಿದಾಗ ಕೈಲಿ ಸಾಮಾನಿನ ಚೀಲ ಹಿಡಿದ ಕುರುಚಲು ಗಡ್ಡದ ಸಾಧಾರಣ ಉಡುಪಿನ ವ್ಯಕ್ತಿಯೊಬ್ಬರು ಕಂಡರು. ಗುರುತಿಸಲಾಗದ ನನ್ನ ಪರಿಸ್ಥಿತಿಯನ್ನು ಮನಗಂಡ ಆತ 'ಮೇಡಂ ನಾನು' ಎಂದಾಕ್ಷಣವೇ ಸ್ಟೈಲಿನ ಸೂಟ್‌ಕೇಸ್ ಮಾಸ್ಟರ ಗುರುತು ಸಿಕ್ಕಿತು! ಆ ಕ್ಷಣವೇ ಅವರು 'ಬದುಕೆನ್ನುವುದು ಹೇಗೆಲ್ಲಾ ವ್ಯಕ್ತಿಯನ್ನು ಬದಲಾಯಿಸುತ್ತದೆ' ಎನ್ನುವುದಕ್ಕೆ ಜ್ವಲಂತ ಸಾಕ್ಷಿಯಾಗಿ ಕಂಡರು.

ಡಬ್ಬಾ ಸೂಟ್‌ಕೇಸು?

ನಾನೂ ಒಮ್ಮೊಮ್ಮೆ ವ್ಯಾಲ್ಯುಯೇಷನ್‌ಗೆ ಹೋದಾಗಲೂ ಒಂದೊಂದು ಸೂಟ್ಕೇಸ್‌ನಂತೆ ಬಣ್ಣಬಣ್ಣದ ವಿವಿಧ ಗಾತ್ರದ ಸೂಟ್‌ಕೇಸ್‌ಗಳನ್ನು ತಂದು ನಮ್ಮ ಮನೆಯ ಘನತೆಯನ್ನು ಹೆಚ್ಚಿಸುತ್ತಿದ್ದೇನೆಂದು ಭಾವಿಸಿದ್ದೆ. ಅಷ್ಟರಲ್ಲೇ ಬೆಳೆಯಲಾರಂಭಿಸಿದ ಮಕ್ಕಳು ನಮ್ಮ ಹೆವಿವೇಟ್ ಲಗ್ಗೇಜನ್ನು ಹೊರಲಾರದೇ 'ಈ ಡಬ್ಬಾ ಸೂಟ್‌ಕೇಸ್‌ಗಳನ್ನೆಲ್ಲಾ ಎಸೆದು ವೀಲ್ ಇರೋ ಸೂಟ್‌ಕೇಸ್ ತಂದರೇ ಚೆನ್ನ' ಎಂಬ ಅಭಿಪ್ರಾಯಪಟ್ಟರು! ಆ ಸಂದರ್ಭದಲ್ಲೇ ಅವರಿಗೆ ವಿಮಾನದಲ್ಲಿ ವಿದೇಶಕ್ಕೆ ಹಾರುವ ಅವಕಾಶವೂ ದೊರಕಿದ್ದರಿಂದ ಚಕ್ರಯುಕ್ತ ಸೂಟ್‌ಕೇಸ್‌ಗಳು ಯಾವುದೇ ಚರ್ಚೆಗೂ ಆಸ್ಪದವೀಯದಂತೆ ನಲಿನಲಿಯುತ್ತಾ ನಮ್ಮ ಮನೆಯನ್ನು ಪ್ರವೇಶಿಸಿ, ಡಬ್ಬಾ ಸೂಟ್‌ಕೇಸ್‌ಗಳನ್ನು ಮೂಲೆಗುಂಪು ಮಾಡಿಯೇಬಿಟ್ಟವು! ಅವಕೃಪೆಗೊಳಗಾದ ನನ್ನ ಅತ್ಯಮೂಲ್ಯ ಸಂಚಿಗಳು ತಮ್ಮಂತೆಯೇ ಅನುಪಯುಕ್ತ ವಸ್ತುಗಳನ್ನು ತುಂಬಿಕೊಂಡು ತಮ್ಮ ಅಪೂರ್ವ ದಿನಗಳ ವಿಸ್ಮೃತಿಯಲ್ಲಿ ಮಂಚದ ಕೆಳಗೆ, ಬೀರುವಿನ ಮೇಲೆಲ್ಲಾ ವಿಶ್ರಮಿಸುತ್ತಿರುವುದನ್ನು ನೋಡಿದಾಗಲೆಲ್ಲಾ ನನಗೆ ದೀರ್ಘಾಯುಗಳಾದ ವೃದ್ಧರ ನೆನಪಾಗುತ್ತದೆ.

ಚುನಾವಣೆಗಳು ಸಮೀಪಿಸಿದರಂತೂ ಈ ಸೂಟ್‌ಕೇಸ್‌ಗಳಿಗೆ ಇನ್ನಿಲ್ಲದ ಪ್ರಾಮುಖ್ಯತೆ. ಪಕ್ಷಾಂತರಿಗಳಿಗೂ ಸೂಟ್‌ಕೇಸ್‌ಗಳಿಗೂ ಅಸಾಧ್ಯ ನಂಟು. ಗರಿಗರಿ ನೋಟುಗಳನ್ನು ತಮ್ಮ ಒಡಲಲ್ಲಿ ತುಂಬಿಕೊಂಡು ಹೊರಟ ಸೂಟ್‌ಕೇಸ್‌ಗಳಿಗೂ ತಲುಪುವ ಗುರಿಯಾವುದು ಎನ್ನುವುದೇ ಗೊಂದಲವಾಗಿ ಅಯೋಮಯ ಸ್ಥಿತಿಯುಂಟಾಗುತ್ತದೇನೋ!

'ಟ್ರಾಲಿ ಸೂಟ್‌ಕೇಸ್ ಬ್ಯಾಗ್‌ಗಳನ್ನು ರಿಯಾಯಿತಿ ದರದಲ್ಲಿ ಪಡೆಯಿರಿ' ಎಂಬ ಜಾಹೀರಾತನ್ನು ಆನ್‌ಲೈನ್ ಶಾಪಿಂಗ್‌ನಲ್ಲಿ ಕಾಣಬಹುದು. ಟ್ರಾಲಿ ಸೂಟ್‌ಕೇಸ್‌ಗಳಿಗೆ ಈಚೆಗೆ ಸ್ಪರ್ಧೆಯನ್ನು ನೀಡುತ್ತಿರುವವು ಬೆನ್ನ ಮೇಲೆ ಕೂರುವ ಬ್ಯಾಗ್‌ಗಳು! ಬೆನ್ನ ಮೇಲೆ ತಮ್ಮ ಸಕಲ ತಾಂತ್ರಿಕ ಸೌಲಭ್ಯಗಳನ್ನೂ ಬ್ಯಾಕ್ ಪ್ಯಾಕ್‌ನಲ್ಲೇ ಹೊತ್ತು ನಡೆಯುವುದೇ ಸಲೀಸೆನಿಸಿರುವ ಯುವಜನತೆಗೆ, ಈ ಜಾಹೀರಾತುಗಳ ಅಗತ್ಯವಿಲ್ಲವೇನೋ ಎಂದುಕೊಂಡಿದ್ದೆ. ಆದರೆ ಈಗ ನಡೆಯುತ್ತಿರುವ ಐಪಿಎಲ್ ಪಂದ್ಯಾವಳಿಯಲ್ಲಿಯೂ ಲಲನೆಯೊಬ್ಬಳು ಹಿಡಿದು ನಿಂತ ಸೂಟ್ಕೇಸ್ ಒಂದಕ್ಕೆ ಮಹಾನ್ ಕಲಿಯೊಬ್ಬ ಗದೆಯಿಂದ ಹೊಡೆದರೂ ಅದು ಜಗ್ಗದೆ ಗಟ್ಟಿಯಾಗಿ ನಿಂತ ಜಾಹೀರಾತನ್ನು ನೋಡಿದಾಕ್ಷಣವೇ ಈ ಸೂಪರ್ ಸ್ಟೈಲ್ ಸೂಟ್ಕೇಸ್ ನಮ್ಮ ಯುವ ಪೀಳಿಗೆಯನ್ನೂ ಆಕರ್ಷಿಸುವುದರಲ್ಲಿ ಗೆದ್ದಿದೆ ಎನ್ನುವುದರಲ್ಲಿ ಸಂಶಯವಿಲ್ಲವೆನಿಸಿತು. ಸ್ಟೈಲಿನ ಸೂಟ್‌ಕೇಸಿಗೆ ಜಯವಾಗಲಿ!

ನನಸಾಗುತ್ತಿದೆ ಆರು ದಶಕಗಳ ಕನಸು

⇒ ಮೊದಲ ಪುಟದಿಂದ

ಜಲಾಶಯದಲ್ಲಿ ಒಟ್ಟು 965 ಎಕರೆ ಸಮೃದ್ಧ ಅಡಿಕೆ ತೋಟ, 12,500 ಎಕರೆ ನೀರಾವರಿ ಜಮೀನು, 1,750 ಎಕರೆ ಖುಷ್ಕಿ ಮತ್ತು 79,000 ಎಕರೆ ನಿತ್ಯ ಹರಿದ್ವರ್ಣದ ದಟ್ಟ ಅರಣ್ಯ ಮುಳುಗಡೆಯಾಗಿದೆ. ಮುಳುಗಡೆಯಾದ ಜಮೀನು ಮನೆಗಳಿಗೆ ಸರ್ಕಾರ ಕೊಟ್ಟ ಪರಿಹಾರ ಕೇವಲ 4.91 ಕೋಟಿ ರೂಪಾಯಿ. ಹಾಗೆಂದು ಬದಲಿ ಜಮೀನು ಕೊಟ್ಟಿಲ್ಲವೇ ಎಂದರೆ ಕೊಟ್ಟಿದ್ದಾರೆ, ಜಮೀನಿನ ಹೆಸರಿನಲ್ಲಿ ಒಂದಷ್ಟು ಭೂಮಿ. ಆದರೆ ಇಂದಿಗೂ ಹಲವು ನಿರ್ವಸತಿಗರ ಭೂಮಿಗೆ ಖಾತೆ ಪಡೆಯುವ ಭಾಗ್ಯವನ್ನು ನಮ್ಮ ಘನ ಇಲಾಖೆಗಳು ಕರುಣಿಸಿಲ್ಲ. ಶಿವಮೊಗ್ಗದ ಶೆಟ್ಟಿಹಳ್ಳಿಯಂತಹ ಪುನರ್ವಸತಿಗರ ಹಳ್ಳಿಯ ಜಮೀನಿನ ಗೊಂದಲ ಇಂದಿಗೂ ಪರಿಹಾರ ಕಂಡಿಲ್ಲ. ಹಿನ್ನೀರಿನ ಹಲವು ಹಳ್ಳಿಗಳಿಗೆ ಇನ್ನೂ ರಸ್ತೆ, ವಿದ್ಯುತ್, ಕುಡಿಯುವ ನೀರಿನಂತಹ ಕನಿಷ್ಠ ನಾಗರಿಕ ಸೌಲಭ್ಯಗಳೂ ತಲುಪಿಲ್ಲ. ಇದಕ್ಕೆಲ್ಲ ಕಾರಣವೇನು ಗೊತ್ತೆ? ಚುನಾಯಿತ ಸರ್ಕಾರಗಳ ಇಚ್ಛಾಶಕ್ತಿಯ ಕೊರತೆ; ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ನಿರಾಸಕ್ತಿ.

ಸೇತುವೆ ಪ್ರಸನ್ನರ ಹೋರಾಟ

ಮೊದಲಿಗೆ ಚದರವಳ್ಳಿ ಪರಮೇಶ್ವರಯ್ಯನವರಂತಹ ಹಿರಿಯರು ಆರಂಭಿಸಿದ ಸೇತುವೆಯ ಹೋರಾಟ ಮುಂದೆ ಪ್ರಸನ್ನ ಕೆರೆಕೈ ಎಂಬ ಕನಸುಗಣ್ಣಿನ ಯುವಕನ ಮೂಲಕ, ಜಾತಿ, ಜನಾಂಗ, ಪಕ್ಷ, ಪಂಗಡಗಳ ಹಂಗು ತೊರೆದು ಹಿನ್ನೀರಿನ ಸರ್ವಜನಾಂಗದ ಜನಪರ ಹೋರಾಟವಾಗಿ ರೂಪುಗೊಂಡಿತ್ತು. ಹೊಳೆಬಾಗಿಲು ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯೆಂದು ಘೋಷಿಸಿದರೆ ಹಿನ್ನೀರಿಗೆ ಸೇತುವೆ ಆಗಬಹುದೆಂದು 2005ರಲ್ಲಿ ಕಾಗೋಡು ತಿಮ್ಮಪ್ಪನವರ ಜೊತೆಗೆ ಬೆಂಗಳೂರಿಗೆ ಹೋಗಿ, ಪ್ರಧಾನಿ ಮನಮೋಹನ ಸಿಂಗರಿಗೆ ಅರ್ಜಿ ಸಲ್ಲಿಸಿದ್ದರು ಪ್ರಸನ್ನ ಕೆರೆಕೈ ಮತ್ತಿತರರು. ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ವಾರಕ್ಕೊಂದು ಸಲವಾದರೂ ಬೆಂಗಳೂರಿಗೆ ಬರುತ್ತಿದ್ದ ಕೆರೆಕೈ ಪ್ರಸನ್ನರ (ಸೇತುವೆ ಪ್ರಸನ್ನ) ಬಳಿ ಇರುತ್ತಿದ್ದುದು ಒಂದೇ ಕಡತ: ಅಂಬಾರಗೊಡ್ಲು ಕಳಸವಳ್ಳಿ ಸೇತುವೆ ನಿರ್ಮಾಣದ ಬೇಡಿಕೆ. ಸೇತುವೆಯ ಕಡತಗಳನ್ನು ಎಡಬಿಡದೆ ಹಿಂಬಾಲಿಸುತ್ತಿದ್ದ ಪ್ರಸನ್ನ, ಅಂದಿನ ಸಾಗರದ ವಿಧಾನಸಭಾ ಸದಸ್ಯ ಬೇಳೂರು ಗೋಪಾಲಕೃಷ್ಣ, ಜನಪ್ರತಿನಿಧಿ ಭಾರತಿಶೆಟ್ಟಿ, ಮುಂತಾದವರ ಜೊತೆಗೂಡಿ ಮುಖ್ಯಮಂತ್ರಿಗಳನ್ನು ಭೇಟಿಮಾಡಿ ಸೇತುವೆ ನಿರ್ಮಾಣಕ್ಕೆ ಹಕ್ಕೊತ್ತಾಯ ಸಲ್ಲಿಸಿದರು. ಯಡಿಯೂರಪ್ಪನವರು 2008ರ ಆಯವ್ಯಯದಲ್ಲಿ 'ಹೊಳೆಬಾಗಿಲು ಸೇತುವೆ'ಯ ನಿರ್ಮಾಣವನ್ನು ಘೋಷಣೆ ಮಾಡಿದರು. ಯೋಜನೆಗಾಗಿ ಡಿ ಪಿ ಆರ್ ಸಿದ್ಧವಾಗಿ ಅದಕ್ಕೆ ಸಚಿವ ಸಂಪುಟದ ಅನುಮೋದನೆಯೂ ದೊರಕಿತು. ಆದರೆ ರಾಜಕೀಯ ಸ್ಥಿತ್ಯಂತರಗಳ ಕಾರಣ ಸೇತುವೆಯ ನಿರ್ಮಾಣ ಕೈಗೂಡಲಿಲ್ಲ.

2012ರಲ್ಲಿ ಶಿವಮೊಗ್ಗ ಜಿಲ್ಲಾಧಿಕಾರಿಗಳ ಎದುರು ಕರೂರು ಸೀಮೆಯ ಜನರನ್ನು ಸಂಘಟಿಸಿ ದೊಡ್ಡ ಜನಾಂದೋಲನ ನಡೆಸಲಾಯಿತು. ಇದರಲ್ಲಿ ಸರ್ವಪಕ್ಷದ ನಾಯಕರು ಭಾಗವಹಿಸಿದರು. ಮುಂದೆ 2014ರ ನವೆಂಬರ್ 14,15 ರಂದು ಪ್ರಸನ್ನರ ಮುಂದಾಳುತನದಲ್ಲಿ ಮತ್ತೆ ಎಡದಂಡೆ ಹಳ್ಳಿಗಳ ಜನಸಾಮಾನ್ಯರನ್ನು ಒಗ್ಗೂಡಿಸಿಕೊಂಡು ನಡೆಸಿದ ಹೊಳೆಬಾಗಿಲು- ಸಾಗರ ಪಾದಯಾತ್ರೆಯ ಘೋಷವಾಕ್ಯ, 'ಸೇತುವೆ ನಮ್ಮ ಹಕ್ಕು. ನಾವು ಕೇಳುವ ಭಿಕ್ಷೆಯಲ್ಲ' ಎಂಬುದಾಗಿತ್ತು.

ಭಾರತ್ ಮಾಲಾ ಯೋಜನೆಗೆ ಸೇರ್ಪಡೆ

2016 ರಲ್ಲಿ ಸಂಸದರಾಗಿದ್ದ ಬಿ ವೈ ರಾಘವೇಂದ್ರರ ಜೊತೆಗೆ ಬಿ ಎಸ್ ಯಡಿಯೂರಪ್ಪನವರ ನಾಯಕತ್ವದಲ್ಲಿ ಸೇತುವೆ ಕಾಮಗಾರಿಯನ್ನು 'ಭಾರತ್ ಮಾಲ ಯೋಜನೆ'ಯಡಿ ಸೇರಿಸಲು ಅನುವಾಗುವಂತೆ ಸಾಗರ ಕಳಸವಳ್ಳಿ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ ಎಂದು ಘೋಷಿಸಲು ಕೇಂದ್ರದ ಹೆದ್ದಾರಿ ಸಚಿವರಾದ ಗಡ್ಕರಿಯವರನ್ನು ಒಪ್ಪಿಸಿದ್ದು ಸೇತುವೆಯ ನಿರ್ಮಾಣದ ಯಶಸ್ಸಿನ ಪಥದಲ್ಲಿ ಮಹತ್ವದ ತಿರುವು. ಈ ಎಲ್ಲ ಪ್ರಯತ್ನಗಳ ಹಿಂದಿನ ರೂವಾರಿ ಮತ್ತೆ ಅದೇ ಪ್ರಸನ್ನ ಕೆರೆಕೈ. ಸೇತುವೆಯ ಒಟ್ಟೂ ಹೋರಾಟದಲ್ಲಿ ಸಾಗರ ತಾಲ್ಲೂಕಿನ ಜನಪ್ರತಿನಿಧಿಗಳು, ಜನನಾಯಕರು, ಸ್ಥಳೀಯರು, ಜಾತಿ ಮತ ಪಕ್ಷ ಪಂಗಡಗಳ ಬೇಧವಿಲ್ಲದೆ ಕೈ ಜೋಡಿಸಿದ ಹಿನ್ನೀರಿನ ಮತ್ತು ಸಾಗರದ ಜನತೆ, ಸಾಗರ, ಶಿವಮೊಗ್ಗಗಳ ಪತ್ರಕರ್ತರ ಸಹಕಾರ ಗಮನಾರ್ಹ ಎನ್ನುತ್ತಾರೆ, ಒಂದು ಕಾಲದಲ್ಲಿ 'ಸೇತುವೆ ಪ್ರಸನ್ನ' ಎಂದು ಲೇವಡಿಗೆ ಒಳಗಾಗಿದ್ದ ಕೆರೆಕೈ ಪ್ರಸನ್ನ.

ಮುಂದೆ ಸೇತುವೆಯ ಯೋಜನೆ ಕೇಂದ್ರ ಸರ್ಕಾರದ ಸುಪರ್ದಿಗೆ ಸೇರಿದ್ದೂ ಆಯಿತು. ಸುಮಾರು 456.6 ಕೋಟಿ ವೆಚ್ಚದ ಸೇತುವೆ ಕಾಮಗಾರಿಗೆ ಮಂಜೂರಾತಿಯನ್ನೂ ನೀಡಲಾಯಿತು. ಎನ್ ಹೆಚ್ ಎ ಐ ಅಡಿಯಲ್ಲಿ 2018ರಲ್ಲಿ ಭಾರತ ಸರ್ಕಾರದ ರಾಷ್ಟ್ರೀಯ ಹೆದ್ದಾರಿ ಸಚಿವ ನಿತಿನ್ ಘಡ್ಕರಿಯವರಿಂದ ಸೇತುವೆ ಕಾಮಗಾರಿಯ ಉದ್ಘಾಟನೆ ನೆರವೇರಿತ್ತು.

ಅಂತೂ ನಿರ್ಮಾಣಗೊಂಡಿದೆ ಸೇತುವೆ!

ಕಳೆದ ಏಳು ವರ್ಷಗಳಲ್ಲಿ ಕಾಮಗಾರಿ ಹಲವಾರು ಕಷ್ಟ ಕಾರ್ಪಣ್ಯಗಳ ಜೊತೆಗೆ ಸಾವು ನೋವನ್ನು ಕೂಡ ಕಂಡಿದೆ. ಮೂರುವರ್ಷಗಳ ಹಿಂದೆ ಬೇಸಗೆಯಲ್ಲಿ ಜಲಾಶಯದ ನೀರಿನ ಮಟ್ಟ ನಿರೀಕ್ಷಿತ ಮಟ್ಟಕ್ಕೆ ಇಳಿಯದೆ ಕಾಮಗಾರಿಗೆ ಅಡಚಣೆಯಾಗಿತ್ತು. ಆಗ ಮತ್ತೆ ಪ್ರಸನ್ನ ರಾಜ್ಯ ಸರ್ಕಾರವನ್ನು ಸಂಪರ್ಕಿಸಿ, ಶರಾವತಿಯಲ್ಲಿ ಉತ್ಪಾದನೆ ಹೆಚ್ಚಿಸಿ ಲಿಂಗನಮಕ್ಕಿ ನೀರಿನ ಮಟ್ಟ ಇಳಿಸಲು ಕೋರಿಕೆ ಸಲ್ಲಿಸಿದ್ದರು. ಹೀಗೆ ನಡುನಡುವೆ ಹಲಬಗೆಯ ತೊಂದರೆಗಳು ಉದ್ಭವಿಸಿದರೂ ಅದನ್ನೆಲ್ಲ ದಾಟಿ, ಈಗ (2015ರಲ್ಲಿ) ಅಂಬಾರಗೊಡ್ಲು - ಕಳಸವಳ್ಳಿ ಸೇತುವೆಯ ನಿರ್ಮಾಣಕಾರ್ಯ ಮುಗಿದು, ಲೋಕಾರ್ಪಣೆಗೆ ಸಜ್ಜುಗೊಂಡಿದೆ. ಶರಾವತಿ ಎಡದಂಡೆಯ ಹಿನ್ನೀರಿನ ಹಳ್ಳಿಗರ ಆರು ದಶಕಗಳ ಕನಸು ನನಸಾಗುತ್ತಿದೆ. ಈ ಸೇತುವೆಗೆ ಗೇರುಸೊಪ್ಪೆಯ ರಾಣಿ, ಕರಿಮೆಣಸಿನ ರಾಣಿ ಚೆನ್ನಭೈರಾದೇವಿಯ ಹೆಸರನ್ನಿಡಲು ಸಲಹೆ ಬಂದಿದೆ.

ಇದೇ ಜುಲೈ ಹದಿನಾಲ್ಕರಂದು ಕೇಂದ್ರ ಸಚಿವ ಸನ್ಮಾನ್ಯ ನಿತಿನ್ ಗಡ್ಕರಿಯವರು ಸೇತುವೆಯನ್ನು ಲೋಕಾರ್ಪಣೆಗೈಯ್ಯಲಿದ್ದಾರೆಂದು ಹೇಳಲಾಗಿದೆ. ಸರ್ಕಾರದ ಶಿಷ್ಟಾಚಾರದಂತೆ ಆಹ್ವಾನ ಪತ್ರಿಕೆ ಸಿದ್ಧವಾಗುತ್ತದೆ. ಜತೆಯಲ್ಲೇ, ಸೇತುವೆಗಾಗಿ ಹಲವು ದಶಕಗಳ ಕಾಲ ಶ್ರಮಿಸಿದ ಪ್ರಸನ್ನ ಕೆರೆಕೈ ಮತ್ತು ಅರ್ಹ ಸ್ಥಳೀಯರೂ ಪಕ್ಷಾತೀತವಾಗಿ ಕಾರ್ಯಕ್ರಮದಲ್ಲಿ ಗೌರವದಿಂದ ಪಾಲ್ಗೊಳ್ಳುವಂತಾಗಲಿ. ಹಲವು ದಶಕಗಳ ಕನಸು ನನಸಾದ ಸಂದರ್ಭದಲ್ಲಿ, ಸ್ಥಳೀಯರಿಗೂ ಪ್ರಾಮುಖ್ಯತೆ ಸಿಗಲಿ!

⇒ ಮೊದಲ ಪುಟದಿಂದ

ಕುತ್ತಿಗೆಪಟ್ಟಿಯನ್ನು ಹಿಡಿದು ಎಳೆದಾಡಲಿಲ್ಲ, ಕಪಾಳಮೋಕ್ಷ ಮಾಡಲಿಲ್ಲ ಅನ್ನೋದು ಬಿಟ್ರೆ ಅವರ ಕೆಂಗಣ್ಣುಗಳೇ ನಮ್ಮನ್ನು ನಡುಗಿಸಿಬಿಟ್ಟಿತ್ತು. ಅವರ ಜೋರು ಮಾತುಗಳೇ ನಮ್ಮ ಆತ್ಮಸ್ಥೈರ್ಯವನ್ನು ಕ್ಷಣಮಾತ್ರದಲ್ಲಿ ಕುಗ್ಗಿಸಿಬಿಟ್ಟಿತ್ತು. ಈ ಜನರನ್ನು ನಿಭಾಯಿಸೋದೇ ದೊಡ್ಡ ಸವಾಲಾಗಿತ್ತು. ನಾವೇನು ಮಾಡೋದಿಲ್ಲ ಅಂತ ಗೊತ್ತಿದ್ದೂ ಕೂಡ, ಈ ಗುಂಪು, ರಸ್ತೆಯಲ್ಲಿ ಗಾಡಿಗಳಲ್ಲಿ ಹೋಗ್ತಿದ್ದ ಜನರನ್ನೂ ಕೂಗಿ ಕರೆಯಲು ಶುರು ಮಾಡಿತ್ತು. ಇವತ್ತು ಅದ್ಯಾವ ಮಗ್ಗುಲಲ್ಲಿ ಎದ್ದೋ ಏನೋ ಅಂತ ನಮಗೆ ನಾವೇ ಕೇಳಿಕೊಳ್ಳಲು ಆರಂಭ ಮಾಡಿದ್ವಿ. ಕ್ಯಾಮೆರಾಮೆನ್ ಮಂಜಣ್ಣ ಹಾಗು ನಾನು ಕನ್ನಡದಲ್ಲಿ ಮಾತನಾಡಿದ್ರೂ, ಕಿರಿಕಿರಿ ಮಾಡಲು ಆರಂಭಿಸಿದ್ರು. ಅಲ್ಲಿಗೆ, ನಾವಿಬ್ರೇ ನೆಮ್ಮದಿಯಾಗಿ ಮಾತನಾಡುವಂತೆಯೂ ಆಗದಂತ ಕೆಟ್ಟ ಪರಿಸ್ಥಿತಿಯಲ್ಲಿದ್ವಿ. ನೋಡನೋಡ್ತಲೇ ಹಾದಿಬೀದಿಯಲ್ಲಿದ್ದ ಮತ್ತೊಂದಿಷ್ಟು ಜನರು ಕೂಡ ನಮ್ಮ ಸುತ್ತಲೂ ಜಮಾವಣೆ ಆಗುತ್ತಾ ಹೋದ್ರು. ಕೆಲವರು ಕೈಗಳಲ್ಲಿ ಮಚ್ಚು, ಕೆಲವರ ಕೈಗಳಲ್ಲಿ ಸಲಕೆ, ಇನ್ನು ಕೆಲವರ ಕೈಗಳೇ ಆಯುಧದಂತೆ ಕಾಣಿಸುತ್ತಿತ್ತು. ಇವತ್ತು ಇವರೆಲ್ಲರ ಬಳಿ ನಾವು ಒದೆ ತಿನ್ನದೇ ಹೋಗೋದಿಲ್ಲವೇನೋ ಅಂತ ಸಿದ್ದರಾಗೋಗಿದ್ವಿ. ಆದ್ರೆ, ಪರಿಸ್ಥಿತಿ ಕೈಮೀರಿ ಹೋಗ್ತಿದ್ದಾಗ ದೇವರಂತೆ ಎಂಟ್ರಿಯಾಗಿದ್ದು ನಮ್ಮ ಚಾಲಕ ಅರ್‌ಸಲಾನ್.

''ನೀವು ಅಂದುಕೊಂಡಂತೆ, ನೀವು ಈ ಹಿಂದೆ ನೋಡಿರುವಂತ ವರದಿಗಾರರಂತೆ ಅಲ್ಲ ಈ ವ್ಯಕ್ತಿಗಳು. ಯಾವುದೇ ಪೂರ್ವನಿಯೋಜಿತ ಅಜೆಂಡಾ ತೋರಿಸಲು ಇವರು ಇಲ್ಲಿಗೆ ಬಂದು ಕೆಲಸ ಮಾಡ್ತಿಲ್ಲ, ಬದಲಾಗಿ ನಾವು ನೀವೆಲ್ಲಾ ನೋಡ್ತಿರೋ ಸತ್ಯವನ್ನು, ಅನುಭವಿಸುತ್ತಿರೋ ಸಮಸ್ಯೆಗಳನ್ನ ತೋರಿಸಲು ಬಂದಿದ್ದಾರೆ. ಅವರೇ ಕಣ್ಣಾರೆ ನೋಡ್ತಿರೋ ಸತ್ಯವನ್ನೂ ಕೂಡ ಖಾತರಿಪಡಿಸಿಕೊಂಡ ನಂತರವೇ ವರದಿ ಮಾಡ್ತಿದ್ದಾರೆ. ಕಳೆದ 4 ದಿನಗಳಿಂದ ನಾನು ಇವರ ಜೊತೆಯಲ್ಲಿಯೇ ಕನಿಷ್ಟ 16 ಗಂಟೆಗಳ ಕಾಲ ಓಡಾಡ್ತಾ ಇದ್ದೀನಿ. ಇರುವ ವಾಸ್ತವಾಂಶವನ್ನು ಮಾತ್ರ ಈ ತಂಡ ತೋರಿಸುತ್ತಿದೆ. ಜನರ ಸಮಸ್ಯೆಯನ್ನು ಜನರ ಸಮಸ್ಯೆ ಅಂತಲೇ ತೋರಿಸುತ್ತಿದೆ. ಭದ್ರತಾಲೋಪವನ್ನು ಭದ್ರತಾಲೋಪ ಎಂದೇ ತೋರಿಸುತ್ತಿದೆ. ಹೆಚ್ಚುವರಿ ಮಾಡಲಾಗಿರೋ ಭದ್ರತೆಯನ್ನು, ಹಾಗೆಯೇ ತೋರಿಸುತ್ತಿದೆ. ಬೇರೆ ಮಾಧ್ಯಮಗಳಂತೆ ಮಾರುದ್ದ ರೆಕಾರ್ಡ್ ಮಾಡಿಕೊಂಡು, ತಮಗೆ ಬೇಕಾದಷ್ಟು ಮಾತ್ರ ಎಡಿಟ್ ಮಾಡಿ ತೋರಿಸುತ್ತಿಲ್ಲ, ಬದಲಾಗಿ ಸ್ಥಳೀಯರ ಅಭಿಪ್ರಾಯವನ್ನು ಪೂರ್ಣಪ್ರಮಾಣದಲ್ಲಿ ಯಥಾವತ್ ತೋರಿಸಿರೋದಕ್ಕೆ ನಾನೇ ಸಾಕ್ಷಿ'' ಅಂತ ತನ್ನ ಮೊಬೈಲ್‌ಫೋನ್‌ನಲ್ಲಿದ್ದ ನಮ್ಮ ವರದಿಯ ಲಿಂಕ್‌ಗಳನ್ನು ಖುದ್ದು ತಾನೇ ತೆರೆದು ತೋರಿಸಿದ್ದ ಚಾಲಕ ಅರ್‌ಸಲಾನ್. ಗುಂಪುಗೂಡಿದ್ದ ಜನರ ಬಳಿ ಒಂದು ಕ್ಷಣ ತನ್ನ ಮಾತು ಕೇಳುವಂತೆ ಕನಿಷ್ಟ ಅರ್ಧ ಗಂಟೆಗಳ ಕಾಲ ಕಾಯಬೇಕಾಗಿತ್ತು ಅರ್‌ಸಲಾನ್. ಯಾಕಂದ್ರೆ, ಆ ಮೊದಲ ಅರ್ಧ ಗಂಟೆಯ ಕಾಲ ಜನರು ನಮ್ಮನ್ನು ನಿಂದಿಸೋದನ್ನು ಬಿಟ್ಟು ಬೇರೆ ಯಾವ ವ್ಯಕ್ತಿಯ ಮಾತನ್ನು ಕೇಳಿಯೂ ಇರಲಿಲ್ಲ, ಕೇಳುವ ವ್ಯವಧಾನದಲ್ಲೂ ಇರಲಿಲ್ಲ. ಆದ್ರೆ, ಒಂದಂತೂ ಸತ್ಯ, ಆ ಅಷ್ಟೂ ಜನರ ಬೈಗುಳಗಳು ಏನಿರಬಹುದು ಅನ್ನೋ ಸಣ್ಣ ಗ್ರಹಿಕೆಯೂ ನಮಗಿರಲಿಲ್ಲ.

ಅರ್‌ಸಲಾನ್ ಮಧ್ಯಪ್ರವೇಶಿಸಿ ಪರಿಸ್ಥಿತಿಯನ್ನು ಹತೋಟಿಗೆ ತರೋದ್ರಲ್ಲಿ ಯಶಸ್ವಿಯಾಗಿದ್ದ. ಅವನ ಮಾತುಗಳನ್ನು ಕೇಳಿ, ನಂತರ ಅವನು ತೋರಿಸಿದ ನಮ್ಮ ವರದಿಯ ಲಿಂಕ್‌ಗಳನ್ನು ನೋಡಿ, ಅದೇ ಗುಂಪು ನಮ್ಮ ಕ್ಷಮೆ ಕೋರಿತ್ತು. ನಿರ್ಜನ ಪ್ರದೇಶವಾದ ಅದೇ ಸ್ಥಳಕ್ಕೆ 15 ನಿಮಿಷಗಳಲ್ಲಿ ಬಿಸಿಬಿಸಿ ಚಹಾವನ್ನು ಅದೇ ಜನರು ತರೆಸಿದ್ರು. ''ದಯಮಾಡಿ ಬೇಸರ ಮಾಡಿಕೊಳ್ಳಬೇಡಿ ಬ್ರದರ್. ನಮ್ಮ ಕೋಪ ನಿಮ್ಮ ವಿರುದ್ಧವಲ್ಲ, ಮಾಧ್ಯಮದವರು ಬಂದ್ರೆ ನಮಗೆ ಶನಿ ಬಂದಂತಾಗೋಗಿದೆ. ಕೋವಿಡ್ ಸಂದರ್ಭವನ್ನೂ ಹೇಗೋ ಮಾಡಿ ಎದುರಿಸಿಬಿಟ್ಟಿದ್ವಿ. ಆದ್ರೆ, ಪೆಹಲ್ಗಾಂ ಘಟನೆಯ ನಂತರ ಮಾಧ್ಯಮಗಳ ಆರ್ಭಟವನ್ನು ಎದುರಿಸಲು ಆಗ್ತಿಲ್ಲ. ಮಾಧ್ಯಮದವರು ಇಲ್ಲಿಗೆ ಬರ್ತಾರೆ, ನಮ್ಮ ಮಾತುಗಳನ್ನೂ ರೆಕಾರ್ಡ್ ಮಾಡಿಕೊಳ್ತಾರೆ. ನಾವು ಹೇಳೋದೇ ಬೇರೆ, ಅವರು ತೋರಿಸೋದೇ ಬೇರೆ. ಇದೇ ಕಾರಣಕ್ಕೆ ನಾವು ನಿಮಗೂ ಈ ರೀತಿ ಮಾತನಾಡಿದ್ದು, ಕ್ಷಮಿಸಿಬಿಡಿ'' ಅಂತ ತಮ್ಮ ಎರಡೂ ಕೈಗಳನ್ನೆತ್ತಿ ನಮಸ್ಕರಿಸಿ ಕ್ಷಮೆ ಕೋರಿದ್ರೋ ಜೊತೆಗೆ ಅವರು ಆಡಿದ ಮಾತುಗಳಿಗೆ ಸ್ವತಃ ಅವರೇ ದುಃಖ ಪಟ್ಟರು. (ಪುಟ 30)



ಸಿಂದೂರ ನಾ ಕಂಡ ಕಾಶ್ಮೀರ
ಲೇ: ಅಭಿಷೇಕ್ ಬಿ.ವಿ.
ಪ್ರ: ಸಾವಣ್ಣ ಪ್ರಕಾಶನ
9036312786
ಬೆಲೆ ರು.180/-

ಈಗಷ್ಟೇ ನಡೆದಿದ್ದ ಘಟನೆಯ ಬಗ್ಗೆ ವಿಮರ್ಶೆ ಮಾಡುತ್ತಾ ಕೇವಲ10 ನಿಮಿಷಗಳಷ್ಟು ಮುಂದೆ ಸಾಗಿದ್ದೆವು. ಜಮ್ಮು ಕಾಶ್ಮೀರ ಪೊಲೀಸರಿಂದ ಚೆಕ್‌ಪಾಯಿಂಟ್‌ನಲ್ಲಿ ತೀವ್ರ ತಪಾಸಣೆ ಮಾಡ್ತಿರೋದು ಕಾಣಿಸಿತು. ತಪಾಸಣೆಯ ಮಾಡ್ತಿರೋದನ್ನೇ ವರದಿ ಮಾಡೋಣ ಅಂತ ಮಾತನಾಡಿಕೊಂಡ್ವಿ. ಅಷ್ಟರಲ್ಲೇ ಡ್ರೈವರ್ ಅರ್‌ಸಲಾನ್, ''ಮೊದಲು ಅನುಮತಿ ಪಡೆಯೋಣ, ನಂತರ ವರದಿ ಮಾಡೋಣ ಸಾರ್'' ಎಂದಿದ್ದ. ಈಗಷ್ಟೇ ಚಕ್ರವ್ಯೂಹದಂತ ಪರಿಸ್ಥಿತಿಯಲ್ಲಿ ಸಿಲುಕಿ ಹೊರಬಂದಿದ್ದ ನಮಗೆ ಇಲ್ಲಿ ಯಾವುದೇ ಕಾರಣಕ್ಕೂ ರಿಸ್ಕ್ ತೆಗೆದುಕೊಳ್ಳೋದು ಬೇಡವೇ ಬೇಡ ಅನ್ನಿಸಿತ್ತು. ''ನಿಮ್ಮ ಭಾಷೆಯಲ್ಲೇ ಕೇಳಿ ಅನುಮತಿ ಕೊಡಿಸಪ್ಪಾ ಬ್ರದರ್'' ಅಂತ ಹೇಳಿ ಮಾತು ಮುಗಿಸೋವಷ್ಟರಲ್ಲೇ ಅಲ್ಲಿದ್ದ ಪೊಲೀಸ್ ಒಬ್ಬ ನಮ್ಮ ಕಾರ್ ಬಳಿ ಬಂದಿದ್ದ. ಕೈನಲ್ಲಿ ಎಕೆ 47 ಗನ್ ಹಿಡಿದು, ಕಾರ್ ಒಳಗೆ ಇಣುಕಿ ನೋಡಿದ. ಒಂದು 20 ಸೆಕೆಂಡ್‌ಗಳ ಕಾಲ ಕಾರ್‌ನೊಳಗಿದ್ದ ನಮ್ಮೆಲ್ಲರನ್ನೂ ತನ್ನ ಕಣ್ಣುಗಳಲ್ಲೇ ಸ್ಕ್ಯಾನ್ ಮಾಡಿದ್ದ. ಅಷ್ಟರಲ್ಲಿ, ಕಾರ್‌ನಿಂದ ಕೆಳಗಿಳಿದು ಪರಿಚಯ ಮಾಡಿಕೊಂಡು ಅನುಮತಿ ಪಡೆಯೋಣ ಅಂತ ರೆಡಿಯಾಗ್ತಿದ್ದ ನನ್ನನ್ನು ಕೈಸನ್ನೆಯಲ್ಲೇ ಅಲ್ಲೇ ಕುಳಿತುಕೊಳ್ಳುವಂತೆ ಹೇಳಿದ್ದ. ಕಾಶ್ಮೀರಿ ಭಾಷೆಯಲ್ಲಿ ಅಲ್ಲಿದ್ದ ಕೆಲ ಸಿಬ್ಬಂದಿಗೆ ಏನೋ ಹೇಳಿ ಸನ್ನೆ ಮಾಡಿದ ಆ ಪೊಲೀಸಣ್ಣ, ಕಾರ್‌ನ ಹಿಂಬದಿಯ ಬಲಬಾಗಿಲು ತೆಗೆದು ಒಳ ನುಸುಳಿಬಿಟ್ಟ. ಕ್ಯಾಮೆರಾಮೆನ್ ಮಂಜಣ್ಣ ಹಾಗು ನಾನು ಏನು ನಡೆಯುತ್ತಿದೆ ಅಂತ ಅರಿಗಿಸಿಕೊಳ್ಳಲಾಗದೇ ಮತ್ತೆ ಗಾಬರಿಯಾಗೋದ್ವಿ. ''ಇವಾಗ ಏನ್ ಆಯ್ತೋ ಗೆಳೆಯ? ಇವನು ಯಾಕೆ ನಮ್ಮ ಗಾಡಿ ಹತ್ತಿದ್ದು? ಇವನ್ನದ್ದೇನಂತೆ ಕಥೆ? ಏನಾದ್ರೂ ಹೇಳೋ ಅಣ್ಣಯ್ಯ'' ಅಂತ ಡ್ರೈವರ್ ಅರ್‌ಸಲಾನ್ ಕಡೆ ಮುಖ ಮಾಡಿದೆ. ಉತ್ತರ ಕೊಡೋದಕ್ಕೂ ಮೊದಲು ಕುಪ್ವಾರದಲ್ಲಿನ ಕ್ರಾಲ್‌ಪೋರ ಪೊಲೀಸ್ ಠಾಣೆಯ ಮುಂಭಾಗದಲ್ಲಿ ನಿಂತಿತ್ತು ನಮ್ಮ ಗಾಡಿ. ಎಕೆ 47 ಹಿಡಿದಿದ್ದ ಪೊಲೀಸ್ ನಮ್ಮ ಕಾರ್‌ನಲ್ಲಿದ್ದ ಅಷ್ಟೂ ಹೊತ್ತು ಅರ್‌ಸಲಾನ್ ಕೂಡ ಮೌನವಾಗಿದ್ದ. ಆ ಪೊಲೀಸಣ್ಣ ಕಾರ್ ಇಳಿದ ಕೂಡಲೇ, ''ಯಾಕೋ ನಮ್ಮ ಟೈಂ ಸರಿ ಇಲ್ಲ ಅಂತ ಕಾಣಿಸುತ್ತಿದೆ ಸರ್. ನಾವೆಲ್ರೂ ಸ್ಟೇಶನ್‌ಗೆ ಹೋಗಬೇಕಂತೆ. ಅನುಮತಿ ಪಡೆದ ನಂತರವಷ್ಟೇ ಊರಿನ ಒಳಗೆ ಪ್ರವೇಶ ಸಿಗೋದು. ಅನುಮತಿ ಸಿಗದೇ ಹೋದ್ರೆ ನೀವೇನೂ ಜಾಸ್ತಿ ಮಾತಾಡಬೇಡಿ ಸಾರ್'' ಎಂದ. ಕ್ಯಾಮೆರಾಮೆನ್ ಮಂಜಣ್ಣನಿಗೆ ಕನ್ನಡ ಬಿಟ್ಟು ಬೇರೆ ಭಾಷೆ ಬಾರದೇ ಇರೋದ್ರಿಂದ, ಮಂಜಣ್ಣನನ್ನು ಕಾರ್‌ನಲ್ಲೇ ಕೂರಿಸಿ ಠಾಣೆಯ ಬಳಿ ಬಂದ್ವಿ.

''ಒಂದು 10 - 15 ನಿಮಿಷ ಆಗುತ್ತಷ್ಟೇ. ನೀನೇನು ತಲೆ ಕೆಡಿಸಿಕೊಳ್ಳಬೇಡ. ಏನಾದ್ರೂ ಇದ್ರೆ ಫೋನ್ ಮಾಡು. ನಾವು ಒಳಗಡೆ ಹೋದಾಗ ಯಾರೇ ಬಂದು ಮಾತಾಡಿಸಿದ್ರೂ, ಹಿಂದಿ ನಹಿ ಅಂತಷ್ಟೇ ಹೇಳು. ನೀನು ಮ್ಯಾನೇಜ್ ಮಾಡೋವಷ್ಟರಲ್ಲಿ ಬಂದುಬಿಡ್ತೀವಿ'' ಅಂತ ಕ್ಯಾಮೆರಾಮೆನ್ ಮಂಜಣ್ಣನಿಗೆ ಹೇಳಿ ಕ್ರಾಲ್‌ಪೋರಾ ಪೊಲೀಸ್ ಸ್ಟೇಶನ್ ಒಳಗೆ ಹೊರಟ್ವಿ. ನಾವೆಲ್ಲರೂ ನಮ್ಮ ಭಾಗದಲ್ಲಿ ನೋಡಿರೋ ಸ್ಟೇಶನ್‌ಗಳಂತೆ ಇರೋದಿಲ್ಲ ಇಲ್ಲಿನ ಪೊಲೀಸ್ ಸ್ಟೇಶನ್‌ಗಳು. ಯಾವುದೇ ಕಾರಣಕ್ಕೂ ಇಲ್ಲಿನ ಗೇಟ್‌ಗಳು ತಾನಾಗಿ ತಾನು ಓಪನ್ ಆಗೋದೇ ಇಲ್ಲ. ಹೊರಗಿನಿಂದ ಯಾರು ಬಂದಿರೋದು ಅಂತ ಸಣ್ಣ ರಂಧ್ರದಲ್ಲೇ ನೋಡಿ, ಅಲ್ಲಿಂದಲೇ ವಿಚಾರವನ್ನೂ ಕೇಳಿ, ಆನಂತರ ಗೇಟ್ ತೆಗೆಯಬೇಕಾ ಬೇಡ್ವಾ ಅಂತ ನಿರ್ಧಾರ ಮಾಡಲಾಗುತ್ತೆ. ನಾವು ಸ್ಟೇಶನ್ ಒಳ ಹೋಗಬೇಕಿದ್ರೂ ಅದೇ ಪ್ರೊಸೀಜರ್ ಫಾಲೋ ಮಾಡಬೇಕಿತ್ತು. ನಮ್ಮ ಗಾಡಿಯಲ್ಲಿ ಬಂದಿದ್ದ ಎಕೆ 47 ಹೊತ್ತ ಪೊಲೀಸಣ್ಣ, ಅವರ ಭಾಷೆಯಲ್ಲಿ ಮಾತನಾಡಿ ಗೇಟ್ ತೆಗೆಸಿದ. ಠಾಣೆಯೊಳಗೆ ಹೋದ ಕೂಡಲೇ ಚಾಲಕ ಅರ್‌ಸಲಾನ್ ಹಾಗು ನನ್ನ ಮೊಬೈಲ್ ಫೋನ್‌ಕಸಿದುಕೊಂಡರು. ಜೇಬಿನಲ್ಲಿರೋ ವಸ್ತುಗಳನ್ನೂ ಕೊಡಬೇಕು ಅಂತ ಪ್ಲಾಸ್ಟಿಕ್ ಕವರ್‌ಗಳಲ್ಲಿ ತುಂಬಿಸಿ ಬೇರೆ ಕಡೆ ಭದ್ರವಾಗಿ ಇಟ್ಟುಕೊಂಡರು. ಠಾಣೆಯೊಳಗೆ ಗುಮಾಸ್ತನ್ಯಾರೋ, ಪೇದೆಯಾರೋ, ಅಧಿಕಾರಿಯಾರೋ ಅನ್ನೋ ಕನಿಷ್ಟ ಕ್ಲಾರಿಟಿಯೂ ನಂಗಿರಲಿಲ್ಲ. ಯಾಕಂದ್ರೆ, ಕಾಕಾ ಅಂಗಡಿಯಲ್ಲಿ ಹೇಗೆ ಆರಾಮಾಗಿ ಸಿಗರೇಟ್ ಸೇದುತ್ತಾ ಹರಟೆ ಹೊಡೆಯುತ್ತಾರೋ, ಅದೇ ರೀತಿಯ ಚಿತ್ರಣ ಈ ಸ್ಟೇಶನ್ ಒಳಗೆ ಕಾಣಿಸಿತ್ತು.

ನಾವು ಯಾರು? ಯಾಕಿಲ್ಲಿ ಬಂದಿದ್ದು? ಕರೆತಂದಿದ್ದು ಯಾರು? ಯಾವ ಉದ್ದೇಶಕ್ಕೆ ಬಂದಿದ್ದೀವಿ? ಎಲ್ಲಿಂದ ಬಂದಿದ್ದೀವಿ? ಎಷ್ಟು ದಿನಗಳ ಕಾಲ ಇರ್ತೀವಿ? ಇಂತಹ ಹತ್ತು ಹಲವು ಪ್ರಶ್ನೆಗಳನ್ನು ಕೇಳ್ತಾರೆ ಅಂತ ಮನಸ್ಸಿನಲ್ಲೇ ಉತ್ತರ ರೆಡಿ ಮಾಡ್ಕೊಂಡು ಕಾಯುತ್ತಲೇ ಕೂತಿದ್ವಿ. ಸುಮಾರು ಅರ್ಧ ಗಂಟೆಯಾದ ನಂತರ ಸಿಬ್ಬಂದಿಯೊಬ್ಬ ನಮ್ಮ ಕಡೆ ತಿರುಗಿ ನೋಡಿದ್ದ. ಅಲ್ಲಿಯವರೆಗೂ ಮನೆಯ ಮುಂದಿನ ನಾಯಿಯಂತೆ ಅವರಿವರ ಮುಖಗಳನ್ನು ನೋಡುತ್ತಾ, ಏನೂ ಮಾತಾಡದೇ, ಏನು ಮಾಡೋದು ಅಂತ ದಿಕ್ಕೂ ತೋಚದೆ ಕೂತಿದ್ವಿ. ನಾನು ಊಹಿಸಿದ್ದ ಅಷ್ಟೂ ಪ್ರಶ್ನೆಗಳನ್ನು ಕೇಳೋದ್ರೆ ಜೊತೆಗೆ ಹೆಚ್ಚಿನ ಮಾಹಿತಿಯನ್ನೂ ಅಲ್ಲಿರೋ ಸಿಬ್ಬಂದಿಯೊಬ್ಬ ಬರೆದಿಟ್ಟುಕೊಂಡ. ಹೆಸರು, ವಿಳಾಸ, ಆಧಾರ್ ನಂಬರ್, ಮಾಧ್ಯಮ ಐಡಿ ಕಾರ್ಡ್ ನಂಬರ್, ಕಚೇರಿಯ ವಿಳಾಸ ಸೇರಿದಂತೆ ಇಡೀ ಜಾತಕವನ್ನೇ ತನ್ನ ಡೈರಿಯಲ್ಲಿ ಬರೆದಿಟ್ಟುಕೊಂಡ. ''ಇಲ್ಲಿನ ಪರಿಸ್ಥಿತಿ ಖಂಡಿತವಾಗಿಯೂ ನೀವು ನೋಡಿದಷ್ಟು ತಿಳಿಯಾಗಿಲ್ಲ. ನಿನ್ನೆ, ಮೊನ್ನೆ ಬಂದಿದ್ದ ಮಾಧ್ಯಮದ ತಂಡಗಳ ಮೇಲೆ ಹಲ್ಲೆಯ ಉತ್ನವಾಗಿತ್ತು. ಪರಿಸ್ಥಿತಿ ಉದ್ವಿಗ್ನವಾಗಿರೋದ್ರಿಂದ ನೀವು ಇಲ್ಲಿ ತುಂಬಾ ಹೊತ್ತು ಇರೋದು ಸೂಕ್ತವಲ್ಲ. ಅದಕ್ಕಾಗಿಯೇ ಇಷ್ಟೂ ಮಾಹಿತಿಯನ್ನು ತೆಗೆದುಕೊಂಡಿದ್ದು. ಅನ್ಯತಾ ಭಾವಿಸಲೇಬೇಡಿ'' ಎಂಬ ಕಿವಿಮಾತು ಕೇಳಿಬಂದಿತ್ತು. ''ಇಲ್ಲಿಂದ ಕೇವಲ 6 ಕಿಲೋಮೀಟರ್ ಮುಂದಕ್ಕೆ ಹೋದ್ರೆ ಮತ್ತೊಂದು ಮಾರುಕಟ್ಟೆ ಏರಿಯಾ ಸಿಗಲಿದೆ. ಅಲ್ಲಿಂದ ಮುಂದಕ್ಕೆ ಯಾವುದೇ ಕಾರಣಕ್ಕೆ ಹೋಗಬೇಡಿ'' ಎಂಬ ಕಿವಿಮಾತು ಹೇಳಿ, ಅಲ್ಲಿರೋ ಪೊಲೀಸ್ ಸಿಬ್ಬಂದಿಗೂ ವೈರ್‌ಲೆಸ್ ಸಂದೇಶವನ್ನು ನಮ್ಮ ಮುಂದೆಯೇ ನೀಡಲಾಯ್ತು. ಹತ್ತು ನಿಮಿಷದಲ್ಲಿ ಬರ್ತೀವಿ ಅಂತೇಳಿ 1 ಗಂಟೆಯಾದ ಮೇಲೆ ಹೊರಬಂದಾಗ ಕ್ಯಾಮೆರಾಮೆನ್ ಮಂಜಣ್ಣನ ಮುಖ ನೋಡಿದ್ರೆ ಹೊಟ್ಟೆಯಿಂದ ನಗು ಉಕ್ಕಿ ಬರ್ತಿತ್ತು. ಕಾರಣ ಮೊದಲೇ ಗಾಬರಿ ಮಂಜಣ್ಣ ಅಂತ ನಾಮಕರಣ ಮಾಡಿಸಿಕೊಂಡಿದ್ದ ಮಂಜಣ್ಣ ಮತ್ತಷ್ಟು ಗಾಬರಿ ಆಗೋಗಿದ್ದ. (ಪುಟ 33)

ದಶಕಗಳಿಗಾಗೋವಷ್ಟು ನೆನಪುಗಳನ್ನು ಗಂಟೆಗಳಲ್ಲಿ ಮಾಡಿಟ್ಟುಕೊಂಡಿದ್ದೆ. ನಾನಲ್ಲಿದ್ದ ಅಷ್ಟೂ ಕ್ಷಣಗಳನ್ನು ಕೊಂಚವೂ ಮಿಸ್ ಮಾಡದೇ ಅನುಭವಿಸಿದ್ದೆ. ಗೊಂಡೋಲಾದಲ್ಲಿ ವಾಪಸ್ ಬರೋವಾಗ ಸುಮಾರು 75 ವರ್ಷಗಳಾಗಿರೋ ಮುಸಲ್ಮಾನ ವ್ಯಕ್ತಿಯೊಬ್ರು ಸಿಕ್ಕಿದ್ರು. ಕೈನಲ್ಲಿ ಮೈಕ್ ಹಿಡಿದಿರೋದು ನೋಡಿದ ಆ ತಾತ, ''ನೋಡು ಮಗ, ಪೆಹಲ್ಗಾಂನಲ್ಲಿ ನಡೆದಿರೋ ಘಟನೆಯನ್ನು ಯಾವ ಒಬ್ಬ ವ್ಯಕ್ತಿ ಮಾತ್ರವಲ್ಲ, ಯಾವ ಪ್ರಾಣಿಯೂ ಒಪ್ಪೋದಿಲ್ಲ. ಆ ನೀಚ ಕೃತ್ಯ ಎಸಗಿದ್ದು ನಮ್ಮ ಧರ್ಮದವರು ಎಂಬುದನ್ನು ನಮಗೆ ಈಗಲೂ ಅರಗಿಸಿಕೊಳ್ಳಲಾಗುತ್ತಿಲ್ಲ. ಆ ನೀಚರು ಜೀವಂತವಿರೋವರೆಗೂ ಮನುಕುಲ ಅವರನ್ನು ಕ್ಷಮಿಸೋದಿಲ್ಲ. ಅವರು ಒಂದಲ್ಲಾ ಒಂದು ದಿನ ಖಂಡಿತವಾಗಿಯೂ ಸಾಯುತ್ತಾರೆ. ಅವರು ಸತ್ತ ನಂತರವೂ ಕೂಡ ನಮ್ಮ ಭಗವಂತ ಅಲ್ಲಾಹ್ ಅವರನ್ನು ಯಾವುದೇ ಕಾರಣಕ್ಕೂ ಕ್ಷಮಿಸೋದಿಲ್ಲ. ಅಲ್ಲಾಹ್ ಎಂದಿಗೂ ಯಾರ ರಕ್ತವನ್ನೂ ಕೇಳಿಲ್ಲ ಕಣೋ. ಅಲ್ಲಾಹ್ ನಿಮ್ಮ ಶಿವನಂತೆ ಶಾಂತಿಪ್ರಿಯ ಕಣೋ ಮಗ. ಆ ಉಗ್ರವಾದಿಗಳು ಮಾಡಿರೋ ತಪ್ಪಿನಿಂದಾಗಿ ಕಾಶ್ಮೀರದ ಪ್ರತಿಯೊಬ್ಬ ವ್ಯಕ್ತಿಯೂ ಬೀದಿಗೆ ಬಂದಂತಾಗಿದೆ. ಅವರ ಆ ನೀಚ ಕೃತ್ಯದಿಂದ ನಾವು ಉಪವಾಸ ಇರಬೇಕಾದ ಪರಿಸ್ಥಿತಿ ಬಂದೊಂದಗಿದೆ. ನಮ್ಮ ಕಷ್ಟ ಹೀಗೆಯೇ ಮುಂದುವರೆದ್ರೂ, ಏನೂ ಅಚ್ಚರಿಯಿಲ್ಲ. ನೀವು ನಿಮ್ಮ ಊರು ಬಿಟ್ಟು ನಮ್ಮ ಊರಿಗೆ ಬಂದಿದ್ದೀರಾ. ಹುಷಾರಾಗಿ ನಿಮ್ಮ ಮನೆಗಳನ್ನು ತಲುಪಿ'' ಎಂದರು. ''ನೋಡು ತಾತಾ, ಧರ್ಮ ಬೇರೆಯಿರಬಹುದು. ಆದ್ರೆ ಸೃಷ್ಟಿಕರ್ತ ಒಬ್ಬನೇ ಅಲ್ವಾ? ನೀನು ಮುಸ್ಲಿಂ, ನಾನು ಹಿಂದೂ. ಆದ್ರೆ ಇಬ್ಬರ ದೇಹದಲ್ಲಿ ಇರೋದು ಒಂದೇ ರಕ್ತ ಅಲ್ವಾ? ನೀನು ತಿಂದ್ರೂ ಜೀರ್ಣ ಆಗುತ್ತೆ. ನಾನು ತಿಂದ್ರೂ ಜೀರ್ಣ ಆಗುತ್ತೆ. ಇಬ್ಬರಲ್ಲಿ ಯಾರೇ ಹೆಚ್ಚು ತಿಂದ್ರೂ ಅಜೀರ್ಣ ಗ್ಯಾರೆಂಟಿ. ಪ್ರಕೃತಿ ನಿಯಮ ನಂಗೂ ಒಂದೇ, ನಿಂಗೂ ಒಂದೇ, ಎಲ್ಲರಿಗೂ ಒಂದೇ. ಆಕಾಶ, ಭೂಮಿ, ಪರಿಸರ, ಸೂರ್ಯ, ಚಂದ್ರ ಎಲ್ಲರಿಗೂ ಒಂದೇ. ಇದೇ ಕಾರಣಕ್ಕೆ, ನಾನು ನನ್ನ ಧರ್ಮವನ್ನು ಎಷ್ಟು ಗೌರವಿಸುತ್ತೇನೋ, ನಿಮ್ಮ ಧರ್ಮವನ್ನೂ ಅಷ್ಟೇ ಗೌರವಿಸುತ್ತೇನೆ. ನಮ್ಮ ಶ್ಲೋಕಗಳಷ್ಟೇ ಸ್ಪಷ್ಟವಾಗಿ ಸರಾಗವಾಗಿ ನಿಮ್ಮ ಕಲ್ಮಾ ಕೂಡ ಬಾಯಿಪಾಠ ಮಾಡಿದ್ದೇನೆ. ಬೇಕಿದ್ರೆ ಕೇಳು ಎಂದು, ಲಾಹ್ ಇಲಾಹಾ ಇಲ್ಲಲ್ಲಾಹ್, ಮೊಹಮ್ಮದ್ದೂರ್ ರಸೂಲ್ ಉಲ್ಲಾಹ್'' ಎಂದು ಹೇಳಿದ್ದೆ. ಆ ತಾತ ಒಂದು ಕ್ಷಣ ಮಾತನಾಡದೇ ಮತ್ತೊಮ್ಮೆ ಈ ಕಲ್ಮಾ ನುಡಿಯವಂತೆ ಹೇಳಿದಾಗಲೂ ಮತ್ತಷ್ಟು ಗಟ್ಟಿ ಧನಿಯಲ್ಲಿ ಹೇಳಿದ್ದೆ. ಆಗ ಆ ತಾತ, ತನ್ನ ಎರಡೂ ಕೈಗಳನ್ನು ನನ್ನ ತಲೆಯ ಮೇಲಿತ್ತು ಆಶೀರ್ವಾದ ಮಾಡಿದ್ರು. ''ಒಂದಲ್ಲಾ ಒಂದು ದಿನ, ಜನರು ನಿನ್ನನ್ನು ಗುರುತಿಸುತ್ತಾರೆ, ಕೊಂಡಾಡುತ್ತಾರೆ, ಪ್ರೀತಿಸುತ್ತಾರೆ. ನಿನ್ನನ್ನು ಅವರು ಸಂಭ್ರಮಿಸೋದ್ರ ಜೊತೆಗೆ ನೀ ಸತ್ತ ನಂತರವೂ ನಿನ್ನನ್ನು ಸ್ಮರಿಸುತ್ತಾರೆ. ನೀನು ದೊಡ್ಡ ವ್ಯಕ್ತಿಯಾಗಿ ಬೆಳೆಯುತ್ತೀಯಾ. ನಿನ್ನನ್ನು ಮಗನಾಗಿ ಪಡೆದ ಆ ಪೋಷಕರು ಪುಣ್ಯವಂತರು ಕಣೋ. ನಿನ್ನ ಕುಟುಂಬವೇ ನಿನ್ನ ಶಕ್ತಿ, ನಿನ್ನ ಕುಟುಂಬವೇ ನಿನ್ನ ಆಸ್ತಿ'' ಅಂತ ಒದ್ದೆಯಾಗಿದ್ದ ಕಣ್ಣುಗಳಲ್ಲೇ ನೋಡಿ ನನ್ನ ತಲೆಯ ಮೇಲಿದ್ದ ಅವರ ಕೈಗಳನ್ನು ಇಳಿಸಿದ್ದರು. (ಪುಟ 42)

ಯುವಜನರಲ್ಲಿ ಹಠಾತ್ ಸಾವು ಕಾರಣವೇನು?

ಇದು ಅಗತ್ಯ!

ಆರೋಗ್ಯಕರ ಜೀವನ ಶೈಲಿ, ಸಮಯಕ್ಕೆ ನಿದ್ರೆ, ಸಮತೋಲಿತ ಆಹಾರ, ನಿರಂತರ ಚಟುವಟಿಕೆ ಹಾಗೂ ವ್ಯಾಯಾಮ, ಮಾನಸಿಕ ಶಾಂತಿ ಇವುಗಳು ಯಾವುದೇ ಔಷಧಿಗಿಂತ ಶಕ್ತಿ ಉಳ್ಳದ್ದಾಗಿವೆ, ಆದರೆ ಅತೀ ನಿರ್ಲಕ್ಷಿತವಾಗಿವೆ. ಈಗ ಅವುಗಳತ್ತ ತಿರುಗಿ ನೋಡುವ ಸಮಯ. ಇದು ಭಯದಿಂದ ಪ್ರತಿಕ್ರಿಯೆ ನೀಡುವ ಕಾಲವಲ್ಲ, ಇದು ಜಾಣತನದಿಂದ ಮುಂದೆ ನಡೆಯುವ ಸಮಯ.

» ಡಾ. ಶಶಿಕಿರಣ್ ಉಮಾಕಾಂತ್,
ಎಂಡಿ ಎಫ್‌ಆರ್‌ಸಿಎಸ್



ಇತ್ತೀಚಿನ ದಿನಗಳಲ್ಲಿ ಯುವಜನರಲ್ಲಿ ಹಠಾತ್ ಸಾವುಗಳು, ಅದರಲ್ಲೂ ಹೃದಯ ಸಂಬಂಧಿತ ಸಾವುಗಳು, ಹೆಚ್ಚಾಗುತ್ತಿವೆ ಎಂಬ ಭಾವನೆ ವ್ಯಾಪಕವಾಗಿದೆ. ಹಲವರು ಕೋವಿಡ್-19 ಲಸಿಕೆಯೇ ಇದಕ್ಕೆ ಕಾರಣ ಎಂದು ನಂಬುತ್ತಾರೆ. ಈ ಹಠಾತ್ ಸಾವುಗಳ ಹಿಂದಿನ ಕಾರಣಗಳನ್ನು ಕೂಲಂಕುಷವಾಗಿ ವಿಮರ್ಶೆ ಹಾಗೂ ವಿಶ್ಲೇಷಣೆ ಮಾಡುವುದೇ ಈ ಲೇಖನದ ಉದ್ದೇಶ.

ಯುವಜನರಲ್ಲಿ ಕಾಣುತ್ತಿರುವ ಈ ಏಕಾಏಕಿ ಸಾವುಗಳು ಹಿಂದೆ ಸಹ ಆಗುತ್ತಿದ್ದು ಈಗ ಹೆಚ್ಚಾಗಿದೆಯೇ? ಅಥವಾ ನಾವು ಈಗ ಅವುಗಳನ್ನು ಹೆಚ್ಚು ಗಮನಿಸುತ್ತಿರುವುದರಿಂದ ಅವು ಹೆಚ್ಚಾಗಿ ಕಾಣಿಸುತ್ತಿವೆಯೇ? ನಿಜವಾಗಲೂ ಹೆಚ್ಚಾಗಿದರೆ, ಕಾರಣಗಳೇನು? ನಾವೇ ಹೆಚ್ಚು ಗಮನಿಸುತ್ತಿದ್ದೇವೆಂದರೆ ಅದಕ್ಕೆ ಕಾರಣಗಳೇನು? ನಿಜವಾದ ಸತ್ಯವೇನು? ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕಂಡುಹಿಡಿಯಲು ಪ್ರಯತ್ನ ಮಾಡೋಣ. ಇದಕ್ಕೂ ಮೊದಲು, ಕೋವಿಡ್-19 ಲಸಿಕೆಯ ವಿಚಾರವನ್ನು ತೆಗೆದುಕೊಂಡು ವಿಮರ್ಶೆ ಮಾಡೋಣ. ಸಾಮಾಜಿಕ ಮಾಧ್ಯಮಗಳಲ್ಲಿ ಹಲವಾರು ಪ್ರಭಾವಿ ವ್ಯಕ್ತಿಗಳು ಯುವಜನರ ಹಠಾತ್ ಸಾವುಗಳಿಗೆ ಕೋವಿಡ್ -19 ಲಸಿಕೆಯೇ ಕಾರಣವಿರಬಹುದು ಎಂದು ಹಂಚಿಕೊಳ್ಳುತ್ತಿದ್ದಾರೆ. ಅನೇಕ ಜನರು ವೈಜ್ಞಾನಿಕ ಸಾಕ್ಷ್ಯಾಧಾರಗಳನ್ನು ಪರೀಕ್ಷಿಸದೇ ಇದನ್ನು ನಂಬುತ್ತಲೂ ಇದ್ದಾರೆ. ಕೋವಿಡ್ -19 ಲಸಿಕೆಗಳಿಗೂ ಹಠಾತ್ ಸಾವುಗಳಿಗೂ ಸಂಬಂಧವೇನು?

ಸಂಶೋಧನೆಗಳು

ಈ ವಿಚಾರದ ಬಗ್ಗೆ ಭಾರತದಲ್ಲಿ ಹಾಗೂ ಹೊರದೇಶಗಳಲ್ಲಿ ಹಲವಾರು ಸಂಶೋಧನೆಗಳು ನಡೆದಿವೆ. ಈ ಸಂಶೋಧನೆಗಳು ವೈದ್ಯಕೀಯ ಪತ್ರಿಕೆಗಳಲ್ಲಿ ಪ್ರಕಟವಾದರೂ, ಜನಸಾಮಾನ್ಯರಿಗೆ ತಲುಪುವ ಮಾಧ್ಯಮಗಳಲ್ಲಿ ಪ್ರಮುಖವಾಗಿ ಪ್ರಕಟವಾಗಿಲ್ಲ. ಅಂತಹ ಎರಡು ಮಹತ್ವದ ಅಧ್ಯಯನಗಳನ್ನು ಇಲ್ಲಿ ಪರಿಗಣಿಸಿ ನೋಡೋಣ.

ಭಾರತದಲ್ಲಿ ಇಂತಹ ಅತಿ ದೊಡ್ಡ ಅಧ್ಯಯನವನ್ನು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ (ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್-ಐಸಿಎಂಆರ್) ನೆರವಿನಿಂದ ಅಕ್ಟೋಬರ್ 2021 ರಿಂದ ಮಾರ್ಚ್ 2023ರ ವರೆಗೆ ನಡೆಸಿ, ಇಂಡಿಯನ್ ಜರ್ನಲ್ ಆಫ್ ಮೆಡಿಕಲ್ ರಿಸರ್ಚ್ ಐಜೆಎಂಆರ್ ಪ್ರಕಟಿಸಲಾಗಿತ್ತು. ಈ ಅಧ್ಯಯನವು, 18 ರಿಂದ 45 ವರ್ಷದೊಳಗಿನ ಯುವಜನರಲ್ಲಿ ಹಠಾತ್ ಸಂಭವಿಸುವ ಹೃದಯ ಸಂಬಂಧಿತ ಸಾವುಗಳಿಗೆ ಕೋವಿಡ್-19 ಲಸಿಕೆಯ ಸಂಬಂಧವಿದೆಯೇ ಎಂಬುದನ್ನು ಪರೀಕ್ಷಿಸಿತು. ಇದು ಭಾರತದ 47 ಪ್ರಮುಖ ಆಸ್ಪತ್ರೆಗಳ ಸಹಭಾಗಿತ್ವದಲ್ಲಿ 68 ಸಂಶೋಧಕರು ನಡೆಸಿದ ಕೇಸ್-ಕಂಟ್ರೋಲ್ ಅಧ್ಯಯನ. ಅನಿರ್ದಿಷ್ಟ ಕಾರಣಗಳಿಂದ ಹಠಾತ್ ಸಾವು ಸಂಭವಿಸಿದ 729 ಯುವಜನರ ಪ್ರಕರಣಗಳನ್ನು ಅಧ್ಯಯನದಲ್ಲಿ ಸೇರಿಸಿಕೊಂಡದ್ದಲ್ಲದೇ, ಪ್ರಕರಣಗಳಿಗೆ ಹೋಲಿಕೆಯಾಗುವಂತಹ ಗುಣಲಕ್ಷಣಗಳಿದ್ದ, ಆದರೆ ಮರಣ ಹೊಂದಿಲ್ಲದ 2,916 ಕಂಟ್ರೋಲ್ (ನಿಯಂತ್ರಣ ಗುಂಪು) ವ್ಯಕ್ತಿಗಳನ್ನೂ ಒಳಗೊಂಡಿತ್ತು.

ಸಾಧ್ಯತೆ ಕಡಿಮೆ!

ಈ ಅಧ್ಯಯನದಲ್ಲಿ ಕಂಡುಬಂದ ಮಹತ್ವದ ಮಾಹಿತಿಯೆಂದರೆ ಲಸಿಕೆ ಪಡೆದವರಲ್ಲಿ ಹಠಾತ್ ಮರಣ ಆಗುವ ಸಾಧ್ಯತೆ ಕಡಿಮೆಯಿತ್ತು. ಈ ಐಜೆಎಂಆರ್ ಅಧ್ಯಯನದ ಪ್ರಕಾರ, ಲಸಿಕೆ ಪಡೆಯದವರನ್ನು ಹೋಲಿಸಿದರೆ, ಒಂದು ಡೋಸ್ ಲಸಿಕೆ ಪಡೆದವರಲ್ಲಿ ಸಾವಿನ ಅಪಾಯದ ಗಮನಾರ್ಹ ವ್ಯತ್ಯಾಸ ಕಂಡುಬರದಿದ್ದರೂ, ಎರಡು ಡೋಸ್ ಪಡೆದವರಲ್ಲಿ ಈ ಅಪಾಯ ಶೇ. 49 ಕಡಿಮೆಯಾಗಿತ್ತು! (ಮೂರು ಡೋಸ್ ಪಡೆದವರ ಸಂಖ್ಯೆಯೇ ಕಡಿಮೆಯಿದ್ದುದರಿಂದ, ಅದರ ಬಗ್ಗೆ ಪ್ರತ್ಯೇಕ ಅಂಕಿ-ಅಂಶ ನೀಡಲಾಗಲಿಲ್ಲ.)

ಹಾಗಾದರೆ ಯಾರಲ್ಲಿ ಈ ಸಾಧ್ಯತೆ ಹೆಚ್ಚಾಗಿತ್ತು? ಆಸ್ಪತ್ರೆಯಲ್ಲಿ ದಾಖಲಾಗುವಷ್ಟು ಕೋವಿಡ್ ಸೋಂಕು ಇತ್ತೀಚೆಗೆ ಆಗಿದ್ದವರಲ್ಲಿ, ಧೂಮಪಾನ ಚಟವಿರುವವರಲ್ಲಿ, ಮರಣಕ್ಕೆ 48 ಗಂಟೆಗಳ ಮೊದಲು ಅತಿಯಾಗಿ ಮದ್ಯಪಾನ ಮಾಡಿದ್ದವರಲ್ಲಿ, ಮರಣಕ್ಕೆ 48 ಗಂಟೆಗಳ ಮೊದಲು ಭಾರೀ ದೈಹಿಕ ವ್ಯಾಯಾಮ ಮಾಡಿದ್ದವರಲ್ಲಿ, ಹಾಗೂ ಕುಟುಂಬದ ಇತರರಲ್ಲಿ ಹೃದಯ ರೋಗದ ಇತಿಹಾಸವಿದ್ದವರಲ್ಲಿ ಈ ಸಾಧ್ಯತೆ ಹೆಚ್ಚು ಕಂಡಿತ್ತು.

ಈ ಅಧ್ಯಯನದ ಅಂತಿಮ ನಿರ್ಣಯವೆಂದರೆ, ಕೋವಿಡ್ ಲಸಿಕೆ ಹಠಾತ್ ಸಾವುಗಳಿಗೆ ಕಾರಣವಲ್ಲ; ವಾಸ್ತವವಾಗಿ, ಕೋವಿಡ್ ಲಸಿಕೆ ಪಡೆದವರು ಹಠಾತ್ ಸಾವಿಗೆ ಗುರಿಯಾಗುವ ಸಾಧ್ಯತೆ ಕಡಿಮೆಯೇ ಕಂಡಿದ್ದು, ಎರಡು ಡೋಸ್‌ಗಳು ಒಂದಕ್ಕಿಂತ ಹೆಚ್ಚಿನ ರಕ್ಷಣೆ ನೀಡಿದ್ದವು ಎನ್ನುವುದು ಗಮನಾರ್ಹ.

ಇಂಗ್ಲೆಂಡಿನಲ್ಲಿ ಅಧ್ಯಯನ

ಅಂತರರಾಷ್ಟ್ರೀಯ ಮಟ್ಟದಲ್ಲಿ ನೋಡುವುದಾದರೆ, ಇಂಗ್ಲೆಂಡಿನಲ್ಲಿ ಸುಮಾರು 4.6 ಕೋಟಿ ಜನರ ಆರೋಗ್ಯ ದಾಖಲೆಗಳನ್ನು ಆಧರಿಸಿ ಒಂದು ಮಹತ್ವದ ಅಧ್ಯಯನ ನಡೆಸಲಾಯಿತು. ಈ ಅಧ್ಯಯನದಲ್ಲಿ ಡಿಸೆಂಬರ್ 2020 ರಿಂದ ಜನವರಿ 2022ರ ನಡುವಿನ ಅವಧಿಯಲ್ಲಿ ಲಸಿಕೆ ಪಡೆದ ನಂತರ ಹೃದಯಾಘಾತ, ಸ್ಟ್ರೋಕ್ ಮತ್ತು ರಕ್ತಗಟ್ಟಿಕೆಯಾಗುವ ಘಟನೆಗಳು ಹೆಚ್ಚಾಗಿದ್ದವೇ ಎಂಬುದನ್ನು ಪರಿಶೀಲಿಸಲಾಯಿತು. ಇದರ ಫಲಿತಾಂಶದ ಪ್ರಕಾರ, ಲಸಿಕೆ ಪಡೆದ ನಂತರ ಹೃದಯಾಘಾತ ಮತ್ತು ಮಿದುಳಿನ ಆಘಾತ ಸಂಭವಿಸುವ ಅಪಾಯ ಕಡಿಮೆಯೇ ಕಂಡಿತು. ಮೊದಲ ಡೋಸ್ ನಂತರ 1324 ವಾರಗಳಲ್ಲಿ ಹೃದಯಾಘಾತ-ಸ್ಟ್ರೋಕ್ ಅಪಾಯ ಸುಮಾರು ಶೇ. 10 ಕಡಿಮೆಯಾಗಿ ಕಂಡುಬಂದಿತು; ಎರಡನೇ ಡೋಸ್ ನಂತರ ಅಸ್ಟ್ರೋಜೆನೇಕಾ ಲಸಿಕೆ ತೆಗೆದುಕೊಂಡವರಲ್ಲಿ ಶೇ. 27, ಫೈಸರ್ ಲಸಿಕೆ ತೆಗೆದುಕೊಂಡವರಲ್ಲಿ ಶೇ. 20 ಕಡಿಮೆ ಕಂಡುಬಂದಿತು. ಫೈಸರ್/ಮೋಡರ್ನಾ ಲಸಿಕೆ ಪಡೆದ ಕೆಲವರಲ್ಲಿ ಅಪರೂಪವಾಗಿ ಹೃದಯದ ಉರಿಯೂತ ಅಥವಾ ರಕ್ತದ ಗಟ್ಟಿಯಾಗುವಿಕೆ ಸಮಸ್ಯೆ ಕಂಡುಬಂದರೂ, ಅವು ತುಂಬಾ ಕಡಿಮೆ ಪ್ರಮಾಣದಲ್ಲಿದ್ದು, ಲಸಿಕೆಯಿಂದ ಉಂಟಾಗುವ ಒಟ್ಟು ಲಾಭಗಳನ್ನು ಈ ಅಪಾಯಗಳು ಮೀರಲಿಲ್ಲ. ಇಲ್ಲೂ ಸಹ, ಸಂಶೋಧಕರ ಅಂತಿಮ ತೀರ್ಮಾನ: ಕೋವಿಡ್ ಲಸಿಕೆಗಳು ಹೃದಯದ ಅಪಾಯವನ್ನು ಹೆಚ್ಚಿಸಲಿಲ್ಲ; ಬಹುತೇಕ ಜನರಲ್ಲಿ ಅವು ಹೃದಯದ ಅಪಾಯವನ್ನು ಕಡಿಮೆ ಮಾಡಿವೆ.

ಹಾಗಾದರೆ ಲಸಿಕೆಯ ಬಗ್ಗೆ ಅನುಮಾನವೇಕೆ?

ಸಾಂಕ್ರಾಮಿಕದ ಸಮಯದಲ್ಲಿ ಸಾರ್ವಜನಿಕವಾಗಿ ನೀಡಲಾಗುತ್ತಿದ್ದ ಮಾಹಿತಿಯಲ್ಲಿ ವಿಶ್ವ ಮಟ್ಟದಲ್ಲಿ ಗೊಂದಲವಿತ್ತು. ಸಾಂಕ್ರಾಮಿಕ ಮುಂದುವರಿದಂತೆ, ನಿಯಮಗಳು ಸಹಾ ಬದಲಾಗುತ್ತಾ ಹೋದವು. ಜನರ ಪ್ರಶ್ನೆಗಳಿಗೆ ಉತ್ತರ ಸಿಗದೇ ಇದ್ದಾಗ ಸರಕಾರಗಳ ನಿಲುವು ಅನುಮಾನ ಹುಟ್ಟಿಸಿತು. ಲಸಿಕೆ ಸಂಬಂಧಿತ ಪರಿಣಾಮಗಳ ಬಗ್ಗೆ ಸರಿಯಾದ ರೀತಿಯಲ್ಲಿ ಮಾಹಿತಿ ಹಂಚಿಕೊಳ್ಳದೇ ಇದ್ದುದರಿಂದ ಜನ 'ಏನೋ ಮರೆಮಾಚಲಾಗುತ್ತಿದೆ' ಎಂಬ ಭಾವನೆಯನ್ನು ಹೊಂದಿದರು.

ಕೋವಿಡ್-19 ಸಾಂಕ್ರಾಮಿಕ ಸಮಯದಲ್ಲಿ, ಪ್ರಪಂಚದಾದ್ಯಂತ ನಿರಂತರವಾಗಿ ಬದಲಾಗುತ್ತಿದ್ದ ಪರಿಸ್ಥಿತಿಗೆ ಅನುಗುಣವಾಗಿ ನಿಯಮಗಳು ಬದಲಾಗುತ್ತಿದ್ದವು. ಜನರು ಅದನ್ನು 'ಇವರಿಗೆ ಏನು ಮಾಡಬೇಕೆಂದು ಗೊತ್ತೇ ಇಲ್ಲ' ಎಂದು ಅರ್ಥೈಸಿದರು. ಸಾಂಕ್ರಾಮಿಕ ಶುರುವಾಗಿ ಒಂದು ವರ್ಷದ ಒಳಗೇ ಲಸಿಕೆಗಳನ್ನು ದಾಖಲೆಯ ವೇಗದಲ್ಲಿ ಬಿಡುಗಡೆ ಮಾಡಲಾಯಿತು. ಅದೊಂದು ವಿಜ್ಞಾನದ ಅದ್ಭುತವಾಗಿದ್ದರೂ ಸಹಾ, ಅದನ್ನು ಪ್ರಶಂಸಿಸುವ ಬದಲಾಗಿ ಕೆಲವರು ಇದನ್ನು 'ವ್ಯವಹಾರಕ್ಕಾಗಿ ಮಾಡಿದ ಆತುರದ ಅನುಮೋದನೆ 'ಎಂದು ಟೀಕಿಸಿದರು. ಲಸಿಕೆಯ ಅಡ್ಡಪರಿಣಾಮಗಳು ಅಪರೂಪವಾಗಿದ್ದರೂ ಸಹಾ, ಅವುಗಳ ಬಗ್ಗೆ ಸರಿಯಾದ ರೀತಿಯಲ್ಲಿ ಮಾಹಿತಿ ಹಂಚಿಕೊಳ್ಳದೇ ಇದ್ದುದರಿಂದ ಜನ ''ಏನೋ ಮರೆಮಾಚಲಾಗುತ್ತಿದೆ'' ಎಂಬ ಭಾವನೆಯನ್ನು ಹೊಂದಿದರು.

> **ಜನರು ಆರೋಗ್ಯಕರ ಮತ್ತು ಸರಳ ಜೀವನಶೈಲಿಯನ್ನು ತೊರೆದದ್ದೇ ಇಂದಿನ ಹಠಾತ್ ಹೃದಯಾಘಾತಗಳಿಗೆ ಮುಖ್ಯ ಕಾರಣ, ಹೊರತು ಕೋವಿಡ್ ಲಸಿಕೆಯಲ್ಲ! ಐಸಿಎಂಆರ್ ಅಧ್ಯಯನದ ಪ್ರಕಾರ, ಕೋವಿಡ್ ಲಸಿಕೆಯು ಹಠಾತ್ ಸಾವುಗಳಿಗೆ ಕಾರಣವಲ್ಲ; ವಾಸ್ತವವಾಗಿ, ಕೋವಿಡ್ ಲಸಿಕೆ ಪಡೆದವರು ಹಠಾತ್ ಸಾವಿಗೆ ಗುರಿಯಾಗುವ ಸಾಧ್ಯತೆ ಕಡಿಮೆಯೇ ಕಂಡಿದ್ದು, ಎರಡು ಡೋಸ್‌ಗಳು ಒಂದಕ್ಕಿಂತ ಹೆಚ್ಚಿನ ರಕ್ಷಣೆ ನೀಡಿದ್ದವು ಎನ್ನುವುದು ಗಮನಾರ್ಹ.**

ಸಾಮಾಜಿಕ ಮಾಧ್ಯಮಗಳಲ್ಲಿ ಬರುವ ಒಬ್ಬ ವ್ಯಕ್ತಿಯ ಸಾವಿನ ಕಥೆ ಹಾಗೂ ವೈಯಕ್ತಿಕ ಅನಿಸಿಕೆಯ ಆಧಾರದಲ್ಲಿ ಹಂಚಿಕೊಂಡ ಅನುಭವಗಳು, ವೈದ್ಯಕೀಯ ಸಂಶೋಧನಾ ಪತ್ರಿಕೆಗಳಲ್ಲಿ ಬರುವ ವಿಶ್ವಾಸಾರ್ಹ ಅಂಕಿಅಂಶಗಳಿಗಿಂತ ಹೆಚ್ಚು ಪ್ರಭಾವ ಬೀರಿದವು. ಇದಕ್ಕೆ ಪೂರಕವಾಗಿ, ಕೆಲವು ಲಸಿಕೆ-ವಿರೋಧಿ ಸಂಘಟನೆಗಳು ಹಾಗೂ ವ್ಯಕ್ತಿಗಳು ಸಾಮಾಜಿಕ ಮಾಧ್ಯಮಗಳನ್ನು ಬಳಸಿಕೊಂಡು ತಪ್ಪು ಮಾಹಿತಿಯಿರುವ ವೀಡಿಯೋಗಳನ್ನು ಹಾಗೂ ಷಡ್ಯಂತ್ರ ಸಿದ್ಧಾಂತಗಳ ಕಟ್ಟುಕತೆಗಳನ್ನು ಹರಡುತ್ತಿದ್ದರಿಂದ, ಅನುಮಾನ ಇನ್ನಷ್ಟು ಗಂಭೀರವಾಯಿತು. ಇವರಲ್ಲಿ ಕೆಲವರು ಬೇಕೆಂದೇ ಭಯ ಹುಟ್ಟಿಸುವ ಮಾಹಿತಿಯನ್ನು ಹರಡಿ, ಲಸಿಕೆಗಳನ್ನು ಅನುಮೋದಿಸಿದ ವೈದ್ಯರು, ವಿಜ್ಞಾನಿಗಳು ಮತ್ತು ಸಂಸ್ಥೆಗಳ ಮೇಲೆ ಜನರಲ್ಲಿ ಅನುಮಾನ ಉಂಟುಮಾಡಿದರು. ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹಂಚಲ್ಪಟ್ಟ ಇಂತಹ ಮಾಹಿತಿಗಳನ್ನು ನೋಡಿ ಕೆಲವರು ಲಸಿಕೆಯನ್ನು ದೂಷಿಸಲು ಆರಂಭಿಸಿದರು.

ಅದಲ್ಲದೇ, ಮರಣ ಹೊಂದಿದ ವ್ಯಕ್ತಿಗಳ ಆರೋಗ್ಯದ ಬಗ್ಗೆ ಸಂಪೂರ್ಣ ಚಿತ್ರ ಬಹಿರಂಗವಾಗಿ ಗೊತ್ತಾಗುತ್ತಿರಲಿಲ್ಲ. ಅಂತಹ ವ್ಯಕ್ತಿಗಳ ವೈಯಕ್ತಿಕ ವಿವರಗಳು, ಕುಟುಂಬದ ಹೃದಯ ಕಾಯಿಲೆಗಳ ಇತಿಹಾಸ, ಅಭ್ಯಾಸಗಳು (ಧೂಮಪಾನ, ಮದ್ಯಪಾನ ಮತ್ತು ಮಾದಕ ದ್ರವ್ಯ ಸೇವನೆಯಂತಹವು) ಮತ್ತು ಜೀವನಶೈಲಿಯನ್ನು ಸಾರ್ವಜನಿಕವಾಗಿ ಚರ್ಚಿಸಲಾಗಲಿಲ್ಲ. ಅಂತಹ ಚರ್ಚೆ ಸಾವಿನ ಸಮಯದಲ್ಲಿ ಅಗೌರವವೆಂದು ಪರಿಗಣಿಸಬಹುದಾಗಿದ್ದರಿಂದ ಇಂತಹ ಪರಿಸ್ಥಿತಿ ನಿರ್ಮಾಣವಾಯಿತು.

ಇಂತಹ ಸಂದರ್ಭದಲ್ಲಿ ವೈದ್ಯರು ಮತ್ತು ವಿಜ್ಞಾನಿಗಳು ತಮ್ಮ ಹಾಗೂ ಲಸಿಕೆಗಳ ಪ್ರತಿಷ್ಠೆಯನ್ನು ರಕ್ಷಿಸಲು ಅದನ್ನು ಸಮರ್ಥಿಸಿಕೊಳ್ಳುತ್ತಾರೆ ಎಂದು ಕೆಲವರು ಭಾವಿಸಬಹುದು. ಆದರೆ, ಸಾಂಕ್ರಾಮಿಕದ ಸಮಯದಲ್ಲಿ ಲಸಿಕೆಗಳು ಜೀವ ಉಳಿಸುವವು ಎಂದು ಸಾಬೀತಾಗಿದ್ದರಿಂದ ಮಾತ್ರ, ಹಾಗೂ ಸಾಂಕ್ರಾಮಿಕವನ್ನು ನೇರವಾಗಿ ಎದುರಿಸಲೇಬೇಕಿದ್ದರಿಂದ ವೈದ್ಯರು ಲಸಿಕೆಗಳನ್ನು ತೆಗೆದುಕೊಳ್ಳಲು ಸಲಹೆ ಮಾಡಿದ್ದಷ್ಟೇ ಅಲ್ಲದೇ, ಅವರೆಲ್ಲರೂ ಸಹಾ ತೆಗೆದುಕೊಂಡರು.

ನಿಜವಾದ ಕಾರಣಗಳೇನು?

ಹಾಗಾದರೆ ಇತ್ತೀಚಿನ ಈ ಹಠಾತ್ ಮರಣಗಳಿಗೆ ಕಾರಣಗಳೇನು? ಹಲವು ಕಾರಣಗಳಿವೆ. ಕೆಲವು ಹಳೆಯ ಕಾರಣಗಳು, ಸ್ವಲ್ಪ ಹೊಸ ಅಂಶಗಳು ಮತ್ತು ಹಲವು ನಮ್ಮ ಜೀವನಶೈಲಿಗೆ ಸಂಬಂಧಿಸಿದವುಗಳು.

- ಕೆಲವು ಯುವಜನರಲ್ಲಿ ಜನ್ಮಜಾತ ಹೃದಯದ ಸಮಸ್ಯೆಗಳಿಂದ ಅಥವಾ ಹೃದಯವನ್ನು ಇದ್ದಕ್ಕಿದ್ದಂತೆ ನಿಲ್ಲುವಂತೆ ಮಾಡುವ ರೋಗಸ್ಥಿತಿಗಳಿಂದ ಇಂತಹ ಘಟನೆಗಳು ಮೊದಲೂ ಸಂಭವಿಸುತ್ತಿದ್ದವು. ಆದರೆ ಇಂತಹ ಘಟನೆಗಳು ವ್ಯಾಪಕ ಸುದ್ದಿಯಾಗುತ್ತಿರಲಿಲ್ಲ.
- ಈಗಿನ ಕಾಲದಲ್ಲಿ, ಮೊಬೈಲ್ ಫೋನ್‌ಗಳು ಮತ್ತು ಸಾಮಾಜಿಕ ಮಾಧ್ಯಮಗಳ ಮೂಲಕ ಇಂತಹ ಘಟನೆಗಳು ದೃಶ್ಯರೂಪದಲ್ಲಿ ರೆಕಾರ್ಡ್ ಆಗಿ ನಿಮಿಷಗಳಲ್ಲಿ ನಾಡಿನಾದ್ಯಂತ ಹರಡುತ್ತವೆ. ಇಂಥಾ ಘಟನೆಗಳು ಭಯ ಹುಟ್ಟಿಸುತ್ತವೆ. ಕೆಲವು ಟಿವಿ ಚಾನೆಲ್‌ಗಳು ಮತ್ತು ಪತ್ರಿಕೆಗಳು ಕೂಡ ಈಗ ಸಮಾಚಾರಗಳನ್ನು ಸಾಮಾಜಿಕ ಮಾಧ್ಯಮಗಳಿಂದಲೇ ತೆಗೆದುಕೊಳ್ಳುತ್ತವೆ. ಕೆಲವೊಮ್ಮೆ ಯಾವುದೇ ವೈದ್ಯಕೀಯ ನಿಖರತೆ ಇಲ್ಲದಿದ್ದರೂ, ಲಸಿಕೆಯಿಂದಲೇ ಹೀಗೆ ಆಗಿರಬಹುದು ಎಂದು ಭಾವೋದ್ರೇಕಗೊಳಿಸುವುದರಿಂದ ಅಂತಹ ಸುದ್ದಿಗಳೂ ಸಹಾ ವೈರಲ್ ಆಗುತ್ತಿವೆ.
- ಈಗ ಹೃದಯ ಸಮಸ್ಯೆಗಳನ್ನು ಪತ್ತೆ ಹಚ್ಚುವುದು ಸುಲಭ. ರಕ್ತಪರೀಕ್ಷೆ, ಇಸಿಜಿ, ಹೃದಯ ಸ್ಕ್ಯಾನ್‌ಗಳು ಇತ್ಯಾದಿಗಳು ಮೊದಲಿಗಿಂತಾ ಸುಲಭವಾಗಿ ಹಾಗೂ ವ್ಯಾಪಕವಾಗಿ ಲಭ್ಯವಾಗಿವೆ. ಅದಲ್ಲದೇ ಶವಪರೀಕ್ಷೆಗಳು ಸಹಾ ಮೊದಲಿಗಿಂತ ಹೆಚ್ಚು ಅಂಶಗಳನ್ನು ಪತ್ತೆಮಾಡಲು ಶಕ್ತವಾಗಿವೆ. ಹಿಂದೆ ಏಕಾಏಕಿ ಸಾವನ್ನಪ್ಪಿದರೆ ಯಾವ ಕಾರಣದಿಂದ ಎಂದು ಹೇಳಲಾಗದಿದ್ದರೂ ಈಗ ಹೃದಯಾಘಾತದಿಂದ ಆಗಿದೆಯೇ ಅಥವಾ ಇತರ ಸಮಸ್ಯೆಯಿಂದ ಉಂಟಾಗಿದೆಯೇ ಎಂಬುದನ್ನು ಶವಪರೀಕ್ಷೆಯಿಂದ ನಿಖರವಾಗಿ ತಿಳಿಯಬಹುದು. ಹೃದ್ರೋಗಗಳಿಂದ ಮರಣವಾದಾಗ ಅದನ್ನು ಕರಾರುವಾಕ್ಕಾಗಿ ಕಂಡುಹಿಡಿಯಲಾಗುತ್ತಿದೆ.

ಸೋಂಕಿನ ಪ್ರಭಾವ

ಕೋವಿಡ್ 'ಸೋಂಕು' (ಲಸಿಕೆಯಲ್ಲ) ಸ್ವತಃ ಹೃದಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಬಹುತೇಕ ಜನರು ಇದನ್ನು ಮರೆತೇ ಬಿಟ್ಟಿದ್ದಾರೆ. ಕೋವಿಡ್ ಲಸಿಕೆಗಳನ್ನು ನೀಡುವ ಮೊದಲೇ, ಸೆಪ್ಟೆಂಬರ್ 2020ರ ಮೊದಲ ಅಲೆಯಲ್ಲಿ, ಕೋವಿಡ್ ಸೋಂಕಿನ ಸಮಯದಲ್ಲಿ ಹೃದಯ ಸಂಬಂಧಿತ ತೊಂದರೆಗಳಿಂದ, ಈ ಲೇಖಕನ ತಂದೆಯೂ ಸೇರಿದಂತೆ, ಸಾವಿರಾರು ಜನರು ಸಾವನ್ನಪ್ಪಿದರು. ಕೋವಿಡ್ ವೈರಾಣು ಸ್ವತಃ ರೋಗಿಯ ಹೃದಯದ ಮೇಲೆ ತೀವ್ರ ಪರಿಣಾಮ ಬೀರುತ್ತದೆ. ವೈರಾಣುವಿನ ಸೋಂಕಿನಿಂದಾಗಿ ಹೃದಯದಲ್ಲಿ ಉರಿಯೂತ, ರಕ್ತನಾಳಗಳಿಗೆ ಹಾನಿ, ರಕ್ತ ಗಟ್ಟಿಯಾಗುವುದು ಹಾಗೂ ಇತರ ತೊಡಕುಗಳು ಉಂಟಾಗಬಹುದು. ಕೋವಿಡ್ ಸೋಂಕಿನ ನಂತರ ಸಹಾ ಬಹಳ ಸಮಯದವರೆಗೆ ಹೃದಯಾಘಾತ ಅಥವಾ ಮಿದುಳಿನ ಆಘಾತ ಆಗುವ ಸಾಧ್ಯತೆ ಹೆಚ್ಚಿರುತ್ತದೆ. ಲಕ್ಷಣರಹಿತ ಅಥವಾ ಸ್ವಲ್ಪ ಮಟ್ಟಿನ ಸೋಂಕು ಹೊಂದಿದ್ದ ಯುವಜನರಲ್ಲಿ ಸಹಾ ಹೃದಯದಲ್ಲಿ ಆದಂತಹ ಈ ಬದಲಾವಣೆಗಳು ಭಾರೀ ವ್ಯಾಯಾಮ ಅಥವಾ ಒತ್ತಡದ ಸಮಯಗಳಲ್ಲಿ ಹಠಾತ್ ಹೃದಯದ ಸಮಸ್ಯೆಗಳಿಗೆ ಕಾರಣವಾಗಬಹುದು.

ಬದಲಾದ ಜೀವನಶೈಲಿ

ಇಂದಿನ ಯುವಜನರಲ್ಲಿ ಅತೀ ಹೆಚ್ಚಾಗಿ ಕಾಣುತ್ತಿರುವ ಕಳಪೆ ಜೀವನಶೈಲಿಯ ಬಗ್ಗೆ ಎಷ್ಟು ಹೇಳುವುದು? ಗೊತ್ತಿರುವುದನ್ನೇ ಇವರು ಮತ್ತೆ ಮತ್ತೆ ಹೇಳುತ್ತಿದ್ದಾರೆ ಎನ್ನಿಸಬಹುದು.

- ಕಳಪೆ ಆಹಾರ ಪದ್ಧತಿ
- ಜಂಕ್ ಆಹಾರಗಳು
- ದೀರ್ಘಕಾಲ ಕುಳಿತೇ ಕೆಲಸ
- ಮಲಗುವ ಮುನ್ನ ಮೊಬೈಲ್ ಫೋನ್‌ನಲ್ಲಿ ವೀಡಿಯೊಗಳನ್ನು ನೋಡುತ್ತಲೇ ಇರುವುದರಿಂದ ನಿದ್ರಾಹೀನತೆ
- ವಿದೇಶಗಳ ಸಮಯ ವಲಯಕ್ಕೆ ಕೆಲಸದ ಹೊಂದಾಣಿಕೆಯ ಪ್ರಯತ್ನದಿಂದ ನಿದ್ರಾಹೀನತೆ
- ವ್ಯಾಯಾಮದ ಕೊರತೆ, ಕ್ರಮೇಣ ಅಭ್ಯಾಸವಿಲ್ಲದೆ ಸ್ವಲ್ಪ ಸಮಯ ಸಿಕ್ಕಾಗ ಮಾತ್ರ ಹಠಾತ್ ಭಾರೀ ವ್ಯಾಯಾಮ, ಒತ್ತಡದ ಜೀವನ, ಧೂಮಪಾನ, ಮದ್ಯವ್ಯಸನ, ಮಾದಕದ್ರವ್ಯಗಳ ವ್ಯಸನ, ಇತ್ಯಾದಿಗಳ ಪ್ರಭಾವ:

ಇವೆಲ್ಲವೂ ನಮ್ಮ ಆರೋಗ್ಯದ ಮೇಲೆ, ಹೃದಯ ಹಾಗೂ ರಕ್ತನಾಳದ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ. ಈ ಕಳಪೆ ಜೀವನಶೈಲಿಗಿಂದಾಗಿ ದೇಹದ ಬೊಜ್ಜು, ಹೊಟ್ಟೆಯ ಬೊಜ್ಜು, ಅಧಿಕ ರಕ್ತದೊತ್ತಡ, ಮಧುಮೇಹ ಮತ್ತು ಇತರ ಕಾಯಿಲೆಗಳು ಶುರುವಾಗಿ ಅದರಿಂದ ಹೃದಯದ ಹಾಗೂ ಯಕೃತ್ತಿನ ಕಾಯಿಲೆಗಳ ಅಪಾಯ ಹೆಚ್ಚಾಗುತ್ತವೆ.

ನಿಜವೇನು? ಈಗೇನು ಮಾಡಬೇಕು?

ಯಾವುದೇ ವೈದ್ಯಕೀಯ ಚಿಕಿತ್ಸೆಯೂ ಶೇ. 100 ಪರಿಣಾಮಕಾರಿಯಲ್ಲ, ಆದರೆ ಅವೆಲ್ಲವೂ ಬಹುತೇಕ ಜೀವ ಉಳಿಸುವ ಕೆಲಸವನ್ನೇ ಮಾಡುತ್ತವೆ. ಕೋವಿಡ್ ಲಸಿಕೆಗಳು ಸಹಾ ಅದೇ ರೀತಿ. ಈಗ ಲಭ್ಯವಿರುವ ಅಧ್ಯಯನಗಳು ಸ್ಪಷ್ಟವಾಗಿ ತೋರಿಸುವಂತೆ, ಲಸಿಕೆಗಳಿಂದ ಸಾವಿನ ಪ್ರಮಾಣ ಕಡಿಮೆಯಾಗಿದೆ, ಹೆಚ್ಚಿಸಿಲ್ಲ. ಈ ಲಸಿಕೆಗಳು ಕೋವಿಡ್ ಸಾಂಕ್ರಾಮಿಕವನ್ನು ಕ್ಷಿಪ್ರವಾಗಿ ನಿಯಂತ್ರಣಕ್ಕೆ ತರಲು ಮಹತ್ವದ ಪಾತ್ರ ವಹಿಸಿದ್ದವು. ಇತ್ತೀಚೆಗೆ ಹಠಾತ್ ಸಾವುಗಳ ಪ್ರಮಾಣದಲ್ಲಿ ಏರಿಕೆ ಕಂಡುಬಂದಿದೆ ಎಂಬುದು ನಿಜ. ಆದರೆ ಅದರ ಹಿಂದೆ ಕೆಲವು ಪ್ರಮುಖ ಕಾರಣಗಳಿವೆ: ಕೋವಿಡ್ ಸೋಂಕಿನ ನಂತರ ಹೃದಯದಲ್ಲಿ ಉಂಟಾಗುವ ಬದಲಾವಣೆಗಳು, ರೋಗಗಳನ್ನು ಪತ್ತೆ ಹಚ್ಚುವ ವೈದ್ಯಕೀಯ ಕ್ಷೇತ್ರದ ಸಾಮರ್ಥ್ಯದ ಸುಧಾರಣೆ, ಕಳಪೆ ಜೀವನ ಶೈಲಿಯಾದಂತಹ ನಿದ್ರೆ ಕೊರತೆ, ವ್ಯಾಯಾಮದ ಕೊರತೆ, ಹಠಾತ್ ಭಾರೀ ವ್ಯಾಯಾಮ, ಅಹಿತಕರ ಆಹಾರ, ಮದ್ಯಪಾನ, ಧೂಮಪಾನ ಇತ್ಯಾದಿ. ಈ ಆಕಸ್ಮಿಕ ದುರಂತಗಳನ್ನು ತಪ್ಪಿಸಬೇಕಾದರೆ, ಆರೋಗ್ಯ ಸಾಕ್ಷರತೆಯನ್ನು ಬೆಳೆಸಿ, ನಂಬಿಕೆಯನ್ನೂ, ಜವಾಬ್ದಾರಿಯನ್ನೂ ಹೆಚ್ಚಿಸೋಣ. ಇವತ್ತಿನಿಂದಲೇ ಆರೋಗ್ಯದತ್ತ ಮುನ್ನಡೆ ಯೋಣ!

(ಲೇಖಕರು ಪ್ರೊಫೆಸರ್ ಹಾಗೂ ಮುಖ್ಯಸ್ಥರು, ಡಾ. ಟಿ. ಎಂ.ಎ. ಪೈ ಆಸ್ಪತ್ರೆ, ಉಡುಪಿ)

ಮೂವತ್ತು ವಯಸ್ಸಿನ ನಂತರ ಸಾಧನೆ ಮಾಡಲು ಸಾಧ್ಯವೇ?

Ask the Editor

• ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ

asktheeditorvv@gmail.com

ಆನಂದ, ಹುಬ್ಬಳ್ಳಿ

- **ಭಟ್ರೇ, ನಾನು ನಿಮ್ಮ ಅಂಕಣಗಳ ಅಭಿಮಾನಿ. ರಿಚರ್ಡ್ ಬ್ರಾನ್ಸನ್ ಬರಹಗಳನ್ನು ಇನ್ನಿಲ್ಲದಂತೆ ತಿರುವಿ ಹಾಕಿ ಓದಿದ್ದೇನೆ. ಅಷ್ಟೂ ಸಾಕಾಗದೇ ನೀವು ಬ್ರಾನ್ಸನ್ ಬಗ್ಗೆ ಬರೆದ ಪುಸ್ತಕವನ್ನು ಕೊಂಡು ತುಂಬ ಸಲ ಓದಿದ್ದೇನೆ. ನನಗೆ ಏನಾದರೂ ಒಂದು ಸಾಧಿಸುವ ಹುಚ್ಚು.ಅದಕ್ಕಾಗಿ ಅವಿರತ ಪ್ರಯತ್ನ ನಡೆದಿದೆ. ಆದರೆ ಇದರ ಹಿಂದೆಯೇ ಒಂದು ವಿಷಯ ನನ್ನನ್ನು ಕಾಡುತ್ತಿದೆ. ನನಗೀಗ ವಯಸ್ಸು 30 ದಾಟಿದೆ. ಏನಾದರೂ ಮಾಡುವುದಿದ್ದರೆ ಮೂವತ್ತು ವರ್ಷದೊಳಗೆ ಮಾಡಬೇಕು ಅಂತ ಹೇಳುತ್ತಾರೆ. ನಾನು ಜೀವನದಲ್ಲಿ ಸಾಧನೆ ಮಾಡುವುದು ತಡವಾಯಿತಾ? ನಿಮ್ಮ ಸಲಹೆ ಬೇಕು.**

- ಆನಂದ ಅವರೇ, ಸಾಧನೆಗೆ ವಯಸ್ಸಿನ ಮಿತಿಯಿಲ್ಲ. ಮನುಷ್ಯನಿಗೆ ನಿವೃತ್ತಿ ಎಂಬುದು ಇಲ್ಲವೇ ಇಲ್ಲ. ಸರಕಾರಿ ನಿಯಮ ಮತ್ತು ಕಟ್ಟು ಪಾಡಿನ ದೃಷ್ಟಿಯಿಂದ ನಿವೃತ್ತಿ ವಯಸ್ಸನ್ನು ನಿಗದಿಪಡಿಸಲಾಗಿದೆ. ಆದರೆ ಕೆಲವರು ನಿವೃತ್ತರಾದ ಬಳಿಕವೇ ಹೆಚ್ಚು ಕ್ರಿಯಾಶೀಲರಾಗಿರುತ್ತಾರೆ. ಕ್ಯಾಪ್ಟನ್ ಸಿ.ಪಿ.ಕೃಷ್ಣನ್ ನಾಯರ್ ಅವರು ತಮ್ಮ 65 ವಯಸ್ಸಿನಲ್ಲಿ 'ಲೀಲಾ ಸಮೂಹ ಪಂಚತಾರಾ ಹೋಟೆಲು'ಗಳನ್ನು ಸ್ಥಾಪಿಸಿದರು. ಮೂರು ದಶಕಗಳ ಅವಧಿಯಲ್ಲಿ ಇಡೀ ದೇಶವೇ ಅಭಿಮಾನಪಡುವ ಹನ್ನೊಂದು ಲಕ್ಸುರಿ ಹೋಟೆಲ್ ಮತ್ತು ರೆಸಾರ್ಟುಗಳನ್ನು ಸ್ಥಾಪಿಸಿ, ಪಂಚತಾರಾ ಹೋಟೆಲುಗಳ ಉದ್ಯಮಕ್ಕೆ ಶ್ರೇಯಸ್ಸು ತಂದರು. ತಮ್ಮ ತೊಂಬತ್ತೆರಡನೆ ವಯಸಿನಲ್ಲಿ ತೀರಿಕೊಂಡ ಕ್ಯಾಪ್ಟನ್ ನಾಯರ್ ಅವರೇನಾದರೂ ಸಾಧಿಸಿದ್ದರೆ ಅದು ಅವರ ನಿವೃತ್ತಿಯ ನಂತರವೇ. 'ಅರವತ್ತರ ನಂತರವೇ ನಾನು ಅತ್ಯಂತ ಕ್ರಿಯಾಶೀಲನಾಗಿದ್ದೆ. ನನಗೆ ನಿವೃತ್ತಿ ಅಂದರೆ ಏನೆಂದೇ ಗೊತ್ತಿಲ್ಲ' ಎಂದು ಅವರು ಎಷ್ಟೋ ಸಲ ನನಗೆ ಹೇಳಿದ್ದರು. ಅವರು ಕೆಲಸ ಮಾಡುವ ಪರಿ ನನ್ನಲ್ಲಿ ಬೆರಗು ಮೂಡಿಸಿತ್ತು.

ಕರ್ನಲ್ ಹಾರ್ಲ್ಯಾಂಡ್ ಸ್ಯಾಂಡರ್ಸ್ ಹೆಸರನ್ನು ಕೇಳಿರಬಹುದು. ಇವರು ಕೆಂಟುಕಿ ಫ್ರೈಡ್ ಚಿಕನ್ (ಕೆಎಫ್‌ಸಿ) ಸಂಸ್ಥಾಪಕರು. ಅವರು ಕೆಎಫ್‌ಸಿ ಆರಂಭಿಸಿದಾಗ ಅವರಿಗೂ ಅರವತ್ತೈದು ವರ್ಷ ವಯಸ್ಸು. ಮುಂದಿನ ಒಂಬತ್ತು ವರ್ಷಗಳಲ್ಲಿ ಅವರು ಸುಮಾರು ಆರು ಸಾವಿರ ಕೆಎಫ್‌ಸಿ ಮಳಿಗೆಗಳನ್ನು ಸ್ಥಾಪಿಸಿದ್ದರು. ಇಂದು ಜಗತ್ತಿನ ಯಾವ ದೇಶಕ್ಕೆ ಹೋದರೂ ಕೆಎಫ್‌ಸಿ ಮಳಿಗೆಗಳನ್ನು ಕಾಣಬಹುದು. ನಂತರ ಅವರು ಸಾವಿರಾರು ಕೋಟಿ ರುಪಾಯಿಗೆ ಅದನ್ನು ಮಾರಾಟ ಮಾಡಿಬಿಟ್ಟರು. ಅವರು ಅರವತ್ತೈದು ವರ್ಷ ದುಡಿದಿದ್ದರ ಸಾವಿರ ಪಟ್ಟು ಹಣವನ್ನು ನಿವೃತ್ತರಾದ ಒಂಬತ್ತು ವರ್ಷಗಳಲ್ಲಿ ದುಡಿದರು.

ನಾನು ಈ ಮಾತನ್ನು ಹೇಳುವಾಗ ನೆನಪಾದವನು ಜಪಾನಿನ ಯುಇಚಿರೊ ಮಿಯೂರ. ತನಗೆ 80 ವರ್ಷಗಳಾದಾಗ ಆತ ಮೌಂಟ್ ಎವರೆಸ್ಟ್ ಹತ್ತಿಳಿದು ಬಂದು ಅಚ್ಚರಿ ಮೂಡಿಸಿದ. ಮೂವತ್ತರ ಹರೆಯದವರೇ ಎವರೆಸ್ಟ್ ಏರಲು ಭಯಪಡುತ್ತಾರೆ. ಆದರೆ ಮಿಯೂರ ಆ ವಯಸ್ಸಿನಲ್ಲಿ ಎವರೆಸ್ಟ್ ಏರುತ್ತೇನೆ ಎಂದಾಗ ಯಾರೂ ನಂಬಿರಲಿಲ್ಲ. ಆದರೆ ತನಗನಿಸಿದ್ದನ್ನು ಸಾಧಿಸಿದ. ಇನ್ನೊಮ್ಮೆ ಎವರೆಸ್ಟ್ ಏರಲು ತನಗೆ ಆಸೆ ಇದೆ ಎಂದು ಆತ ಹೇಳಿದ್ದಾನೆ!

ಮೋರ್ ಕೀತ್ ಪಾಲಿಗೆ ವಯಸ್ಸು ಅಂದ್ರೆ ಬರೀ ನಂಬರು. ಎರಡನೇ ಮಹಾಯುದ್ಧದಲ್ಲಿ ಭಾಗವಹಿಸಿದ್ದ ಕೀತ್, 2010 ರಲ್ಲಿ ಯಾರೂ ಮಾಡಿರದ ಸಾಧನೆಗೆ ಮುಂದಾದ. ತನ್ನ 96 ವಯಸ್ಸಿನಲ್ಲಿ ಬಂಗೀ ಜಂಪ್ ಮಾಡುವ ಮೂಲಕ ಜಗತ್ತಿನ ಅತಿ ವೃದ್ಧ ಬಂಗೀ ಜಂಪರ್ ಎಂಬ ದಾಖಲೆಗೆ ಪಾತ್ರನಾದ. ಆತನಿಗೆ 88 ತುಂಬುವ ತನಕವೂ ಆತ ಜೀವನದಲ್ಲಿ ಬಂಗೀ ಜಂಪ್ ಅಂದ್ರೆ ಏನೂಂತ ಗೊತ್ತಿರಲಿಲ್ಲ.

ಆನಂದ ಅವರೇ, ಈಗ ಹೇಳಿ, ನೀವು ಸಾಧನೆ ಮಾಡಲು ವಿಳಂಬವಾಯಿತಾ?

ಪ್ರವೀಣ ಶೆಟ್ಟಿ, ಹುಬ್ಬಳ್ಳಿ

- **ಭಟ್ರೇ, ಪಾರ್ಟಿಯಲ್ಲಿ, ನಾಲ್ಕು ಜನ ಸೇರಿದಾಗ, ಯಾರಾದರೂ ಹಾಡು ಅಂದ್ರೆ ಅಥವಾ ಜೋಕ್ ಹೇಳು ಅಂದ್ರೆ ನನಗೆ ಸಾಧ್ಯವೇ ಆಗುವುದಿಲ್ಲ. ನನ್ನ ಸ್ನೇಹಿತರು ನಿರಾತಂಕವಾಗಿ ಹಾಡುತ್ತಾರೆ, ಜೋಕ್ ಹೇಳುತ್ತಾರೆ. ನನಗೇಕೆ ಇದು ಸಾಧ್ಯವಾಗುತ್ತಿಲ್ಲ? ಈ ವಿಷಯದಲ್ಲಿ ನನಗೆ ನಿಮ್ಮ ಮಾರ್ಗದರ್ಶನ ಬೇಕು.**

- ಪ್ರವೀಣ್ ಅವರೇ, ನಾಲ್ಕು ಜನ ಸೇರಿದಾಗ, ಪಾರ್ಟಿಯಲ್ಲಿ ಹಾಡು ಅಥವಾ ಜೋಕ್ ಹೇಳು ಎಂಬ ಬೇಡಿಕೆ ಸಹಜ. ಕೆಲವರ ದನಿ ಇಂಪಾಗಿರುವುದಿಲ್ಲ ಅಥವಾ ಅವರಿಗೆ ಹಾಡಿ ಅಭ್ಯಾಸವಿರುವುದಿಲ್ಲ. ಅದರ ಬದಲು ಜೋಕ್ ಹೇಳಿ ನಗಿಸಬಹುದು. ಅಂಥ ಸನ್ನಿವೇಶದಲ್ಲಿ ಹಾಡಲು ನೀವು ಪಿ.ಬಿ.ಶ್ರೀನಿವಾಸ್, ಎಸ್.ಪಿ.ಬಾಲಸುಬ್ರಮಣ್ಯ, ಮುಕೇಶ್ ಕಂಠವನ್ನೇ ಹೊಂದಿರಬೇಕೆಂದು ಯಾರೂ ಅಪೇಕ್ಷಿಸುವುದಿಲ್ಲ. ಹೇಳಿದ ತಕ್ಷಣ ಜಾಸ್ತಿ ನಖರಾ ಮಾಡದೇ, ನುಣುಚಿಕೊಳ್ಳಲು ಪ್ರಯತ್ನಿಸದೇ, ಹಾಡುವುದು ಒಳ್ಳೆಯ ಅಭ್ಯಾಸ. ನಿಮ್ಮ ಧ್ವನಿ ಸ್ವಲ್ಪ ಅಡ್ಡಾದಿಡ್ಡಿ ಇದ್ದರೂ ಸಹಿಸಿಕೊಳ್ಳುತ್ತಾರೆ. ಇಂಥ ಸನ್ನಿವೇಶದಲ್ಲಿ ಹೇಗೆ ಹಾಡುತ್ತೇವೆ ಎನ್ನುವುದಕ್ಕಿಂತ, ಹಾಡುವುದಷ್ಟೇ ಮುಖ್ಯ. ಈ ಮಾತು ಜೋಕು ಹೇಳುವುದಕ್ಕೂ ಅನ್ವಯ.

ಹಾಡುವ ಅಥವಾ ಜೋಕು ಹೇಳುವ ಸಂದರ್ಭಗಳು ಯಾವಾಗ ಬರುತ್ತವೆ ಎಂದು ಹೇಳಲಾಗುವುದಿಲ್ಲ. ಹೀಗಾಗಿ ನಮ್ಮ ಬತ್ತಳಿಕೆಯಲ್ಲಿ ಯಾವತ್ತೂ ಒಂದೆರಡು ಹಾಡು ಮತ್ತು ನಾಲ್ಕೈದು ಜೋಕುಗಳ ಸರಕುಗಳನ್ನು ಸದಾ ಇಟ್ಟುಕೊಂಡಿರಬೇಕು. ಸೇರಿದ ಜನ ಮತ್ತು ಸಂದರ್ಭಕ್ಕೆ ತಕ್ಕಂತೆ ತುಸು ಮಾರ್ಪಡಿಸಿಕೊಂಡು ತಟ್ಟನೆ ಹೇಳಿದರಾಯಿತಪ್ಪ! ಕೆಲವು ಸಲ ನೀವು ಹೇಳಿದ ಜೋಕ್ ಕ್ಲಿಕ್ ಆಗದಿರಬಹುದು, ಅಷ್ಟಕ್ಕೇ ಯಾರೂ ತಲೆ ಕಡಿಯುವುದಿಲ್ಲ. ಜನ ಒತ್ತಾಯಿಸಿದ ತಕ್ಷಣ ಹೇಳುವುದಷ್ಟೇ ಮುಖ್ಯ.

ಅಂಥ ಸಂದರ್ಭಗಳಲ್ಲಿ ಹಾಡಲು ಅಥವಾ ಜೋಕ್ ಹೇಳಲು ಮಹಾನ್ ಬುದ್ಧಿಮತ್ತೆ ಬೇಕಾಗಿಲ್ಲ. ಬೇಕಿರುವುದು ಸಂಕೋಚ, ಮುಜುಗರ, ಮೈಚಳಿ ಬಿಡುವ ಗಟ್ಟಿ ಮನಸ್ಸು. ಇಂಥ ಸಂದರ್ಭಗಳಲ್ಲಿ ನೀವು ಯಾವ ಹಾಡನ್ನು ಹಾಡಿದ್ದೀರಿ, ಯಾವ ಜೋಕನ್ನು ಹೇಳಿದ್ದೀರಿ ಎಂಬುದನ್ನು ಯಾರೂ ನೆನಪಿಟ್ಟುಕೊಳ್ಳುವುದಿಲ್ಲ. ಆದರೆ ನೀವು ಹಾಡಿದ್ದು, ಹೇಳಿದ್ದು ಮಾತ್ರ ನೆನಪಿರುತ್ತದೆ. ಹೀಗಾಗಿ ಅಂಥ ಅವಕಾಶವನ್ನು ಯಾವ ಕಾರಣಕ್ಕೂ ತಪ್ಪಿಸಿಕೊಳ್ಳಬಾರದು.

ನಾಗರಾಜ ರೆಡ್ಡಿ, ಬೆಂಗಳೂರು

- **ಭಟ್ರೇ, ನನಗೆ ಎಲ್ಲ ಕೈಬೆರಳುಗಳಿಗೂ ಬಂಗಾರದ ಉಂಗುರಗಳನ್ನು ಹಾಕಿಕೊಳ್ಳುವುದೆಂದರೆ ಬಲು ಇಷ್ಟ. ಇತ್ತೀಚೆಗೆ ಹತ್ತು ಬೆರಳುಗಳಿಗೆ ಹದಿನಾರು ಉಂಗುರಗಳನ್ನು ಧರಿಸುತ್ತಿದ್ದೇನೆ. ಇದನ್ನೇ ನನ್ನ ಸ್ನೇಹಿತರು ಅಪಹಾಸ್ಯ ಮಾಡುತ್ತಾರೆ. ನನ್ನನ್ನು 'ರಿಂಗ್ ಮಾಸ್ಟರ್' ಎಂದು ಆಡಿಕೊಳ್ಳುತ್ತಾರೆ. ಉಂಗುರ ಧರಿಸುವುದು ತಪ್ಪಾ?**

- ನಾಗರಾಜ ರೆಡ್ಡಿಯವರೇ, ನೀವು 'ರಿಂಗ್ ಮಾಸ್ಟರ್' ಹೌದೋ ಅಲ್ಲವೋ, ಆದರೆ 'ಫಿಂಗರಿಂಗ್ ಮಾಸ್ಟರ್' ಅಂತೂ ಹೌದು. (ನಾನಾಗಿದ್ದರೆ ನಿಮಗೆ 'ರಿಂಗ್ ಮಾಸ್ಟರ್' ಬದಲು 'ಲಾರ್ಡ್ ಆಫ್ ರಿಂಗ್ಸ್' ಎಂದು ಕರೆ ಯುತ್ತಿದ್ದೆ.) ಇರಲಿ. ಬೆರಳುಗಳಿಗೆ ಉಂಗುರ ಧರಿಸುವುದು ತಪ್ಪಲ್ಲ. ಆದರೆ ಬೆರಳುಗಳನ್ನೆಲ್ಲ ಉಂಗುರಗಳಿಂದಲೇ ಕವರ್ ಮಾಡುವುದು ಅಷ್ಟು ಸರಿ ಕಾಣಲಿಕ್ಕಿಲ್ಲ. ಜನ ನಿಮ್ಮ ಶ್ರೀಮಂತಿಕೆಯನ್ನು ಉಂಗುರದಿಂದ ಅಳೆಯಬೇಕಿಲ್ಲ. ನಿಮಗೆ ಉಂಗುರ ಶೋಕಿಯಿದ್ದರೆ, ತಲಾ ಒಂದು ಕೈಯಲ್ಲಿನ ಎರಡು ಬೆರಳುಗಳಿಗೆ ಧರಿಸಿ. ಬೇಕಾದರೆ ದಿನವೂ ಹೊಸ ಹೊಸ ಅಥವಾ ಬೇರೆ ಬೇರೆ ಉಂಗುರ ಧರಿಸಿ. ಯಾರೂ ತಪ್ಪು ಭಾವಿಸುವುದಿಲ್ಲ. ಆದರೆ ಕೈಗೆಲ್ಲ ಉಂಗುರ ಧರಿಸುವುದು, ಪ್ರದರ್ಶನವಾದೀತು.

ಶ್ರೀಮಂತಿಕೆ ಪ್ರದರ್ಶನಕ್ಕೆ ಉಂಗುರವೇ ಮಾಪಕವಲ್ಲ. ನಿಮಗೆ ಉಂಗುರ ಶೋಕಿಯಿದ್ದರೆ ಒಂದೇ ಉಂಗುರವನ್ನು ಧರಿಸಿ. ಸಾಧ್ಯವಾದರೆ ಅದು ವಜ್ರ ಖಚಿತವಾಗಿರಲಿ. ಆ ಒಂದು ಉಂಗುರ ನಿಮ್ಮ ಅಭಿರುಚಿ, ಶ್ರೀಮಂತಿಕೆ, ಸ್ಟೈಲ್, ಆಸಕ್ತಿ ಎಲ್ಲವನ್ನೂ ಅಭಿವ್ಯಕ್ತಪಡಿಸುತ್ತದೆ.

ಕ.ನಾ.ಶ್ರೀನಿವಾಸಮೂರ್ತಿ, ಊರುಬೇಡ

- **ಭಟ್ರೇ, ನಾನು ಉತ್ತಮ ಓದುಗ. ಇಂದಿಗೂ ಲೈಬ್ರರಿಯಲ್ಲಿ ಹೆಚ್ಚಿನ ಸಮಯ ಕಳೆಯುತ್ತೇನೆ. ಲೈಬ್ರರಿಯಲ್ಲಿ ಉತ್ತಮ ಪುಸ್ತಕಗಳನ್ನು ಕಂಡರೆ ಸುಮ್ಮನೆ ಎತ್ತಿಕೊಂಡು ಬರೋಣ ಎನಿಸುತ್ತದೆ. ಆ ರೀತಿ ನೂರಾರು ಪುಸ್ತಕಗಳನ್ನು ಕದ್ದು ತಂದಿದ್ದೇನೆ. ಕೆಲವು ಪುಸ್ತಕಗಳ ಹಾಳೆ ಹರಿದುಕೊಂಡು ಬಂದಿದ್ದೇನೆ. ಅದು ತಪ್ಪು ಎಂಬ ಅರಿವಿದ್ದರೂ ಒಮ್ಮೊಮ್ಮೆ ಹಾಗೆ ಮಾಡುತ್ತೇನೆ. ಈ ದುರಭ್ಯಾಸವನ್ನು ನಿಲ್ಲಿಸುವುದು ಹೇಗೆ? ತಿಳಿಸಿ.**

- ಶ್ರೀನಿವಾಸಮೂರ್ತಿ ಅವರೇ, ನೀವು ಮಾಡುತ್ತಿರುವುದು ಸರಿ ಅಲ್ಲ ಎಂಬುದು ನಿಮಗೆ ಖಾತ್ರಿಯಾದರೂ ಪುಸ್ತಕ ಕಳ್ಳತನವನ್ನು ಮುಂದುವರಿಸಿದ್ದೀರಿ. ನೀವು 'ಪುಸ್ತಕವನ್ನು ಎತ್ತಿಕೊಂಡು' ಬರುತ್ತಿಲ್ಲ, ಕದ್ದು ಸಾಗಿಸುತ್ತಿದ್ದೀರಿ ಎಂಬುದು ಗೊತ್ತಿರಲಿ. ಮೂಲತಃ ನೀವೊಬ್ಬ ಕಳ್ಳ ಎಂಬುದರಲ್ಲಿ ಎರಡು ಮಾತಿಲ್ಲ. ಅಡಕೆ ಕದ್ದರೂ ಕಳ್ಳ, ಆನೆ ಕದ್ದರೂ ಕಳ್ಳ. ಪುಸ್ತಕ ಕದ್ದವರೂ. ಪುಸ್ತಕ ಕದ್ದವರೇನು ಉತ್ತಮ ಕಳ್ಳತನನಾಗಲು ಸಾಧ್ಯವಿಲ್ಲ. ಹೆಚ್ಚೆಂದರೆ ನಿಮ್ಮನ್ನು ಸುಶಿಕ್ಷಿತ ಅಥವಾ ಅಕ್ಷರವಂತ ಕಳ್ಳ ಎನ್ನಬಹುದು. ನೀವು ಪುಸ್ತಕವನ್ನಷ್ಟೇ ಅಲ್ಲ, ಬೇರೆಯವರ ಓದುವ ಹಕ್ಕನ್ನು ಕಳ್ಳತನ ಮಾಡುತ್ತಿದ್ದೀರಿ. ಬೇರೆಯವರ ಜ್ಞಾನವನ್ನೂ ಕಸಿಯುತ್ತಿದ್ದೀರಿ. ಅದಕ್ಕೆ ನೀವು ಪುಸ್ತಕಗಳ ಹಾಳೆಗಳನ್ನು ಹರಿಯುವುದೇ ಸಾಕ್ಷಿ. ನೀವು ಪುಸ್ತಕವನ್ನು ಘಾಸಿಗೊಳಿಸಿ, ಅದರ ಅಂದವನ್ನು ಹಾಳುಗೆಡವುತ್ತಿದ್ದೀರಿ.

Like most misery, it started with apparent happiness ಎಂಬ ಮಾತಿದೆ. ಪುಸ್ತಕ ಕಳ್ಳತನ ನಿಮಗೆ ಖುಷಿ ನೀಡುತ್ತಿರುವುದರಿಂದ ಅದನ್ನು ಮುಂದುವರಿಸಿದ್ದೀರಿ. ಪ್ರತಿ ಸಲ ಲೈಬ್ರರಿಯಿಂದ ಕದ್ದು ತಂದ ಪುಸ್ತಕಗಳನ್ನು ನೋಡಿದಾಗ, ನೀವೊಬ್ಬ ಕಳ್ಳ ಎಂಬ ಭಾವನೆ ನಿಮಗೆ ಚುಚ್ಚದೇ ಇರುವುದಿಲ್ಲ. ಆ ಪುಸ್ತಕದಿಂದ ನೀವು ಎಷ್ಟು ಜ್ಞಾನ ಸಂಪಾದಿಸಿದರೇನು ಬಂತು? ಆದರೆ ಮೂಲತಃ ನೀವೊಬ್ಬ ಕಳ್ಳ ಎಂಬ ಪ್ರಜ್ಞೆ ನಿಮ್ಮನ್ನು ಚುಚ್ಚುತ್ತಲೇ ಇರುತ್ತದೆ.

ನಿಮಗೆ ಯಾವುದಾದರೂ ಪುಸ್ತಕ ಇಷ್ಟವಾದರೆ, ನೂರಿನ್ನೂರು ರುಪಾಯಿ ಕೊಟ್ಟು ಖರೀದಿಸಬಹುದಲ್ಲ? ಆ ಪುಸ್ತಕ ಬೇರೆಲ್ಲೂ ಸಿಗದಿದ್ದರೆ, ಜೆರಾಕ್ಸ್ ಮಾಡಿಸಿಕೊಳ್ಳಬಹುದಲ್ಲ? ಸಣ್ಣ ಮೊತ್ತಕ್ಕಾಗಿ ಕಳ್ಳನಾಗಿ ನಿಮ್ಮ ವ್ಯಕ್ತಿತ್ವಕ್ಕೆ ಕೈಯಾರ ಮಸಿ ಬಳಿದುಕೊಳ್ಳುತ್ತೀರಿ? 'ಪುಸ್ತಕ ಕಳ್ಳ' ಎಂದು ಕರೆಯಿಸಿಕೊಳ್ಳುವುದು ನಿಮಗೆ ಶೋಭೆ ತರುವುದಾ, ಹೇಳಿ? ಮೊದಲು ಆ ದುರಭ್ಯಾಸವನ್ನು ಬಿಡಿ. ಪುಸ್ತಕಪ್ರೇಮಿಗಳು ಹಣ ಕೊಟ್ಟು ಪುಸ್ತಕಗಳನ್ನು ಖರೀದಿಸುತ್ತಾರೆ, ಆದರೆ ಪುಸ್ತಕಗಳನ್ನು ತುಡುಗು (ಕಳುವು) ಮಾಡುವುದಿಲ್ಲ.

ಶೇಖರ ಕೆ.ಕೆ., ಮೈಸೂರು

- **ಭಟ್ಟರೇ, ನಾನು ವಿಜ್ಞಾನ ವಿಷಯದಲ್ಲಿ ಸ್ನಾತಕೋತರ ಪದವೀಧರ. ನನಗೆ ಕನ್ನಡದಲ್ಲಿ ಕಾದಂಬರಿ ಬರೆಯಬೇಕು ಎಂಬ ಆಸೆಯಿದೆ. ಆದರೆ ನನ್ನ ಕನ್ನಡ ಅಷ್ಟೇನೂ ಚೆನ್ನಾಗಿಲ್ಲ. ನನಗೆ ಅನಿಸುವುದೆಲ್ಲವನ್ನೂ ಅಭಿವ್ಯಕ್ತಪಡಿಸಲು ಸಾಧ್ಯವಾಗಲಿಕ್ಕಿಲ್ಲವೇನೋ ಎಂದೆನಿಸುತ್ತದೆ. ಈ ವಿಷಯದಲ್ಲಿ ನನಗೆ ನಿಮ್ಮ ಮಾರ್ಗದರ್ಶನ ಬೇಕು.**

- ಶೇಖರ ಅವರೇ, ನಿಮ್ಮ ಮಾತುಗಳನ್ನು ಕೇಳಿದಾಗ, 'ನನಗೆ ಒಳ್ಳೆಯ ಕ್ರಿಕೆಟ್ ಬ್ಯಾಟ್ಸಮನ್ ಆಗಬೇಕು ಎಂಬ ಆಸೆಯಿದೆ, ಆದರೆ ಬ್ಯಾಟ್ ಹಿಡಿಯುವುದು ಗೊತ್ತಿಲ್ಲ' ಎಂದು ಹೇಳಿದಂತೆ ಕೇಳಿಸಿದಂತಾಯಿತು. 'ನನಗೂ ವಿಮಾನ ಹಾರಿಸಬೇಕು ಎಂಬ ಆಸೆಯಿದೆ, ಆದರೆ ನಾನು ಪೈಲಟ್ ಅಲ್ಲ' ಎಂದು ಹೇಳಿದರೆ, ಜನ ನನ್ನನ್ನು ಯಾವ ರೀತಿ ನೋಡಬಹುದು?

ಅಷ್ಟಾಗಿಯೂ ಹೇಳುತ್ತೇನೆ, ನಿಮ್ಮ ಕನ್ನಡವನ್ನು ಸುಧಾರಿಸಿಕೊಳ್ಳಬಹುದು ಮತ್ತು ನೀವು ಕನ್ನಡ ಕಾದಂಬರಿಕಾರರಾಗಿ ನಿಮ್ಮ ಆಸೆಯನ್ನು ಈಡೇರಿಸಿಕೊಳ್ಳಬಹುದು. ಇದಕ್ಕೆ ನೀವು ಮೊದಲು ಮಾಡಬೇಕಿರುವುದು ನಿಮ್ಮ ಕನ್ನಡ ಭಾಷೆಯನ್ನು ಉತ್ತಮಪಡಿಸಿಕೊಳ್ಳುವುದು. ನಿಮ್ಮ ಹಾಗೆ ನಾನೂ ಸ್ನಾತಕೋತ್ತರ ವಿಜ್ಞಾನ ಪದವೀಧರ. ನಾನು ಕನ್ನಡ ವ್ಯಾಕರಣವನ್ನು ಕಲಿತವನಲ್ಲ, ಆದರೆ ಭಾಷೆಯನ್ನು ನಮಗಿಷ್ಟದಂತೆ ಒಲಿಸಿಕೊಳ್ಳುವುದು ಸಾಧ್ಯವಿದೆ. ಅದಕ್ಕೆ ಇರುವ ಸುಲಭ ಮತ್ತು ಪರಿಣಾಮಕಾರಿ ಮಾರ್ಗವೆಂದರೆ ಓದುವುದು ಮತ್ತು ಹೆಚ್ಚು ಹೆಚ್ಚು ಓದುವುದು. ಲೇಖಕನ ಬರಹದ ಹೆಜ್ಜೆಯ ಮೇಲೆ ನಡೆಯುತ್ತಾ ಓದುವುದು. ನಂತರ ಕ್ರಮೇಣ ಬರೆಯುವುದನ್ನು ಅಭ್ಯಾಸ ಮಾಡಿಕೊಳ್ಳುವುದು. ಕಾದಂಬರಿ ಬರೆಯುವುದಕ್ಕಿಂತ ಮುನ್ನ ಸಣ್ಣ ಕತೆ ಬರೆಯುವುದನ್ನು ಅಭ್ಯಾಸ ಮಾಡಿಕೊಳ್ಳಿ. ಅದನ್ನು ಪತ್ರಿಕೆಗಳಿಗೆ ಕಳುಹಿಸಿಕೊಡಿ. ಅದು ಪ್ರಕಟವಾದ ಬಳಿಕ ನಿಮ್ಮಲ್ಲಿ 'ನಾನೂ ಬರೆಯಬಲ್ಲೆ' ಎಂಬ ಆತ್ಮವಿಶ್ವಾಸ ಮೂಡುತ್ತದೆ. ಅದನ್ನು ಓದಿದವರು ನೀಡುವ ಅಭಿಪ್ರಾಯಗಳನ್ನು ಗಮನಿಸಿ. ನಿಮ್ಮ ಬರಹವೇ ನಿಮ್ಮನ್ನು ಮುನ್ನಡೆಸುತ್ತದೆ, ಅದೇ ತೋರುದೀಪವಾಗುತ್ತದೆ.

ಅಷ್ಟಕ್ಕೇ ಒಂದೇ ಸಮನೆ ನೆಗೆಯಲು ಹೋಗಬೇಡಿ. ನಿಮ್ಮ ಆಲೋಚನೆ ಮತ್ತು ಬರಹ ಒಂದಕ್ಕೊಂದು ಕೂಡುತ್ತಿವೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಿ. ಬರಹವನ್ನು ಸಿದ್ಧಿಸಿಕೊಳ್ಳಲು ಪ್ರಯತ್ನಿಸಿ. ಶ್ರೇಷ್ಠ ಬರಹಗಾರರು, ಕಾದಂಬರಿಕಾರರು ಹೇಗೆ ಆರಂಭ ಮಾಡುತ್ತಾರೆ, ಹೇಗೆ ಕೃತಿಯನ್ನು ಬೆಳೆಸುತ್ತಾರೆ, ನಿರೂಪಣೆಯಲ್ಲಿ ಯಾವ ತಂತ್ರ ಬಳಸುತ್ತಾರೆ… ಈ ಸೂಕ್ಷ್ಮ ಸಂಗತಿಗಳನ್ನೆಲ್ಲ ಗಮನಿಸುತ್ತಾ ಹೋಗಿ. ನಿಮ್ಮೊಳಗೆ ಬರವಣಿಗೆಯ ಒಂದು ಹದ ಏರ್ಪಡುವ ತನಕ ಮುಂಗಾಲುಪುಟಿಕೆ ಜಿಗಿಯಬೇಡಿ. ಇಂಥ ಸಂದರ್ಭದಲ್ಲಿ ನಿಮ್ಮ ನೆರವಿಗೆ ಬರುವುದು ಮತ್ತಷ್ಟು ಹಾಗೂ ಇನ್ನಷ್ಟು ಓದು. ಇಷ್ಟೆಲ್ಲ ಶ್ರಮಪಡಬೇಕಾ ಎಂದು ಕೇಳಿದರೆ, ನಾನು 'ಹೌದು, ಅಷ್ಟು ಶ್ರಮಪಡದೇ ಬೇರೆ ದಾರಿಯಿಲ್ಲ' ಎಂದು ಖಡಾಖಡಿ ಹೇಳುತ್ತೇನೆ. ಪ್ಯಾಡು ಕಟ್ಟಿದವರೆಲ್ಲ ಬ್ಯಾಟ್ಸಮನ್ ಆಗುವುದಿಲ್ಲ. ಸಾಧನೆ ಹಾದಿಯಲ್ಲಿ ನೆಟ್ ಪ್ರಾಕ್ಟೀಸು ಮಾಡಲೇಬೇಕು. ಸಾಧನೆ ಮತ್ತು ನೆಟ್ ಪ್ರಾಕ್ಟೀಸು ಸಮ-ಸಮ ಹೆಜ್ಜೆ ಹಾಕಬೇಕು. ಇಷ್ಟು ಮಾಡಲು ನಿಮಗೆ ತಾಳ್ಮೆ ಇದ್ದರೆ, ಮುಂದುವರಿಯಿರಿ. ಇಲ್ಲದಿದ್ದರೆ ಬರೆಯುವ ತಂಟೆಗೆ ಹೋಗಬೇಡಿ. ಅಷ್ಟಕ್ಕೂ ಬರವಣಿಗೆಯೆಂದರೆ ನಮ್ಮನ್ನು ಹದಗೊಳಿಸಿಕೊಳ್ಳುವುದು, ನಮ್ಮೊಳಗೊಂದು ಶಿಸ್ತು, ಬದ್ಧತೆಯನ್ನು ರೂಢಿಸಿಕೊಳ್ಳುವುದು.